ಪುಸ್ತಕ ಪ್ರಪಂಚ

ಜನವರಿ ೧೯೮೮



ಚಿನುವ ಅಚೇಬೆ: ವಿಶೇಷ ಸಂಚಿಕೆ

ಪುಸ್ತಕ ಪ್ರಪಂಚ
ಮಾಸಿಕ

ಪರಿವಿಡಿ

೯. ೧. ೮೮

ಸಂಪುಟ : ೪೨ ಸಂಚಿಕೆ—೬

PUSTAKA PRAPANCHA : Monthly

Published and printed by Karnataka State Adult Educta
Council, Mysore-4 Pages 128. Price : Rupees five

ಬಿಡಿಪ್ರತಿ : ರೂ. 5

ವಾರ್ಷಿಕ ಚಂದಾ : ರೂ. 30

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. 300

ಸಂಸ್ಥೆಗೆ : ರೂ. 500

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು-570 004

ಥಿಂಗ್ಸ್ ಫಾಲ್ ಅಪಾರ್ಟ್

ಡಾ. ಬಿ. ದಾಮೋದರರಾವ್

ಇತ್ತೀಚೆಗೆ ನೋಬೆಲ್ ಬಹುಮಾನ ಗಳಿಸಿದ ವೋಲೆ ಶೋಯಿಂಕ ರಷ್ಟೇ ಪ್ರಸಿದ್ಧರಾದ ನೈಜೀರಿಯಾದ ಇನ್ನೊಬ್ಬ ಪ್ರತಿಭಾವಂತ ಲೇಖಕ ಚಿನುವ ಅಚೀಬೆ (೧೯೩೦). ಅಚೀಬೆ, ಶೋಯಿಂಕ ಇವೆರಡೂ ಕಾಮನ್ವೆಲ್ತ್ ಸಾಹಿತ್ಯದಲ್ಲಿ ದೊಡ್ಡ ಹೆಸರುಗಳು. ಇಬೋ ಬುಡಕಟ್ಟಿನ ಅಚೀಬೆಯವರ ಜನಪ್ರಿಯ ಬರವಣಿಗೆಯಲ್ಲಿ ಯೊರುಬ ವರ್ಗಕ್ಕೆ ಸೇರಿದ ಶೋಯಿಂಕರ 'ನವ್ಯ' ಸಂಪ್ರದಾಯಕ್ಕೆ ಸಮೀಪವಾದ ಕೃತಿಗಳಲ್ಲಿರುವಂಥ ಕ್ಲಿಷ್ಟತೆಯಿಲ್ಲ. ೧೯೫೮ರಿಂದ ಪ್ರಕಟವಾಗತೊಡಗಿದ ಅವರ ಕಾದಂಬರಿಗಳು ಮೂಲತಃ ಕ್ಲಾಸಿಕಲ್ ಮಾದರಿಯ ಅಚ್ಚುಕಟ್ಟಾದ ಕೃತಿಗಳು. ಇವು ಎಲ್ಲ ಆಸಕ್ತ ಓದುಗರಿಗೆ ದಕ್ಕುವಂಥವು ಮಾತ್ರವಲ್ಲದೆ ತಮ್ಮ ಕಾಲ–ದೇಶಗಳ ಮುದ್ರೆಯನ್ನೂ ಪಡೆದಿರುವ ಸ್ವೋಪಜ್ಞ ಕೃತಿಗಳು.

ನೈಜೀರಿಯಾದಲ್ಲಿ ಕಾದಂಬರಿ ಪ್ರಕಾರ ಕಾಣಿಸಿಕೊಂಡದ್ದು ಇತ್ತೀಚೆಗೆ. ಅದರ ಪ್ರಾರಂಭದಿಂದ (ಸು. ೧೯೫೫) ಇಂದಿನವರೆಗೂ ಆಫ್ರಿಕದ ಕಾದಂಬರಿಕಾರರಲ್ಲಿಯೇ ಅಚೀಬೆ ಪ್ರಮುಖರು. ಅವರ ಕಾದಂಬರಿಗಳು ಆಫ್ರಿಕದ ವಸ್ತು, ಅನುಭವಗಳನ್ನು ಇಂಗ್ಲಿಷ್ ಭಾಷೆಯಲ್ಲಿ ಒಗ್ಗಿಸುವ ಪ್ರಕ್ರಿಯೆಯಲ್ಲಿ ಆ ಭಾಷೆಯ ಸಾಧ್ಯತೆಗಳನ್ನು ಬೇರೆ ದಿಸೆಯಲ್ಲಿ ವಿಸ್ತರಿಸಿವೆ. ಅಪರಿಚಿತವೆನ್ನುವಷ್ಟರವರೆಗೆ ಹೊಸ ರುಚಿ–ರೇಖೆಗಳು ಕಾದಂಬರಿಯ ಮಾಧ್ಯಮದಲ್ಲಿ ಒದಗಿಬಂದಿವೆ. ಇಂಗ್ಲಿಷ್‌ನಲ್ಲಿ ಬರುತ್ತಿರುವ ಆಫ್ರಿಕದ ಕಾದಂಬರಿಗಳು ಚೈತನ್ಯಪೂರ್ಣವಾಗಿರುವುದಕ್ಕೆ ಅಚೀಬೆಯವರ ಪ್ರತಿಭೆ ಬಹುಮಟ್ಟಿಗೆ ಕಾರಣವಾಗಿದೆ. ಲಿಖಿತ ಸಂಪ್ರದಾಯವಿಲ್ಲದ ಪರಿಸರದಲ್ಲಿ ಕೇಳಿ, ಓದಿ ಕಲಿತ ಇಂಗ್ಲಿಷನ್ನು ಕಾದಂಬರಿಕಾರರು ಮಾಧ್ಯಮವಾಗಿ ಬಳಸಿದಾಗ ಆ ಮಾಧ್ಯಮ ಹೊಸ ಬದುಕಿನ ಜೊತೆಗೆ ಹೊಸ ವಾಕ್ ಸಂಪತ್ತನ್ನೂ ತನ್ನದಾಗಿಸುತ್ತಾ ನೂತನ ಆಸ್ವಾದ, ಚೈತನ್ಯಗಳನ್ನು ಪಡೆದುಕೊಂಡಿದೆ.

'ಥಿಂಗ್ಸ್ ಫಾಲ್ ಅಪಾರ್ಟ್', 'ನೋ ಲಾಂಗರ್ ಅಟ್ ಈಸ್', 'ಆರೊ ಆಫ್ ಗಾಡ್', 'ಎ ಮ್ಯಾನ್ ಆಫ್ ದಿ ಪೀಪಲ್'—ಅಚೇಬೆಯ ಈ ಕಾದಂಬರಿಗಳ ನೈಜೀರಿಯ ಬ್ರಿಟಿಷ್ ವಸಾಹತುಶಾಹಿಗೆ ತುತ್ತಾಗಿ ತನ್ನ ಸ್ವಾಯತ್ತತೆಯನ್ನು ಕಳೆದು ಕೊಂಡು ಮತ್ತೆ ಸ್ವಾತಂತ್ರ್ಯವನ್ನು ಗಳಿಸಿ ಆಮೇಲೆ ಬಹು ಬೇಗನೆ ಮಿಲಿಟರಿ ಆಧಿಪತ್ಯ ದತ್ತ ಸಾಗುವ ಐತಿಹಾಸಿಕ ಪ್ರಕ್ರಿಯೆಯನ್ನು ಚಿತ್ರಿಸುತ್ತವೆ. ಆಫ್ರಿಕನ್ ಇತಿಹಾಸದ ಈ ಒಂದು ಪ್ರಮುಖ ಘಟ್ಟವನ್ನು ಅರ್ಥೈಸುವ ಹಾಗೂ ಆ ಐತಿಹಾಸಿಕ ಪ್ರಕ್ರಿಯೆಯಲ್ಲಿ ನಷ್ಟವಾದ ಮತ್ತು ಹೊಸದಾಗಿ ಸೇರಿಕೊಂಡಿರಬಹುದಾದ ಮೌಲ್ಯಗಳನ್ನು ಗುರುತಿಸುವ ಪ್ರಯತ್ನ—ಇಲ್ಲಿ ಕಂಡುಬರುತ್ತದೆ.

ಆಫ್ರಿಕದ ಇತಿಹಾಸ ಎಂಬುದು ಒಂದು ನೀಳ ರಾತ್ರಿ ಎಂಬ ಬಿಳಿಯರ ದುರುದ್ದೇಶಪೂರಿತ ಪ್ರಚಾರವನ್ನು ಅಚೇಬೆ ತಮ್ಮ ವಿಮರ್ಶೆಯ ಲೇಖನಗಳಲ್ಲಿ ಬಲವಾಗಿ ಖಂಡಿಸುತ್ತಾರೆ. ಅವರ ಕಾದಂಬರಿಗಳು ಸಾಹಿತ್ಯಕಲೆಗೆ ಸೂಕ್ತವಾದ ಸಂಯಮವನ್ನು ತೋರಿಸುತ್ತಲೇ ವಸಾಹತುಶಾಹಿಯ ಪರಿಣಾಮವಾಗಿ ತಮ್ಮಲ್ಲಿ ಅಂಟಿಕೊಂಡಿರುವ ಸಾಂಸ್ಕೃತಿಕ ಕೀಳರಿಮೆಯನ್ನು ಇಬೋಗಳು ತೊಡೆದುಹಾಕು ವಂತೆಯೂ ಪ್ರೇರೇಪಿಸುತ್ತವೆ. ಇತರರಂತೆಯೇ ತಮ್ಮ ಪೂರ್ವಜರು ಸುಸಂಸ್ಕೃತರೂ ಪ್ರಜ್ಞಾವಂತರೂ ಆಗಿದ್ದರು ಎಂಬುದನ್ನು ತಿಳಿಯಹೇಳಿ ಅವರಲ್ಲಿ ಆತ್ಮವಿಶ್ವಾಸವನ್ನು ಮರಳಿ ಮೂಡಿಸುವುದು ಆಫ್ರಿಕದ ಲೇಖಕರ ಆದ್ಯಕರ್ತವ್ಯ ಎಂದು ವಿಮರ್ಶಕ ಅಚೇಬೆ ನಂಬುತ್ತಾರೆ.

ನೀಗ್ರೋಗಳಲ್ಲಿ ಹೇಳಿಕೊಳ್ಳುವಂಥ ಸಂಸ್ಕೃತಿ ಇರಲಿಲ್ಲ ಎಂಬ ಪ್ರಚಾರಕ್ಕೆ ಅಲ್ಲಿ ಲಿಖಿತ ಸಂಪ್ರದಾಯವಿಲ್ಲದಿದ್ದುದೂ ಒಂದು ಕಾರಣವಾಗಿತ್ತು. ಸಂಸ್ಕೃತಿಗೂ ಭಾಷೆಗೂ ಪರಸ್ಪರಾವಲಂಬಿ (ಸಿಂಬಯಾಟಿಕ್) ಸಂಬಂಧವಿದೆ, ನಿಜ. ಆದರೆ ಭಾಷೆಗೆ ಲಿಪಿಯಿಲ್ಲ ವೆಂದಮಾತ್ರಕ್ಕೆ ಅದನ್ನು ಆಡುವವರು ಕಪಿಮಾನವರಾಗಿಯೇ ಉಳಿಯುತ್ತಾರೆನ್ನು ವಂತಿಲ್ಲ. ಇಬೋ ಪಂಚಾಯತಿಗಳಲ್ಲಿ ಬಿರುದಾಂಕಿತ ವೀರರಿಗೆ ಮಾತ್ರವಲ್ಲ, ವಾಗ್ಮಿ ಗಳಿಗೂ ವಿಶೇಷ ಸ್ಥಾನವಿತ್ತು. 'ಥಿಂಗ್ಸ್ ಫಾಲ್ ಅಪಾರ್ಟ್'ನ ನಾಯಕ ಒಕೊಂಕ್ವೊನಿಗೆ ಕುಸ್ತಿಕಾಳಗಗಳಲ್ಲಿ ಅಸಾಮಾನ್ಯ ಪರಿಣತಿ. ಆದರೆ ಅವನು ನುರಿತ ಮಾತುಗಾರನಲ್ಲ. ಮೂಲತಃ ಕ್ರಿಯಾಶಾಲಿ. ಅವನ ಮಾತಿನ ಮಿತಿ ಇಬೋ ಸಂಸ್ಕೃತಿಯ ಮಿತಿಯ ಸೂಚಕವಲ್ಲ. ಸಮಷ್ಟಿಯ ಬದುಕಿನ ಬಹುಮುಖತೆ ಯಾವನೇ ಒಬ್ಬ ನಾಯಕನ ಮೂಲಕ ಸಂಪೂರ್ಣ ಅಭಿವ್ಯಕ್ತಿಯನ್ನು ಪಡೆಯುವುದಿಲ್ಲ. ಮಾತಿನ ಮೃದುತ್ವ, ಕೋಮಲ ತುಡಿತಗಳು, ತಾಯಿಯ ಮಡಿಲು—ಇವುಗಳ ಮೌಲ್ಯದ ಜ್ಞಾನ ಒಕೊಂಕ್ವೊನಿಗಿಲ್ಲ. ಗಂಡಸುತನವಿದ್ದರೆ ಸಾಕು ಎಂಬುದು ಅವನ ವಾದ.

'ಥಿಂಗ್ಸ್ ಫಾಲ್ ಅಪಾರ್ಟ್'ನಲ್ಲಿ ಒಕೊಂಕ್ವೊನಂಥ ಇಬೋನಾಯಕರ ನಿಷ್ಠೆ ಶೌರ್ಯಗಳ ಬಗ್ಗೆ, ಒಟ್ಟಿನಲ್ಲಿ ವಸಾಹತುಶಾಹಿಪೂರ್ವದ ಇಬೋ ಸಂಸ್ಕೃತಿಯ ಅರ್ಥ ವಂತಿಕೆಯ ಬಗ್ಗೆ ಅಚೇಬೆಯ ಮೆಚ್ಚುಗೆ ವ್ಯಕ್ತವಾಗುತ್ತದೆ. ಆದರೆ ಕಣ್ಮರೆಯಾಗು ತ್ತಿರುವ ಈ ಸಂಸ್ಕೃತಿಯ ಅಧ್ಯಯನಕ್ಕೆ ಅಚೇಬೆಯ ಕಾದಂಬರಿಗಳು ಈಗ ಅಮೂಲ್ಯ ದಾಖಲೆಗಳಾಗಿರುವುದಕ್ಕೆ ಈ ಮೆಚ್ಚುಗೆಯ ಜೊತೆ ಜೊತೆಗೆ ಕ್ರಿಯಾಶೀಲವಾಗಿರುವ

ಅವರ ವಿಮರ್ಶನ ಪ್ರಜ್ಞೆಯೂ ಕಾರಣವಾಗಿದೆ. ಒಕೊಂಕ್ವೊ ಹಾಗೂ ಅವನು ಭಾಗಶಃ ಪ್ರತಿನಿಧಿಸುವ ಸಮಾಜ ವ್ಯವಸ್ಥೆಯನ್ನು ಅಚೇಬೆ ಕಣ್ಣು ಮುಚ್ಚಿಕೊಂಡು ಕೀರ್ತಿಸುವುದಿಲ್ಲ.

ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡ ಇಬೋ ಕುಟುಂಬವೊಂದರ ಎರಡನೆಯ ಪೀಳಿಗೆಯವರಾದ ಅಚೇಬೆ ಸಾಂಪ್ರದಾಯಿಕ ಇಬೋ ಸಮಾಜ ವ್ಯವಸ್ಥೆಯನ್ನು ಹಾಗೂ ಯೂರೋಪಿನಿಂದ ಪ್ರೇರಣೆಪಡೆದ ಕ್ರಿಶ್ಚಿಯನ್ ಸಂಸ್ಥೆ, ಸಂಪ್ರದಾಯಗಳನ್ನು ಏಕಕಾಲದಲ್ಲಿ ಒಳಗಿನವರಂತೆ ಆತ್ಮೀಯವಾಗಿಯೂ ಹೊರಗಿನವರಂತೆ ದೂರನಿಂತು ನಿರಪೇಕ್ಷವಾಗಿಯೂ ನೋಡಲು ಶಕ್ತರಾಗಿದ್ದಾರೆ. ಅವರ ವಿಮರ್ಶಾ ಕೃತಿಗಳಲ್ಲಿ ಅಲ್ಲಲ್ಲಿ ತೋರುವ ಬಿರುಸು ಅವರ ಕಾದಂಬರಿಗಳಲ್ಲಿ ಕಂಡುಬರುವುದಿಲ್ಲ. ಸಮಾಜ, ಸಂಸ್ಕೃತಿಗಳನ್ನು ಅವರು ಕಾದಂಬರಿಕಾರರಾಗಿ ನೋಡುವ ರೀತಿ ಆಸಕ್ತರಾಗಿದ್ದೂ ನಿರಪೇಕ್ಷತೆಯನ್ನು ಲಕ್ಷಿಸುವವರ, ಹದ ತಪ್ಪುವಾಗ ಸಂಕೋಚಗೊಳ್ಳುವವರ ಬಗೆಯದು. ಈ ಪರಿಯ ವೀಕ್ಷಣೆಯಲ್ಲಿ ಒಳ–ಹೊರಗುಗಳ ನಡುವಿನ ಗೆರೆ ಸಹಜವಾಗಿಯೇ ಮಾಸಿಹೋಗಿ ವಿಮರ್ಶೆಗಿಂತ ಹೆಚ್ಚಾಗಿ ಅವರ ಕಾದಂಬರಿಗಳು ಅಚೇಬೆಯವರ ನೈಜ ವ್ಯಕ್ತಿತ್ವದತ್ತ ಬೆರಳುಮಾಡಿ ತೋರಿಸುವಂತಿವೆ.

ಕೃಷಿಪ್ರಧಾನ ಗ್ರಾಮೀಣ ಜೀವನದ ಕಟ್ಟುಕಟ್ಟಳೆಗಳು, ಮದುವೆ, ಶವಸಂಸ್ಕಾರ, ಚಿಕಿತ್ಸೆ, ಪಂಚಾಯತಿ—ಒಟ್ಟಿನಲ್ಲಿ ಇಬೋ ವ್ಯವಸ್ಥೆಯ ಸಮೃದ್ಧ ಚಿತ್ರ 'ಥಿಂಗ್ಸ್ ಫಾಲ್ ಅಪಾರ್ಟ್' ಮತ್ತು 'ಆರೋ ಆಫ್ ಗಾಡ್'ಗಳಲ್ಲಿ ಸಿಗುತ್ತದೆ. ಅರಸೊತ್ತಿಗೆಯಿಲ್ಲದ ಇಬೋಲ್ಯಾಂಡಿನಲ್ಲಿ ಪಂಚಾಯತಿ ಪದ್ಧತಿಯೇ ಜನತೆಯ ಪ್ರಭುತ್ವದ ಪ್ರತೀಕ. ಈ ಪ್ರಜಾಪ್ರಭುತ್ವದಲ್ಲಿ ಮುಖವಾಡ ಧರಿಸಿ ಬರುವ ದೈವಗಳ (ಮಾಸ್ಕ್‌ಡ್ ಸ್ಪಿರಿಟ್ಸ್) ನಿರ್ದೇಶನದಲ್ಲಿ ನಿರೀಕ್ಷಿತ ಮತ್ತು ಅನಿರೀಕ್ಷಿತ ಸಮಸ್ಯೆಗಳನ್ನು ಪರಿಹರಿಸುವುದು, ವಿವಾದಗಳನ್ನು ಬಗೆಹರಿಸುವಾಗ ವ್ಯಕ್ತಿಯ ಮತ್ತು ಜನಾಂಗದ ಹಿತಕ್ಕೆ ಘಾತವಾಗದಂತೆ ಹಿತ–ಮಿತವಾದ ನ್ಯಾಯ ಹೇಳುವುದು ಪಂಚಾಯತದಾರರ ಜವಾಬ್ದಾರಿ. ಬ್ರಿಟಿಷರು ಸ್ಥಾಪಿಸಿದ ಕೋರ್ಟು–ಕಛೇರಿಗಳಿಗಿಂತ ಕಡಿಮೆ ವೆಚ್ಚದಲ್ಲಿ ಸಮತೋಲನದ ನ್ಯಾಯವನ್ನು ಹೆಚ್ಚು ಕ್ಷಿಪ್ರವಾಗಿ ಒದಗಿಸುತ್ತಿದ್ದ ಇಬೋ ಪಂಚಾಯತಿಯ ವಿಕಾಸ ಅಂದರೆ ಇಂದ್ಯದ ಪರಿಸರಕ್ಕೆ ಸರಿಹೋಗುವ ಪ್ರಜಾಪ್ರಭುತ್ವದ ಹೊಸರೂಪ ಮತ್ತೆ ಸೃಷ್ಟಿಯಾಗುವುದು ಸಾಧ್ಯ ಹಾಗೂ ಅಗತ್ಯ ಎಂದು ಅಚೇಬೆ ಸೂಚಿಸುತ್ತಾರೆ.

ವೈಯಕ್ತಿಕ ನೆಲೆಯಲ್ಲಿ ಅನಿರೀಕ್ಷಿತವೆಂಬಂತೆ ತಟ್ಟುವ ಆದರೆ ಸಮಷ್ಟಿಯ ಅನುಭವಕ್ಕೆ ಅಪರಿಚಿತವಲ್ಲದ ಆಪತ್ತುಗಳಿಗೆ ಇಬೋ ಅಲಿಖಿತ ಪರಂಪರೆಯಲ್ಲಿ ಪರಿಹಾರ ವ್ಯವಸ್ಥೆ ಇತ್ತು. ಮಬೈನೋ ಮಾರುಕಟ್ಟೆಯಲ್ಲಿ ಉಮೋಫಿಯದ ಹೆಣ್ಣೊಬ್ಬಳ ಕೊಲೆಯಾಗುತ್ತದೆ. ಆ ಸಂದರ್ಭದಲ್ಲಿ ಮಬೈನೋದವರು ಆಕೆಯ ಸಂತಪ್ತ ಗಂಡನಿಗೆ ಒಬ್ಬ ಕನ್ಯೆಯನ್ನೂ ಉಮೋಫಿಯಕ್ಕೆ ಒಬ್ಬ ಹುಡುಗನನ್ನೂ ದಂಡವಾಗಿ ತೆತ್ತರೆ ಯುದ್ಧ ತಪ್ಪಿಸಬಹುದೆಂದು ಮಬೈನೋದವರಿಗೆ ಉಮೋಫಿಯದವರು ಸಂದೇಶ ಕಳುಹಿಸುತ್ತಾರೆ. ಈ ಸಂದೇಶ ಒಯ್ಯುವ ಒಕೊಂಕ್ವೊ ಶೂರ, ಶ್ರಮಜೀವಿ, ಮೂರು ಬಿರುದುಗಳನ್ನು ಪಡೆದವನು, ಮೂವರು ಹೆಂಡಂದಿರುಳ್ಳ ಸಂಸಾರವನ್ನು ನಿಭಾಯಿಸುವವನು; ಅವನು

ಇಬೋ ಪಂಚಾಯತ ಗಣ್ಯರಲ್ಲಿ ಒಬ್ಬ, ಮುಖವಾಡ ಧರಿಸಿದರೆ ಒಂದು ಪ್ರಮುಖ ದೈವ.

ಮಬ್ಬೈನೋದಿಂದ ತಪ್ಪುಗಾಣಿಕೆಯಾಗಿ ಬಂದ ಹುಡುಗ ಇಕೆಮಫೂನನನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಪಂಚಾಯತಿ ಒಕೊಂಕ್ವೊನಿಗೆ ವಹಿಸುತ್ತದೆ. ಇಕೆಮಫೂನ ಹೊಸ ಪರಿಸರಕ್ಕೆ ಒಗ್ಗಿಕೊಂಡು ಜನಪದ ಕಥೆಗಳನ್ನು ಹೇಳುವ ತನ್ನ ಕೌಶಲದ ಮೂಲಕ ಒಕೊಂಕ್ವೊನ ಚೊಚ್ಚಿಲ ಮಗ ನ್ವೋಯೆಯ ನೆಚ್ಚಿನ ಸಂಗಾತಿಯಾಗುತ್ತಾನೆ. ಆದರೆ ನೆರೆರಾಜ್ಯದಿಂದ ತಂದ ಹುಡುಗನನ್ನು ಬಲಿಕೊಡಬೇಕೆಂದು ಗುಹೆಯೊಳಗಣ ದೈವದ ಪಾತ್ರಿ (ಆರಕಲ್) ಆದೇಶ ನೀಡಿದಾಗ ಆಪತ್ತನ್ನು ನಿವಾರಿಸಲು ಕಲ್ಪಿಸಿರುವ ಧಾರ್ಮಿಕ ಪರಿಹಾರ ವ್ಯವಸ್ಥೆಯ ಹುಳುಕು ಸ್ಫುಟವಾಗುತ್ತದೆ. ಒಕೊಂಕ್ವೊನನ್ನು 'ತಂದೆ' ಎಂದು ಕರೆಯುವ ಹುಡುಗನನ್ನು ಕೊಲ್ಲುವ ಕ್ರಿಯೆಯಲ್ಲಿ ಅವನೂ ಅನಗತ್ಯವಾಗಿ ಪಾಲುಗೊಂಡು ಭೂದೇವಿಯ ಶಾಪಕ್ಕೆ ತುತ್ತಾಗುವುದು ಬೇಡವೆಂಬ ಹಿರಿಯರ ಹಾಗೂ ಗೆಳೆಯರ ಕಿವಿಮಾತನ್ನು ಕೇಳದೆ ಒಕೊಂಕ್ವೊ ತನ್ನ ಮನುಷ್ಯ ಸಹಜವಾದ ಅಂತಃಕರಣದ ದನಿಯನ್ನು ಬದಿಗೊತ್ತಿ ಆ ಹತ್ಯೆಯಲ್ಲಿ ಸೇರಿಕೊಂಡು ತಾನು 'ಗಂಡೆ'ಂದು ತೋರಿಸಿಕೊಳ್ಳುತ್ತಾನೆ. ಕಾಡಿನಲ್ಲಿ ಇಕೆಮಫೂನನನ್ನು ಕಡಿದು ಹಾಕುವ ಭಯಾನಕ ಸನ್ನಿವೇಶದಲ್ಲಿ ಕರುಣ–ಭೀಭತ್ಸಗಳು ಮಿಳಿತವಾಗುತ್ತವೆ. ಇದು 'ಥಿಂಗ್ಸ್ ಫಾಲ್ ಅಪಾರ್ಟ್' ಕಾದಂಬರಿಯಲ್ಲಿ ಮರೆಯಲಾಗದ ದೃಶ್ಯ. ಒಂದು ದೃಷ್ಟಿಯಿಂದ ಒಕೊಂಕ್ವೊನ ದುರಂತಕ್ಕೆ ಇಬೋ ಸಾಮಾಜಿಕ–ಧಾರ್ಮಿಕ ವ್ಯವಸ್ಥೆಯ ಗಂಭೀರ ದೋಷಗಳು ಕುಮ್ಮಕ್ಕು ಕೊಡುತ್ತವೆ. ಆದರೆ ಅವನ ವ್ಯಕ್ತಿತ್ವದಲ್ಲಿಯೇ ಆ ದುರಂತವನ್ನು ಆಹ್ವಾನಿಸುವ ಅತಿರೇಕವೂ ಇದೆ.

ಈ ಅತಿರೇಕದ ಚಿತ್ರಣದ ಜೊತೆಜೊತೆಗೆ ಒಕೊಂಕ್ವೊನ ಹಾಗೂ ಅವನ ಬುಡಕಟ್ಟಿನ ದುರಂತದ ಅನಾವರಣವೂ ಆಗುತ್ತಾ ಹೋಗುತ್ತದೆ. ಸಭೆಯಲ್ಲಿ ಯಾವ ಬಿರುದನ್ನೂ ಗಳಿಸದ ಸಾಮಾನ್ಯನೊಬ್ಬ ಮಾತನಾಡಲು ಮುಂದಾದಾಗ 'ಇದು ಗಂಡಸರ ಸಭೆ' ಎಂದು ಒಕೊಂಕ್ವೊ ಅವನನ್ನು ವ್ಯಂಗ್ಯವಾಡಿ ಹೀಯಾಳಿಸುತ್ತಾನೆ. ಭೂದೇವಿಯ ಗೌರವಾರ್ಥವಾಗಿ ಪ್ರತಿವರ್ಷ ಆಚರಿಸುತ್ತಿದ್ದ 'ಅಹಿಂಸಾಸಪ್ತಾಹ' (ವೀಕ್ ಆಫ್ ಪೀಸ್) ದಲ್ಲಿಯೂ ಅಡಿಗೆ ಮಾಡಲು ತಡಮಾಡಿದಳೆಂಬ ಕ್ಷುಲ್ಲಕ ಕಾರಣಕ್ಕಾಗಿ ತನ್ನ ಕಿರಿಯ ಹೆಂಡತಿಯನ್ನು ಹೊಡೆದು ದಂಡ ತೆರುತ್ತಾನೆ. ಇನ್ನೊಮ್ಮೆ ಬಾಳೆ ಎಲೆಗಳನ್ನು ಕತ್ತರಿಸಿದ್ದಕ್ಕೆ ಗಂಡನಿಂದ ಏಟು ತಿಂದು ಸಿಡುಕಿದ್ದ ಎರಡನೆಯ ಹೆಂಡತಿ ಅವನ ಕೈಯಲ್ಲಿದ್ದ ಕೋವಿಯನ್ನು ನೋಡಿ 'ಗುರಿಯಿಡಲಾರದವರಿಗೆ ಗನ್ ಏಕೆ?' ಎಂದು ಗೊಣಗಿದಾಗ ಅವನಿಟ್ಟ ಗುರಿ ತಪ್ಪಿ ಅವಳು ಅದೃಷ್ಟವಶಾತ್ ಪಾರಾಗುತ್ತಾಳೆ. ಕುಸ್ತಿಪಟುವಾದ ತನ್ನನ್ನು ಮೆಚ್ಚಿಬಂದ ಪ್ರೀತಿಯ ಈ ಹೆಂಡತಿ ಸತ್ತಿಲ್ಲ ಎಂದು ಮನವರಿಕೆಯಾದಾಗ ಒಕೊಂಕ್ವೊ ಸಂತೋಷದಿಂದ ನಿಟ್ಟುಸಿರುಬಿಡುತ್ತಾನೆ. ಒಕೊಂಕ್ವೊನ ಮೊಂಡುತನ ದುರಂತವನ್ನು ಮತ್ತೆ ಮತ್ತೆ ಕೆಣಕುತ್ತದೆಯೆಂಬುದನ್ನು ಈ ಘಟನೆ ನೇರವಾಗಿ ವಾಚ್ಯಗೊಳಿಸುತ್ತದೆ. ಕತ್ತಿ ಬಳಸುವುದರಲ್ಲಿ ಅವನಿಗಿದ್ದ ಕೌಶಲವು ಬ್ರಿಟಿಷರ ತುಪಾಕಿತಂತ್ರದ ಮುಂದೆ ನಿಷ್ಕ್ರಿಯವಾಗುತ್ತದೆ ಎಂಬುದರ ಮುನ್ಸೂಚನೆಯಾಗಿಯೂ ಈ ಘಟನೆ ಬಂದಿದೆ

ಇಬೋ ವೀರನೊಬ್ಬನ ಶವಸಂಸ್ಕಾರದಂದು ಒಕೊಂಕ್ವೊ ಕೈಯಲ್ಲಿದ್ದ ಕೋವಿ ಅಕಸ್ಮಾತ್ ಹಾರಿ ಆ ವೃದ್ಧನ ಮಗ ಸತ್ತುಬಿದ್ದಾಗ ಈವರೆಗೆ ಮಿಣುಕುತ್ತಿದ್ದ ಅವನ ಪತನ ಪಥ ಒಮ್ಮೆಲೆ ದಿಗ್ಗೆಂದು ಗೋಚರಿಸುವಂತಾಗುತ್ತದೆ. ಇದು ಉದ್ದೇಶಪೂರ್ವಕವಾಗಿ ಮಾಡಿದ ಕೊಲೆಯಲ್ಲ. ಆದರೂ ಕುಲಬಾಂಧವನ ಹತ್ಯೆಗೆ ಕಾರಣನಾದವನನ್ನು ಭೂದೇವಿ ಧರಿಸಲಾರಳು. ಅವನ ಮನೆ–ಮಂದೆ ಭಸ್ಮವಾಗಬೇಕು, ತಪ್ಪಿತಸ್ಥನು ಮಡದಿ ಮಕ್ಕಳೊಂದಿಗೆ ತೊಲಗಿ ಏಳುವರ್ಷಕಾಲ ಪರದೇಶವಾಸ ಮಾಡಬೇಕು–ಇದು ಉದ್ದೇಶಪೂರ್ವಕವಾಗಿ ಮಾಡಿರದ ಆದರೆ ಸಾವಿನಲ್ಲಿ ಪರಿಣಮಿಸಿದ ಇಂಥ ಘೋರ ಕೃತ್ಯಕ್ಕೆ ಪೂರ್ವನಿಗದಿತ ಶಿಕ್ಷೆ.

ಒಕೊಂಕ್ವೊನಿಗೆ ತಂದೆಯ ಊರಿನ ಯೋಗ ತಪ್ಪಿದಾಗ ತಾಯಿಯ ಊರಿನ ಆಶ್ರಯ ಅನಿವಾರ್ಯವಾಗುತ್ತದೆ. 'ತಾಯಿಗಿಂತ ಮೇಲಿಲ್ಲ' ಎಂಬುದು ಸರ್ವೇಸಾಮಾನ್ಯವಾಗಿ ಇಬೋ ಹೆಸರೊಂದರ ('ನೇಕ') ಅರ್ಥ. ಎಲ್ಲ ಅರ್ಥದಲ್ಲೂ ಜೊತೆಯಾಗಿ ನಿಂತು ಬದುಕಿದ ಸಫಲ ಸಾಮರಸ್ಯದ ಮಾದರಿಯಂತಿದ್ದ ಹಿರಿಯದಂಪತಿಗಳು ಒಂದೇ ದಿನ ಉಮೋಫಿಯದಲ್ಲಿ ಸಾವನ್ನಪ್ಪುವ ಅಪೂರ್ವ ಘಟನೆಯ ಪ್ರಸ್ತಾಪ ಕಾದಂಬರಿಯಲ್ಲಿ ಬರುತ್ತದೆ. ಗಂಡು–ಹೆಣ್ಣುಗಳ ಸಾಮರಸ್ಯ ಇಬೋ ಮೌಖಿಕ ಪರಂಪರೆಯಲ್ಲಿ ಪ್ರಶಂಸಿತವಾದ ಒಂದು ಮೌಲ್ಯ ವಿಶೇಷವಾಗಿರುವಾಗಲೂ ಕೂಡ ಹೆಂಡಿರ ಮಾತು ಕೇಳುವವನು ಎಂಥ ಗಂಡು ಎಂದು ಈ ಸಂದರ್ಭದಲ್ಲಿ ಒಕೊಂಕ್ವೊ ಅಡ್ಡಮಾತನ್ನಾಡುತ್ತಾನೆ. ತಾಯಿಯ ಊರಾದ ಮಬಾಂಟದಲ್ಲಿ ಅಗತ್ಯವಿದ್ದ ಎಲ್ಲ ಸೌಕರ್ಯಗಳನ್ನೂ ಬಂಧುಗಳು ಅವನಿಗೆ ಕಲ್ಪಿಸಿಕೊಡುತ್ತಾರೆ. ಆದರೆ ಏಳುವರ್ಷ ಕಾಲವೂ ಒಕೊಂಕ್ವೊ ತಾಯಿಯ ಮನೆಯಲ್ಲಿ ಮಾನಸಿಕವಾಗಿ ಪರದೇಶಿಯಾಗಿಯೇ ಉಳಿಯುತ್ತಾನೆ. ತಾಯ್ತನದ ಹಿರಿಮೆಯನ್ನು ಕುರಿತು ಬಂಧು ಉಚೆಂಡೊ ಏನೇ ಹೇಳಲಿ, ಉಮೋಫಿಯದಲ್ಲಿ ತಾನು ಕಳೆದುಕೊಂಡ ಸ್ಥಾನಮಾನಗಳನ್ನು ಮಬಾಂಟ ತುಂಬಲು ಸಾಧ್ಯವಿಲ್ಲವೆನ್ನುವುದು ಅವನಿಗೆ ಖಚಿತವಾಗಿದೆ.

ಜೊತೆಗೆ ಅಣಕವಾಡುವ ಒಂದು ವಿಪರ್ಯಾಸ ಬೇರೆ. ತಂದೆ ಉನೋಕನಂತೆ ತಾನೂ ಆದರೆ ಎಂಬ ಭಯ ಈವರೆಗೆ ಒಕೊಂಕ್ವೊನ ಸಾಧನೆ ಹಾಗೂ ಅತಿರೇಕಗಳ ಹಿಂದಿನ ಪ್ರೇರಣೆಯಾಗಿತ್ತು. ತಂದೆಯ ನೆನಪು ತಾಯಿಯ ಮನೆಯಲ್ಲಿಯೂ ಒಕೊಂಕ್ವೊನನ್ನು ಕಾಡುತ್ತದೆ. ಅವನ ತಂದೆ ಉನೋಕ ನುರಿತ ಕೊಳಲುವಾದಕ. ಆದರೆ ಸೋಮಾರಿ, ಸಾಲಗಾರ, ಬಿರುದಿಲ್ಲದ ತುಚ್ಛ, ದುರ್ಮರಣಕ್ಕೆ ಈಡಾಗಿ ಶವ ಸಂಸ್ಕಾರದ ಕನಿಷ್ಠ ವಿಧಿಗಳಿಂದಲೂ ವಂಚಿತನಾದವನು. ತಾನೂ ತಂದೆಯಂತೆ ಸೋತು ಹೆಣ್ಣಾದೆನೆಂಬ ಭಯ ತಾಯಿಯ ಊರಾದ ಮಬಾಂಟದಲ್ಲಿ ಪುಷ್ಟಿಗೊಳ್ಳುತ್ತದೆ. ಒಕೊಂಕ್ವೊನ ಹಿರಿಯ ಮಗ ನ್ವೋಯೆಯಲ್ಲಿ ತಾತ ಉನೋಕನ ಚಹರೆ ಸ್ಫುಟವಾಗುತ್ತಾ ಬರುತ್ತದೆ. ಅವನು ಒಕೊಂಕ್ವೊನಿಂದ ಸಿಡಿದು ನಿಲ್ಲುವ ಪ್ರಸಂಗದಲ್ಲಿ ನಾಯಕ ಒಕೊಂಕ್ವೊನ ವೈಯಕ್ತಿಕ ಬದುಕಿನ ವಿಪರ್ಯಾಸ ಇಬೋ ಸಂಪ್ರದಾಯ ಮುಗ್ಗರಿಸಿ ಬೀಳುವ ದುರಂತ ಪ್ರಕ್ರಿಯೆಯನ್ನೂ ಅಣಕವಾಡಿ ತೋರಿಸುತ್ತದೆ. ಗೆಳೆಯ ಇಕೆಮಫೂನ ಬಲಿಯಾದಾಗ ನ್ವೋಯೆಗೆ ಅಂತರ್ಯದ ಒಂದು ಎಳೆ ಕಡಿದಂತಾಗಿತ್ತು.

ಹಾಗೆಯೇ ಇಬೋ ಸಂಪ್ರದಾಯದಂತೆ ಕಾಡಿನಲ್ಲಿ ಸಾಯ ಬಿಟ್ಟಿದ್ದ ಅವಳಿ-ಜವ ಹಸುಳೆಗಳ ಕೂಗು ಕೇಳಿದಾಗಲೂ ನ್ವೋಯೆ ವಿಚಲಿತನಾಗುತ್ತಿದ್ದ. ಹೀಗಾಗಿ ಮಬಾಂ ದಲ್ಲಿ ಮಿಷನರಿಗಳು ಕಾಲೂರಿದಾಗ ಅವರ ಕಾಡೆ ಪಾಲಲು ಅವನ ಹೃದಯ ಸಿದ್ ವಾಗಿತ್ತು. ತಾತ ಉನೋಕನಿಗೆ ಸಂಗೀತದ ಗೀಳಿತ್ತು. ಏಸುವಿನ ಒಸಗೆಯ ಮಾಧುರ್ಯ, ಬೈಬಲಿನ ಕಾವ್ಯಮಯತೆ ಮೊಮ್ಮಗನನ್ನು ತಟ್ಟುತ್ತದೆ. ಈತ ಮಿಷನ ಗಳ ಸಂಪರ್ಕ ಬೆಳೆಸಿದ ವಿಷಯ ತಿಳಿದು ಒಕೊಂಕ್ವೊ ತಮ್ಮ ದೇವರುಗಳಿಗೆ ಎರಡ ಬಗೆಯಲು ಹವಣಿಸುತ್ತಿದ್ದ ನ್ವೋಯೆಯನ್ನು ಹೊಡೆಯುತ್ತಾನೆ. ನ್ವೋಯೆ ಅಂದ ಮನೆಬಿಟ್ಟು ಹೋದವನು ಮತ್ತೆ ಹಿಂದಿರುಗುವುದಿಲ್ಲ. ತಂದೆಯನ್ನು ಬಿಟ್ಟುಬಂದ ಮಗ ನಿಗೆ ಚರ್ಚಿನಲ್ಲಿ ಸಂಭ್ರಮದ ಸ್ವಾಗತ ದೊರೆಯುತ್ತದೆ.

ಒಂದು ಜನಾಂಗದ ಮೌಲ್ಯವ್ಯವಸ್ಥೆಯಲ್ಲಿ ಬಹುಮುಖತೆಯಿದ್ದರೂ ಕಾಲಗತಿಯಲ್ಲಿ ಅದರ ಮೌಲ್ಯಪ್ರಜ್ಞೆ ಆಗಾಗ ಸಂಕುಚಿತವಾಗುವುದು ಸಹಜ ಒಕೊಂಕ್ವೊನಂಥ ಏಕಮುಖಿಗಳ ಒತ್ತು ಸಂಗ್ರಾಮಶೀಲ ಪೌರುಷದ ಮೇಲಿತ್ತು ಅವನ ಸಮಕಾಲೀನ ಸಮಾಜದಲ್ಲಿ ಹೃದಯವಂತಿಕೆ ಮತ್ತು ಅನೇಕ ಸುಕುಮಾರ ತುಡಿತಗಳು ಅಪಮೌಲ್ಯಗೊಂಡಿದ್ದವು. ಈ ಲೋಪವನ್ನು ತುಂಬುವ ಸಾಮರ್ಥ್ಯ ಹೊಸ ದಾಗಿ ಬಂದ ಕ್ರೈಸ್ತಧರ್ಮದಲ್ಲಿದೆ ಎಂದು ಭಾವಿಸಿ ಚರ್ಚನ್ನು ಸೇರಿಕೊಂಡ ಸೂಕ್ಷ್ಮ ಸಂವೇದನೆಯುಳ್ಳ ಕೆಲವು ವ್ಯಕ್ತಿಗಳನ್ನು ನ್ವೋಯೆ ಪ್ರತಿನಿಧಿಸುತ್ತಾನೆ. ಆದರೆ ಮತಾಂತರಗೊಂಡವರಲ್ಲಿ ಹೆಚ್ಚಿನವರು ಇಬೋ ವ್ಯವಸ್ಥೆಯ ನೇರ ಬಲಿಪಶುಗಳು: ಅವಳಿ-ಜವಳಿ ಮಕ್ಕಳನ್ನು ಕಳೆದುಕೊಂಡ ತಾಯಂದಿರು, ದೇವರಿಗೆಂದು ಮುಡಿಪಾಗಿ ಬಿಟ್ಟ—ಬುಡಕಟ್ಟಿನ ಇತರ ವರ್ಗಗಳಿಗೆ ಅಸ್ಪೃಶ್ಯರೆನಿಸಿದ—'ಒಸು'ಗಳು ಇತ್ಯಾದಿ. ಮೊದಮೊದಲು ಹೇಳಿಕೊಳ್ಳುವಂಥ ಏನನ್ನೂ ಸಾಧಿಸದ ಅಲ್ಪರು, ಆಮೇಲೆ ಬಿರುದಾಂಕಿತ ಗಣ್ಯರು ಸೇರಿಕೊಂಡು ಕ್ರೈಸ್ತಸಮುದಾಯ ಇಬೋಲ್ಯಾಂಡಿನಲ್ಲಿ ಬಹು ಬೇಗನೆ ಬೆಳ ಯಿತು. ಜೊತೆಗೆ ಬಂದ ಇಂಗ್ಲಿಷ್ ಶಿಕ್ಷಣಸಂಸ್ಥೆಗಳು, ಕೋರ್ಟು-ಕಛೇರಿಗಳು, ಜೈಲು ಗಳು, ಮಳಿಗೆ-ಮಾರುಕಟ್ಟೆಗಳು ಸಾಂಪ್ರದಾಯಿಕ ಇಬೋ ವ್ಯವಸ್ಥೆ ಕುಸಿಯಲು ಒತ್ತಾಸೆ ನೀಡಿದವು. ಮಬಾಂಟದಲ್ಲಿ ಇಬೋಗಳು ನಿರ್ವೀರ್ಯರಾದುದನ್ನು ಕಂಡು ಒಕೊಂಕ್ವೊ ಉಮೋಫಿಯದಲ್ಲಿ ಇನ್ನೂ ಗಂಡಸರಿದ್ದಾರೆ ಎನ್ನುತ್ತಾ ತಾನು ಇಲ್ಲಿಂದ ಮುಕ್ತನಾಗುವ ದಿನವನ್ನು ಎದುರು ನೋಡುತ್ತಿದ್ದ. ಆ ದಿನ ಸಮೀಪಿಸಿದಾಗ ತಾಯಿಯ ಮನೆಯಲ್ಲಿ ಬಂಧು ಸಮಸ್ತರಿಗೆ ಭಾರೀ ಔತಣವನ್ನು ಏರ್ಪಡಿಸಿ ತನ್ನ ಕೃತಜ್ಞತೆ ಯನ್ನರ್ಪಿಸಿ 'ಸೈ' ಎನ್ನಿಸಿಕೊಳ್ಳುತ್ತಾನೆ.

ಊರಿಗೆ ಹಿಂದಿರುಗಿದಾಗ ಒಕೊಂಕ್ವೊನಿಗೆ ದೊರತ ಸ್ವಾಗತ ಸ್ಮರಣೀಯ ವೆಂಬಂತೇನೂ ಇರಲಿಲ್ಲ. ಏಳುವರ್ಷಗಳಷ್ಟು ಕಾಲದ ದೀರ್ಘ ಅವಧಿಯಲ್ಲಿ ಯಾವುದೇ ಸಮಾಜ ಒಬ್ಬ ವ್ಯಕ್ತಿಯಿಂದ ತೆರವಾದ ಸ್ಥಾನವನ್ನು ಸಹಜವಾಗಿಯೇ ತುಂಬಿಕೊಳ್ಳು ತ್ತದೆ: 'ಕತ್ತರಿಸಿದ ಬಾಲವನ್ನು ಓತಿ ಮತ್ತೆ ಪಡೆದುಕೊಳ್ಳುವಂತೆ'. ಗಾದೆಯ ಮಾತಿನ ನಿಲುಕುವ ಈ ಸತ್ಯ ಒಕೊಂಕ್ವೊನಿಗೆ ಅರ್ಥವಾಗುತ್ತದೆ. ಆದರೆ ಲಿಖಿತ ಸಂಪ್ರದಾಯದ ಸಂಗಾತಿಯಾಗಿ ಬೆಳೆದುಬಂದಂಥ ಹೊಸ ಶಿಕ್ಷಣವನ್ನು ಪಡೆಯದ, ಅಲಿಖಿತಕ್ಕೆ ಸೀಮಿ

ವಾದ ಇಬೋ ಬುದ್ಧಿಮತ್ತೆಗೆ ಬ್ರಿಟಿಷ್ ವಸಾಹತುಶಾಹಿಯ ಜಾಗತಿಕ ಆಯಾಮವನ್ನು, ಅದರ ಯಂತ್ರ-ತಂತ್ರಗಳ ವ್ಯಾಪ್ತಿಯನ್ನು ಖಚಿತವಾಗಿ ಗುರುತಿಸುವುದು ಶಕ್ಯವಿರಲಿಲ್ಲ. ಮಬಾಂಟಕ್ಕೆ ಆಗಾಗ ಬಂದು ಹೋಗುತ್ತಿದ್ದ ಆತ್ಮೀಯ ಗೆಳೆಯ ಒಬೆರೀಕ ಉಮೋಫಿಯ ದಲ್ಲಿನ ಇತ್ತೀಚಿನ ಬೆಳವಣಿಗೆ ಕುರಿತು ಸಾಕಷ್ಟು ಹೇಳಿದ್ದರೂ ಊರಿನಲ್ಲಿ ತಾನು ಕಣ್ಣಾರೆ ಕಂಡ ಸ್ಥಿತಿ ಒಕೊಂಕ್ವೊನನ್ನು ದಿಗ್ಭ್ರಮೆಗೊಳಿಸುತ್ತದೆ. ಸಾಂಪ್ರದಾಯಿಕ ಇಬೋ ವ್ಯವಸ್ಥೆಗಳು ದುರ್ಬಲವಾಗಿದ್ದವು. ಅಧಿಕಾರ ಕೈಬದಲಾಯಿಸಿತ್ತು. ವಾಸ್ತವಿಕವಾಗಿ ಅದು ಹೊಸ ಆಡಳಿತದಲ್ಲಿ ಕೇಂದ್ರೀಕೃತವಾಗಿತ್ತು. ಕ್ರೈಸ್ತರು ಹಾಗೂ ಇಬೋ ಧರ್ಮವನ್ನು ಇನ್ನೂ ತ್ಯಜಿಸದಿದ್ದವರು-ಈ ಎರಡು ತಂಡಗಳ ಧ್ರುವೀಕರಣವಾಗಿತ್ತು. ಇಬೋ ಸಮಾಜದಲ್ಲಿ ಬಿರುಕು ಎದ್ದು ಕಾಣುತ್ತಿತ್ತು.

ಹೊಸ ವ್ಯವಸ್ಥೆಯಲ್ಲಿಯೂ ಕಾಣಿಸಿಕೊಂಡ ಒಡಕುಗಳನ್ನು ಅಚೇಬೆ ಗಮನಿಸು ತ್ತಾರೆ: ಇಬೋ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಲು ಬೇಕಾದ ಅಂತಃಕರಣವಾಗಲಿ ವಿನಯವಾಗಲಿ ಇಲ್ಲದ ಬ್ರಿಟಿಷ್ ಅಧಿಕಾರಿಗಳು, ಇಗ್ಬೋ ಭಾಷೆ ತಿಳಿಯದೆ ಜನತೆಯ ಸಂಪರ್ಕ ಬೆಳೆಸಲಾರದ ಈ ಹಿರಿಯ ಅಧಿಕಾರಿಗಳ ಆದೇಶಗಳನ್ನು ವ್ಯಾಖ್ಯಾನಿಸುವಾಗ ಅವಕ್ಕೆ ತಮ್ಮದೇ ಆದ ತಿರುವು ಕೊಟ್ಟು ಜಾರಿಗೆ ತರುವ ಸ್ವಹಿತ ಸಂದೇಶಗಾರರು. ಈ ಸಂದೇಶಗಾರರಲ್ಲಿಯೂ ಕೆಲವರು ಬೇರೆ ಉಪಭಾಷೆ ಮಾತನಾಡುವ ಹೊರನಾಡಿನವರು, ಇವರು ಇಬೋಗಳಿಗಿಂತ ಮೊದಲೇ ಇಂಗ್ಲಿಷ್ ಕಲಿತಿದ್ದರೆಂಬ ಕಾರಣಕ್ಕೆ ನೇಮಕ ಗೊಂಡವರು; ಮಿಷನರಿಗಳಲ್ಲಿ ಸಂದರ್ಭೋಚಿತ ಶಿಷ್ಟತೆಯನ್ನು ಪಾಲಿಸುವ ಒಬ್ಬ ಬ್ರೌನ ನಾದರೆ ಅವನ ತರುವಾಯದವನು ದುಡುಕಿ ಕ್ಷೋಭೆಗೆ ಕಾರಣನಾಗುವ ಇನ್ನೊಬ್ಬ ಸ್ಮಿತ್ —ಒಬ್ಬನದು ಲಾಸ್ಯವಾದರೆ ಇನ್ನೊಬ್ಬನದು ತಾಂಡವ, ಗುರುಗಳ ನೃತ್ಯಕ್ಕೆ ತಕ್ಕಂತೆ ಡೋಲು ಬಾರಿಸುವ ಶಿಷ್ಯರ ಬಳಗ, ಇಬೋ ಸಮಾಜದಲ್ಲಿ ಬಹಿಷ್ಕೃತರಂತಿದ್ದ ನೀಳ್ಗೂದಲಿನ ಒಸುಗಳನ್ನು ಚರ್ಚಿನಲ್ಲಿ ಕಂಡಾಗ 'ಇದು ಸಲ್ಲದು' ಎಂದು ಹಿಂಜರಿ ಯುವ ಇತರ ಕ್ರೈಸ್ತರು—ಹೀಗೆ ಕ್ರೈಸ್ತ ಸಮುದಾಯದಲ್ಲಿಯೂ ಅನೇಕ ಒಡಕು ಗಳು ಎದ್ದು ಕಾಣಿಸುತ್ತಿದ್ದವು. ಬಿಳಿಯರು ಹಾಕಿದ ಒಂದು ಚೂರಿ ಬುಡಕಟ್ಟಿನ ಬಂಧ ವನ್ನು ಸುಲಭವಾಗಿ ಕತ್ತರಿಸಿ ಎಲ್ಲವೂ ಅಸ್ತವ್ಯಸ್ತವಾಯಿತಲ್ಲ (ಥಿಂಗ್ಸ್ ಫಾಲ್ ಅಪಾರ್ಟ್) ಎಂದು ಒಕೊಂಕ್ವೊ ಪರಿತಪಿಸುತ್ತಾನೆ. ತನ್ನ ವೈಯಕ್ತಿಕ ದೌರ್ಭಾಗ್ಯ ಕ್ಕಾಗಿ ಒಕೊಂಕ್ವೊ ಅಷ್ಟಾಗಿ ಮರುಗುವುದಿಲ್ಲ, ಅವನು ಸಂತಾಪಗೊಳ್ಳುವುದು ತನ್ನ ಜನಾಂಗದ ದುರಂತಕ್ಕಾಗಿ.

ಮತಾಂತರಗೊಂಡವರಲ್ಲಿ ಅತ್ಯಾಸಕ್ತನಾದ ಇನೋಕನೆಂಬ ಕ್ರೈಸ್ತ ದುಡುಕಿ ಇಬೋ ದೈವವೊಂದನ್ನು ಅನವಶ್ಯಕವಾಗಿ ಕೆಣಕಿ ಅದರ ಮುಖವಾಡವನ್ನು ಕಿತ್ತೊಗೆ ಯುವ ಪ್ರಸಂಗ ಉಮೋಫಿಯದಲ್ಲಿಯ ಪರಿಸ್ಥಿತಿಯನ್ನು ಬಿಗಡಾಯಿಸುತ್ತದೆ. ಮಾರನೆಯ ರಾತ್ರಿ ಈ ಹೇಯ ಕೃತ್ಯಕ್ಕೆ ಪ್ರತಿಯಾಗಿ ಮುಖವಾಡದ ದೈವ ಸಮೂಹ ಚರ್ಚಿಗೆ ಬೆಂಕಿ ಯಿಟ್ಟು ಅದನ್ನು ಸುಟ್ಟುಹಾಕುತ್ತದೆ. ಮಾತುಕತೆಗೆಂದು ಇಬೋ ಗಣ್ಯರಿಗೆ ಬ್ರಿಟಿಷ್ ಜಿಲ್ಲಾಧಿಕಾರಿಯಿಂದ ಬಂದ ಆಮಂತ್ರಣ ಇದರ ಮುಂದಿನ ಹೆಜ್ಜೆಯಾಗಿದೆ. ಕರೆಗೆ ಮನ್ನಣೆಕೊಡುವುದು ಇಬೋ ಧರ್ಮ. ಜಿಲ್ಲಾಧಿಕಾರಿಯನ್ನು ಭೇಟಿಮಾಡಲು

ಹೋದಾಗ ಒಕೊಂಕ್ವೊ ಸೇರಿದಂತೆ ಆರುಮಂದಿ ನಾಯಕರನ್ನು ಮೋಸದಿಂದ ಬಂಧಿಸಲಾಗುತ್ತದೆ. ಬಂಧಿಗಳ ಮೇಲೆ ಹಿಂಸೆ, ಅತ್ಯಾಚಾರ ನಡೆಯುತ್ತದೆ. ಇಬೋ ನಾಣ್ಯವಾದ ಕವಡೆಯ ಇನ್ನೂರೈವತ್ತು ಚೀಲಗಳನ್ನು ಊರಿನವರು ದಂಡವಾಗಿ ಕಟ್ಟಿದ ಮೇಲೆಯೇ ಈ ನಾಯಕರ ಬಿಡುಗಡೆಯಾಗುತ್ತದೆ.

ಈ ಘಟನಾವಳಿಯ ಮೂಲಕ ಕಾದಂಬರಿಯ ಗಂಭೀರ ಪ್ರಕ್ರಿಯೆ ತನ್ನ ಕೊನೆಯ ಹಂತವನ್ನು ತಲುಪುತ್ತದೆ. ಬಿಕ್ಕಟ್ಟನ್ನು ಚರ್ಚಿಸಲು ಇಬೋ ಗಣ್ಯರ ಸಭೆ ಸೇರುತ್ತದೆ. ಉಮೋಫಿಯ ಮತ್ತೊಮ್ಮೆ ಸಂಗ್ರಾಮಕ್ಕೆ ಸಿದ್ಧವಾಗುತ್ತಿದೆ ಎಂದು ಒಕೊಂಕ್ವೊನಿಗೆ ತೀವ್ರ ಸಂತಾಪದಲ್ಲೂ ಉಲ್ಲಾಸವಾಗುತ್ತದೆ. ಆದರೆ ಸಭೆಯಲ್ಲಿ ನಾಜೂಕಿನ ಮಾತಿನ 'ಹೆಂಗಳೆಯರೇ' ಮುಂದಾದರೆ ಎಂಬ ಆತಂಕ ಅವನನ್ನು ಕಾಡುತ್ತದೆ. ಚರ್ಚೆ ಆರಂಭವಾಗುತ್ತಲೇ 'ಈ ಸಭೆಯನ್ನು ನಿಷೇಧಿಸಲಾಗಿದೆ, ಸಭೆ ನಡೆಯಬಾರದು' ಎಂಬ ಆದೇಶ ಬ್ರಿಟಿಷ್ ಜಿಲ್ಲಾಧಿಕಾರಿಯಿಂದ ಬರುತ್ತದೆ. ಆ ಆದೇಶವನ್ನು ಹೊತ್ತುತಂದ ಸಂದೇಶಕಾರರಲ್ಲಿ ಒಬ್ಬನನ್ನು ಒಕೊಂಕ್ವೊ ಕೂಡಲೇ ಕಡಿದು ಹಾಕುತ್ತಾನೆ. ಆದರೆ 'ಇವನೇಕೆ ಹೀಗೆ ಮಾಡಿದ' ಎಂದು ಸಭೆಯಲ್ಲಿ ಉದ್ಗಾರವೇಳುತ್ತದೆ. ಇದನ್ನು ಕೇಳಿದಾಗಲೇ ತಾನು ಏಕಾಕಿ, ಉಮೋಫಿಯ ಇನ್ನು ಎಂದಿಗೂ ಯುದ್ಧಕ್ಕೆ ಮುಂದಾಗುವುದಿಲ್ಲ ಎಂದು ಅವನಿಗೆ ಮನವರಿಕೆಯಾಗುತ್ತದೆ.

ಒಕೊಂಕ್ವೊನನ್ನು ಬಂಧಿಸಲೆಂದು ಬಂದ ಜಿಲ್ಲಾಧಿಕಾರಿಗೆ ಒಕೊಂಕ್ವೊನ ಗೆಳೆಯ ಒಬೆರೀಕ ತೋರಿಸುವ ದೃಶ್ಯದೊಂದಿಗೆ ಕಾದಂಬರಿ ಮುಕ್ತಾಯವಾಗುತ್ತದೆ: ದೊಡ್ಡ ಮರವೊಂದರಲ್ಲಿ ಒಕೊಂಕ್ವೊನ ದೇಹ ನೇತಾಡುತ್ತಿದೆ. ಕೊನೆಗೂ ಆಗಬಾರದ್ದೇ ಆಯಿತು. ತಂದೆ ಉನೋಕನಂತೆ ಒಕೊಂಕ್ವೊನಿಗೂ ವಿಧಿವತ್ತಾದ ಶವ ಸಂಸ್ಕಾರವಿಲ್ಲ. ಸ್ವಹತ್ಯೆಮಾಡಿಕೊಂಡವರ ಶವವನ್ನು ಇಬೋ ಬಾಂಧವರು ಮುಟ್ಟುವಂತಿಲ್ಲ. ಕಾದಂಬರಿಯ ಒಂದು ಪ್ರಜ್ಞಾಕೇಂದ್ರವಾದ ಒಬೆರೀಕ ಒಕೊಂಕ್ವೊನತ್ತ ಕೈತೋರಿ ಜಿಲ್ಲಾಧಿಕಾರಿಗೆ ಹೇಳುತ್ತಾನೆ; 'ಇವನು ಉಮೋಫಿಯದ ಮಹಾವ್ಯಕ್ತಿಗಳಲ್ಲೊಬ್ಬ. ಇವನು ನೇಣುಹಾಕಿಕೊಳ್ಳುವಂತೆ ಮಾಡಿದವರು ನೀವು, ಈಗ ಇವನನ್ನು ನಾಯಿಯಂತೆ ಹೂಳಲಾಗುತ್ತದೆ.'

ಬ್ರಿಟಿಷ್ ವಸಾಹತುಶಾಹಿಗೆ ತುತ್ತಾಗಿದ್ದ ದೇಶಗಳಲ್ಲಿ ಇಂಗ್ಲಿಷ್ ಮಾಧ್ಯಮದಲ್ಲಿ ಸೃಷ್ಟಿಯಾಗುವ ಕೃತಿಗಳನ್ನು ಒಟ್ಟಾಗಿ ಕಾಮನ್ವೆಲ್ತ್ ಸಾಹಿತ್ಯವೆಂದು ಕರೆಯುವುದು ಈಗ ವಾಡಿಕೆಯಾಗಿದೆ. ಅತ್ಯಂತ ಜನಪ್ರಿಯ ಕಾಮನ್ವೆಲ್ತ್ ಕಾದಂಬರಿಗಳಲ್ಲಿ ಒಂದಾದ 'ಥಿಂಗ್ಸ್ ಫಾಲ್ ಅಪಾರ್ಟ್'ನಲ್ಲಿ ಒಬೆರೀಕ ಹೇಳುವ ಕೊನೆಯ ಮಾತು ಒಕೊಂಕ್ವೊನಂಥ ನಿಷ್ಠಾವಂತ ನಾಯಕನ ಸ್ವಾಭಿಮಾನ ಶೌರ್ಯಗಳನ್ನು ವ್ಯರ್ಥಗೊಳಿಸುವ ವಸಾಹತುಶಾಹಿಯು ಅಂತಃಕರಣವಿಲ್ಲದ ಹಾಗೂ ಮೂಲತಃ ಜೀವನ ವಿರೋಧಿಯಾದ ಒಂದು ಯಾಂತ್ರಿಕ ವ್ಯವಸ್ಥೆ ಎಂಬುದನ್ನು ಸ್ಪಷ್ಟಗೊಳಿಸುತ್ತದೆ. ಆದರೆ ಇಬೋ ವ್ಯವಸ್ಥೆಯಲ್ಲಿ ಬೇಸತ್ತ ನ್ವೋಯೆಯನ್ನು ಏಸುವಿನ ಅಂತಃಕರಣ ಹಾಗೂ ಬೈಬಲಿನ ಕಾವ್ಯಶಕ್ತಿ ಆಕರ್ಷಿಸುತ್ತವೆಯೆಂಬುದನ್ನು ಮರೆಯುವಂತಿಲ್ಲ. ಕಾಮನ್ವೆಲ್ತ್ ದೇಶಗಳಲ್ಲಿ ಅನೇಕ ಕಡೆ ಪ್ರಚಲಿತವಾಗಿದ್ದ ತೀವ್ರ ಅವಮಾನದ ಕಥೆಗಳನ್ನು ಕ್ರೈಸ್ತ ಧರ್ಮ ಮತ್ತು [illegible]

ಪೋಷಕವಾಗಿ ನಿಂತಿದ್ದ ಆಡಳಿತವರ್ಗ ಕೊನೆಗೊಳಿಸಿದವು ಎನ್ನುವುದು ನಿಜ. ವಸಾಹತು ಶಾಹಿಯನ್ನು ಕುರಿತು ಕೊನೆಯಿಡದೋ ಎನ್ನುವಂಥ ಮಾತನ್ನು ಹೇಳುವ ಒಬೆರೀಕನಿಗೂ ಇಬೋಲ್ಯಾಂಡಿನ ಅಬದ್ಧ ಆಚಾರಗಳು ಅತೀವ ವೇದನೆಯನ್ನುಂಟುಮಾಡಿದ್ದವು. ಅವನು ಹನ್ನೊಂದು ಜೊತೆ ಅವಳಿ–ಜವಳಿ ಹಸುಳೆಗಳನ್ನು ಕಳೆದುಕೊಂಡಿದ್ದವನು. ಆಗಾಗ ಚಿಂತನಾವಶನಾಗಿ ಅಂತರ್ಮುಖಿಯಾಗುತ್ತಿದ್ದವನು. ಆದರೆ ಈ ಕಾದಂಬರಿ ಯಲ್ಲಿ ಚಿಂತನಾಪರತೆ ಅಂತರ್ಮುಖತೆಗಳು ಕಥಾನಕಕ್ಕೆ ಅಧೀನವಾಗಿ ಬರುತ್ತವೆ. ಅವುಗಳಿಗೋಸ್ಕರವಾಗಿ ಅಚೇಬೆ ಕಥಾನಕದ ಸೂತ್ರವನ್ನು ಬಾಹ್ಯ ಘಟನೆಗಳ ತಾರ್ಕಿಕ ವ್ಯವಸ್ಥೆಯನ್ನು ಸಡಿಲಗೊಳಿಸುವುದಿಲ್ಲ. ಇದರ ಅರ್ಥ ಅವರ ಕಾದಂಬರಿಗಳಲ್ಲಿ ವ್ಯವಸ್ಥಿತ ವಾದ ರೀತಿಯಲ್ಲಿ ಪ್ರತಿಮೆಗಳು ಬಳಕೆಯಾಗಿಲ್ಲವೆಂದಲ್ಲ. 'ಥಿಂಗ್ಸ್ ಫಾಲ್ ಅಪಾರ್ಟ್' ನಲ್ಲಿ ಮುಖ್ಯ ಪ್ರತಿಮೆಗಳಾಗಿ ಬರುವ 'ಬೆಂಕಿ', 'ನೀರು'ಗಳ ಅರ್ಥವ್ಯಾಪ್ತಿಯನ್ನು ಮತ್ತು ಈ ಕಾದಂಬರಿ ಬಳಸಿಕೊಂಡಿರುವ ಜನಪದಕಥೆ, ಕಥನ, ಗಾದೆಗಳ ಸಾಂಗತ್ಯ ಹಾಗೂ ಸಾರ್ಥಕ್ಯಗಳನ್ನು ಕುರಿತು ಈಗಾಗಲೇ ಅಧ್ಯಯನ ನಡೆದಿದೆ.

'ಥಿಂಗ್ಸ್ ಫಾಲ್ ಅಪಾರ್ಟ್' ಕಾದಂಬರಿಯಲ್ಲಿ ಸೃಷ್ಟ್ಯಾತ್ಮಕವಾಗಿ ದಾಖಲೆ ಯಾಗಿರುವ ಆಚಾರ ವಿಚಾರ ನಂಬಿಕೆಗಳು ನಮಗೇನೂ ತೀರ ಹೊಸದಾದವಲ್ಲ. ಇಬೋ ಜೀವನ ದೃಷ್ಟಿಯಲ್ಲಿ ಭೌತಿಕ ದೈವಿಕಗಳು ಹದವಾಗಿ ಬೆಸೆದುಕೊಂಡಿವೆ. ಜಲದೈವ, ಗುಡುಗು ಮಿಂಚುಗಳ ದೈವ, ಗುಹೆಯೊಳಗಣ ದೈವ, ಪ್ರತಿವ್ಯಕ್ತಿಗೂ ವಿಶಿಷ್ಟವಾದ ಅವನ ಆತ್ಮ ಸಂವಾದಿ ದೈವ ('ಚಿ'), ಈ ಎಲ್ಲ ದೈವಗಳಿಗೂ ಸೂತ್ರ ಪ್ರಾಯವಾದ ಏಕಮೇವ ಅಧಿದೈವ ('ಚುಕ್ವ')—ಇಂಥವೆಲ್ಲ ನಮಗೆ ಚಿರಪರಿಚಿತವಾದವು. 'ಥಿಂಗ್ಸ್ ಫಾಲ್ ಅಪಾರ್ಟ್' ಕಾದಂಬರಿಯಲ್ಲಿ ಇಬೋ ಅನುಭವ ಮತ್ತು ಇಂಗ್ಲಿಷ್ ಮಾಧ್ಯಮ ಗಳು ಕುತೂಹಲಕಾರಿಯಾಗಿ ಬೆಸುಗೆಗೊಂಡಿವೆ. ಇಗ್ಬೊನುಡಿಗಟ್ಟನ್ನು ಅಲ್ಲಲ್ಲಿ ಬಳಸಿ ಅದರ ಅರ್ಥವನ್ನು ನೇರವಾಗಿ ಅಥವಾ ಸಂದರ್ಭದ ಚೌಕಟ್ಟಿನಲ್ಲಿಯೇ ಸೂಚ್ಯವಾಗಿ ವ್ಯಾಖ್ಯಾನಿಸುತ್ತಾ ಸಂವಹನ ಕ್ರಿಯೆಗೆ ತೊಡಕಾಗದಂತೆ ತನ್ನ ಮಾತೃಮೂಲದಿಂದ ತಾನು ಸರಿಯಬಹುದಾದ ದೂರದ ಗರಿಷ್ಠ ಮಿತಿಯನ್ನು ಈ ಕಾದಂಬರಿಯಲ್ಲಿ ಇಂಗ್ಲಿಷ್ ಭಾಷಾ ಮಾಧ್ಯಮವು ತಲುಪಿದೆ ಎನ್ನಬಹುದು. ಹಾಗೆಯೇ ಸೃಷ್ಟ್ಯಾತ್ಮಕ ದಾಖಲೆಗಾಗಿ ಕೃತಿ ಒದಗಿಸಿಕೊಂಡ ದ್ರವ್ಯದ ಭಾರವೂ ಕೂಡ ಇನ್ನು ಸ್ವಲ್ಪ ಹೆಚ್ಚಾಗಿದ್ದರೂ ಕಾದಂಬರಿ ಕುಂಟುತ್ತಿತ್ತು. 'ಥಿಂಗ್ಸ್ ಫಾಲ್ ಅಪಾರ್ಟ್', 'ಆರೋ ಆಫ್ ಗಾಡ್' ಗಳಲ್ಲಿ ವಸ್ತು ಮತ್ತು ಮಾಧ್ಯಮಗಳು ಗರಿಷ್ಠ ರೇಖೆಯಲ್ಲಿಯೇ ಕ್ರಿಯಾಶೀಲವಾಗಿ ಬೆಸೆದುಕೊಂಡಿವೆ. 'ಆರೋ ಆಫ್ ಗಾಡ್' ಕಾದಂಬರಿಯು ಬಂಧ ವ್ಯವಸ್ಥೆಯಲ್ಲಿ ಹೆಚ್ಚಿನ ಸಂಕೀರ್ಣತೆ ಇದೆ. ಈ ಕೃತಿಯು ನಾಯಕ ಎಜಿಯೂಲು ತೀಕ್ಷ್ಣಮತಿ. ಆದರೆ ಇವ ನಲ್ಲಿಯೂ ಹಿಡಿದ ಪಟ್ಟನ್ನು ಬಿಡದ ಮೊಂಡುತನವಿದೆ. ಈ ನಾಯಕರಿಬ್ಬರಲ್ಲೂ ದುರಂತ ಕೃತಿ ತನ್ನ ನಾಯಕನಲ್ಲಿ ನಿರೀಕ್ಷಿಸುವ ಘನವಂತ ವ್ಯಕ್ತಿತ್ವವಿದೆ. ರಾಜಕೀಯ ಅಧಿಕಾರವು ಬ್ರಿಟಿಷ್ ಆಡಳಿತದಿಂದ ನೈಜೀರಿಯನ್ನರಿಗೆ ಹಸ್ತಾಂತರಗೊಳ್ಳುವ ಘಟ್ಟವನ್ನು ಚಿತ್ರಿಸುವ 'ನೋ ಲಾಂಗರ್ ಅಟ್ ಈಸ್' ಕಾದಂಬರಿಯು ಕೇಂದ್ರ ಪಾತ್ರವಾದ ಒಬಿ ಒಕೊಂಕ್ವೊ ಉನ್ನತ ಶಿಕ್ಷಣ ಪಡೆದು ವಿದ್ಯಾಧಿಕಾರಿಯಾಗಿ ನೇಮಕಗೊಂಡವನು. ಆದರೂ ಅವನ

ತಾತ ಒಕೊಂಕ್ವೊನ ಮಟ್ಟದ ಸಿಟ್ಟು, ಸ್ವಾಭಿಮಾನ, ಸಾಹಸಗಳು ಅವನಿಗೆ ಸಾಧ
ವಾಗುವುದಿಲ್ಲ. ಒಬಿ ಒಕೊಂಕ್ವೊನ ವ್ಯಕ್ತಿತ್ವ ಅಸಾಮಾನ್ಯವಾದದ್ದೇನಲ್ಲ. ಅವ
ಸೇವಾವಧಿ ಹಠಾತ್ತನೆ ಕೊನೆಗೊಳ್ಳುತ್ತದೆ. ಆದರೆ ಕಾದಂಬರಿ ದುರಂತದ ಎತ್ತರಕ್ಕೇರಲ
ಹವಣಿಸುವುದಿಲ್ಲ. ಅಚೇಬೆಯ ಆ ಮೇಲಿನ ಕಾದಂಬರಿ 'ಎ ಮ್ಯಾನ್ ಆಫ್ ದಿ ಪೀಪಲ್'
ನೈಜೀರಿಯಕ್ಕೆ ಸ್ವಾತಂತ್ರ್ಯದೊರೆತು ಆ ಸ್ವಾತಂತ್ರ್ಯ ಬಹುಬೇಗನೆ ಮಿಥ್ಯೆಯೆನಿ
ರಾಷ್ಟ್ರದಲ್ಲಿ ಮಿಲಿಟರಿ ಆಧಿಪತ್ಯ ಸನ್ನಿಹಿತವಾಗಿರುವ ಕಾಲವನ್ನು ಕುರಿತ ವಿಡಂಬನಾತ್ಮ
ಕಾದಂಬರಿ. ಕಾಮನ್ವೆಲ್ತ್ ದೇಶಗಳ ಸ್ವಾತಂತ್ರ್ಯೋತ್ತರ ಕಾಲದ ಪರಿಸ್ಥಿತಿಗಾಗಿಯೂ
ಬ್ರಿಟಿಷ್ ವಸಾಹತುಶಾಹಿಯನ್ನು ದೂರುವುದು ಬೇಜವಾಬ್ದಾರಿ ತನವಾಗುತ್ತದೆ ಎಂದ
ಅಚೇಬೆ ಹೇಳುತ್ತಾರೆ. ಈಗಿನ ಅವಸ್ಥೆ ಶೋಚನೀಯವಾಗಿದ್ದರೂ ಅದು ಒದಗಿಸುವ
ದ್ರವ್ಯದಲ್ಲಿ ದುರಂತಕ್ಕೆ ಬೇಕಾದ ಘನತೆಯಿಲ್ಲ ಎಂಬುದು ಕಾದಂಬರಿಕಾರರ ಗ್ರಹಿಕ
ಯಾಗಿರಬಹುದು.

ಗುರಿಯಿಲ್ಲದ ಸಾಧನೆಗಳಿಂದ ಏನೂ ಉಪಯೋಗವಿಲ್ಲ. ಗುರಿಯಷ್ಟೇ ಸಾಧನೆಗಳೂ ನಿರ್ಮಲವಾಗಿರಬೇಕು.

ಯಾವುದೇ ಬಾಹ್ಯ ಕ್ರಿಯೆಗಿಂತ ಮೂಕ ಪ್ರಾರ್ಥನೆಯು ಅನೇಕ ಸಲ ಹೆಚ್ಚು ಸಮರ್ಥವು ಎಂದು ನನ್ನ ವಿಶ್ವಾಸ. ದೇಹಕ್ಕೆ ಅನ್ನವು ಅವಶ್ಯವಿದ್ದಂತೆ ಆತ್ಮನಿಗೆ ಪ್ರಾರ್ಥನೆ ಅವಶ್ಯ.

ಗಾಂಧೀಜಿ

ಚಿನುವ ಅಚೇಬೆಯ 'ನೋ ಲಾಂಗರ್ ಅಟ್ ಈಸ್'

ಡಾ|| ಕೃಷ್ಣಮೂರ್ತಿ ಚಂದರ್

ಪ್ರಸ್ತುತ ಹಾಗೂ ವರ್ತಮಾನದಲ್ಲಿನ ಬದಲಾಗುತ್ತಿರುವ ಮೌಲ್ಯಗಳನ್ನು ಒಪ್ಪಿಕೊಳ್ಳಲಾರದೆ, ಗತಕಾಲದ ಮೌಲ್ಯಗಳನ್ನೇ ಎತ್ತಿಹಿಡಿಯುತ್ತ, ಅವನ್ನೇ ವರ್ತಮಾನದಲ್ಲೂ ಕಾರ್ಯಾಚರಣೆಗೆ ತರಬೇಕೆಂಬ ಅಭಿಲಾಷೆಯಿಂದ ಉದ್ಭವಿಸುವ ಒಕಾಂಕೋವೋನ ದುರಂತ ಕತೆ **ಥಿಂಗ್ಸ್ ಫಾಲ್ ಅಪಾರ್ಟ್** ಆದರೆ ಚಿನುವ ಅಚೇಬೆಯ ಎರಡನೆಯ ಕಾದಂಬರಿ **ನೋ ಲಾಂಗರ್ ಅಟ್ ಈಸ್** ವರ್ತಮಾನದ, ಸಮಕಾಲೀನ ಸಮಾಜದ ಪ್ರಲೋಭನೆಗೆ ಒಳಗಾಗುವ ಒಬಿ ಒಕಾಂಕೋವೋನ ದುರಂತವನ್ನು ಚಿತ್ರಿಸುತ್ತದೆ. ಈ ಎರಡನೆ ಕಾದಂಬರಿಯ ನಾಯಕ ಒಬಿ ಒಕಾಂಕ್ವೊ ಮೊದಲನೇಯ ಕಾದಂಬರಿಯ ದುರಂತನಾಯಕ ಒಕಾಂಕೋವೋನ ಮೊಮ್ಮಗ, ಅತನ ವಿರುದ್ಧ, ಆ ಸಮಾಜದ ಮೂಢನಂಬಿಕೆಗಳ ವಿರುದ್ಧ ಬಡಿದೆದ್ದು ಕ್ರೈಸ್ತಮತವನ್ನು ಸ್ವೀಕರಿಸುವ ನುವೋಯೇನ ಮಗ.

ನೋ ಲಾಂಗರ್ ಅಟ್ ಈಸ್ ಕೇಂದ್ರಿಕೃತವಾಗಿರುವುದೂ ಲಾಗೋಸ್ ನಗರದಲ್ಲಿಯೇ. ಆದರದು ಈತ್ತೀಚಿನ ಲಾಗೋಸ್ ; ಬ್ರಿಟೀಷರಾಗಲೇ ಸಾಕಷ್ಟು ಇಬೋಗಳ ಜೀವನ ಕ್ರಮವನ್ನು ಹೊಕ್ಕಿದ್ದಾರೆ. ಸ್ಥಳೀಯ ಆಳ್ವಿಕೆ (ನೇಟಿವ್ ಕಂಟ್ರೋಲ್) ಸ್ಥಾಪನೆಯಾಗಿ, ಆಡಳಿತವೆಲ್ಲ ಬಿಳಿಯ ಮುಖ್ಯಸ್ಥರ ಕೈಲಿದೆ. ಕಪ್ಪು ಜನ ಬಿಳಿಯರನ್ನು ಅನುಕರಿಸಲು ಪ್ರಾರಂಭಿಸಿದ್ದಾರೆ. ಈ ಕಾದಂಬರಿಯ ಕಾರ್ಯಾಚರಣೆ ಆಗುವುದು ಇಲ್ಲಿಯೇ. ಅಚೇಬೆ ಮತ್ತೆ ಮತ್ತೆ ಎರಡು ಸಮ್ಮಿಲನಗೊಳ್ಳದ ಸಂಸ್ಕೃತಿಗಳನ್ನೂ, ಅದರಿಂದ ಉದ್ಭವಿಸುವ ತೊಡಕುಗಳನ್ನೂ ಎತ್ತಿಹಿಡಿಯುತ್ತಾನೆ. ಯಾವ ಮೌಲ್ಯಾಧಾರಿತ ತೀರ್ಪುಗಳನ್ನು ಅಚೇಬೆ ಓದುಗರಿಗೆ ಕೊಡದಿದ್ದರೂ, ಕಾದಂಬರಿಯ ರೂಪಿನಿಂದಲೇ ಓದುಗರು ತೀರ್ಪಿಸುವಂತೆ ಮನ ಒಲಿಸುತ್ತಾನೆ.

ಈ ಕಾದಂಬರಿ ಪ್ರಾರಂಭವಾಗುವುದು ಒಬಿ ಓಕಾಂಕ್ವೋನ ವಿಚಾರತನದ ಅಪಾದನೆಯ
ವಿಚಾರಣೆಯಿಂದ. ನಿರೂಪಕ ಈ ಕೇಸು ಲಾಗೋಸ್‌ನ ಎಲ್ಲ ಜನಸ್ತೋಮವನ್ನೂ
ಕುತೂಹಲಭರಿತರನ್ನಾಗಿ ಮಾಡಿದೆಯೆಂದೂ ಸರ್ಕಾರಿ ಕೆಲಸಗಾರರು ತೀರ್ಪಿನ ದಿನ ಹು
ಡಾಕ್ಟರ್ ಸರ್ಟಿಫಿಕೇಟ್‌ಗಾಗಿ ಹತ್ತು ಶಿಲ್ಲಿಂಗ್‌ನಿಂದ ಹಿಡಿದು ಆರು ಪೆನ್ಸ್‌ವರೆಗು
ದುಡ್ಡಿತ್ತರೆಂದೂ ತಿಳಿಸುತ್ತಾನೆ—ಕಾದಂಬರಿಕಾರ ಈ ಮೂಲಕ ಲಾಗೋಸ್‌ನ ಮೌಲ
ಗಳು ಎಷ್ಟುಮಟ್ಟಿಗೆ ಹಿಂದಿನ ಕಾದಂಬರಿಯ ಮೌಲ್ಯಗಳಿಗಿಂತ ಭಿನ್ನವಾಗಿದೆ ಎಂಬುದನ
ಎತ್ತಿಹಿಡಿಯಲು (ಸುಳ್ಳು ಡಾಕ್ಟರ್ ಸರ್ಟಿಫಿಕೇಟಿಗೆ ಹತ್ತು ಶಿಲ್ಲಿಂಗ್, ಆರು ಪೆನ್ಸ್
ಪ್ರಯತ್ನಿಸುತ್ತಾನೆ. ಒಬಿ ಒಕಾಂಕ್ವೋ ತಪ್ಪಿತಸ್ಥನೆಂದು ಕೋರ್ಟ್ ತೀರ್ಪನ್ನೀಯು
ತ್ತದೆ.

ಅನಂತರ ಕಾದಂಬರಿ ಎರಡು ಘಟ್ಟಗಳಲ್ಲಿ ಮುಂದೆ ಸಾಗುತ್ತದೆ. ಒಬಿ
ಒಕಾಂಕ್ವೋನ ಸರ್ಕಾರಿ ಕೆಲಸದ ಮುಖ್ಯಾಧಿಕಾರಿಯಾದ ಶ್ರೀಯುತ ಗ್ರೀನ್‌ರ
ಪ್ರತಿಕ್ರಿಯೆ ಒಂದಾದರೆ, 'ಉಮೋಫಿಯಾ ಪ್ರೋಗ್ರೆಸಿವ್ ಯೂನಿಯನ್ನಿನ' ಮುಂದಿನ
ಕಾರ್ಯಕ್ರಮದ ಬಗೆಗಿನ ಚಟುವಟಿಕೆಗಳು ಇನ್ನೊಂದು; ಅದು ತಪ್ಪಿತಸ್ಥನೆಂದು
ತೀರ್ಮಾನಿತನಾದ ಒಬಿ ಒಕಾಂಕ್ವೋನ ಮುಂದಿನ ವಿಚಾರಣೆಯ ಬಗ್ಗೆ.

ಶ್ರೀಯುತ ಗ್ರೀನ್ ಹಾಗೂ ಬ್ರಿಟಿಷ್ ಕೌನ್ಸಲ್ಲಿನಾತ ಈ ಸ್ಥಿತಿಯ ಬಗ್ಗೆ ಎರಡು
ವಿಭಿನ್ನ ವರ್ತನೆಗಳನ್ನು ತೋರುತ್ತಾರೆ. ಹೆಸರಿಡದ ಬ್ರಿಟಿಷ್ ಕೌನ್ಸಲ್ಲಿನಾತ ಈ ಘಟನೆಯ
ಬಗ್ಗೆ ಯಾವ ತೀರ್ಮಾನವನ್ನೂ ವೈಯಕ್ತಿಕವಾಗಿ ಕೊಡದೆ, ಅಭಿಪ್ರಾಯಿಸದೆ, ಇದ್ದರೆ
ಗ್ರೀನ್‌ರ ಪ್ರಕಾರ ಈ ಕೇಸು ಅತ್ಯಂತ ಸರಳ 'ಈ ವಿಷಯಗಳನ್ನು ನಿಮ್ಮಂತಹವರು ಏಕೆ
ಮುಖಾಮುಖಿಯಾಗಿ ನೋಡುವುದಿಲ್ಲವೋ ತಿಳಿಯದು. ಆಫ್ರಿಕನ್ನಾತ ನಖಶಿಖಾಂತ
ಭ್ರಷ್ಟ' ಎಂದು ಅನ್ನುತ್ತಾನೆ ಆತ.

ಇದರೊಂದಿಗೆಯೇ ಕಾದಂಬರಿಯ ನಿರೂಪಕ ಬಹಳ ಕೇವಲವೆನಿಸುವ ಕೆಲವು
ವಿಷಯಗಳ ನಿರೂಪಣೆಯ ಮುಖಾಂತರ ಆಫ್ರಿಕಾದಲ್ಲಿನ ಸಾಮಾಜಿಕ ವೈಪರೀತ್ಯಗಳನ್ನು
ಎತ್ತಿ ಹಿಡಿಯುತ್ತಾನೆ. ಬ್ರಿಟಿಷ್ ಕೌನ್ಸಲ್ಲಿನ ಕ್ಲಬ್ಬಿನಲ್ಲಿನ ಬಾರ್, ಉದಾಹರಣೆಗೆ, ಕಪ್ಪು
ಜನಕ್ಕೂ ತೆರೆದಿದ್ದೇ ಅವರೂ ಹೆಚ್ಚು ಕಪ್ಪು ಜನ ಹೋಗಲಿಕ್ಕಿಲ್ಲ, ಮತ್ತು:

> ಈ ಸಂದರ್ಭದಲ್ಲಂತೂ ಯಾರೂ ಇರಲಿಲ್ಲ—ಗಮನಕ್ಕೆ ಬೀಳದೇ ಸೇವೆ
> ಸಲ್ಲಿಸುತ್ತಿದ್ದ ಸ್ಟೀವರ್ಡ್ಸ್‌ಗಳನ್ನ ಬಿಟ್ಟರೆ. ಈ ಬಿಳಿಯ ಯೂನಿಫಾರ
> ಗಳನ್ನು ಧರಿಸಿದ್ದ ಸ್ಟೀವರ್ಡ್ಸ್‌ಗಳನ್ನೂ ಗಮನಿಸದೆಯೇ ಒಳಹೊಕ್ಕು
> ಕುಡಿದು, ಚೆಕ್ ಅನ್ನು ಸಹಿಮಾಡಿ, ಸ್ನೇಹಿತರೊಡನೆ ಹರಟೆ ಹೊಡೆದು
> ಹೊರಟೂ ಬಿಡಬಹುದಿತ್ತು. ಎಲ್ಲಾ ಸರಿಯಾಗಿ ನಡೆದರೆ ಅವರನ್ನು
> ನೋಡದೆಯೇ ಇರಲೂ ಬಹುದಿತ್ತು. (ಪುಟ ೩)

ಇನ್ನೊಂದು ಕಡೆ ಇರುವ ಉಮೋಫಿಯಾದ ಜನ ನೈಜೀರಿಯಾದಲ್ಲಿ ಎಲ್ಲಿದ್ದರು
ಒಂದು ಉಮೋಫಿಯಾ ಪ್ರೋಗ್ರೆಸಿವ್ ಯೂನಿಯನ್ ಅನ್ನು ಪ್ರಾರಂಭಿಸುವವರು,
ಜನ ತಮ್ಮ ಪಂಗಡದ ಹಳ್ಳಿಯೊಂದಿಗೆ ಸಂಬಂಧವನ್ನು ಇರಿಸಿಕೊಂಡು ಪಂಗಡದ ಹೊರ
ವೈವಾಹಿಕ ಸಂಬಂಧಗಳನ್ನು ಬೆಳೆಸುತ್ತಿರಲಿಲ್ಲ, ತಮ್ಮ ಪಾಲಿಗೆ ಬಂದ ಜಮೀನಿನ

ಜಿಂಕ್‌ಶೀಟಿನಿಂದ ಮನೆಯುನ್ನು ಕಟ್ಟಿಸುವವರು. ಒಬಿ ಒಕಾಂಕೋರ್ವೋನ ಶಿಕ್ಷಣಕ್ಕಾಗಿ ಧನಸಹಾಯ ಮಾಡಿದ ಈ ಯೂನಿಯನ್ನು ತಪ್ಪಿತಸ್ಥನೆಂದು ತೀರ್ಮಾನಿತನಾದ ಒಬಿಯ ಕೇಸಿನ ಬಗ್ಗೆ ಚರ್ಚೆ ನಡೆಸಲು ಸಭೆ ಸೇರುತ್ತದೆ. ಪಂಗಡದಲ್ಲೊಬ್ಬಾತ ತೊಂದರೆಯಲ್ಲಿದ್ದರೆ ಆತನನ್ನು ರಕ್ಷಿಸಬೇಕು, ನಿಂದಿಸುವುದಲ್ಲ, ಸಹೋದರನೊಬ್ಬನ ವಿರುದ್ಧದ ಕೋಪ ಹೊರವೈಯಲ್ಲಿ ಮಾತ್ರ, ಮೂಳೆಯಲ್ಲಲ್ಲ (ಪುಟ ೫) ಸೇರಿದ ಜನ ಒಬಿ ಲಂಚಪೆಂದು ಸ್ವೀಕರಿಸಿದ ಮೊತ್ತದಬಗ್ಗೆ ಚರ್ಚಿನಡೆಸುತ್ತಾರೆ. ಅಷ್ಟು ಸಣ್ಣ ಮೊತ್ತದ ಲಂಚಕ್ಕಾಗಿ ಜೈಲಿಗೆ ಹೋಗುವುದು ಅವರಿಗೆ ಅಸಂಬದ್ಧದಾಗಿ ತೋರುತ್ತದೆ. ಅದರ ಪ್ರೆಸಿಡೆಂಟ್ 'ಕಪ್ಪೆಯನ್ನೇ ತಿನ್ನಬೇಕಾದರೆ ಅದರಲ್ಲೂ ದಪ್ಪನೆಯ, ರಸಭರಿತವಾದ ಕಪ್ಪೆಯನ್ನು ಹುಡುಕಬೇಕು' ಎಂಬ ಗಾದೆಯನ್ನು ಹೇಳುತ್ತಾನೆ. ನೈಜೀರಿಯಾದ ನಗರಗಳಲ್ಲಿ ಭ್ರಷ್ಟಾಚಾರ ಸಾಕಷ್ಟು ಆಳವಾಗಿಯೇ ಬೇರೂರಿದೆ :

> 'ಇದೆಲ್ಲ ಎಕ್ಸ್‌ಪೀರಿಯನ್ಸ್ ಇಲ್ಲದ್ದರಿಂದಲೇ, ನುಡಿದ ಮತ್ತೊಬ್ಬ. ಅವನು ದುಡ್ಡನ್ನು ಸ್ವತಹ ತೆಗೆದುಕೊಳ್ಳಬಾರದಿತ್ತು. ಬೇರೆಯವರು ಹೇಳೋದೇನೆಂದರೆ ಮನೆ ಹುಡುಗನಿಗೆ ಕೊಡು ಅಂತ. ಒಬಿ ಬೇರೆಯವರು ಮಾಡೋದನ್ನೇ ಮಾಡಿದ. ಆದರೆ ಹೇಗೆ ಮಾಡ್ತಾರೆ ಅಂತ ಅರಿಯದೆ ಮಾಡಿದ ಅಷ್ಟೇ' (ಪುಟ ೬)

ಒಬಿಯ ಬಗ್ಗೆ ಪ್ರಸ್ತಾಪ ಬಂದಾಗಲೆಲ್ಲ ಅದು ವ್ಯಂಗ್ಯವಾಗಿಯೇ ಬರುತ್ತದೆ, ಇದು, ಒಬಿಯನ್ನು ಥಿಂಗ್ಸ್ ಫಾಲ್ ಅಪಾರ್ಟ್‌ನ ನಾಯಕ ಒಕಾಂಕೋವಿನ ಜೊತೆ ಹೋಲಿಸುವುದು ಕುತೂಹಲಕಾರಿಯಾದ ಸಂಗತಿ, ಅದರಿಂದಾಗಿ ಓದುಗ ಈ ಇಬ್ಬರು ನಾಯಕರು ಹಾಗೂ ಅವರು ಪ್ರತಿನಿಧಿಸುವ ಎರಡು ಮೌಲ್ಯಗಳನ್ನೂ, ಧೋರಣೆಗಳನ್ನೂ ಸಮತೂಲಿಸದಂತೆ ಮಾಡುತ್ತದೆ.

ಒಬಿ ಓಕಾಂಕೋರ್ವೋ ಓದಿನಲ್ಲಿ ಪ್ರಚಂಡ. ಆತನ ಶೈಕ್ಷಣಿಕ ಮುನ್ನಡೆ ಉಮೋಫಿಯಾ ಯೂನಿಯನ್ನಿನ ಸ್ಕಾಲರ್‌ಶಿಪ್ಪಿಗೆ ಏಕೈಕ ಆಯ್ಕೆಯನ್ನಾಗಿಸುತ್ತದೆ. ಆದರೆ ಯೂನಿಯನ್ನಿನ ಅಭಿಲಾಷೆಗೆ ವಿರುದ್ಧವಾಗಿ ಆತ ಕಾನೂನುಶಾಸ್ತ್ರದ ಬದಲು ಆಂಗ್ಲಸಾಹಿತ್ಯವನ್ನು ಅಭ್ಯಯಿಸುತ್ತಾನೆ. ಯೂನಿಯನ್ನು ಆತ ಲಾಯರಾಗದಿದ್ದರೂ ಆಡಳಿತಾಧಿಕಾರಿಯಾಗಿ ಐರೋಪ್ಯರ ಕೆಲಸವೊಂದನ್ನುಪಡೆಯುತ್ತಾನೆ ಎಂದು ಸಮಾಧಾನಪಡುತ್ತದೆ.

ಕಾದಂಬರಿಕಾರ ಉಮೋಫಿಯಾದ ಜನ ಅವಲಂಬಿಸುತ್ತಿರುವ ಹೊಸ ಮೌಲ್ಯಗಳ ಬಗ್ಗೆ ವ್ಯಂಗ್ಯವಾಗಿ, ಖಾರವಾಗಿ ಉಲ್ಲೇಖಿಸುತ್ತಾನೆ. ಏಕೆಂದರೆ ಇವು, ಈ ಅಂಧಶ್ರದ್ಧೆ ಅವರ ಭ್ರಾತೃತ್ವಕ್ಕೆ ಕೊಡಲಿಪೆಟ್ಟು ಕೊಡುವುದನ್ನು ಅವರು ಅರಿಯುವುದೇ ಇಲ್ಲ. ಇದರ ಜೊತೆಗೇ, ಈ ಕಾಲೋನಿಗಳ ನಗರೀಕರಣ (ಅರ್ಬನೈಸೇಷನ್) ಆಫ್ರಿಕಾದ ಮೂಲ ಸಮಾಜದ ಬೆನ್ನಲುಬನ್ನೇ ಮುರಿಯುತ್ತಿದ್ದು, ಅದರ ಬದಲಾಗಿ ಯಾವುದೇ ಹೊಸ, ಗಟ್ಟಿಯಾದ, ಸ್ಥಿರವಾದ ಅನ್ಯಪ್ರತ್ಯನ್ಯವನ್ನೂ (ಆಲ್ಟರ್‌ನೇಟ್) ಕೊಡದಿರುವುದು ನಸಾಹಿತುಶಾಯಿ ಪ್ರಜ್ಞೆಯ ಮೂಲ ಅಜಾಗೃತ ಪ್ರಚೋದನೆ (ಅನ್‌ಕಾನ್ಷಿಯಸ್

ಮೋಟಿವ್) ಇರಬಹುದೆಂದು ಸೂಚಿಸುತ್ತಾನೆ. ವಿಮರ್ಶಕ ಆರ್ಥರ್ ರೇವನ್ಸ್‌ಕ್ರಾಪ್ಟ
ಚಿನುವ ಅಚೇಬೆ ಈ ಕಾದಂಬರಿಯಲ್ಲಿ ಲಾಗೋಸ್‌ನ ಉಮೋಫಿಯನ್ನರ ಬಗ್ಗೆ ತಿಳಿಹೇಳ
ವಾಗ ವಿಡಂಬನೆಮಾಡುತ್ತಾನೆಂದು ಅಭಿಪ್ರಾಯಿಸುತ್ತಾನೆ, ಥಿಂಗ್ಸ್ ಫಾಲ್ ಅಪಾರ್ಟ್‌
ನಂತೆ ಇಲ್ಲಿಯೂ ಉಮೋಫಿಯನ್ನರು 'ಉಮೋಫಿಯಾ ಕ್ರೇಮಾ' ಎಂದು ಕೂಗ
ಹಾಕುತ್ತ ಹರ್ಷೋದ್ಗಾರ ಮಾಡುತ್ತಾರೆ. ಆದರೆ ಉಮೋಫಿಯಾ ಪ್ರೋಗ್ರೆಸಿವ್
ಯೂನಿಯನ್ನಿನ ಗಂಟೆಲಿಸಿಂದ ಬಂದಾಗ ಅದು ಹಿಂದೆ ಜನಸೇರುತ್ತಿದ್ದ ಚೌಕದಲ್ಲಿನ
ಸಭೆಯ ಗುಡುಗಿನ ರಭಸದ ವಿಡಂಬನೆ ಮಾತ್ರವಾಗಿಬಿಡುತ್ತದೆ ಎಂದು ನುಡಿಯುತ್ತಾನೆ
ಹಾಗಿದ್ದ ಪಕ್ಷಕ್ಕೆ ಉಮೋಫಿಯಾದ ಜನರಿಗೆ ಇದು ಅರಿವಾಗಿಲ್ಲವೆಂದಲ್ಲ, ಖಚಿತವಾಗಿ
ಅರಿವಿದೆ. ಆದರೆ ಈ ಪಾಶ್ಚಾತ್ಯ ಸಂಸ್ಕೃತಿಯನ್ನೆಷ್ಟು ಸಮೀಕರಿಸಬೇಕು, ಎಷ್ಟನ್ನು ದೂರ
ವಿಡಬೇಕು ಎಂಬುದರ ಬಗ್ಗೆ ಖಚಿತವಾದ ಕಲ್ಪನೆಯೇ ಇವರಿಗಿಲ್ಲವೆಂದು ಲೇಖಕ
ಸೂಚಿಸುತ್ತಾನೆ. ಯೂನಿಯನ್ನಿನ ಅಧ್ಯಕ್ಷ ತಾವು ಬ್ರಿಟೀಷರು ಪಾದ ಊರುವವರೆಗೂ
ಅಂಧಕಾರದಲ್ಲಿ ಕೊಳೆಯುತ್ತಿದ್ದೆವೆಂದು ನುಡಿಯುವುದು ವ್ಯಂಗ್ಯವಾಗಿ ಹೊರ ಹೊಮ್ಮು
ತ್ತದೆ:

> ಹಿಂದಿನ ಕಾಲದಲ್ಲಾಗಿದ್ದರೆ, ನೀನು ಉಮೋಫಿಯಾ ಪರವಾಗಿ ಕಾಳಗದಲ್ಲಿ
> ಪಾಲ್ಗೊಂಡು ವೈರಿಗಳ ತಲೆಬುರುಡೆಯನ್ನು ಮನೆಗೆ ತರಬೇಕಿತ್ತು. ಆದರೆ
> ಅವು ನಮ್ಮ ಅಂಧಕಾರದ ದಿನಗಳು, ಅವುಗಳಿಂದ ನಾವು ದೇವರ ರಕ್ಷ
> ದಿಂದ ಹೊರ ಬಂದಿದ್ದೇವೆ. ಈ ದಿನ ನಾವು ನಿನ್ನನ್ನು ಕಳುಹಿಸುವುದು
> ಜ್ಞಾನವನ್ನು ತರಲೆಂದು. (ಪುಟ ೧೦)

ಇಷ್ಟು ಹೇಳಿ, ಆ ಅಧ್ಯಕ್ಷ ಬಿಳಿ ಹೆಂಗಸನ್ನು ಮದುವೆ ಆದರೆ ಬರುವ ತೊಂದರೆ
ಗಳನ್ನೂ ತಿಳಿಪಡಿಸುತ್ತಾನೆ. ಅಚೇಬೆಯ ವ್ಯಂಗ್ಯ ಆ ಅಧ್ಯಕ್ಷನ ತಿಳುವಳಿಕೆಯ
ಬಗ್ಗೆಯದು. ಆತ ಆಫ್ರಿಕಾದ ಗತಚರಿತ್ರೆ ಬರೀ ಅಂಧಕಾರಮಯವಾದದ್ದು ಎಂತಲೂ,
ಆ ಅಂಧಕಾರದಿಂದ ಐರೋಪ್ಯರು ನಮ್ಮನ್ನು ವಿಮೋಚಿಸಿದರು ಎಂದು ತಿಳಿದಿರುವುದರ
ಬಗ್ಗೆಯದು. ಬೇರೊಂದು ಕಡೆ ಅಚೇಬೆ ಕಾದಂಬರಿಕಾರನಾಗಿ ತನ್ನ ಉದ್ದೇಶದ ಬಗ್ಗೆ
"ನನ್ನ ಕಾದಂಬರಿಗಳು (ಗತಕಾಲದ ಸಮಯದಲ್ಲಿ ರೂಪಿತವಾಗಿರುವುದು, ಮುಖ್ಯವಾಗಿ
ಓದುಗರಿಗೆ ಅವರ ಗತಕಾಲ, ಅದರಲ್ಲಿ ಅಪೂರ್ಣತೆ, ಅಪಕ್ವತೆಯನ್ನು ಒಡಗೂಡಿ—
ಹಿಂಸೆ, ಕ್ರೌರ್ಯದ ಒಂದು ಉದ್ದನೆಯ ರಾತ್ರಿಯಿಂದ ಐರೋಪ್ಯರು ದೇವರ ಬದಲಾಗಿ
ಅವರನ್ನು ವಿಮುಕ್ತಿಗೊಳಿಸಿದರು ಎಂಬುದಲ್ಲ ಎಂದು ಅರಿವು ಮೂಡಿಸಿದರೆ ಸಾಕು"
ಎಂದು ನುಡಿಯುತ್ತಾನೆ.

ಒಬಿಯ ಬಂಧನ, ವಿಚಾರಣೆ ಹಾಗೂ ಜೈಲುವಾಸದ ಉಲ್ಲೇಖದ ನಂತರ ಕ
ಕಾದಂಬರಿ ಕಾಲ ವ್ಯಾಪ್ತಿಯಲ್ಲಿ ಹಿಂದೆ ಸರಿಯುತ್ತದೆ—ಸರಿಯುತ್ತ ಒಬಿ ನವ ಜನಾಂಗದ
ಹೊಸ ಪೀಳಿಗೆಯ ಒಬ್ಬ ನಿರೂಪ ಅಷ್ಟೇ ಎಂಬುದನ್ನು ಸಾರುತ್ತದೆ. ಈ ನಿರೂಪಣ
ಒಬಿಯ ಕಟ್ಟಕಡೆಯ ಅವನತಿಗೆ ಸಾಂಸ್ಕೃತಿಕ ಹಾಗೂ ಮಾನಸಿಕವಾದ ಕಾರಣಗಳನ್ನು
ಗಣನೆಗೆ ತೆಗೆದುಕೊಳ್ಳಬೇಕೆಂದು ಎತ್ತಿ ಹಿಡಿಯುತ್ತದೆ. ಈಗಾಗಲೇ ಸೂಚಿಸಿದಂತೆ

ಬಿಯ ಪತನ ಬಾಹ್ಯ ಮೌಲ್ಯಗಳನ್ನು ಪೂರ್ಣವಾಗಿ, ತುಲನೆಗೆ ಒಳಪಡಿಸದೆ ಒಪ್ಪಿ ಳ್ಳುವುದರಿಂದ ಪ್ರಾರಂಭವಾದದ್ದು.

ಇಂಗ್ಲೆಂಡಿನಿಂದ ಒಬಿ ವಾಪಸಾದಾಗ, ನಗರೀಕರಣದಿಂದಾಗಿ ನೈಜೀರಿಯಾದಲ್ಲಿ ಹಳಷ್ಟು ಬದಲಾವಣೆಗಳಾಗಿಬಿಟ್ಟಿರುತ್ತದೆ.

> ಆದರಾತ ನೈಜೀರಿಯಾಗೆ ವಾಪಸಾದಾಗ ಎದುರು ಕಂಡ ದೇಶ ಆತ ಆ ನಾಲ್ಕು ವರ್ಷಗಳು ಮನಸ್ಸಿನಲ್ಲಿ ಇಟ್ಟುಕೊಂಡಿದ್ದಕ್ಕಿಂತ ಭಿನ್ನವಾಗಿತ್ತು. ಬಹಳಷ್ಟು ವಿಷಯಗಳು ಆತನಿಗೆ ಗುರುತೇ ಸಿಗಲಿಲ್ಲ—ಉದಾಹರಣೆಗೆ ಲಾಗೋಸ್‌ನ ಕೊಳಚೆ ಪ್ರದೇಶಗಳು—ಅವನ್ನಾತ ಮೊದಲಬಾರಿಗೆ ಕಂಡ.
> (ಪುಟ ೧೩)

ಥಿಂಗ್ಸ್ ಫಾಲ್ ಅಪಾರ್ಟ್‌ನಲ್ಲಿ ಓಕಾಂಕ್ವೊ ಏಳು ವರ್ಷಗಳ ನಂತರ ತನ್ನ ಊರಿಗೆ ಹಿಂದಿರುಗಿದಾಗ ಬಿಳಿಯನ ಧರ್ಮ ಎದುರಾದರೆ ಇಲ್ಲಿ ಲಾಗೋಸ್‌ನ ಕೊಳಚೆ ಪ್ರದೇಶಗಳು ಒಬಿಯನ್ನು ಎದುರುಗೊಳ್ಳುತ್ತವೆ. ಒಬಿ ಕಾಲೋನಿಯ ಆಡಳಿತಾಧಿಕಾರಿ ಳು ವಿಭಿನ್ನ ಕೋನಗಳಿಂದ ಆಡಳಿತವನ್ನು ಮಾಡುವುದನ್ನು ಮುಜುಗರದಿಂದಲೇ ನೋಡುತ್ತಾನೆ; ಲಾಗೋಸ್‌ನ ಕೊಳಚೆಗಳು ಒಂದೆಡೆ, ಅತ್ತ ಐರೋಪ್ಯರ ಬಂಗಲೆಗಳು, ಮಧ್ಯ ಸ್ಮಶಾನ ಇವು ಯಾವಾಗಲೂ ಅರ್ಧಕೊಳೆತ ಪಾಮ್‌ಶೆಲ್ಲನ್ನು ನೆನಪಿಗೆ ತರುತ್ತವೆ. ಕೆಲಬಾರಿ ಅರ್ಧಮಿರಿಮಿರನೆಯ ಕಪ್ಪಾಗಿ, ಜೀವವಿದ್ದಿದ್ದು, ಇನ್ನೊಂದು ಭಾಗ ಬಿಳಿಯ ಪುಡಿಪುಡಿಯಾಗಿ ನಿರ್ಜೀವ" (ಪುಟ ೧೮). ಕಾದಂಬರಿಕಾರ ಆಫ್ರಿಕಾದ ಯುವ ಜನಾಂಗ ಎರಡು ಪ್ರಪಂಚಗಳ ಮಧ್ಯೆ ಸಿಕ್ಕಿಬಿದ್ದಿರುವುದನ್ನು ಚಿತ್ರಿಸುತ್ತಾನೆ; ಈ ಎರಡು ಗತ್ತಿನ ಮಧ್ಯೆ ಸಾಮರಸ್ಯವನ್ನು ಹೊಂದಿಸಲು ಅವರಲ್ಲಿ ಶಕ್ತಿಯಿಲ್ಲ. ಒಬಿಯ ಮೊದಲ ಅನುಭವ ಹಾಗಾಗಿ ಕೊಂಚ ಚಿಂತಿಸುವಂತೆ ಮಾಡುತ್ತದೆ. ಒಬಿ ನೈಜೀರಿಯಾಕ್ಕೆ ವಾಪಸಾದಾಗ ಉಮೋಫಿಯನ್ ಪ್ರೋಗ್ರೆಸಿವ್ ಯೂನಿಯನ್ ಆತನಿಗೆ ಸುಸ್ವಾಗತ ಕೋರಲು ಸಭೆಯೊಂದನ್ನು ಏರ್ಪಡಿಸುತ್ತದೆ. ಆ ಭಯಂಕರ ಬೇಯುವ ಬಿಸಿಲಿನಲ್ಲೂ ಎಲ್ಲರೂ ಸೂಟ್ ಧರಿಸಿದ್ದು ಒಬಿ ಮಾತ್ರ ಸರಳವಾದ ಉಡುಪು ಧರಿಸುತ್ತಾನೆ; ಹಾಗೂ ಅದರಿಂದಲೇ ಆಕ್ಷೇಪಣೆಗೂ ಈಡಾಗುತ್ತಾನೆ ಕೂಡ. ಈ ಘಟನೆಯ ಸಂದರ್ಭ ದಲ್ಲೇ ಕಾದಂಬರಿಕಾರ ನೈಜೀರಿಯಾದಲ್ಲಿ ಒಬಿಯ ಮೊದಲ ಅನುಭವವನ್ನು ಚಿತ್ರಿಸುವು ದನ್ನು ನೆನಪಿಸಿಕೊಳ್ಳಬಹುದು. ನಿಲ್ದಾಣದಲ್ಲಿನ ಕಸ್ಟಮ್ಸ್‌ನ ಚಿಕ್ಕ ವಯಸ್ಸಿನ ಅಧಿಕಾರಿ ಸಿತಿಯನ್ನು ಕೇಳದಿದ್ದ ಪಕ್ಷದಲ್ಲಿ ತೆರಬೇಕಾದ ದಂಡವನ್ನು ಕಮ್ಮಿಮಾಡುವೆ ಎಂದು ಮಿಷತೋರಿ ಛೀಮಾರಿಗೊಳಗಾಗುತ್ತಾನೆ. ಇದರಿಂದಲೇ ಆಗಿರುವ ನೈತಿಕ ಪತನದಬಗ್ಗೆ ಅರಿವು ಮೂಡದೆ ಅದನ್ನು ಲಕ್ಷ್ಯಕ್ಕೋ ತೆಗೆದುಕೊಳ್ಳುವುದಿಲ್ಲ. ಸಭೆಯಲ್ಲಿ ಕೂಡ ಯೂನಿಯನ್ನಿನ ಅಧ್ಯಕ್ಷ ಯಾರುತಾನೇ ಭ್ರಷ್ಟರಲ್ಲ, ಬಿಳಿಯರು ಕೂಡ ಭ್ರಷ್ಟರು, ಲಂಚಕೋರರು. ಬೇಕಾದರೆ ನನ್ನ ಆಫೀಸಿಗೆ ಬಂದು ನೋಡಿ ತೋರಿಸುತ್ತೇನೆ ಎಂದು ಪ್ಪಾಳೆ ನಿಟ್ಟಿಸುತ್ತಾನೆ.

ಒಬಿಯ ಸರ್ಕಾರಿ ಕೆಲಸದಲ್ಲೇನೂ ಕೌತುಕಕಾರಿಯಾದ ಅಥವಾ ಮಹತ್ವ ಪೂರ್ಣವಾದ ಅಂಶಗಳಿಲ್ಲ—ಆತನ ಅಧಿಕಾರಿಯಾದ ಶ್ರೀಯುತ ಗ್ರೀನ್ ಹಾಗೂ ಆತನ

ಸಹಾಯಕನಾದ ಒಮೊ ರೊಡನಿನ ಸಂಬಂಧವನ್ನು ಬೀಟ್ಸರೆ ಗ್ರೀನ್‌ರ ಧೋರಣೆಯಂತ
ಬಹಳಷ್ಟುವಟ್ಟಿಗೆ ತಿರಸ್ಕಾರಪೂರ್ವಿತವಾದದ್ದು. ಆತ ಒಮ್ಮೆ ಓಮೋನನ್ನು ಹಿಯಾಳಿಸ
ವುದು ಹೀಗೆ:

> ನಿನ್ನನ್ನಿಲ್ಲಿ ಸಂಬಳವಿಟ್ಟುಕೊಂಡಿರುವುದು ಯೋಚನೆ ಮಾಡಲಿಕ್ಕ
> ಓಮೊ. ಏನು ಹೇಳಿದರೂ ಅದನ್ನು ಮಾಡುವುದಕ್ಕೆ. ತಿಳಿಯಿತೇ ? ಈಗ
> ತಕ್ಷಣ ನನಗೆ ಆ ಫೈಲನ್ನು ಕಳುಹಿಸು (ಪುಟ ೬೫)

ಜೊತೆಗೇ ನೀನು ನಿನ್ನ ಹಿರಿಯ ಅಧಿಕಾರಿಗಳೊಡನೆ ಮಾತನಾಡುವಾಗ ಸರ
ಅಂದು ಸಂಬೋಧಿಸಬೇಕು, ಮಿಸ್ಟರ್ ಒಕಾಂಕ್ವೊ (ಪುಟ ೬೬) ಎಂದು ಒಬಿಗೆ ಅವ
ಸ್ಥಾನಮಾನಗಳಲ್ಲಿರುವ ಅಂತರಗಳ ಬಗ್ಗೆ ಸ್ಪಷ್ಟೀಕರಿಸುತ್ತಾನೆ. ಈ ರೀತಿಯ ಧೋರಣೆಯ
ಜೊತೆಗೇ ಚಿನುವ ಅಚೇಬೆ ಆಫ್ರಿಕಾದ ರಾಜಕಾರಣಿಗಳ ಬಗ್ಗೆಯೂ ಕೊಂಚ ಬೆಳಕ
ಚೆಲ್ಲುತ್ತಾನೆ. ಸಾಮ್ ಒಕೊಲಿ ಎಂಬ ಪುಡಾರಿ ತನ್ನ ಹಿಂದಿನ ಕಛೇರಿಯ ಸಹಾಯಕ
ಬಗ್ಗೆ ಮಾತನಾಡುವುದು ಹೇಗೆ:

> ನನ್ನ ಕಾರ್ಯದರ್ಶಿಯಾಗಿ ಒಬ್ಬ ನೈಜೀರಿಯಾದವನನ್ನೇ ನೇಮಿ
> ಕೊಂಡಿದ್ದೆ. ಆದರೆ ಆತ ಶುದ್ಧ ಈಡಿಯಟ್. ಆತನ ತಲೆ ಸೈನಿಕ ಇರು
> ಗಳಂತೆ ಹಿಗ್ಗಿತ್ತು. ಬರೀ ತಾನು ಈಬದಾನ್ ವಿಶ್ವವಿದ್ಯಾಲಯಕ್ಕೆ ಹೋ
> ದ್ದಕ್ಕೆ. ಈಗ ನನ್ನಲ್ಲಿ ಬಿಳಿಯನೊಬ್ಬ ಇದ್ದಾನೆ–ಆಕ್ಸ್‌ಫರ್ಡ್‌ಗೆ ಹೋದವ
> ಆತ ನನ್ನ 'ಸರ್' ಎಂದು ಸಂಬೋಧಿಸುತ್ತಾನೆ. ನಮ್ಮವರು ಇನ
> ತುಂಬ ಕಲಿಯಲಿಕ್ಕಿದೆ. (ಪುಟ ೬೯)

ಈ ರೀತಿಯ ಸಮಕಾಲೀನ ರಾಜಕೀಯ ಹಾಗೂ ಸಾಮಾಜಿಕ ಸ್ಥಿತಿಗತಿಯ
ಬಗೆಗಿನ ಇವರ ಧೋರಣೆಗಳ ಜೊತೆಗೇ ಈ ಕಾದಂಬರಿಯಲ್ಲಿ ಮತ್ತೊಂದು ಎಳೆಯ
ಕಂಡುಬರುತ್ತದೆ; ಅದೇನೆಂದರೆ ಕಥಾನಾಯಕ ಹಾಗೂ ಆಫ್ರಿಕಾದ ಸಾಂಸ್ಕೃತಿ
ಹಿನ್ನಲೆಯ ಬಗೆಗಿನ ಧೋರಣೆ. ಎಲ್ಲೆಲ್ಲಿ ಜನ ಮೂಢ ನಂಬಿಕೆಗಳನ್ನು ಆರಾಧಿಸುವಂ
ಕಂಡುಬರುತ್ತಾರೋ ಅಲ್ಲಲ್ಲಿ ಒಸು ರೊಚ್ಚಿಗೇಳುವುದನ್ನು ನಾವು ಕಾಣಬಹುದ
ಇದನ್ನು ನಾವು ಒಬಿ ಹಾಗೂ ಆತನ ಪ್ರಿಯತಮೆ ಕ್ಲಾರಾಳ ಸಂಬಂಧವಲ್ಲಿ ನೋ
ತ್ತೇವೆ. ಕ್ಲಾರಾ ಜಾತಿಯಲ್ಲಿ ಒಬ್ಬ ಅಸ್ಪೃಶ್ಯ ಜಾತಿಗೆ ಸೇರಿದವಳು. ಆಫ್ರಿಕಾದಲ್ಲಿ ಅದ
ಮತ್ತೊಂದು ಹೆಸರಿದೆ 'ಒಸು' ಎಂದು. ಈ ವಿಷಯದಲ್ಲಿ ಆತನ ತಂದೆಯೇ ಆತ
ವಿರುದ್ಧವಾದ ವಾದವನ್ನು ಮುಂದೂಡುತ್ತಾರೆ. ಆದರೆ ಒಬಿಯದು ಸ್ಥಿರಮನಸ್ಸಿನ
ಕಾಣುತ್ತದೆ.

> ....ಇಪ್ಪತ್ತನೇಯ ಶತಮಾನದ ಮಧ್ಯಭಾಗದಲ್ಲಿ ಇದು ನಾಚಿಗೆಗೇ
> ಹುಡುಗಿಯ ಮುತ್ತ ಮುತ್ತ ಮುತ್ತ ಮುತ್ತ ಮುತ್ತಾತ ಯಾವುದ
> ದೇವರ ಸೇವೆಗೆ ಮೀಸಲಾದನ ಅಂದರೆ ಆತನ ಮನೆಯವರೆಲ್ಲ ಕಾ
> ಅಂತದವರೆಗೂ ಅಸ್ಪೃಶ್ಯ ಜನಾಂಗವಾಗಿಬಿಡುತ್ತಾರೆಂಬುದು ; ಆಕೆಯ
> ಯಾರೂ ಮದುವೆ ಆಗಬಾರದೆಂಬುದು ! (ಪುಟ ೭೨)

ಆಫ್ರಿಕಾದ ವಸತಿಗಳ ನಗರೀಕರಣ ಮಾನವೀಯ ಮೌಲ್ಯಗಳನ್ನು ಹಿಂದಕ್ಕೆ ಒತ್ತುವಂತೆ ಮಾಡುವುದರ ಜೊತೆಗೆ ನೈತಿಕ ಪತನಕ್ಕೂ ಕಾರಣವಾಯಿತೆಂಬುದು ಈಗಾಗಲೇ ತಿಳಿದ ಸಂಗತಿ. ಚಿನುವ ಅಚೇಬೆ ಈ ವಿಷಯದ ಬಗ್ಗೆಯೂ ಪ್ರಸ್ತಾಪಿಸುತ್ತಾನೆ—ಕಾದಂಬರಿಯ ಪಾತ್ರಗಳ ಹಾಗೂ ಅದರ ಬೆಳವಣಿಗೆಯ ಮೂಲಕ ಒಬಿ ಓಕಾಂಕೋವ ಕಣ್ಣಮುಂದೆಯೇ ಲಂಚ, ಭ್ರಷ್ಟತೆ ರಾರಾಜಿಸುವುದು ಹಾಗಿರಲಿ, ಎಲ್ಲರೂ ಸಾಮೂಹಿಕವಾಗಿ, ಪ್ರಭಟಿಸದೆ ಒಪ್ಪಿಕೊಳ್ಳುವುದನ್ನು ಕಾಣುತ್ತಾನೆ. ಈ ಭ್ರಷ್ಟತೆ ಜೀವನದ ಎಲ್ಲ ಆಯಾಮಗಳಿಗೂ ಪಸರಿಸುವುದನ್ನು ಕಂಡು ಬಡಿದೇಳಲು ಪ್ರಯತ್ನಿಸಿ ಸೋಲುತ್ತಾನೆ. ಏಕೆಂದರೆ ನೈತಿಕ ಪತನ, ಸಾಂಸ್ಕೃತಿಕ ಹಾಗೂ ರಾಜಕೀಯ ಹಿನ್ನೆಲೆಯಲ್ಲಿ ಆಗುವಂತಹದ್ದು ಎಂದು ಕಾದಂಬರಿಕಾರ ಎತ್ತಿ ಹೇಳುತ್ತಾನೆ.

ಒಬಿ ಓಕಾಂಕೊ ಮೊದಮೊದಲಲ್ಲಿ ಈ ಲಾಲಸೆಗೆ ಬಲಿಯಾಗುವುದನ್ನು ಕಟುವಾಗಿ ಟೀಕಿಸುವುದಷ್ಟೇ ಅಲ್ಲ, ಮಾದರಿಯೂ ಆಗುವಂತೆ ಕೋರುತ್ತಾನೆ. ಮಾರ್ಕ್ ಎಂಬಾತ ತನ್ನ ತಂಗಿ, ಎಲ್‌ಸೀ ಮಾರ್ಕ್ ಅನ್ನು ಇಂಗ್ಲೆಂಡಿನ ಸ್ಕಾಲರ್‌ಶಿಪ್‌ವೊಂದಕ್ಕೆ ಕಳುಹಿಸಬೇಕೆಂದು ಒತ್ತಾಯಿಸಲು ಲಂಚದ ಆಮಿಷ ತೋರುತ್ತಾನೆ. ಸಾಲದ್ದಕ್ಕೆ ಅದೇ ದಿನ ರಾತ್ರಿ ಆಕೆ ಒಬಿಯ ಮನೆಗೆ ಕೂಡ ಬರುತ್ತಾಳೆ—ಆಮಿಷ ತೋರಲು. ಆದರೆ ಕ್ಲಾರಾಳ ಆಗಮನ ಒಬಿಯನ್ನು ಈ ಕ್ಲಿಷ್ಟಪರಿಸ್ಥಿತಿಯಿಂದ ಪಾರುಮಾಡುತ್ತದೆ. ಇದು ಬಹಳ ಸಾಮಾನ್ಯವಾದ ಆಚಾರ ಎಂದು ಒಬಿ ನಂತರ ತಿಳಿದುಕೊಳ್ಳುತ್ತಾನೆ. ಒಬಿಯ ನೈತಿಕ ಪತನದ ವ್ಯಂಗ್ಯವಾಗಿ ಈ ಹೊತ್ತಿನಿಂದ ಪ್ರಾರಂಭವಾಗುತ್ತದೆ. ನಗರದ ಸುಖೀ ಜೀವನ, 'ಹಣ' ಆತನ ಜೀವನದಲ್ಲಿ ಬಹಳಷ್ಟು ಪರಿಣಾಮ ಬೀರಲು ಪ್ರಾರಂಭಿಸುತ್ತವೆ. ಆದರದು ಪ್ರಾರಂಭವಾಗುವುದು ಬಹಳ ಸರಳವಾದ ಸಂಗತಿಯೊಂದರಿಂದ. ಒಬಿಗೆ ತನ್ನ ವಿಮೆಯನ್ನೂ ನವೀಕರಿಸಲು ನಲವತ್ತು ಪೌಂಡು ಬೇಕಾಗುತ್ತದೆ. ತನ್ನ ಬ್ಯಾಂಕಿನ ಖಾತೆಯಲ್ಲಿ ಕೇವಲ ಹದಿಮೂರು ಪೌಂಡುಗಳಿದ್ದರಿಂದ ಓವರ್ ಡ್ರಾಫ್ಟ್‌ಗೆ ಆತ ಕೇಳುತ್ತಾನೆ. ಮತ್ತೊಂದು ಐದು ಪೌಂಡಿನ ಬಿಲ್ ಬರುತ್ತದೆ. ಕ್ಲಾರಾ ಕೊಡುವ ಐವತ್ತು ಪೌಂಡುಗಳು ಕಾರಿನ ಗ್ಲೋವ್ ಕಂಪಾರ್ಟ್‌ಮೆಂಟಿನಿಂದ ಒಬಿ ಮತ್ತು ಮಿತ್ರರು ಡ್ಯಾನ್ಸ್ ಪಾರ್ಟಿಯಲ್ಲಿದ್ದಾಗ ಕಳುವಾಗುತ್ತದೆ. ಇದರ ಜೊತೆಗೇ ಒಬಿಯ ಮನೆಯವರ ಒತ್ತಡ—ಕ್ಲಾರಾಳ ಜೊತೆ ವಿವಾಹದ ಬಗ್ಗೆ—ಜೋರಾಗುತ್ತದೆ. ತಂದೆ ತಾಯಿಯರ ಒತ್ತಡದ ಜೊತೆ ಉಮೋಫಿಯಾ ಯೂನಿಯನ್ನಿನವರ ಜೊತೆಗಿನ ಸಂಬಂಧ ಕೂಡ ಇದರಿಂದಾಗಿ ಜರ್ಝರಿತವಾಗುತ್ತದೆ. ಒಬಿ ತನ್ನ ತಂದೆಯೊಡನೆ ಎಷ್ಟೋ ರೀತಿಯಲ್ಲಿ ವಾದ ಮಾಡಿದರೂ, ಆತನ ತಾಯಿಯ ಕುಂಠಿತ ಆರೋಗ್ಯ ಹಾಗೂ ಆಕೆಯೊಡನೆ ನಿಕಟತೆ ಆತನನ್ನು ಹಿಂದೆಗೆಯುವಂತೆ ಮಾಡುತ್ತದೆ. ಹಾಗಾಗಿ, ಒಬಿಯ ನೈತಿಕ ಪತನ—(ಕ್ಲಾರಾಳೊಡನೆ ವಿವಾಹವಾಗದಿರುವುದು–ಆಕೆ ಒಸು ಕಾರಣದಿಂದಾಗಿ) ಅದರ ಕಾರಣಗಳು ಏನೇ ಇರಲಿ ಆತನ ಸಾಮಾಜಿಕ ಪತನಕ್ಕೂ ನಾಂದಿಯಾಗುತ್ತದೆ ಎಂಬುದನ್ನು ಕಾದಂಬರಿಕಾರ ತಿಳಿಪಡಿಸುತ್ತಾನೆ. ಆದರೆ ಈ ಎರಡೂ ಪತನಗಳು ಭಿನ್ನವಾದುದಲ್ಲ. ಎರಡೂ ಒಂದರೊಡನೆ ಮತ್ತೊಂದು ಸಮ್ಮಿಶ್ರವಾಗಿರುವಂತಹವು. ಈ ಗಳಿಗೆಯಿಂದ ಒಬಿಯ ಆದರ್ಶಗಳು, ಆತನ ಧ್ಯೇಯಗಳು, ಈ ಸಮಾಜವನ್ನೇ ಬದಲಾಯಿ

ಸುವುದೆಂಬ ಹಮ್ಮು ಎಲ್ಲ ನಿಧಾನವಾಗಿ ಮರೆಯಾಗುತ್ತವೆ. ತನ್ನ ಆದರ್ಶಗಳನ್ನು ಛಿದ್ರ ಸಲು ಎದುರು ಬರುವ ಶಕ್ತಿಗಳನ್ನು ಎದುರಿಸದೇ ಒಬಿ ಮಣಿಯುತ್ತಾನೆ. ಆತ ಮನೆ ಯಲ್ಲಿ ನಡೆದ ಘಟನೆಗಳನ್ನೆಲ್ಲ ದೀರ್ಘವಾಗಿ ಕ್ಲಾರಾಳಿಗೆ ಹೇಳಿದಾಗ ಆಕೆ ಮಾತಿಲ್ಲದೆ ಅವನಿತ್ತ ನಿಶ್ಚಿತಾರ್ಥದ ಉಂಗುರವನ್ನು ವಾಪಸ್ಸೀಯುತ್ತಾಳೆ. ಅದೇ ಸಂದರ್ಭದಲ್ಲಿ ಆಕೆ ಗರ್ಭವತಿಯಾಗಿರುವುದು ಪರಿಸ್ಥಿತಿಯನ್ನು ಇನ್ನೂ ಗಂಭೀರವನ್ನಾಗಿಸುತ್ತದೆ. ಆಕೆ ಯನ್ನು ಈ ಪರಿಸ್ಥಿತಿಯಿಂದ ಈಚೆ ತರಲು ಒಬಿ ಮಿತ್ರನೊಬ್ಬನಿಂದ ಮೂವತ್ತು ಪೌಂಡು ಎರವಲು ಪಡೆಯುತ್ತಾನೆ. ತಾನೇ ಆಕೆಗಿತ್ತ ಅವಮಾನವೀಯ ವರ್ತನೆಯಿಂದ ಆಘಾತಿ, ಆಕೆಯನ್ನು ಡಾಕ್ಟರ್ ಆಪರೇಶನ್ ಗೃಹದಿಂದ ವಾಪಸ್ಸು ಕರೆಯಲೂ ಅಶಕ್ತನಾಗು ತ್ತಾನೆ.

> ಒಬಿ ತನ್ನ ಕಾರಿಂದ ದೌಡಾಯಿಸಿ ಹೊರಬಂದು ನಿಲ್ಲು. ನಾವು ಮದುವೆ ಆಗಿಬಿಡುವ ಕೂಗು ಹಾಕಬೇಕೆಂದಿದ್ದ—ಆದರೆ ಅವನಿಂದ ಅದು ಆಗದೇ ಹೋಯಿತು. ಡಾಕ್ಟರರ ಕಾರು ಚಲಿಸಿಬಿಟ್ಟಿತು. (ಪುಟ ೧೪೯).

ಗಳಿಗೆಯ ಬಳಿಕ ಒಬಿ ಮನಸ್ಸು ಮಾಡಿ ಕ್ಲಾರಳನ್ನೇ ಮದುವೆಯಾಗುತ್ತೇನೆ ಎಂದು ನಿರ್ಧರಿಸುವ ಹೊತ್ತಿಗೆ ಹೊತ್ತು ಮೀರಿರುತ್ತದೆ. ಎಷ್ಟು ಪ್ರಯತ್ನಿಸಿದರೂ ಕ್ಲಾರಾಳ ಸುಳಿವೇ ಸಿಗುವುದಿಲ್ಲ. ಸುಳಿವು ಸಿಕ್ಕು ಆಕೆಯನ್ನು ಕಂಡರೂ ಕ್ಲಾರಾ ಒಬಿ ಯೊಡನೆ ಮಾತನಾಡುವುದೇ ಇಲ್ಲ. ಕಾದಂಬರಿಯ ನಿರೂಪಕ ಹೀಗೆ ನುಡಿಯುತ್ತಾನೆ :

> ಈ ಘಟನೆಯಿಂದಾಗಿ ಒಬಿಯ ಮೇಲಿನ ಪರಿಣಾಮವೇನಾಯಿತೆಂದರೆ ಮೊಟ್ಟ ಮೊದಲಬಾರಿಗೆ ಒಬಿ ತನ್ನ ಚಟುವಟಿಕೆಗಳ ಮೂಲ ಚೇತನ ವನ್ನು ವಿಮರ್ಶಾತ್ಮಕ ದೃಷ್ಟಿಯಿಂದ ನೋಡಿದ್ದು. ಹಾಗೆ ನೋಡುತ್ತಿ ದ್ದಂತೆ ತನ್ನ ಬಹಳಷ್ಟು ಭಾಗ ಬರೀ ಬೊಗಳೆ ಎಂಬ ಅರಿವೂ ಉಂಟಾ ಗಿದ್ದು. (ಪುಟ ೧೫೫)

ವಾಸ್ತವಿಕತೆಯ ಅರಿವಿಲ್ಲದ ಆದರ್ಶವಾದ ಬರೀ ಬೊಗಳೆಯಾಗುವುದಷ್ಟೆ ಅಲ್ಲ, ವ್ಯಕ್ತಿಪತನಕ್ಕೂ ಕಾರಣವಾಗುತ್ತದೆಂಬುದನ್ನು ಜಿನುವ ಅಚೇಬೆ ಇಲ್ಲಿ ಎತ್ತಿ ತೋರುತ್ತಾನೆ.

ಈ ಕಾದಂಬರಿಯ ಶೇಷಭಾಗವೆಲ್ಲ ಒಬಿಯ ಪತನದ ಎರಡನೇ ಭಾಗವನ್ನು ವಿಶ್ಲೇಷಿಸುತ್ತದೆ. ಆತನ ತಾಯಿ ಸಾಯುತ್ತಾಳೆ. ಆರ್ಥಿಕವಾಗಿ ಆತನ ಪರಿಸ್ಥಿತಿ ಹದಗೆಟ್ಟು ಆತ ಕೂಡ ಹಿಂದೆ ಯಾವುದನ್ನು ತಿರಸ್ಕಾರ ಪೂರ್ವಕವಾಗಿ ಕಾಣುತ್ತಿ ದ್ದನೋ ಅದಕ್ಕೇ ಮಾರುಹೋಗಬೇಕಾಗುತ್ತದೆ :

> ಬೇರೆಯವರೂ ಬಂದರು; ಶ್ರೀಯುತ ಇವರು ಒಂದು ಕಾಲದ ಸುಸಂಸ್ಕೃತರು ಎಂದು ಜನ ನುಡಿಯುವರು. "ಆತ ದುಡ್ಡು ತೆಗೆದುಕೊಳ್ಳು ತ್ತಾನೆ. ನಿಜ ಆದರೆ ಕೆಲಸವನ್ನಂತೂ ಮಾಡುತ್ತಾನೆ". ಅದು ದೊರ ಆಡ್‌ವರ್ಟೈಸ್‌ಮೆಂಟಾಗುತ್ತದೆ. ಬೇರೆಯವರೂ ಹೆಜ್ಜೆ ಹಾಕುತ್ತಾ

ಆದರೆ ಒಬಿ ಮಾತ್ರ ಕನಿಷ್ಠ ವಿದ್ಯೆಯಾದರೂ ಇಲ್ಲದಿದ್ದರೆ ಅಥವಾ ಬೇರೆಯ ಬೇಡಿಕೆಗಳನ್ನು ಪರಿಪೂರ್ಣಗೊಳಿಸದಿದ್ದರೆ ಅಂತಹವರನ್ನು ಒಬಿ ಹತ್ತಿರ ಸೇರಿಸುತ್ತಲೇ ಇರಲಿಲ್ಲ. (ಪುಟ ೧೬೯) ಅದರಲ್ಲಿ ಮಾತ್ರ ಆತ ಅಚಲ.

ಲಂಚಕೋರನಾಗುವ ಅಥವಾ ಬೇರೆ ರೂಪದಲ್ಲಿ ಲಂಚವನ್ನು ಸ್ವೀಕರಿಸುವುದರ ಬಗ್ಗೆ ಆತನಿಗಿದ್ದ ಮುಂಚಿನ ತಿರಸ್ಕಾರ ನಿಧಾನವಾಗಿ ಮರೆಯಾಗುತ್ತದೆ. ಈ ಎಲ್ಲವೂ ಆತ ಇಪ್ಪತ್ತು ಪೌಂಡುಗಳ ಲಂಚವನ್ನು ಸ್ವೀಕರಿಸಿದನೆಂಬ ಆಪಾದನೆಗೆ ಸಿಕ್ಕು ಬಂಧಿತನಾಗಿ, ವಿಚಾರಣೆಗೆ ಕೋರ್ಟಿನ ಮುಂದೆ ಬರುವ ಪ್ರಸಂಗದಲ್ಲಿ ಕೊನೆಗೊಳ್ಳುತ್ತದೆ. ಕಾದಂಬರಿಯ ಕೊನೆ ಸಾಲುಗಳು ಈ ರೀತಿ ಇವೆ:

ಪ್ರತಿಯೊಬ್ಬರ ಮನಸ್ಸಿನಲ್ಲೂ ಇದ್ದ ಪ್ರಶ್ನೆ ಇದು–ಏಕೆ? ನಾವೆಲ್ಲ ಕಂಡ ಸುಶಿಕ್ಷಿತ ನ್ಯಾಯಾಧೀಶರು ವಿದ್ಯಾವಂತನಾದ ಯುವಕನೊಬ್ಬ. ಹೀಗೆಲ್ಲ ....ಬ್ರಿಟಿಷ್ ಕೌನ್ಸಲ್ಲಿನಾತ, ಉವೋಫಿಯಾದ ಜನರೂ ತಿಳಿಯದೇ ಹೋದರು. ಆತನ ಖಂಡಿತಭಾವನೆಯಿದ್ದಾಗ್ಯೂ ಶ್ರೀಯುತ ಗ್ರೀನ್ ಕೂಡ ತಿಳಿಯದೇ ಹೋದರು. (ಪುಟ ೧೭೦)

ಈ ಕಾದಂಬರಿ ಉವೋಫಿಯಾ ಸಮಾಜದ ಪೊಳ್ಳುತನದ ತೀಕ್ಷ್ಣ ವಿಮರ್ಶೆ, ಟೀಕೆಯೆಂದರೆ ತಪ್ಪಾಗಲಾರದು. ಆದರೆ ಆ ಪೊಳ್ಳಿನ ನೈತಿಕ ಜವಾಬ್ದಾರಿ ಬ್ರಿಟಿಷರ ಆಡಳಿತದ್ದೇ; ಫಿರಂಗರ ಆಡಳಿತ ಉವೋಫಿಯರನ್ನು ಬರೀ ಹೊರವೈಯಲ್ಲಿ ಮಾತ್ರ ಬದಲಾಗಿಸಿ, ಹುಸಿ ಮೌಲ್ಯಗಳನ್ನೇ ಸೃಷ್ಟಿಸುತ್ತದೆ, ಆದರೆ ಆ ಜನರನ್ನು ಅಂಧತೆಯ ಕಾರಾಗೃಹದಲ್ಲಿ ಬಂಧಿಸಿಯೂ ಇಡುತ್ತದೆ. ಟಿ.ಎಸ್. ಎಲಿಯಟ್ಟರ 'ದಿ ಜರ್ನಿ ಆಫ್ ದಿ ಮ್ಯಾಜೈ' ಪದ್ಯದ ನಿರೂಪಕ ಹೊಸ ಮೌಲ್ಯಗಳನ್ನೂ ಹೊಸ ಜೀವನವನ್ನೂ ಕಂಡು, ಬದಲಾಗಿ, ವಾಪಸ್ಸು ತನ್ನ ನೆರೆಗೆ ಬಂದಾಗ ತಮ್ಮ ಜನರೇ ಅನ್ಯರಂತೆ ಕಾಣುವಂತೆ, ಇಲ್ಲಿ ಕೂಡ ಒಬಿ ಓಕಾಂಕೋ, ಹೊರದೇಶದಿಂದ ಮೌಲ್ಯಗಳನ್ನೂ ಹಸಿರಾಗಿಸಿಕೊಂಡು, ವಾಪಸ್ಸು ಬಂದು ಹುಸಿತನವನ್ನು ಕಂಡು, ಎದುರಿಸಲಾಗದೆ ಕಡೆಗೆ ಸೋಲೊಪ್ಪುವುದನ್ನು ಕಾಣುತ್ತೇವೆ. ಇಂತಹ ಸಮಾಜವನ್ನೂ ಬಹುಶಃ ಬದಲಾಯಿಸುವ ಶಕ್ತಿಯಿರುವುದು ಕ್ರಾಂತಿಗೆ ಮಾತ್ರ ಎಂದು ಅಚೇಬೆ ನುಡಿಯುತ್ತಿರುವಂತಿದೆ.

ಇತರರು ನಮ್ಮ ನಂಬಿಕೆಗಳನ್ನು ಸ್ವೀಕರಿಸಲೇಬೇಕೆನ್ನುವುದು ಅಸಹನೀಯ ಪರಮಾವಧಿ.

ಗಾಂಧೀಜಿ

ಆಫ್ರಿಕದ ಸಮಾಜ, ಸಾಹಿತ್ಯ ಮತ್ತು 'ಆ್ಯರೋ ಆಫ್ ಗಾಡ್'

ಡಾ|| ಕೆ. ಸಿ. ಬೆಳ್ಳಿಯಪ್ಪ

ಯೂರೋಪಿನ ಕಲ್ಪನೆಯಲ್ಲಿ ಆಫ್ರಿಕ 'ಕಪ್ಪು ಖಂಡ' ಮತ್ತು
ಅಲ್ಲಿಯ ಜನರು ಅನಾಗರೀಕ, ಅಸಂಸ್ಕೃತರು ಎಂಬ ಭಾವನೆ
ಬಲವಾಗಿ ಬೇರೂರಿತ್ತು. ಯೂರೋಪಿನ ಲೇಖಕರು ಕಂಡ ಆಫ್ರಿಕ
ದಲ್ಲಿ ಈ ಭಾವನೆ ಬಹಳ ಮಟ್ಟಿಗೆ ಪ್ರತಿಬಿಂಬಿತವಾಗಿರುವುದನ್ನು
ನಾವು ಕಾಣಬಹುದು. ಇಂತಹ ಪರಿಸ್ಥಿತಿಯಲ್ಲಿ, ಆಫ್ರಿಕದ ಬಗ್ಗೆ
ಆಫ್ರಿಕನರಿಂದಲೇ ರಚಿತವಾದ ಸಾಹಿತ್ಯಕೃತಿಗಳು ಬಹಳ ಮಹತ್ವ
ವನ್ನು ಪಡೆಯುತ್ತವೆ. ಹೊರಗಿನವರಿಗೆ ಇರುವಂತೆ ಇವರಿಗೆ ಆಫ್ರಿಕ
ಎಗ್ಸಾಟಿಕ್ ಪ್ರಪಂಚವಲ್ಲ; ಅದು ಊಹೆ ಮತ್ತು ಕಲ್ಪನೆ
ಯಿಂದ ಹೊರತಾಗಿ ನೀರಸವಾಗಿ ಕಂಡರೂ, ಇವರ ಆಸಕ್ತಿ
ಇರುವುದು ಆಫ್ರಿಕದ ವಾಸ್ತವತೆಯಲ್ಲಿ. ೧೯೫೦ನೇ ದಶಕದಲ್ಲಿ
ಆಫ್ರಿಕದ ಹಲವಾರು ರಾಷ್ಟ್ರಗಳು ಸ್ವತಂತ್ರವಾಗುತ್ತಿದ್ದಂತೆ, ಅಲ್ಲಿ
ಸಾಹಿತ್ಯ ರಚನೆ ಕೂಡ ಪ್ರಾರಂಭವಾಯಿತು. ಹೆಸರಾಂತ ಕಾದಂಬರಿ
ಕಾರರಾದ ಆಮೋಸ್ ಟುಟುವೋಲ, ಸಿಪ್ರಿಯೆನ್ ಎಕ್ವೆನ್ಸಿ
ಮತ್ತು ಚಿನುವ ಅಚೇಬೆ ಬರೆಯತೊಡಗಿದರು.

ವಸಾಹತುಶಾಹಿ ಅನುಭವ ಈ ಎಲ್ಲ ಲೇಖಕರ ಜೀವನದ ಮೇಲೆ
ಪರಿಣಾಮಕಾರಿಯಾದ ಪ್ರಭಾವ ಬೀರಿತ್ತು. ಇದನ್ನು ನಾವು
ಅಚೇಬೆಯ ಜೀವನದಲ್ಲಿ ಸ್ಪಷ್ಟವಾಗಿ ಗುರುತಿಸಬಹುದು. ತಾನ
ಹುಟ್ಟಿದ ಹಳ್ಳಿಯಲ್ಲಿ ಕ್ರಿಶ್ಚಿಯನ್ನರು ಮತ್ತು ಇನ್ನಿತರರ ನಡು
ಪೂರ್ಣ ಒಡಕನ್ನು ಅಚೇಬೆ ಕಂಡಿದ್ದ. ಅವನ ತಂದೆತಾಯಿ
ನಿಷ್ಠಾವಂತ ಕ್ರಿಶ್ಚಿಯನ್ನರಾದರೆ, ಅವನ ತಾತ ಬಿರುದಾಂಕಿ
ಗೌರವಾನ್ವಿತ ವ್ಯಕ್ತಿ ಆಗಿದ್ದ. ಅವನ ತಾತ ತನ್ನ ಮನೆಯ
ಆವರಣದಲ್ಲಿ ಕ್ರಿಶ್ಚಿಯನ್ನರಿಗೆ ಸ್ಥಳ ಕೊಟ್ಟ ಮೊದಲಿಗ. ತ
ತಂದೆ ಮತ್ತು ತಾತನ ನಡುವೆ ಧಾರ್ಮಿಕ ಭಿನ್ನಾಭಿಪ್ರಾಂ

ಗಳಿದ್ದರೂ, ಅವರಿಬ್ಬರಲ್ಲಿ ಅನ್ಯೋನ್ಯ ಸಂಬಂಧವನ್ನು ಅಚೇಬೆ ಕಂಡುಕೊಂಡಿದ್ದನು. ಇಗ್ಬೊ ಪ್ರಪಂಚವನ್ನು ಬೇರ್ಪಡಿಸಿದ್ದ ಈ ಎರಡು ಸಂಸ್ಕೃತಿ ಮತ್ತು ಮೌಲ್ಯಗಳ ನಡುವೆ ಇವರು ಸುಲಭವಾಗಿ ವ್ಯವಹರಿಸುವುದನ್ನು ನೋಡಿ ಅಚೇಬೆ ಸೋಜಿಗಗೊಂಡಿದ್ದನು. ಈ ಸಂಸ್ಕೃತಿಗಳ ಕವಲೊಡೆತದಲ್ಲಿ ತನ್ನ ಬಾಲ್ಯವನ್ನು ಕಳೆದ ಅವನ ಜೀವನಕ್ರಮ ವಿಶಿಷ್ಟವಾದದ್ದು: ಒಂದೆಡೆ ಬೈಬಲ್ ಪಠಣ ಮತ್ತು ಸ್ತೋತ್ರಗಾನ; ಮತ್ತೊಂದೆಡೆ ತನ್ನ ಕುಲದ ದೇವತಾವಿಗ್ರಹಗಳಿಗೆ ನೈವೇದ್ಯ ನೀಡುವಿಕೆ. ಯಾವ ಆಧ್ಯಾತ್ಮಿಕ ಯಾತನೆಗಳ ಸೆಳೆತಕ್ಕೂ ಸಿಲುಕದೆ ಹತ್ತು ವರ್ಷದ ಬಾಲಕ ಅಚೇಬೆ ಈ ಎರಡು ಪ್ರಪಂಚಗಳ ಜೀವನಕ್ರಮಗಳಲ್ಲಿ ಭಾಗವಹಿಸುತ್ತಿದ್ದ. ಅವನು ಇಗ್ಬೊ ಜೀವನದ ಸಾಂಪ್ರದಾಯಿಕ ವಿಧಿವಿಧಾನಗಳಿಂದ ಆಕರ್ಷಿತನಾದರೂ, ಅವುಗಳನ್ನು ನಿರ್ಲಿಪ್ತವಾಗಿ ಮತ್ತು ಸೂಕ್ಷ್ಮವಾಗಿ ನೋಡುವ ಮನೋಭಾವವನ್ನು ಬೆಳೆಸಿಕೊಂಡಿದ್ದ. ಅವನ ಇಂಗ್ಲಿಷ್ ವಿದ್ಯಾಭ್ಯಾಸ ಯೂರೋಪಿನ ಸಂಸ್ಕೃತಿ ಮತ್ತು ಮೌಲ್ಯಗಳ ಪ್ರಾಮುಖ್ಯತೆಯಲ್ಲಿ ಅಚೇಬೆಗೆ ನಂಬಿಕೆಯನ್ನು ಹುಟ್ಟಿಸಿದ್ದುವು. ಆದರೆ ಎರಡನೆಯ ಮಹಾಯುದ್ಧ ಮತ್ತು ಪಶ್ಚಿಮ ಆಫ್ರಿಕದಲ್ಲಿ ಬೆಳೆಯುತ್ತಿದ್ದ ರಾಷ್ಟ್ರೀಯತಾ ಭಾವನೆ ಆಫ್ರಿಕನರೆಲ್ಲರನ್ನು ತಮ್ಮ ಗತಕಾಲ ಮತ್ತು ಮೌಲ್ಯಗಳ ಬಗ್ಗೆ ಗಂಭೀರವಾಗಿ ಚಿಂತಿಸಲು ಪ್ರಚೋದಿಸಿತು. ಅಚೇಬೆ ಕೂಡ ಈ ಪ್ರಚೋದನೆಯಿಂದ ಪ್ರೇರಿತನಾಗಿ ಆಫ್ರಿಕಕ್ಕೂ ಕೂಡ ತನ್ನದೇ ಆದ ಕಥೆ ಇದೆಯೆಂದು ಭಾವಿಸಿ ತನ್ನ ಪ್ರಥಮ ಕಾದಂಬರಿ 'ಥಿಂಗ್ಸ್ ಫಾಲ್ ಅಪಾರ್ಟ್' ಬರೆದ. ಈ ಕೃತಿ ತನ್ನ ಹಿಂದಿನ ನಡತೆಗೆ ಪ್ರಾಯಶ್ಚಿತ್ತವೆಂದು ಮತ್ತು ಆಫ್ರಿಕದ ನಿಜವಾದ ಕಥೆಯನ್ನು ಹೇಳಬಹುದೆಂಬ ಸತ್ಯವನ್ನು ಎಲ್ಲರ ಗಮನಕ್ಕೆ ತಂದಿತೆಂದು ಅಚೇಬೆ ಹಲವು ವರ್ಷಗಳ ನಂತರ ಬರೆದ ಒಂದು ಲೇಖನದಲ್ಲಿ ಹೇಳುತ್ತಾನೆ.

ಪಶ್ಚಿಮ ಆಫ್ರಿಕದ ಅತಿ ದೊಡ್ಡದಾದ ಮತ್ತು ಜನಭರಿತವಾದ ರಾಷ್ಟ್ರ ನೈಜೀರಿಯದಲ್ಲಿ ಪ್ರಮುಖವಾದ ಮೂರು ಬಣಗಳಿವೆ—ಉತ್ತರದಲ್ಲಿ ಹೌಸಾ, ಪಶ್ಚಿಮದಲ್ಲಿ ಯೊರೂಬ ಮತ್ತು ಪೂರ್ವದಲ್ಲಿ ಇಗ್ಬೊ. ಇಗ್ಬೊ ಜನರು ಅನೇಕ ಪ್ರಾಂತಭಾಷೆಗಳನ್ನು ಬಳಸಿದರೂ ಅವರಲ್ಲಿ ಬಹಳಷ್ಟು ಸಾಮಾನ್ಯವಾದ ಸಾಮಾಜಿಕ ಲಕ್ಷಣಗಳಿವೆ. ಅವರಲ್ಲಿ ಅಧಿಕಾರ ಸಾಂಪ್ರದಾಯಿಕವಾಗಿ ಸಣ್ಣ ಸಣ್ಣ ಗುಂಪುಗಳಲ್ಲಿ ವಿಂಗಡಿಸಲ್ಪಟ್ಟಿದ್ದು, ಕೇವಲ ಕೆಲವರ ಕೈಯಲ್ಲಿ ಅಧಿಕಾರ ಕೇಂದ್ರೀಕೃತಗೊಳ್ಳುವ ಅವಕಾಶವಿಲ್ಲ. ಅಸಂಖ್ಯಾತ ಚಿಕ್ಕ ಚಿಕ್ಕ ಜನಸಮುದಾಯಗಳುಳ್ಳ ಅವರ ಸಾಮಾಜಿಕ ವಿನ್ಯಾಸದಲ್ಲಿ ಇದು ಅಭಿವ್ಯಕ್ತಿಗೊಂಡಿದೆ. ಇವರಲ್ಲಿ ಗಂಡಸರಿಗೆ ಹೆಚ್ಚು ಪ್ರಾಮುಖ್ಯತೆ ಇದೆ. ಒಂದು ಆವರಣದಲ್ಲಿ ಅನೇಕ ಮನೆಗಳಿರುತ್ತವೆ—ಯಜಮಾನನದು, ಅವನ ಹೆಂಡತಿಯರದು ಮತ್ತು ಮಕ್ಕಳದು. ಮಣ್ಣಿನ ಗೋಡೆಯೊಂದು ಎರಡು ಆವರಣಗಳನ್ನು ಬೇರ್ಪಡಿಸುತ್ತದೆ. ಮನೆಯೊಳಗೆ ಪ್ರತಿಯೊಬ್ಬ ಹೆಂಡತಿಗೆ ಅವಳ ಮಕ್ಕಳೊಡನೆ ವಾಸಿಸಲು ಒಂದು ಕೋಣೆ, ಉಗ್ರಾಣ ಮತ್ತು ಅಡುಗೆಮನೆಗಳಿರುತ್ತವೆ. ಪ್ರತಿಯೊಂದು ಸಂತತಿಗೊಬ್ಬ ಮುಖ್ಯಸ್ಥನಿರುತ್ತಾನೆ. ಅನೇಕ ಸಂತತಿಯವರ ಮನೆಗಳು ಸೇರಿ ಒಂದು ಹಳ್ಳಿಯಾಗುತ್ತದೆ. ಈ ಹಳ್ಳಿಗಳು ಬಲುಮಟ್ಟಿಗೆ ಸ್ವಯಮಾಧಿಕಾರವುಳ್ಳವು. ಎಲ್ಲ ಹಳ್ಳಿಗಳಲ್ಲಿ ಕೇಂದ್ರ ಸ್ಥಳ ಒಂದಿದ್ದು ಅಲ್ಲಿ ಸಂತೆ ನಡೆಯುವುದಲ್ಲದೆ, ಹಳ್ಳಿಯ ಆಡಳಿತವೂ ಅಲ್ಲಿಂದಲೆ

ನಡೆಸಲಾಗುವುದು ಹಾಗೂ ಸ್ಥಳೀಯದೇವತೆಗಳನ್ನು ಅಲ್ಲಿ ಆರಾಧಿಸಲಾಗುತ್ತ
ಹಲವಾರು ಹಳ್ಳಿಗಳ ಗುಂಪುಗಳು ಸಾಮಾನ್ಯ ಸಂತತಿ ಮತ್ತು ಆರಾಧ್ಯದೇವತೆಗಳಿಂ
ಪರಸ್ಪರ ಸಂಬಂಧ ಹೊಂದಿರುತ್ತವೆ. ಈ ಹಳ್ಳಿಗಳಲ್ಲಿ ಯಾವ ವಿಧವಾದ ಅನುಕ್ರಮಶ್ರೇ
ಇರುವುದಿಲ್ಲ; ಏಕೆಂದರೆ ಇಲ್ಲಿನ ಎಲ್ಲ ಜನರು ಹಳ್ಳಿಯ ಆಡಳಿತದಲ್ಲಿ ಸಮಾನರಾ
ಪಾಲುಗೊಳ್ಳಬಹುದು. ಪ್ರತಿಯೊಬ್ಬನಿಗೆ ಸಂಪೂರ್ಣವಾದ ವ್ಯಕ್ತಿಸ್ವಾತಂತ್ರ್ಯ ಇರುತ್ತ
ಮತ್ತು ಎಲ್ಲ ವ್ಯಾಜ್ಯಗಳನ್ನು ಬಹಿರಂಗವಾಗಿ ತೀರ್ಮಾನಿಸಲಾಗುತ್ತದೆ. ಅಂದರೆ, ಇಲ್ಲಿ
ವ್ಯವಸ್ಥೆ ಏಕತತ್ವವಾದವನ್ನು ತಿರಸ್ಕರಿಸಿ, ಅನೇಕ ತತ್ವವಾದದ ಹಿರಿಮೆಯನ್ನು ಎತ್ತಿ
ಹಿಡಿಯುವಂಥದು.

ಯಾವುದೇ ಒಬ್ಬ ವ್ಯಕ್ತಿಯು ಎಂದಿಗೂ ಸ್ವಯಂಪೂರ್ಣನಲ್ಲ—ಇದು ಇಗ್ಬೊ
ಜನಾಂಗದ ಜನಪದ ಸಾಹಿತ್ಯದಲ್ಲಿ ಮತ್ತೆಮತ್ತೆ ಕಂಡುಬರುವ ಕಥಾವಸ್ತು. ಇಗ್ಬೊ
ಗಾದೆಯೊಂದು ಹೇಳುವಂತೆ "ಎಡ ಅಂಗೈ ಮತ್ತು ಬಲ ಅಂಗೈಗಳು ಒಂದನ್ನೊಂದ
ತೊಳೆದುಕೊಂಡು ಎರಡೂ ಸ್ವಚ್ಛವಾಗುವುದು ಉಚಿತ." ಇಂಥ ಮುಕ್ತವಾದ
ಅಧಿಕಾರಶಾಹಿಯಲ್ಲದ ಸಾಮಾಜಿಕ ವ್ಯವಸ್ಥೆ ಹೊರಗಿನ ಪ್ರಭಾವಕ್ಕೆ ಎಡೆಕೊಡುತ್ತ
ಎನ್ನುವುದು ಕೂಡ ಸತ್ಯಸಂಗತಿ. ಇಗ್ಬೊ ಸಮಾಜದ ಕೆಲವು ಲಕ್ಷಣಗಳನ್ನು ಗುರುತಿ
ಅದರ ವೈಶಿಷ್ಟತೆಯನ್ನು ನಾವು ತಿಳಿಯಬಹುದು. ಅವರಲ್ಲಿನ ವಿವಾಹವ್ಯವಸ್ಥೆಯ
ಪ್ರಕಾರ ಒಬ್ಬ ಗಂಡಸು ಬೇರೆಯ ಹಳ್ಳಿಯವಳನ್ನು ಮಾತ್ರ ಮದುವೆ ಆಗಬಲ್ಲ. ಇಂ
ಆಚರಣೆಯಿಂದ ಹಳ್ಳಿಗಳ ನಡುವೆ ಪರಸ್ಪರ ಸಂಬಂಧ ಮತ್ತು ಸಂಯೋಜನೆ ಬೆಳೆಯ
ತ್ತದೆ. ಈ ಸಮಾಜದಲ್ಲಿ ಬಿರುದುಗಳಿಗೆ ಬಲು ಮಹತ್ವವಿದೆ. ಈ ಬಿರುದುಗಳನ
ಅನುಗ್ರಹಿಸಲಾಗುವುದಿಲ್ಲ; ಅವುಗಳನ್ನು ಶುಲ್ಕ ನೀಡುವುದರ ಮೂಲಕ ಗಳಿಸಬೇಕಾ
ತ್ತದೆ. ಬಿರುದಾಂಕಿತ ವ್ಯಕ್ತಿಗಳು ಸಮಾಜದಲ್ಲಿ ಗೌರವಾನ್ವಿತ ಸ್ಥಾನ ಹೊಂದಿರುತ್ತಾ
ದಿವ್ಯವಾಣಿ ಸ್ಥಾನ ಮತ್ತು ದೇವಾಲಯಗಳಲ್ಲಿ ದೇವರುಗಳಿಗೆ ಮನವಿಗಳನ್ನು ಸಲ್ಲಿ
ಬಹುದು ಮತ್ತು ವ್ಯಾಜ್ಯಗಳನ್ನು ಬಗೆಹರಿಸಬಹುದು. ಇಗ್ಬೊ ಜನಾಂಗದಲ್ಲಿ ಮುಖ
ವಾಗಿ ಮೂರು ಬಗೆಯ ಧಾರ್ಮಿಕ ನಂಬಿಕೆಗಳಿವೆ—ಸಾರ್ವಜನಿಕ ಮಹಾದೇವತೆಗ
ಪೂಜೆ; ವೈಯಕ್ತಿಕ ಅಥವಾ ಇಷ್ಟದೇವತೆಗಳ ಆರಾಧನಾ ಪದ್ಧತಿ ಮತ್ತು ಪೂರ್ವಿಕ
ಆರಾಧನೆ. ಇಗ್ಬೊ ಜನರ ಶ್ರೇಷ್ಠ ದೇವತೆ ಚುಕ್ವು. ಅಂತರಿಕ್ಷದಲ್ಲಿ ಇರುವ ಈ ದೇವ
ಮಾನವರ ಫಲಶಕ್ತಿ ಮತ್ತು ಸೃಷ್ಟಿಯನ್ನು ನಿಯಂತ್ರಿಸುತ್ತಾನೆ. ಭೂಮಿತಾಯಿಯಾ
ಆಲಾ ಪೂರ್ವಿಕರ ಮೇಲೆ ಹತೋಟಿ ಹೊಂದಿರುತ್ತಾಳೆ. ಇವರಿಬ್ಬರಲ್ಲದೆ ಸೂರ್ಯ, ಜ
ಧನ ಮುಂತಾದವರ ಸ್ವರೂಪಿಗಳಾದ ಕಿರಿಯ ದೇವರಿದ್ದಾರೆ (ಈ ಲೇಖನ ಮುಂ
ವರಿದಂತೆ ಸ್ವರೂಪಿಗಳು ಎನ್ನುವುದಕ್ಕಿಂತ ಹೆಚ್ಚು ಸಮರ್ಪಕವಾದ 'ಭೂತ' ಎನ್ನು
ಪದವನ್ನು ಬಳಸಲಾಗಿದೆ.)

ಇಗ್ಬೊ ಜನರ ಮುಖ್ಯ ವೈಶಿಷ್ಟ್ಯ ಎಂದರೆ, ಅವರಲ್ಲಿ ಇಷ್ಟದೇವತೆಗಳ ಬ
ಇರುವ ನಂಬಿಕೆ. ಪ್ರತಿಯೊಬ್ಬ ವ್ಯಕ್ತಿಯ ಗರ್ಭಧಾರಣೆಯ ಸಮಯದಲ್ಲಿ ಅ
ಎಲ್ಲ ದಕ್ಷತೆ ಮತ್ತು ಅದೃಷ್ಟದ ಮೂಲ ಆಗಿರುವ ಚಿ ಅಂದರೆ ಆತ್ಮ ಅಥ
ಅಮೂರ್ತ ದ್ರವ್ಯವನ್ನು ಚುಕ್ವು ಅನುಗ್ರಹಿಸಿರುತ್ತಾನೆ. ಅಚೀಬೆ ಬರೆದ ಒಂ

ಪ್ರಬಂಧದಲ್ಲಿ ಈ ಕಲ್ಪನೆಯ ಉದ್ದೇಶವನ್ನು ಮತ್ತು ಅದರ ಪ್ರಾಮುಖ್ಯತೆಯನ್ನು ವಿವರಿಸಿದ್ದಾನೆ. "ಎಲ್ಲಿ ಯಾವುದಾದರೊಂದು ಇರುತ್ತದೆಯೋ, ಅದರ ಬಳಿ ಮತ್ತೊಂದು ಇರುತ್ತದೆ. ಯಾವುದೊಂದೂ ಸ್ವಯಂಪೂರ್ಣವಲ್ಲ" ಎಂಬ ಅವರ ನಾಣ್ಣುಡಿಯಿಂದ ಇಗ್ಬೊ ಚಿಂತನೆಯಲ್ಲಿರುವ ದ್ವೈತ ತತ್ವವನ್ನು ಕಾಣಬಹುದು. ಅಂದರೆ ಒಬ್ಬ ವ್ಯಕ್ತಿ ಈ ಜಗತ್ತಿನಲ್ಲಿ ಜೀವಿಸುವಾಗ, ಅವನ ಪ್ರತಿರೂಪ ಅಂದರೆ ಚಿ ಭೂತಗಳ ಜಗತ್ತಿನಲ್ಲಿ ಇರುವುದರಿಂದ ಅದನ್ನು ಗಣನೆಗೆ ತೆಗೆದುಕೊಳ್ಳಲೇಬೇಕಾಗುತ್ತದೆ. ಆದರೆ ಕೇವಲ ಚಿ ಒಂದೇ ಪ್ರಭಾವಶಾಲಿಯಲ್ಲ ಎನ್ನುವುದನ್ನು ಅವರ ಇನ್ನೊಂದು ಗಾದೆ. "ಒಬ್ಬ ಮನುಷ್ಯ ಒಪ್ಪಿದರೆ ಅವನ ಚಿ ಒಪ್ಪುವುದು" ತಿಳಿಸುತ್ತದೆ. ಇದರಿಂದ ಸ್ವಲ್ಪ ಪ್ರಾಮುಖ್ಯತೆ ಮನುಷ್ಯನಿಗೂ ಸಲ್ಲಿಸದಂತಾಗುತ್ತದೆ. ಆದರೆ ಮನುಷ್ಯನೂ ಕೂಡ ಸಂಪೂರ್ಣವಾಗಿ ಪ್ರಭಾವಶಾಲಿಯಾಗಲಾರನು.ಏಕೆಂದರೆ ಮನುಷ್ಯನ ಸ್ವಾತಂತ್ರ್ಯವನ್ನು ಸಮುದಾಯದ ಸಂಕಲ್ಪ ಮೊಟಕು ಮಾಡುತ್ತದೆ. ಈ ಸತ್ಯವನ್ನು ಸೂಚಿಸುವ ಇಗ್ಬೊ ಗಾದೆ, "ಎಂತಹ ದೊಡ್ಡ ವ್ಯಕ್ತಿಯಾದರೂ ಅವನು ತನ್ನ ಕುಲದ ವಿರುದ್ಧ ತೀರ್ಪನ್ನು ಗಳಿಸಲಾರ". ಅಚೇಬೆಯ ಕಾದಂಬರಿ 'ಏರೋ ಆಫ್ ಗಾಡ್'ನಲ್ಲಿ ಹಲವಾರು ಬಾರಿ ಪ್ರತಿಧ್ವನಿಸುವುದು. ಗೋಚರ ಮತ್ತು ಅಗೋಚರ, ಮೂರ್ತ ಮತ್ತು ಅಮೂರ್ತ, ಜೀವಂತ ಮತ್ತು ನಿರ್ಜೀವ ಪ್ರಪಂಚಗಳ ನಡುವೆ ಇಗ್ಬೊ ಸಮಾಜದಲ್ಲಿ ಪರಸ್ಪರ ಪರಿಣಾಮಕಾರಿಯಾದ ಸಂಬಂಧ ಇರುವುದು. ಇಗ್ಬೊ ಸಾಮಾಜಿಕ ವ್ಯವಸ್ಥೆಯಲ್ಲಿ ಕಾಣುವ ವ್ಯಕ್ತಿವಾದ, ಮಹಾಕಾಂಕ್ಷೆ, ಸಮಾನತೆಯಲ್ಲಿನ ನಂಬಿಕೆ, ಸಹನಾಶಕ್ತಿ, ಸತತ ಕಾರ್ಯನಿರತತೆ, ನಿಯೋಜಿತ ಅಧಿಕಾರದಲ್ಲಿ ಅಪನಂಬಿಕೆ ಮುಂತಾದ ಲಕ್ಷಣಗಳು ಒಬ್ಬ ಇಗ್ಬೊ ವ್ಯಕ್ತಿಯಲ್ಲಿ ಕಾಣಸಿಗುವಂಥವು.

ಇಗ್ಬೊ ಸಮಾಜದ ಮುಖ್ಯ ವಿಶಿಷ್ಟತೆಗಳನ್ನು ಗುರುತಿಸಿದ ನಂತರ, ಆಫ್ರಿಕದ ಸಾಹಿತ್ಯದ ಬಗ್ಗೆ ಕೆಲವು ವಿಷಯಗಳನ್ನು ನಾವು ತಿಳಿಯುವುದು ಅವಶ್ಯಕ. ಆಫ್ರಿಕದ ಲೇಖಕ ತನ್ನ ಸಮಾಜಕ್ಕೆ ತಾನು ಹೊಣೆಗಾರನೆಂದು ಭಾವಿಸುತ್ತಾನೆ. ಆದುದರಿಂದ ಆಫ್ರಿಕದ ಕೆತ್ತನೆ ಕೆಲಸಗಾರ, ನರ್ತಕ ಮತ್ತು ಶಿಲ್ಪಿಗಳಿಗಿರುವಂತೆ ಅಲ್ಲಿಯ ಲೇಖಕನಿಗೂ ಕೇವಲ ಔಪಚಾರಿಕವಲ್ಲದ, ಉಪಯೋಗಕರ, ಸಮುದಾಯ ಪಾತ್ರವಿದೆ. ಆಫ್ರಿಕದಲ್ಲಿ ಕಲೆ ಯಾವುದೇ ಒಂದು ಜಾತಿ ಅಥವಾ ಗುಂಪಿಗೆ ಸೇರಿದವರ ಸೊತ್ತಲ್ಲ. ಅದು ಎಲ್ಲರಿಗೆ ಸೇರಿದುದು ಮತ್ತು ಸಮುದಾಯ ಕ್ರಿಯೆಯ ಅತ್ಯವಶ್ಯಕ ಭಾಗಗಳಲ್ಲಿ ಒಂದು. ಅಚೇಬೆ ಕಲೆಗಾಗಿ ಕಲೆ ಮತ್ತು ಪರಕೀಯನಾದ ಕಲಾವಿದ ಎಂಬ ಎರಡು ಕಲ್ಪನೆಗಳನ್ನು ಆಫ್ರಿಕದ ಸೌಂದರ್ಯಶಾಸ್ತ್ರಕ್ಕೆ ವಿರೋಧವಾದುದೆಂದು ಭಾವಿಸಿ ಅವುಗಳನ್ನು ಖಂಡಿಸುತ್ತಾನೆ. ಪಾಶ್ಚಿಮಾತ್ಯ ಸಾಹಿತಿಗಳ ಸಾರ್ವತ್ರಿಕತ್ವದ ಸಂಕುಚಿತ ಕಲ್ಪನೆಯನ್ನು ಟೀಕಿಸಿ, ತನ್ನ ಜೀವನದಲ್ಲಿ ನಡೆದ ಒಂದು ಘಟನೆಯನ್ನ ಸ್ವಾರಸ್ಯವಾಗಿ ಅಚೇಬೆ ನಿರೂಪಿಸಿದ್ದಾನೆ. ಒಮ್ಮೆ ಆಸ್ಟ್ರೇಲಿಯದ ಯುವತಿ ಒಬ್ಬಳು ಅವನನ್ನು "ನೀನು ಯಾವಾಗ ಆಫ್ರಿಕದ ಬಗ್ಗೆ ಬರೆಯುವುದನ್ನು ನಿಲ್ಲಿಸುತ್ತೀಯ?" ಎಂದು ಕೇಳಿದಾಗ, ವ್ಯಂಗ್ಯವಾಗಿ ಅಚೇಬೆ "ಅಂದರೆ ಅನ್ನರ್ಥದಲ್ಲಿ ನಾನು ಯಾವಾಗ ಆಸ್ಟ್ರೇಲಿಯದ ಬಗ್ಗೆ ಬರೆಯಲು ಪ್ರಾರಂಭಿಸು

ಅರೆ ದೈವಿಕಶಕ್ತಿ ಉಳ್ಳವನು. ಆದ್ದರಿಂದ ಎಸೂಲು ಮಾನವ ಪ್ರಪಂಚದಲ್ಲಿ ಪ್ರಬಲಶಾಲಿ ಯಾದರೆ, ದೈವಿಕ ಪ್ರಪಂಚದಲ್ಲಿ ಬರಿ ಗುಲಾಮ ಮಾತ್ರ. ಅವನ ಈ ಎರಡು ಪಾತ್ರಗಳ ನಡುವಿನ ಸೂಕ್ಷ್ಮ ಸಂಬಂಧವನ್ನು ಅಚೇಬೆ ಈ ಕಾದಂಬರಿಯಲ್ಲಿ ಗಂಭೀರವಾಗಿ ಪರಿಶೋಧಿಸುತ್ತಾನೆ.

ಉಮುವಾರೋ ಮತ್ತು ಒಕ್‌ಪೇರಿ ಹಳ್ಳಿಗಳ ನಡುವೆ ಜಮೀನಿಗಾಗಿ ವ್ಯಾಜ್ಯ ಉಂಟಾದಾಗ, ಆ ಜಮೀನು ಒಕ್‌ಪೇರಿಗೆ ಸೇರಿದುದೆಂದು ಎಸೂಲು ವಾದಿಸಿದರೆ, ಅ ದೊಡ್ಡ ಬಿರುದು 'ಏರು'ವನ್ನು ಪಡೆದಿದ್ದ ನ್ವಾಕ ಅದು ಉಮುವಾರೋಗೆ ಸೇರಿದ್ದು ಎನ್ನುತ್ತಾನೆ. ನ್ವಾಕನ ವಾದ ಜನರ ಸಮ್ಮತಿಯನ್ನು ಗಳಿಸುವುದರಲ್ಲಿ ಯಶಸ್ವಿಯಾಗು ತ್ತದೆ. ಉಮುವಾರೋ ಹಳ್ಳಿಯು ಎಸೂಲುನ ಎಚ್ಚರಿಕೆಯನ್ನು ನಿರ್ಲಕ್ಷಿಸಿ ಒಕ್‌ಪೇ ಹಳ್ಳಿಮೇಲೆ ಯುದ್ಧ ಹೂಡುತ್ತದೆ. ಬ್ರಿಟಿಷರು ಮಧ್ಯೆ ಪ್ರವೇಶಿಸಿ ಐದು ದಿನದ ಯುದ್ಧವನ್ನು ನಿಲ್ಲಿಸುತ್ತಾರೆ. ಕ್ಯಾಪ್ಟನ್ ವಿಂಟರ್‌ಬಾಟಮ್ ಈ ವ್ಯಾಜ್ಯವನ್ನು ಪರಿಶೀಲಿಸಿ ಜಮೀನನ್ನು ಒಕ್‌ಪೇರಿಯ ವಶಕ್ಕೆ ಒಪ್ಪಿಸುತ್ತಾನೆ. ಒಕ್‌ಪೇರಿಯನ್ನು ಬೆಂಬಲಿಸಿ ಎಸೂಲು ನೀಡಿದ ಸಾಕ್ಷ್ಯಾಧಾರದ ಮೇಲೆ ವಿಂಟರ್‌ಬಾಟಮ್ ಈ ನಿರ್ಧಾ ವನ್ನು ಕೈಗೊಳ್ಳುವುದು. ಈ ವ್ಯಾಜ್ಯ ಇಗ್ಬೊ ಸಮಾಜದ ಬಗ್ಗೆ ನಮಗೆ ಹಲವ ಮುಖ್ಯ ಅಂಶಗಳನ್ನು ಮನದಟ್ಟು ಮಾಡುತ್ತದೆ. ನ್ವಾಕ ಎಸೂಲುವನ್ನು ವಿರೋಧಿಸಲ ಮುಖ್ಯ ಕಾರಣ ಅವನಿಗೆ ಎಸೂಲುನ ಅಧಿಕಾರದ ಬಗೆಗಿರುವ ಅಸೂಯೆ. ಅವ ಪ್ರಕಾರ ಎಸೂಲು ಕೇವಲ ಧಾರ್ಮಿಕ ವಿಷಯಗಳಲ್ಲಿ ಮಾತ್ರ ಪರಿಸ್ಥಿ. ಎಸೂಲ ಮಹಾಕಾಂಕ್ಷೆಯುಳ್ಳವನು ಎಂದು ಆಪಾದಿಸುತ್ತಾನೆ. ಈ ಆಪಾದನೆಯಲ್ಲಿ ಅ ಸತ್ಯವಿದ್ದರು, ಇಗ್ಬೊ ಸಮಾಜದಲ್ಲಿ ಮುಖ್ಯ ಪುರೋಹಿತನ ಪಾತ್ರ ಕೇವಲ ಧಾರ್ಮಿ ವಿಷಯಗಳಿಗೆ ಮಾತ್ರ ಮೀಸಲಾಗಿಲ್ಲ; ಅದು ರಾಜಕೀಯ, ಆರ್ಥಿಕ, ನೈತಿಕ ಮತ ಯುದ್ಧಗಳ ವಿಷಯಗಳಿಗೆ ವ್ಯಾಪಿಸಿದೆ. ನ್ವಾಕ ಕೇವಲ ತನ್ನ ಸ್ವಾರ್ಥ ಹಿತಾಸಕ್ತಿಗಾ ಎಸೂಲುವನ್ನು ವಿರೋಧಿಸುತ್ತಾನೆ. ನ್ವಾಕನ ಈ ವರ್ತನೆ ಇಗ್ಬೊ ಸಮಾಜದ ಆಗುತ್ತಿರುವ ಮಾರ್ಪಾಟನ್ನು ಮತ್ತು ಅಲ್ಲಿನ ಸಮುದಾಯದ ಲಕ್ಷಣಗ ಹೇಗೆ ನಿಧಾನವಾಗಿ ಪತನಗೊಳ್ಳುತ್ತಿವೆ ಎಂಬುದನ್ನು ಪ್ರತಿಬಿಂಬಿಸುತ್ತದೆ.

ಜಮೀನಿನ ವ್ಯಾಜ್ಯಕ್ಕೆ ಉಲುವಿನ ಸಮರ್ಥನೆ ಇಲ್ಲ ಎನ್ನುವ ಎಸೂಲುವಿನ ಮಾತಿನಿ ಅವನ ಸ್ಥಾನದ ಬಗ್ಗೆ ಮತ್ತೊಂದು ಪ್ರಮುಖ ಪ್ರಶ್ನೆಯನ್ನು ಅಚೇಬೆ ಎತ್ತಿದ್ದಾ ಮುಖ್ಯ ಪುರೋಹಿತನ ಮೊದಲನೆಯ ಜವಾಬ್ದಾರಿ ತನ್ನ ಕುಲಕ್ಕೊ ಅಥ ದೇವರಿಗೊ? ಕುಲವೇ ತನ್ನ ಒಳಿತಿಗಾಗಿ ಉಲುವನ್ನು ಸೃಷ್ಟಿಸಿರುವುದರಿಂದ, ಎಸೂ ತನ್ನ ಕುಲವನ್ನು ವಿರೋಧಿಸಿ ಉಲುವನ್ನು ಬೆಂಬಲಿಸುವುದು ಸಾಧ್ಯವೇ? ಸಂಘರ್ಷಣೆ ಪುರೋಹಿತನ ಪಾತ್ರದೊಂದಿಗೆ ದೇವರ ಪಾತ್ರವನ್ನು ಕೂಡ ಪ್ರಶ್ನಿಸುತ್ತ ದೇವರನ್ನು ಕುರಿತ ಈ ಪರಸ್ಪರ ವಿರೋಧಿ ಅಭಿಪ್ರಾಯಗಳು ಎಸೂಲು ಮತ್ತು ನ್ವಾ ಎರಡು ಮಾತುಗಳಲ್ಲಿ ಸೂಚ್ಯವಾಗಿ ವ್ಯಕ್ತವಾಗಿವೆ. "ಒಬ್ಬ ವ್ಯಕ್ತಿ ಎಷ್ಟೇ ಬಲಶ ಮತ್ತು ದೊಡ್ಡವನಾದರೂ, ಅವನು ತನ್ನ ಚಿ ಯನ್ನು ಪ್ರಶ್ನಿಸಕೂಡದು" ಎನ್ನುವ ಎಸೂಲುನ ವಾದ; ಆದರೆ "ಒಬ್ಬ ಮನುಷ್ಯ ಆಕುಡು ಎಂದರೆ ಅವನ ಚಿ ಆಕ

ನ್ನುತ್ತಿವೆ" ಎನ್ನುವುದು ನ್ವಾಕನ ಪ್ರತಿವಾದ. ಮನುಷ್ಯ ಎಂದಿಗೂ ದೈವಿಕ ಶಕ್ತಿಗೆ ಧೀನ ಎಂದು ಎಸೂಲು ಅಭಿಪ್ರಾಯಪಟ್ಟರೆ, ದೈವಿಕವು ಮನುಷ್ಯ ಸ್ವಭಾವದ ಕೇವಲ ಭಿವ್ಯಕ್ತಿ ಎನ್ನುತ್ತಾನೆ ನ್ವಾಕ.

ನ್ವಾಕ ಮತ್ತು ಎಸೂಲುನ ವೈರತ್ವದ ಹಿಂದೆ ದೇವರುಗಳ ಪಾತ್ರವೂ ಇದೆ. ನ್ವಾಕ ವ್ಯಕ್ತಪಡಿಸುವ ವಿರೋಧದಲ್ಲಿ ಅವನ ಹಳ್ಳಿಯ ಮನೆದೇವರು ಇಡೆಮಿಲಿಯ ರೋಹಿತ ಎಸಿಡೆಮಿಲಿಯ ಬೆಂಬಲ ಅವನಿಗಿದೆ. ಈ ನಡುವೆ ಇಡೆಮಿಲಿಗೆ ಪವಿತ್ರ ಾದ ಹೆಬ್ಬಾವನ್ನು ಕೊಲ್ಲಲು ಎಸೂಲುನ ಮಗ ಒಡೂಚೆ ಪ್ರಯತ್ನಿಸುತ್ತಾನೆ. ಇಗ್ಬೊ ಮಾಜದಲ್ಲಿ ಕ್ರೈಸ್ತಧರ್ಮ ಉಂಟುಮಾಡುವ ಬದಲಾವಣೆಗಳನ್ನು ಗಮನಿಸಿ ಎಸೂಲು ್ರೈಸ್ತರ ಶಾಲೆಗೆ ತನ್ನ ಮಗ ಒಡೂಚೆಯನ್ನು "ತನ್ನ ಕಣ್ಣಾಗಿರಲು" ಕಳುಹಿಸುತ್ತಾನೆ. ಂದು ರೀತಿ ನೋಡಿದರೆ, ತಾನು ಹೆಚ್ಚು ಪ್ರಬಲನಾಗಲು ಎಸೂಲು ತನ್ನ ಮಗನನ್ನು ೂಡ ಬಲಿಕೊಡುತ್ತಾನೆಂದು ಹೇಳಬಹುದು. ಕ್ರೈಸ್ತಮತದವರಿಗೆ ಸರ್ಪವೆಂದರೆ ಾಕ್ಷಾತ್ ಸೈತಾನ, ಆದ್ದರಿಂದ ಅದನ್ನು ಕೊಲ್ಲುವುದೇ ಯೋಗ್ಯ ಎನ್ನುವ ವಾದವನ್ನು ಡೂಚೆ ಒಪ್ಪಿಕೊಂಡರೂ, ಹೆಬ್ಬಾವನ್ನು ಕೊಲ್ಲಲು ಧೈರ್ಯಸಾಲದೇ ಅವನು ತನ್ನ ಟ್ಟಿಗೆಯಲ್ಲಿ ಅದನ್ನು ಅಡಗಿಸುತ್ತಾನೆ. ಆದ್ದರಿಂದ ಇಗ್ಬೊ ಸಮಾಜದ ನಿರ್ಬಂಧಗಳಿಂದ ಡೂಚೆ ಸಂಪೂರ್ಣವಾಗಿ ಬಿಡುಗಡೆ ಹೊಂದಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ಆ ಟ್ಟಿಗೆ ತನ್ನಷ್ಟಕ್ಕೆ ತಾನೆ ಚಲಿಸತೊಡಗಿದಾಗ ಎಸೂಲುನ ಕುಟುಂಬದಲ್ಲಿ ಕೋಲಾಹಲ ಉಂಟಾಗಿ ಅಲ್ಲಿಗೆ ಎಸೂಲು ಬಂದು ಪೆಟ್ಟಿಗೆಯನ್ನು ಒಡೆದು ಹೆಬ್ಬಾವನ್ನು ಬಿಡುಗಡೆ ಮಾಡುತ್ತಾನೆ. ಈ ಘಟನೆಯನ್ನು ನಾವು ಸಂಕೇತದ ರೂಪದಲ್ಲಿ ಪರಿಗಣಿಸಬಹುದು. ್ರೈಸ್ತಧರ್ಮವನ್ನು ಪ್ರತಿನಿಧಿಸುವ ಪೆಟ್ಟಿಗೆಯೊಳಗೆ (ಈ ಬಗೆಯ ಪೆಟ್ಟಿಗೆಯ ಬಳಕೆ ೇವಲ ಕ್ರೈಸ್ತಮತಸ್ಥರಲ್ಲಿದ್ದಿತು) ಸ್ಥಳೀಯ ಧರ್ಮವನ್ನು ಸಂಕೇತಿಸುವ ಹೆಬ್ಬಾವು ಉಸಿರಾಡಲು ಕಷ್ಟವಾಗಿ ಒದ್ದಾಡುತ್ತದೆ. ಹೊಸ ಧರ್ಮ ಹೇಗೆ ಇಗ್ಬೊ ಸಮಾಜದ ಳೀಯ ಧರ್ಮಗಳನ್ನು ಕಬಳಿಸಿ, ಸಾಂಪ್ರದಾಯಿಕ ಸಮಾಜವನ್ನು ವಿನಾಶಗೊಳಿಸಲು ್ರಯತ್ನಿಸುತ್ತದೆ ಎಂಬುದನ್ನು ಈ ಪ್ರಸಂಗ ಸೂಚಿಸುತ್ತದೆ. ಈ ಘಟನೆಯಿಂದ ೋಪಗೊಂಡ ಎಸೂಲು ಮೊದಲಿಗೆ ಕೋಪ ತಾಳಿದರೂ, ಆದರೆ ನಂತರ ಹೆಬ್ಬಾವು ಡುಕಿತು ಎಂದು ಶಾಂತಗೊಂಡು, ಮಗನನ್ನು ಕೊಲ್ಲುವ ನಿರ್ಧಾರವನ್ನು ಕೈಬಿಡು ್ತನೆ. ಇದರಿಂದ ಸಿಟ್ಟುಗೊಂಡ ಎಸಿಡೆಮಿಲಿಯ ಬೆಂಬಲಿಗರು ಎಸೂಲುವನ್ನು ್ರಶ್ನಿಸಲು ಬಂದಾಗ, ಅವನು ರೊಚ್ಚಿಗೆದ್ದು ಅವರನ್ನು ಬೈದು ಓಡಿಸುತ್ತಾನೆ. ಹೀಗೆ ಾವು ಇಗ್ಬೊ ಸಮಾಜದಲ್ಲಿನ ಆಂತರಿಕ ಧಾರ್ಮಿಕ ಸಂಘರ್ಷವನ್ನು ಕಾಣಬಹುದು.

ಅಚೇಬೆ ನಮಗೆ ಬಿಳಿಯರ ಪ್ರಪಂಚವನ್ನು ಪರಿಚಯಿಸುತ್ತಾನೆ. ಇಲ್ಲಿಯ ಲ್ಲಾಧಿಕಾರಿ ಕ್ಯಾಪ್ಟನ್ ವಿಂಟರ್‌ಬಾಟಮ್ ಆಫ್ರಿಕದಲ್ಲಿ ಹದಿನೈದು ವರ್ಷ ಳೆದಿದ್ದರೂ ಅವನಲ್ಲಿ ಆಫ್ರಿಕದೊಂದಿಗೆ ಯಾವ ಜೀವಂತ ಸಂಬಂಧ ಕಂಡುಬರುವುದಿಲ್ಲ. ಲ್ಲ ಬಿಳಿಯರಂತೆಯೇ ಅವನು ಆಫ್ರಿಕದೊಂದಿಗೆ ಏಕಪ್ರಕಾರವಾಗಿ ಪ್ರತಿಕ್ರಿಯಿಸುತ್ತಾನೆ. ಕಾರಣಕ್ಕಾಗಿ ಆಫ್ರಿಕ ತನಗೆ ಪ್ರತಿಕೂಲವಾದ ನೆಲ, ಒಟ್ಟಿನಲ್ಲಿ ಬಿಳಿಯರಿಗೆ ಾರಕವಾದ ಸ್ಥಳ ಮಾತ್ರವಲ್ಲ, ಅವರ ಅಸ್ತಿತ್ವಕ್ಕೆ ಕೂಡ ಮಾರಕವಾದ ಪ್ರದೇಶವೆಂದು

ಅವನು ನಂಬಿರುತ್ತಾನೆ. ಅವನು ಆಫ್ರಿಕದ ಭೂದೃಶ್ಯವನ್ನು ಕೇವಲ ಪ್ರೇಕ್ಷಕನಂತೆ
ಮಾತ್ರ ನೋಡಬಲ್ಲವನಾದರಿಂದ ತಾನೊಬ್ಬ ಪರಕೀಯನೆಂಬ ಭಾವನೆ ಅವನಲ್ಲಿ
ಬಲವಾಗಿ ಬೇರೂರಿದೆ. ಇದಕ್ಕೆ ಪ್ರತಿಯಾಗಿ ಕಾದಂಬರಿಯ ಪ್ರಾರಂಭದಲ್ಲಿ ಎಸೂಲು
ಹೊಸ ಚಂದ್ರನನ್ನು ವೀಕ್ಷಿಸುವ ಚಿತ್ರದಿಂದ ಹೇಗೆ ವ್ಯಕ್ತಿ ಮತ್ತು ಅವನ ಪರಿಸರದ
ನಡುವೆ ಸಮರಸವಾದ ಸಂಬಂಧವಿದೆ ಎಂಬುದನ್ನು ನಾವು ಕಂಡುಕೊಳ್ಳುತ್ತೇವೆ.
ದೂರದಲ್ಲಿ ಕೇಳಿಬರುವ ತಮಟೆಯ ಬಡಿತದ ಶಬ್ದ ಸ್ಥಳೀಯರಿಗೆ ಈ ಸಾಮರಸ್ಯವನ್ನು
ಸೂಚಿಸಿದರೆ, ವಿಂಟರ್‌ಬಾಟಮ್‌ಗೆ ಅದು ತನ್ನ ವ್ಯಕ್ತಿತ್ವವನ್ನು ಚೆದರಿಸುವಂತೆ
ಅನ್ನಿಸುತ್ತದೆ. ಅವನಿಗೆ ಆಫ್ರಿಕದಲ್ಲಿ ಬ್ರಿಟಿಷರ ಆಳ್ವಿಕೆಯ ಮಹತ್ವ ಮತ್ತು
ಉಪಯುಕ್ತತೆಯ ಬಗ್ಗೆ ಅಗಾಧ ನಂಬಿಕೆ ಇದೆ. ಆದರೆ ಬ್ರಿಟಿಷರು ಈಗ ಬಳಕೆಗೆ ತರಲು
ಉದ್ದೇಶಿಸಿರುವ ಹೊಸ ಬದಲಾವಣೆಗಳು ವಿಂಟರ್‌ಬಾಟಮ್‌ಗೆ ವಿಪರೀತ ಎನ್ನಿಸುತ್ತದೆ.
ಪರೋಕ್ಷ ಆಡಳಿತ ಪದ್ಧತಿಯಿಂದಾಗಿ ರೂಢಿಯಲ್ಲಿರುವ ಅಧಿಕಾರ ಸ್ವರೂಪದಲ್ಲಿ ಆಗುವ
ಬದಲಾವಣೆಗಳಿಂದ ತನ್ನ ಸ್ಥಾನವುದುರ್ಬಲವಾಗುವುದನ್ನು ಅವನು ಸಹಿಸಲಾರ.
ಹಳ್ಳಿಗಳ ಮುಖ್ಯಸ್ಥರಾಗಿ ಸ್ಥಳೀಯರನ್ನು ನೇಮಕ ಮಾಡುವ ಕ್ರಮದಿಂದ ಯಾವ
ಒಳ್ಳೆಯ ಪರಿಣಾಮ ಆಗುವುದಿಲ್ಲ ಎಂಬ ಭರವಸೆ ಅವನದು. ಉದಾಹರಣೆಗೆ ಒಕ್‌ಪೇರಿಯ
ಮುಖ್ಯಸ್ಥನಾಗಿ ಜೇಮ್ಸ್ ಇಕೇಡಿಯನ್ನು ನೇಮಿಸಿದನಂತರ ಆದ ಹಾವಳಿ—ಇಕೇಡಿಯ
ಅಕ್ರಮ ಕೋರ್ಟು; ಅವನದೇ ಖಾಸಗಿ ಜೈಲುಸ್ಥಾಪನೆ ಹಾಗೂ ಜನರಿಂದ ಬಲಾತ್ಕಾರ
ವಾಗಿ ಹಣದ ಸುಲಿಗೆ—ಅವನ ಈ ಭರವಸೆಯನ್ನು ಸಮರ್ಥಿಸುತ್ತದೆ. ಇಕೇಡಿಯ
ಕ್ರೂರತೆಯನ್ನು ವಿಂಟರ್‌ಬಾಟಮ್ ಆಫ್ರಿಕದ ಪರಿಸರದ ಫಲ ಎನ್ನುತ್ತಾನೆ. ಆದರೂ
ಕೂಡ ತನ್ನ ಹಿರಿಯ ಅಧಿಕಾರಿಗಳ ಒತ್ತಡಕ್ಕೆ ಮಣಿದು ಈ ಕ್ರಮವನ್ನು ಮುಂದುವರಿಸು
ತ್ತಾನೆ. ಜಮೀನು ವ್ಯಾಜ್ಯದಲ್ಲಿ ಸಾಕ್ಷಿ ನೀಡಿದ ಎಸೂಲು ಮಾತ್ರ ಬಿಳಿಯರ ನ್ಯಾಯ
ಪದ್ಧತಿಯನ್ನು ಗ್ರಹಿಸಿದ್ದಾನೆ ಎಂದು ಭಾವಿಸಿ ಅವನನ್ನು ಉಮುವಾರೋ
ಮುಖ್ಯಸ್ಥನಾಗಿ ನೇಮಿಸಲು ನಿರ್ಧರಿಸುತ್ತಾನೆ. ಇಲ್ಲಿ ಕೂಡ ಅವನ ತಪ್ಪು ತಿಳುವಳಿ
ಯನ್ನು ಕಾಣಬಹುದು. ಬಿಳಿಯರ ಆಡಳಿತದಲ್ಲಿ ಎಸೂಲು ಕೇವಲ ಪ್ರಶಸ್ತವಾ
ಸಾಧನವೆಂದು ವಿಂಟರ್‌ಬಾಟಮ್ ತಿಳಿಯುತ್ತಾನೆ. ಈ ಅಧ್ಯಾಯಗಳಲ್ಲಿ ವಿಂಟರ್
ಬಾಟಮ್ ನಂತಹ ಬಿಳಿಯ ಅಧಿಕಾರಿಗಳ ಬಗೆಗೆ ಅಚೇಬೆಯ ವ್ಯಂಗ್ಯ ಬಲು ತೀವ್ರತ
ವಾದುದು. ಅವರ ಅಜ್ಞಾನಕ್ಕೆ ಸರಿಸಮಾನವಾದುದು ಕೇವಲ ಅವರ ಅಹಂಕಾರ
ಪ್ರತಿಷ್ಠೆ ಎನ್ನುತ್ತಾನೆ ಅಚೇಬೆ. ಶ್ರದ್ಧಾಪೂರ್ವಕವಾದ, ಆತ್ಮಸಾಕ್ಷಿಗೆ ಅನುಗುಣವಾ
ನಡೆಯುವ ಈ ಅಜ್ಞಾನಿ ಬಿಳಿಯರ ಆಡಳಿತದಿಂದ ಸ್ಥಳೀಯರ ಜೀವನದಲ್ಲಿ ಉದ್ದೇ
ಪೂರ್ವಕವಲ್ಲದ ಕಷ್ಟ, ಹಾನಿ ಮತ್ತು ದುರಂತ ಸಂಭವಿಸುವುದನ್ನು ಅಚೇಬೆ ಮಾರ್ಮಿ
ವಾಗಿ ಈ ಕಾದಂಬರಿಯಲ್ಲಿ ಚಿತ್ರಿಸಿದ್ದಾನೆ.

ಈ ಮಧ್ಯೆ ಉಮುವಾರೋನಲ್ಲಿ ಕುಂಬಳಕಾಯಿ ಎಲೆಯ ಹಬ್ಬದ ಆಚರಣೆಯ
ಸುಂದರ ವರ್ಣನೆ ಇದೆ. ಉಮುವಾರೋನ ಆರು ಹಳ್ಳಿಗಳ ಪಾಪವೆಲ್ಲವನ್ನು ತೊಳೆಯು
ವಂತಹ ಈ ಹಬ್ಬ ಬಿತ್ತನೆ ಮಾಡುವ ಸಮಯಕ್ಕಿಂತ ಮುಂಚೆ ನಡೆಯುತ್ತದೆ
ಇಕೋಲೊ ತಮಟೆಯ ಸದ್ದಿನೊಂದಿಗೆ ಆರಂಭವಾಗುವ ಈ ಆಚರಣೆಯಲ್ಲಿ ಉಲುವಿ

ಪ್ರಣಾಮಗಳನ್ನು ಸಲ್ಲಿಸಿದ ನಂತರ ಎಸೂಲುವನ್ನು ದೇವರಗುಡಿಯಿಂದ ಹೊರಕ್ಕೆ ತರುತ್ತಾರೆ. ಅರೆ ಮೈಯೆಲ್ಲ ಬಿಳಿ ಬಣ್ಣದಿಂದ ಬಳಿದುಕೊಂಡು ಎಸೂಲು ಮಾನವ ಮತ್ತು ಅಮೂರ್ತ ಪ್ರಪಂಚಗಳ ನಡುವಿನ ಮಧ್ಯಸ್ಥಗಾರನಾಗಿ, ಊಲುವಿನ ಸೃಷ್ಟಿಯನ್ನು ಪುನಃ ಅಭಿನಯಿಸಿ ಈ ಶುದ್ಧೀಕರಣ ವ್ರತಾಚರಣೆಯನ್ನು ನಡೆಸಿಕೊಡುತ್ತಾನೆ. ತಮಟೆಯ ಶಬ್ದದೊಂದಿಗೆ ಕುಂಬಳಕಾಯಿ ಎಲೆಗಳನ್ನು ಹಿಡಿದು ನರ್ತಿಸುತ್ತಿರುವ ಎಲ್ಲ ಜನರು ಹಾರುತ್ತಿರುವ ದೈತ್ಯಾಕಾರದ ಕೀಟಗಳಂತೆ ಕಾಣಿಸುವ ದೃಶ್ಯ ಈ ಹಬ್ಬಕ್ಕೆ ವಿಶಿಷ್ಟವಾದ ಸಾಮರಸ್ಯವನ್ನು ನೀಡುತ್ತದೆ.

ಎಸೂಲುನ ಸ್ನೇಹಿತ ಅಕ್ವೇಬ್ವೆ ಒಡೂಚೆಯ ಅಪವಿತ್ರ ಕ್ರಿಯೆಯ ಬಗೆಗೆ ಇರುವ ತನ್ನ ಮಾನಸಿಕ ಗೊಂದಲವನ್ನು ಅವನಲ್ಲಿ ತೋಡಿಕೊಳ್ಳುತ್ತಾನೆ. ಒಡೂಚೆಯನ್ನು ಬಿಳಿಯರಲ್ಲಿಗೆ ಕಳುಹಿಸಿದ್ದು ಅವರ ಮಂತ್ರಶಕ್ತಿಯನ್ನು ಕಲಿಯಲು, ತಮ್ಮ ದೇವರನ್ನು ಅಪಮಾನ ಮಾಡ.ವುದಕ್ಕಲ್ಲ ಎಂದು ಅಕ್ವೇಬ್ವೆ ಭಾವಿಸಿದ್ದ. ಆದರೆ ಈ ಘಟನೆ ಎಸೂಲು ಮತ್ತು ಇಸೆಡೆಮೀಲಿ ನಡುವಿನ ಸಂಬಂಧವನ್ನು ಹದಗೆಟ್ಟಿಸಿದುದನ್ನು ಕಂಡು ಅವನು ಚಿಂತೆಗೀಡಾಗುತ್ತಾನೆ. ಅಕ್ವೇಬ್ವೆಯ ಆಕ್ಷೇಪಣೆಗಳನ್ನು ಕೇಳಿದ ಎಸೂಲು ಇವೆಲ್ಲ ತನ್ನ ಅಧಿಕಾರವನ್ನು ಮತ್ತಷ್ಟು ನಿರ್ಬಂಧಿಸಲು ತನ್ನ ಶತ್ರುಗಳ ಪ್ರಯತ್ನ ಎಂದು ತಿಳಿಯುತ್ತಾನೆ. ತಾನು ಎಂದಿಗೂ ಸರಿಯಾದ ಹಾದಿಯಲ್ಲಿ ನಡೆಯುವವನು ಎಂಬ ಎಸೂಲುನ ಸ್ವಪ್ರತಿಷ್ಠೆಯ ಮಾತಿಗೆ ಅಕ್ವೇಬ್ವೆ "ಎಂತಹ ದೊಡ್ಡ ವ್ಯಕ್ತಿಯಾದರೂ ಅವನು ತನ್ನ ಕುಲದ ವಿರುದ್ಧ ತೀರ್ಪನ್ನು ಗಳಿಸಲಾರ" ಎಂದು ಅವನನ್ನು ಎಚ್ಚರಿಸುತ್ತಾನೆ. ಇದಕ್ಕೆ ಪ್ರತಿಯಾಗಿ ಎಸೂಲು ತನ್ನ ನಡವಳಿಕೆ ಸಾಮಾನ್ಯ ಮನುಷ್ಯರ ಗ್ರಾಹ್ಯಕ್ಕೆ ಮೀರಿದುದು ಎನ್ನುತ್ತಾನೆ. ಅಕ್ವೇಬ್ವೆ ತನ್ನ ವಾದವನ್ನು ಮುಂದುವರಿಸಿದಾಗ, ಎಸೂಲು ತಾನು ಉಮುವಾರೋನ ಮುಖ್ಯ ಪುರೋಹಿತನಾಗಿ ಅಲ್ಲಿಯ ಜನರ ಹಿತದೃಷ್ಟಿಗಾಗಿ ಒಡೂಚೆಯನ್ನು ಬಿಳಿಯರ ಶಾಲೆಗೆ ಕಳುಹಿಸಿದ್ದಾಗಿ ಎನ್ನುತ್ತಾನೆ. ಬಿಳಿಯರನ್ನು ಹೊಸ ಖಾಯಿಲೆಗೆ ಹೋಲಿಸಿ, ಅದು ಬಲು ಪ್ರಭಾವಶಾಲಿಯಾದ್ದರಿಂದ ತನ್ನ ಮಗನನ್ನು ಉಮುವಾರೋನ ಸುರಕ್ಷತೆಗೆ ಆಹುತಿ ಕೊಡುತ್ತಿರುವೆನೆಂದು ಹೇಳಿ ಎಸೂಲು ತನ್ನ ಕ್ರಮವನ್ನು ಸಮರ್ಥಿಸಿಕೊಳ್ಳುತ್ತಾನೆ.

ಎಸೂಲು ಹೆಚ್ಚು ಹೆಚ್ಚು ಒಂಟಿಯಾದಂತೆ ತನ್ನ ಕುಟುಂಬ ಮತ್ತು ಕುಲ ತನ್ನ ಮೇಲೆ ನಿರ್ಬಂಧವನ್ನು ಹೇರಲು ಮಾಡುವ ಪ್ರಯತ್ನಗಳನ್ನು ಸಹಿಸಲಾರದವನಾಗುತ್ತಾನೆ. ತಾನು ಊಲುವಿನ ಕಾರ್ಯಭಾರಿಯಾಗಿ ನಿರ್ವಹಿಸುತ್ತಿರುವ ಕಾರ್ಯದ ತರ್ಕವು ಹಳ್ಳಿಯ ಸಾಮಾನ್ಯ ಜನರಿಗೆ ಅರ್ಥವಾಗುವುದಿಲ್ಲ ಎನ್ನುವ ವಿಷಯ ಅವನಿಗೆ ಮನದಟ್ಟಾಗುತ್ತದೆ. ಅವನ ಉದ್ದೇಶಗಳ ಬಗ್ಗೆ ಪ್ರಶ್ನಿಸಿದಾಗ ಎಸೂಲು ತನ್ನ ಮಾನವ ಸ್ಥಾನದಿಂದ ಪುರೋಹಿತನ ಸ್ಥಾನಕ್ಕೆ ಹಾಗೂ ಲೌಕಿಕ ಪ್ರಪಂಚದಿಂದ ದೈವಿಕ ಪ್ರಪಂಚಕ್ಕೆ ಉಪಾಯವಾಗಿ ನುಣುಚಿಕೊಳ್ಳುವುದನ್ನು ಅಚೀಬೆ ನಮಗೆ ಕಾಣಿಸುತ್ತಾನೆ. ಜಮೀನಿನ ವ್ಯಾಜ್ಯದಲ್ಲಿ ತನ್ನ ನಡತೆ, ತನ್ನ ಮಗ ಒಡೂಚೆಯನ್ನು ಕ್ರೈಸ್ತ ಮತಸ್ಥರ ಶಾಲೆಗೆ ಕಳುಹಿಸುತ್ತಿರುವುದು ಹಾಗೂ ತನ್ನ ಇತರ ಗಂಡುಮಕ್ಕಳ ನಿರ್ವಹಣೆ—ಇವೆಲ್ಲವನ್ನು ಎಸೂಲು ಈ ರೀತಿಯಾಗಿ ಸಮರ್ಥಿಸಿಕೊಳ್ಳುತ್ತಾನೆ. ಅವನ ಮನಸ್ಸಿನ ಒಳಚಿತ್ರಣ

ನಮಗೆ ದೊರಕದೆ ಇರುವುದರಿಂದ, ಎಸೂಲುನ ಈ ಮಾನಸಿಕ ನಣಾಚುವಿಕೆ ಎಷ್ಟು ಸ್ವಯಂಪ್ರೇರಿತ ಎಂದು ನಾವು ತಿಳಿಯಲಾಗುವುದಿಲ್ಲ. ಸ್ಥೂಲವಾಗಿ ಹೇಳುವುದಾದ ಎಸೂಲು ತನ್ನ ಮತ್ತು ಊಲುವಿನ ಇಚ್ಛೆಗಳನ್ನು ಒಂದರಿಂದ ಇನ್ನೊಂದಕ್ಕೆ ಸುಲಲಿ ವಾಗಿ ಪರಿವರ್ತಿಸುವುದರಲ್ಲಿ ಯಶಸ್ವಿಯಾಗುವುದರಿಂದ,ಅವನ ಉದ್ದೇಶಗಳು ದ್ವಂದ್ವಾರ್ಥ ದಲ್ಲಿ ಉಳಿಯುತ್ತವೆ.

ಉಮುವಾರೋ ಜನಾಂಗ ಮತ್ತು ಪುರೋಹಿತನ ಮಧ್ಯೆ ಇರುವ ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಬಿಳಿಯರ ಪ್ರಪಂಚ ಮಧ್ಯೆ ಪ್ರವೇಶಿಸುತ್ತದೆ. ವಿಂಟರ್‌ಬಾಟಮ್ ಎಸೂಲುವನ್ನು ಉಮುವಾರೋನ ಮುಖ್ಯಸ್ಥನಾಗಿ ಮಾಡಲು ನಿರ್ಧರಿಸಿ ತನ್ನ ಧೂತರನ್ನು ಅವನಲ್ಲಿಗೆ ಕಳುಹಿಸುತ್ತಾನೆ. ಅವರು ತಮ್ಮ ಬಿಳಿ ಯಜಮಾನರಂ ಎಸೂಲುನ ಬಳಿ ಅಹಂಕಾರ, ದರ್ಪಗಳಿಂದ ವರ್ತಿಸಿದಾಗ ಕುಪಿತಗೊಂಡ ಎಸೂಲ ತಾನು ಅವರೊಂದಿಗೆ ಹೋಗಲು ನಿರಾಕರಿಸಿ, ಬೇಕಾದರೆ ವಿಂಟರ್‌ಬಾಟಮ್ ತನ್ನಲ್ಲಿ ಬರಬಹುದೆಂದು ನುಡಿಯುತ್ತಾನೆ. ತನ್ನ ಈ ವರ್ತನೆಯಿಂದ ಎಸೂಲು ತನಗೆ ಅರಿವಿ ದಂತೆ ಉಮುವಾರೋನ ಅಧಿಕಾರ ವ್ಯವಸ್ಥೆಯಲ್ಲಿ ಭಾಗಿಯಾಗುವ ಅವಕಾಶವನ ಕಳೆದುಕೊಳ್ಳುತ್ತಾನೆ. ಎಸೂಲು ಮತ್ತು ವಿಂಟರ್‌ಬಾಟಮ್‌ರಲ್ಲಿ ತಮ್ಮಿಬ್ಬರ ಬ ಇರುವ ಪರಸ್ಪರ ಪರಿಕಲ್ಪನೆಯನ್ನು ನೋಡಿದಾಗ ಅವರ ತಪ್ಪು ಚಿಂತನೆ ನಮ ಅರಿವಾಗುತ್ತದೆ. ವಿಂಟರ್‌ಬಾಟಮ್ ಎಸೂಲುವನ್ನು ಒಬ್ಬ ವ್ಯಕ್ತಿಯಾಗಿ ನೋಡ ಅವನನ್ನು ಕೇವಲ ಒಬ್ಬ ಅಂಧಶ್ರದ್ಧೆಯ ಪುರೋಹಿತನೆಂದು ಪರಿಗಣಿಸುತ್ತಾನೆ. ಅವ ಈ ವರ್ತನೆಗೆ ತದ್ವಿರುದ್ಧವಾಗಿ ಎಸೂಲು ವಿಂಟರ್‌ಬಾಟಮ್‌ನನ್ನು ತನ್ನ ಸ್ನೇಹಿ ನೆಂದು—"ನನ್ನ ಸ್ನೇಹಿತ ವಿಂಟಬೋಟ"—ಭಾವಿಸುತ್ತಾನೆ. ಎಸೂಲುನ ದುರಂತ ಅವನ ಈ ಭ್ರಮೆ ಕೂಡ ಕಾರಣವಾಗುತ್ತದೆ.

ವಿಂಟರ್‌ಬಾಟಮ್‌ನ ಈ ಕರೆಯನ್ನು ಚರ್ಚಿಸಲು ಎಸೂಲು ತನ್ನ ಕುಲ ಹಿರಿಯರ ಸಭೆಯನ್ನು ಕರೆಯುತ್ತಾನೆ. ವಿಂಟರ್‌ಬಾಟಮ್‌ನನ್ನು ವಿರೋಧಿಸುವ ಅ ಈ ವರ್ತನೆಯನ್ನು ಹಿರಿಯರು ಒಪ್ಪಲು ಸಿದ್ಧರಿಲ್ಲ. ಎಸೂಲು ಹಿಂದೆ ತಮ್ಮನ್ನು ಕೇ ತನ್ನ ಮಗ ಒಡೂಚೆಯನ್ನು ಬಿಳಿಯರ ಬಳಿ ಕಳುಹಿಸಿದ್ದರಿಂದ ಈಗ ಅವನು ನ ಸಲಹೆಯನ್ನು ಕೇಳುವುದು ಅನಾವಶ್ಯಕ ಎಂದು ನ್ವಾಕ ವ್ಯಂಗ್ಯವಾಗಿ ಅವನನ್ನು ಗ ಮಾಡುತ್ತಾನೆ. ತಾನು ಒಕ್‌ಪೇರಿಗೆ ಹೋದರೆ ಉಮುವಾರೋವನ್ನು ಬಿಟ್ಟು ಬ ದಿನಗಳು ಇರಬೇಕಾಗಬಹುದು ಮತ್ತು ಇದು ಇಗ್ಬೊ ಸಂಪ್ರದಾಯಕ್ಕೆ ಪ್ರತಿಯಾ ದೆಂದು ಎಸೂಲು ನುಡಿಯುತ್ತಾನೆ. ಹಿರಿಯರ ಬೆಂಬಲ ತನಗೆ ದೊರಕದಿದ್ದಾಗ, ವಿಧಿಯನ್ನು ಒಬ್ಬಂಟಿಗನಾಗಿ ಎದುರಿಸಲು ಎಸೂಲು ಒಕ್‌ಪೇರಿಗೆ ತೆರಳುತ್ತಾನೆ. ಇಂ ಸಂದಿಗ್ಧ ಪರಿಸ್ಥಿತಿಯಲ್ಲಿ ಮನುಷ್ಯನ ಸಾಮುದಾಯಿಕ ಐಕಮತ್ಯವೊಂದೇ ಅ ಶಕ್ತಿಯಾಗಿರುವಾಗ, ಎಸೂಲು ಸಂಪೂರ್ಣವಾಗಿ ಒಂಟಿಯಾಗುವುದು ಅವನ ಮ ಅವನ ಸಮಾಜದ ದುರಂತವೇ ಸರಿ. ವಿಂಟರ್‌ಬಾಟಮ್ ಕರೆಗೆ ಕಿ ಓಗೊಡದಿದ್ದರಿಂದ, ಒಕ್‌ಪೇರಿಗೆ ಆಗಮಿಸಿದ ಎಸೂಲುವನ್ನು ಬಂಧನದಲ್ಲಿ ಇಡಲಾ ತ್ತದೆ. ಕಾರಾಗೃಹದಲ್ಲಿ ಅವನ ಅಸಮಾಧಾನ, ಕೋಪಗಳು ತೀವ್ರಗೊ

ಉಮುವಾರೋ ಜನರು ತನ್ನ ಅಧಿಕಾರವನ್ನು ಗೌರವಿಸದ ಕಾರಣಕ್ಕಾಗಿ ಅವರನ್ನು ಕ್ಷಿಸಲು ಉಲು ತನ್ನನ್ನು ಉಪಯೋಗಿಸುತ್ತಿದ್ದಾನೆಂಬ ಅನುಮಾನ ಎಸೂಲುನಲ್ಲಿ ಣುತ್ತದೆ. ಒಂದು ರಾತ್ರಿ ಎಸೂಲು ಕಂಡ ಭಯಂಕರ ಸ್ವಪ್ನದಲ್ಲಿ ಉಮುವಾರೋನ ಜನರು ಬಹಿರಂಗವಾಗಿ ಉಲುವನ್ನು ಅಪಮಾನ ಮಾಡಿ ತನ್ನನ್ನು ಸತ್ತ ದೇವರ ರೋಹಿತ ಎಂದು ಕರೆದು ತನ್ನ ಮುಖಕ್ಕೆ ಉಗಿಯುವುದನ್ನು ಕಂಡು ಅವನ ಈ ನುಮಾನ ಖಚಿತವಾಗುತ್ತದೆ. ಈ ದಿಗಿಲುಗೊಳಿಸುವ ಕನಸು ಎಸೂಲುನಲ್ಲಿ ಪ್ರತೀಕಾರ ಮನೋಭಾವವನ್ನು ಉಂಟುಮಾಡುತ್ತದೆ. ಉಮುವಾರೋ ಜನರ ಈ ಅಪರಾಧದ ಹೋಲಿಕೆಯಲ್ಲಿ ತನ್ನ ಮತ್ತು ಬಿಳಿಯರ ನಡುವಿನ ಜಗಳ ನಿಕೃಷ್ಟ ಮಾತ್ರ ಎಂದು ಸೂಲು ಅರ್ಥೈಸಿಕೊಳ್ಳುತ್ತಾನೆ.

ಎಸೂಲುನ ಈ ಆಲೋಚನಾ ಕ್ರಮವನ್ನು ಮತ್ತೊಂದು ದೃಷ್ಟಿಕೋನದಿಂದ ಾವು ನೋಡಬೇಕಾಗುತ್ತದೆ. ಉಮುವಾರೋ ಜನರು ತನ್ನನ್ನು ವಿರೋಧಿಸುತ್ತಾರೆ ಂಬ ಭಾವನೆಯಿಂದ ಕಾಡಿಸಲ್ಪಟ್ಟ ಎಸೂಲು, ತನ್ನ ಸಮಾಜದಲ್ಲಿ ಬ್ರಿಟಿಷರ ಹೊಸ ಾಗರೀಕತೆಯಿಂದ ಆಗುತ್ತಿರುವ ಬದಲಾವಣೆಗಳನ್ನು ಗುರುತಿಸಲು ವಿಫಲನಾಗುತ್ತಾನೆ. ವನ ನಿಜವಾದ ವೈರಿ ಬಿಳಿಯ ಮನುಷ್ಯ ಎನ್ನುವ ಅರಿವು ಎಸೂಲುನಲ್ಲಿ ಇಲ್ಲ. ತನ್ನ ಜೈಲುವಾಸಕ್ಕೆ ಉಮುವಾರೋನ ಜನರೇ ಕಾರಣ ಎಂದು ಭಾವಿಸುವ ಎಸೂಲುನ ಂಶಯದಲ್ಲಿ ಕಿಂಚಿತ್ತಾದರೂ ಸತ್ಯಾಂಶವಿದೆಯಾ ಎನ್ನುವ ಪ್ರಶ್ನೆ ಓದುಗನನ್ನು ಕಾಡದೆ ರುವುದಿಲ್ಲ. ನಿಜವಾಗಿ ಹೇಳಬೇಕೆಂದರೆ ಅವನ ಈ ಸ್ಥಿತಿಗೆ ಮುಖ್ಯ ಕಾರಣ ಬಿಳಿಯರ ಪ್ರಪಂಚದೊಂದಿಗೆ ಅವನಿಗಿದ್ದ ಸಂಪರ್ಕ. ಈ ಸಂಪರ್ಕದ ಕಾರಣದಿಂದಲೇ ಅವನಿಗೆ ಹ್ವಾನ ಬರುವುದು; ಆ ಆಹ್ವಾನವನ್ನು ನಿರಾಕರಿಸಿದುದರಿಂದ ಅವನು ಜೈಲಿನಲ್ಲಿ ಕಲ್ಪಡುತ್ತಾನೆ. ಇದರಲ್ಲಿ ಅವನ ಕುಲದವರ ಕೈವಾಡ ಏನೂ ಇಲ್ಲ. ಆದುದರಿಂದ ಮ್ಮ ಮುಂದೆ ಮತ್ತೊಂದು ಪ್ರಶ್ನೆ ಏಳುತ್ತದೆ. ಎಸೂಲು ಅನವಶ್ಯಕವಾಗಿ ತನ್ನ ಜನರ ೊತೆ ಕಾಲು ಕೆರೆದು ಜಗಳಕ್ಕೆ ಸಿದ್ಧನಾಗುತ್ತಿರುವಂತೆ ಮತ್ತು ಈ ಯೋಚನೆಯನ್ನು ಚ್ಚಿಸುತ್ತಿರುವಂತೆ ನಮಗನ್ನಿಸುತ್ತದೆ. ತನ್ನ ನಿಜವಾದ ಹೋರಾಟ ತನ್ನ ಮತ್ತು ಳಿಯರ ಜೊತೆ ಅಲ್ಲ; ತನ್ನ ಮತ್ತು ತನ್ನ ಕುಲದ ನಡುವೆ ಎನ್ನುವ ಎಸೂಲುನ ಭಿಪ್ರಾಯವನ್ನು ನಾವು ಅಸಂಬದ್ಧ ಹಾಗೂ ಅದು ಕೇವಲ ಅವನ ಮೊಂಡುತನವನ್ನು ೂಚಿಸುತ್ತದೆ ಎಂಬ ನಿರ್ಧಾರಕ್ಕೆ ಬರಬಹುದು.

ಜೈಲಿನಲ್ಲಿಯೇ ಬ್ರಿಟಿಷರು ಎಸೂಲುಗೆ ಉಮುವಾರೋನ ಮುಖ್ಯಸ್ಥ ಪದವಿ ಯನ್ನು ನೀಡಿದಾಗ, ಕೇವಲ ಪ್ರತೀಕಾರ ಭಾವನೆಯಿಂದ ಕೂಡಿದ ಅವನು ಅದನ್ನು ೂಡಲೆ ನಿರಾಕರಿಸುತ್ತಾನೆ. ಇದರಿಂದ ಬಿಳಿಯರ ಮೇಲೆ ತನ್ನ ಹಗೆ ತೀರಿತೆಂದು ಳಿಯುತ್ತಾನೆ. ಅವನ ಪ್ರಕಾರ ಇನ್ನು ಉಳಿದಿರುವುದು ಉಮುವಾರೋನ ಜನರೊಡನೆ ನ್ನ ಸೆಣಸಾಟ ಮಾತ್ರ. ಮೂವತ್ತೆರಡು ದಿವಸಗಳ ನಂತರ ಜೈಲಿನಿಂದ ಬಿಡುಗಡೆ ಾಗಿ ವಾಪಸ್ಸು ಉಮುವಾರೋ ತಲಪುತ್ತಾನೆ. ಇಲ್ಲಿಂದ ಕಾದಂಬರಿಯ ವಿಶಿಷ್ಟ ುತ್ತು ಮನತಟ್ಟುವ ಭಾಗ ಪ್ರಾರಂಭವಾಗುತ್ತದೆ. ಎಸೂಲು ಹಿಂತಿರುಗಿದ ನಂತರ, ವನ ಪ್ರತಿಕ್ರಿಯೆಗಳನ್ನು ನಾವು ಗಮನಿಸಬೇಕು. ಅವನು ಅಸಮಾಧಾನಗಳನ್ನು

ತುಂಬಿಕೊಂಡು ತನ್ನ ದ್ವೇಷವನ್ನು ಸಾಧಿಸಲು ಕಾಯುತ್ತಿರುವವನಂತೆ ಕಾಣಿಸುತ್ತಾನೆ
ಅವನ ಈ ದ್ವೇಷ ಎಷ್ಟು ಮಾರಕವಾದುದು ಎನ್ನುವುದು ಅವನು ಉಪಯೋಗಿಸು
ವಿಷ ಸರ್ಪದ ರೂಪಕದಿಂದ ತಿಳಿಯಬಹುದು. ಆದರೆ ವಾಸ್ತವವಾಗಿ ಉಮುವಾರೋ
ಜನರು ಅವನು ವಾಪಸ್ಸು ಬಂದ ಮೇಲೆ ತೋರಿಸುವ ಆದರ, ಪ್ರೀತಿಗಳನ್ನು ಕಂಡಾ
ಎಸೂಲುನ ದೃಢನಿಶ್ಚಯ ಕರಗುವಂತೆ ತೋರುತ್ತದೆ. ಅಲ್ಲಿಯವರಲ್ಲಿ ಅವನ ಬಗ್ಗೆ
ಹೆಚ್ಚು ಗೌರವ ಮೂಡಿರುವುದನ್ನು ಎಸೂಲು ಕಾಣುತ್ತಾನೆ. ಇಂತಹ ಸಮಾಧಾನಕ
ಪರಿಸ್ಥಿತಿಯಲ್ಲಿ ಎಸೂಲು ತನ್ನ ಕಲ್ಪನೆಯಲ್ಲಿ ಗತಕಾಲದಲ್ಲಿ ನಡೆದ ಊಲುವಿನ
ಸೃಷ್ಟಿಯ ಉತ್ಸವವನ್ನು ಪುನರ್ ನಿರ್ಮಿಸುತ್ತಾನೆ. ಈ ಗಳಿಗೆಯಲ್ಲಿ ತನ್ನನ್ನು ಕೇವಲ
ದೇವರ ಗುಲಾಮನೆಂದು ಭಾವಿಸದೆ, ತಾನು ದೇವರು ಮತ್ತು ಪುರೋಹಿತರಿಬ್ಬರನ್ನು
ಸೃಷ್ಟಿಸಿರುವ ಜನರ ಪ್ರತಿನಿಧಿಯೆಂಬ ಅರಿವು ಎಸೂಲುನಲ್ಲಿ ಮೂಡುತ್ತದೆ. ಕುಲದ
ಸಾಮರಸ್ಯವನ್ನು ಪ್ರತಿಬಿಂಬಿಸುವ ಈ ಉತ್ಸವದ ಆಚರಣೆ ಎಸೂಲುವಿಗೆ ಈ ಹಿಂದೆ
ಊಲು ಪದಚ್ಯುತಿಯಾದಂತೆ ತಾನು ಕಂಡ ಸ್ವಪ್ನದ ಭೀಕರತೆಯನ್ನು ಮರೆಯುವಂ
ಮಾಡುತ್ತದೆ. ಕಾದಂಬರಿಯ ಈ ಘಟ್ಟದಲ್ಲಿ, "ಎಂತಹ ದೊಡ್ಡ ವ್ಯಕ್ತಿಯಾದರೂ
ಅವನು ತನ್ನ ಕುಲದ ವಿರುದ್ಧ ತೀರ್ಪನ್ನು ಗಳಿಸಲಾರ" ಎನ್ನುವುದು ಕೇವ
ಎಚ್ಚರಿಕೆಯ ಮಾತಾಗದೆ, ವ್ಯಕ್ತಿಯ ಪ್ರಾಬಲ್ಯದ ಮೂಲವಾಗಿ ಮಾರ್ಪಾಡಾಗುತ್ತದೆ
ಮಾನವ ಮತ್ತು ದೈವಿಕ ಪಾತ್ರಗಳ ಪರಸ್ಪರ ಸ್ಪಂದನೆಯ ಅರಿವನ್ನು ಪಡೆದಿರು
ಎಸೂಲು ಈಗ ತನ್ನ ಕುಲದ ಮೇಲೆ ತನ್ನ ಅಧಿಕಾರ ನಿರಂಕುಶ ಎಂದು ತೋರಿಸುವುದ
ಅನವಶ್ಯಕ ಎಂಬ ನಿರ್ಧಾರಕ್ಕೆ ಬರುತ್ತಾನೆ.

ಆದರೆ ಅವನ ಈ ಸಾಮುದಾಯಿಕ ಪ್ರಜ್ಞೆ ಬಹಳ ಕಾಲ ಉಳಿಯುವುದಿಲ್ಲ
ಗೆಣಸು ಕೀಳುವ ಸಮಯಕ್ಕೆ ಇನ್ನು ಮೂರು ಹೊಸ ಚಂದ್ರಗಳ ಅವಧಿ ಇರುವು
ರಿಂದ ತನ್ನ ಸತ್ವಪರೀಕ್ಷೆಗಾಗಿ ಕೆಲ ಕಾಲ ಕಾಯಬೇಕು ಎಂದುಕೊಳ್ಳುತ್ತಾನೆ. ಎಸೂಲು
ಈ ಯೋಚನಾಕ್ರಮದಿಂದ ಅವನು ಮತ್ತೆ ತನ್ನ ವೈಯಕ್ತಿಕ ಶಕ್ತಿಯನ್ನು ಪ್ರದರ್ಶಿ
ಸಲು ಸೆಣಸಾಟಕ್ಕೆ ಕಾತುರನಾಗಿದ್ದಾನೆ ಎನ್ನುವುದು ತಿಳಿಯುತ್ತದೆ. ಈ ವೇಳೆಗೆ ಸ
ಯಾಗಿ ಊಲು ಎಸೂಲುನ ಕಿವಿಯಲ್ಲಿ, "ಏಯ್, ಕೇಳು, ಇದು ನಿನ್ನ ಸೆಣಸಾ
ವೆಂದು ಯಾರು ಹೇಳಿದರು?....ನೀನು ಮನೆಗೆ ಹೋಗಿ ಮಲಗು. ಇಡೆಮಿಲಿಯೊಡ
ನನ್ನ ಜಗಳವನ್ನು ನಾನೇ ಬಗೆಹರಿಸುತ್ತೇನೆ. ನೀನು ಮಲಗು ಹೋಗು. ನಮ್ಮಿಬ್ಬರ
ಯಾರು ಶ್ರೇಷ್ಠ ಎಂಬುದನ್ನು ಕಾದಾಡಿ ನಾವು ಬಗೆಹರಿಸುತ್ತೇವೆ", ಎಂದು ಹೇ
ಗಹಗಹಿಸಿ ನಗುತ್ತಾನೆ. ಈ ಮಾತುಗಳ ಮೂಲಕ ಊಲು ಎಸೂಲುನ ದೈವಿಕ ಭಾಗ
ಮೇಲೆ ತನ್ನ ಹತೋಟಿಯನ್ನು ಪುನರ್‌ಸ್ಥಾಪಿಸುತ್ತಾನೆ. ಇದರಿಂದ ಎಸೂಲ
ಸಂಶಯ ಮತ್ತು ಅನಿಶ್ಚಿತೆಗಳೆಲ್ಲ ಸಂಪೂರ್ಣವಾಗಿ ಮಾಯವಾಗುತ್ತದೆ. ಊಲುವಿನ
ಮಾತುಗಳನ್ನು ತನ್ನದೇ ಆದ ರೀತಿಯಲ್ಲಿ ಅರ್ಥೈಸಿಕೊಳ್ಳುವ ಎಸೂಲು, ತಾನು ಇನ
ತನ್ನ ಜನರೊಡನೆ ಯಾವ ರಾಜಿ ಮಾಡಿಕೊಳ್ಳಬೇಕಾದ ಅವಶ್ಯಕತೆ ಇಲ್ಲವೆಂದೂ,
ರೊಡನೆ ಕಾದಾಡಲು ಸಿದ್ಧನಾಗಬೇಕೆಂದು ಊಲು ಆಜ್ಞೆ ಕೊಟ್ಟಿದ್ದಾನೆ ಎಂ
ಅಭಿಪ್ರಾಯ ಪಡುತ್ತಾನೆ. ತಾನು ದೇವರ ಬಿಲ್ಲಿನ ಕೇವಲ ಒಂದು ಬಾಣ ಎಂ

ಎಸೂಲು ಭಾವಿಸುತ್ತಾನೆ. ಅಂದರೆ ದೇವರ ಪ್ರತಿನಿಧಿಗಿಂತ ದೇವರ ದೂರದ ಕಾರ್ಯ ಭಾರಿ ಆಗುತ್ತಾನೆ ಎಸೂಲು. ಅವನ ದ್ವಂದ್ವಗಳೆಲ್ಲ ಈ ಗಳಿಗೆಯಲ್ಲಿ ಬಗೆಹರಿದು ಎಸೂಲುಗೆ ಒಡೂಚೆ ಊಲು–ಇಡೆಮೀಲಿ ಇಬ್ಬರ ಹೋರಾಟದ ಒಂದು ಅಂಶದಂತೆ ಕಾಣುತ್ತಾನೆ, ಹಾಗೂ ಬಿಳಿಯರು ಕೂಡ ಊಲುವಿನ ಸಂಕಲ್ಪದ ಸಾಧನದಂತೆ ಕಾಣು ತ್ತಾರೆ.

ಎಸೂಲುನ ಸಂಕೀರ್ಣ ವ್ಯಕ್ತಿತ್ವದ ಬಗೆಗೆ ಎರಡು ಮಾತು. ಅವನು ಅರೆ ಮನುಷ್ಯ ಮತ್ತು ಅರೆ ದೈವಸ್ವರೂಪಿ ಎಂದು ಆಗಲೆ ಹೇಳಿಯಾಗಿದೆ. ಧಾರ್ಮಿಕ ವ್ರತಾಚರಣೆಗಳ ಸಮಯದಲ್ಲಿ ಎಸೂಲು ತನ್ನ ಅರ್ಧ ದೇಹಕ್ಕಷ್ಟೆ ಲೇಪಿಸಿಕೊಳ್ಳುವ ಬಿಳಿ ಬಣ್ಣ ಅವನು ಅರೆ ಮನುಷ್ಯ, ಅರೆ ದೈವಸ್ವರೂಪಿ ಎನ್ನುವುದನ್ನು ಸಾಂಕೇತಿಕವಾಗಿ ಒತ್ತಿ ಹೇಳುತ್ತದೆ. ಎಸೂಲುನ ದೈವಿಕ ಅಂಶ ಮತ್ತು ಮಾನವ ಅಂಶ, ಇವೆರಡರ ನಡುವೆ ತಿಕ್ಕಾಟವಿದ್ದು, ಅವನ ಮಾನವ ಅಂಶ ಒಡ್ಡುವ ಅಡಚಣೆಗಳನ್ನು ಗೆದ್ದು ದೈವಿಕ ಅಂಶ ತನ್ನ ಪ್ರಾಮಾಣಿ ಕತೆಯನ್ನು ಪ್ರತಿಪಾದಿಸಲು ಸದಾ ಪ್ರಯಾಸ ಪಡುತ್ತದೆ. ಎಸೂಲುನ ವ್ಯಕ್ತಿತ್ವದ ದುರಂತವಿರುವುದು ಈ ತಿಕ್ಕಾಟದಲ್ಲಿಯೇ. ಎಸೂಲು ತನ್ನ ಈ ಎರಡು ಅಂಶಗಳನ್ನು ಬೇರ್ಪಡಿಸಲಾರ. ಅವನು ಎರಡು ಬಾರಿ ತನ್ನ ಕುಲದ ಹಿರಿಯರ ಮಾತನ್ನು ನಿರ್ಲಕ್ಷಿಸಿ ದಾಗ, ತನ್ನ ಪ್ರತಿಷ್ಠೆಯ ಹಿಂದೆ ತನ್ನ ಪೌರೋಹಿತ್ಯದ ಅಧಿಕಾರ ಇದೆ ಎಂದು ತಿಳಿಯು ತ್ತಾನೆ. ಆದರೆ ಎಸೂಲುನ ಈ ಪ್ರತಿಷ್ಠೆ ಮತ್ತು ಹಟಮಾರಿತನ ಹಲವು ನಿರ್ಣಾಯಕ ಕ್ಷಣಗಳಲ್ಲಿ ಅವನು ಊಲುವಿನ ಸಂಕಲ್ಪವನ್ನು ತಪ್ಪಾಗಿ ಗ್ರಹಿಸುವಂತೆ ಮಾಡುತ್ತದೆ. ಈ ರೀತಿ ಹಲವು ಬಾರಿ ತನ್ನ ಅಧಿಕಾರದ ಬಗ್ಗೆ ಮಿತಿಮೀರಿದ ಕಲ್ಪನೆ ಹೊಂದಿದಾಗ ಇದು ಅವನ ಪತನಕ್ಕೆ ಕಾರಣವಾಗುತ್ತದೆ.

ಎಸೂಲುನ ಮನುಷ್ಯ ಮತ್ತು ಅಮೂರ್ತ ವ್ಯಕ್ತಿತ್ವದ ನಡುವಿನ ದ್ವಂದ್ವ ಮುಂದುವರಿಯುತ್ತದೆ. ಅಂತಿಮವಾಗಿ ಅವನು ಕೈಗೊಂಡ ತೀರ್ಮಾನವನ್ನು ಅಚೀಬೆ ಹೀಗೆ ವಿವರಿಸುತ್ತಾನೆ: "ದೀರ್ಘ ಕಾಲದ ಸದ್ದಿಲ್ಲದ ಸಿದ್ಧತೆಯ ನಂತರ ಎಸೂಲು ಅಂತಿಮವಾಗಿ ಉಮುವಾರೋನ ಅತ್ಯಂತ ದುರ್ಬಲ ಸ್ಥಾನಕ್ಕೆ—ಅಂದರೆ ಹೊಸ ಗೆಣಸಿನ ಹಬ್ಬ—ಪೆಟ್ಟು ಕೊಡಲು ಉದ್ದೇಶಿಸುತ್ತಾನೆ." ಇಗ್ಬೊ ಪದ್ಧತಿ ಪ್ರಕಾರ ಪುರೋಹಿತನು ಪ್ರತಿ ಹೊಸ ಚಂದ್ರನನ್ನು ವೀಕ್ಷಿಸಿದ ನಂತರ ಒಂದೊಂದಾಗಿ ಹನ್ನೆರಡು ಗೆಣಸುಗಳನ್ನು ತಿನ್ನಬೇಕು. ಇದು ಮುಗಿದ ನಂತರ ಅವನು ಹೊಸಗೆಣಸಿನ ಹಬ್ಬದ ದಿನವನ್ನು ಪ್ರಕಟಿಸಬೇಕು; ನಂತರವೇ ಗೆಣಸನ್ನು ಕೀಳುವ ಕೆಲಸದ ಆರಂಭ. ಆದರೆ ಮೂವತ್ತೆರಡು ದಿನ ಜೈಲಿನಲ್ಲಿದ್ದ ಕಾರಣ ಎರಡು ಹೊಸ ಚಂದ್ರರನ್ನು ಎಸೂಲು ವೀಕ್ಷಿಸಲಾಗಲಿಲ್ಲ; ಅರ್ಥಾತ್, ಎರಡು ಗೆಣಸನ್ನು ತಿನ್ನಲಾಗಲಿಲ್ಲ; ಆದ್ದರಿಂದ ಗೆಣಸನ್ನು ಕೀಳಲು ತೊಡಗುವುದಕ್ಕೆ ಜನರು ಕಾಯಬೇಕಾಗುತ್ತದೆ. ಎಸೂಲುನ ಈ ಕ್ರಮದಿಂದ ಉಮುವಾರೋನ ಜನರು ತಮ್ಮ ಜೀವನಾಧಾರವಾದ ಗೆಣಸನ್ನು ಭೂಮಿಯಲ್ಲಿ ಕೊಳೆಯಲು ಬಿಟ್ಟು, ಸಾವು, ಕ್ಷಾಮ, ಬಡತನ ಮತ್ತು ಗುರುತರವಾದ ವಿಪತ್ತನ್ನು ಎದುರಿಸಬೇಕಾಗುತ್ತದೆ. ಈ ಸಂದಿಗ್ಧ ಪರಿಸ್ಥಿತಿಯಿಂದ ಪಾರಾಗಲು ಅಲ್ಲಿನ ಹಿರಿಯರು ಎಸೂಲುವನ್ನು ತನ್ನ ಈ ನಿರ್ಧಾರವನ್ನು ಕೈ ಬಿಡಲು ಒತ್ತಾಯಿಸುತ್ತಾರೆ. ಈ ಸಮಸ್ಯೆ

ಎಸೂಲು ಜೈಲಿನಲ್ಲಿದ್ದ ಕಾರಣ ತಲೆದೋರಿರುವುದರಿಂದ ಅವನು ಉಳಿದ ಎರಡ ಗೆಣಸನ್ನು ತಿನ್ನಬಹುದು ಎಂದು ಅವರು ಸಲಹೆ ನೀಡಿದರೂ, ಈ ಕ್ರಿಯೆ ಪ್ರತಾಚಾರಕ ಯದು ಎಂದು ಹೇಳಿ ಅವರ ಸಲಹೆಯನ್ನು ಎಸೂಲು ತಳ್ಳಿಹಾಕುತ್ತಾನೆ. ಗೆಣಸನ್ನು ಕೀಳುವ ಕೆಲಸದ ಸಮಯ ಮುಂದೆ ಹೋಗಿರುವುದು ಕೂಡ ಊಲುವಿನ ಸಂಕಲ್ಪ ವೆಂದು, ಅದನ್ನು ಯಾವ ಮಾನವಕಾರಣಕ್ಕಾಗಿ ಬದಲಿಸಲು ಸಾಧ್ಯವಿಲ್ಲ ಎನ್ನುತ್ತಾನೆ ಎಸೂಲು. ಆದರೆ ಇದೇ ಎಸೂಲು ಹಿಂದೆ ತನ್ನ ಮಗ ಒಡೂಚೆ ಬಿಳಿಯರ ಶಾಲೆಗೆ ಹೋಗುವುದನ್ನು ಸಮರ್ಥಿಸಿಕೊಳ್ಳಲು ಬದಲಾವಣೆಯ ಅವಶ್ಯಕತೆಯನ್ನು ಒತ್ತಿ ಹೇಳುವ ಅನೇಕ ಇಗ್ಬೊ ಗಾದೆಗಳನ್ನು ತನ್ನ ವಾದದಲ್ಲಿ ಬಳಸಿಕೊಂಡಿದ್ದ ಎನ್ನುವುದು ನಮಗೆ ನೆನಪಾಗುತ್ತದೆ.

ಕೊನೆಯದಾಗಿ ತಾನು ಅಧಿಕಾರವನ್ನು ನಿಸ್ಸಂದಿಗ್ಧವಾಗಿ ಚಲಾಯಿಸುತ್ತಿರುವುದರಿಂದ, ಇಗ್ಬೊ ಸಮಾಜದಲ್ಲಿನ ಕುಲ ಮತ್ತು ದೇವರ ನಡುವಿನ ಸಾಂಪ್ರದಾಯಿಕ ಪರಸ್ಪರತೆಯಲ್ಲಿ ಎಸೂಲುಗೆ ಯಾವ ಆಸಕ್ತಿಯೂ ಇಲ್ಲ. ಆದರೂ ಕೂಡ ಅವನು ತನ್ನ ಜನರ ಒತ್ತಾಯಕ್ಕೆ ಮಣಿದು ತನ್ನ ದೇವರು ಊಲುವಿನ ಸಲಹೆ ಕೇಳಿದಾಗ, ಅವನಿಗೆ ಯಾವ ಉತ್ತರವೂ ದೊರಕುವುದಿಲ್ಲ. ಅವನು ಈ ರೀತಿ ಸಲಹೆ ಕೇಳುತ್ತಿರುವಾಗ ಒಂದು ಮಹತ್ವಪೂರ್ಣ ಘಟನೆ ನಡೆಯುತ್ತದೆ. ಊಲುವಿನ ಗುಡಿಗೆ ಕ್ರಿಶ್ಚಿಯನ್ನರ ಘಂಟಾನಾದ ಕೇಳಿಬರುತ್ತದೆ. ಎಸೂಲುಗೆ ಅದು ಎಂದಿಗಿಂತಲೂ ಸಮೀಪದಲ್ಲಿ ಮತ್ತು ಜೋರಾಗಿ ಕೇಳಿಬರುವುದರ ಸಂಕೇತಾರ್ಥದ ಅರಿವು ಅವನಿಗೆ ಆಗುವುದಿಲ್ಲ. ಅಚೇಬೆ ಈ ಸಂಕೇತದ ಮೂಲಕ ಹೇಗೆ ಹೊಸ ಧರ್ಮ ತನ್ನ ಪ್ರಭಾವವನ್ನು ವಿಸ್ತರಿಸುತ್ತಿದೆ ಎನ್ನುವುದನ್ನು ಸೂಚಿಸುತ್ತಾನೆ. ಹೊಸಧರ್ಮ ಊಲುವಿನ ಗುಡಿ ತಲುಪಿರುವುದಲ್ಲದೆ, ಇನ್ನೇನು ಅಲ್ಲಿಯ ಜನರ ಹಕ್ಕುಬಾಧ್ಯತೆಗಳನ್ನು ಅತಿಕ್ರಮಿಸಲಿದೆ ಎನ್ನುವ ಸತ್ಯವನ್ನು ಅಚೇಬೆ ನಮಗೆ ಮನದಟ್ಟುಮಾಡುತ್ತಾನೆ.

ಹನ್ನೆರಡನೆಯ ಗೆಣಸು ತಿಂದನಂತರ ಇನ್ನು ಇಪ್ಪತ್ತೆಂಟು ದಿನಸಗಳಲ್ಲಿ ಹೊಸ ಗೆಣಸಿನ ಹಬ್ಬ ಜರುಗಲಿದೆ ಎಂದು ಎಸೂಲು ಪ್ರಕಟಿಸುತ್ತಾನೆ. ಅಂದು ರಾತ್ರಿ ಮತ್ತೆ ಅವನಿಗೆ ಭಯಾನಕ ಕನಸೊಂದು ಬೀಳುತ್ತದೆ. ಕನಸಿನಲ್ಲಿ ಶವಸಂಸ್ಕಾರಕ್ಕೆ ಹೊರಟ ಒಂದು ಗುಂಪು ತನ್ನ ಮನೆಯ ಆವರಣವನ್ನು ಅತಿಕ್ರಮವಾಗಿ ಪ್ರವೇಶಿಸಿ ಇಡೆಮಿಲಿಯ ಗಾನವನ್ನು ಹಾಡುತ್ತಿರುವಂತೆ ಎಸೂಲುಗೆ ಕೇಳಿಬರುತ್ತದೆ. ಅವರನ್ನು ಓಡಿಸಲು ಸಹಾಯಕ್ಕಾಗಿ ತನ್ನ ಗುಡಿಸಲುಗಳಿಗೆ ಹೋದಾಗ, ಅವೆಲ್ಲ ನಿರ್ಜನವಾಗಿ ಪಾಳು ಬಿದ್ದಿರುತ್ತದೆ. ಈ ಸಮಯದಲ್ಲಿ ಅತಿಯಾತನೆಯಲ್ಲಿರುವ ಒಂಟಿ ಹಾಡುಗಾರನ ಧ್ವನಿಯೊಂದು ಕೇಳಿಬರುತ್ತದೆ. ಇಡೆಮಿಲಿಯ ಬೆಂಬಲಿಗನ ಈ ಹಾಡು ಉಮುಆರೋನ ಎಲ್ಲ ದೇವರುಗಳ ಶತ್ರುವಿನ ಬರುವಿಕೆಯನ್ನು ಸಾರುತ್ತದೆ. ಈ ಶತ್ರುವೇ ಕ್ರೈಸ್ತ ಧರ್ಮ. ಆದರೆ ಊಲುವಿನ ಬಾಣವಾದ ಎಸೂಲು ತನ್ನ ದೇವರ ಪ್ರತಿದ್ವಂದ್ವಿ ಇಡೆಮಿಲಿಯ ಮಾತುಗಳಿಗೆ ಗಮನ ಕೊಡಲಾರ.

ಎಸೂಲುನ ಅತಿ ಮೆಚ್ಚಿನ ಮಗ ಒಬೀಕ ಜ್ವರದಿಂದ ಬಳಲಿದ್ದರೂ ಅವರ ಊರಿನ ಅಮಾಲುನ ಶವಸಂಸ್ಕಾರದ ಎರಡನೆಯ ವಿಧಿಯಲ್ಲಿ ರಾತ್ರಿ ಭೂತದ ಪಾತ್ರ ವಹಿಸಲು

ಒಪ್ಪುತ್ತಾನೆ. ಅವನು ಹಳ್ಳಿಯ ಸುತ್ತ ಓಡುತ್ತಿರುವಾಗ ಈ ಭೂತ ಅವನನ್ನು ಹಿಡಿದು ಒಬೀಕ ಬಿದ್ದು ಸಾಯುತ್ತಾನೆ. ಉಮುವಾರೋನ ವಿಷಯಗಳಿಗೆಯಲ್ಲಿ ನಡೆಯುವ ಈ ಘಟನೆಯನ್ನು ತನ್ನ ಮುಖ್ಯ ಪುರೋಹಿತನ ನಡತೆಗೆ ಊಲು ತೋರುವ ಅಸಮ್ಮತಿ ಎಂದು ಮಾತ್ರ ನಾವು ವಿವರಿಸಬಹುದು. ತಾನು ಊಲುವಿನ ಬಾಣವೆಂಬ ಸ್ವಾಭಿಮಾನಕ್ಕೆ ಬದ್ಧನಾದ ಎಸೂಲು ಒಬೀಕನ ಸಾವಿನಿಂದ ಎದೆಯೆಡೊದು ಏಕಾಂಗಿ ಆಗುತ್ತಾನೆ. ತಾನು ಊಲುವಿನ ಸಂಕಲ್ಪವನ್ನು ಚಾಚುತಪ್ಪದೆ ಪಾಲಿಸಿದರೂ, ಎಲ್ಲವನ್ನು ನಿಯಂತ್ರಿಸುವ ಊಲು ತನ್ನನ್ನು ಶಿಕ್ಷಿಸಿದ್ದಾನೆಂದು ಎಸೂಲುಗೆ ಮಂದಟ್ಟಾಗುತ್ತದೆ. ಇದು ಎಸೂಲುವಿಗೆ ಇಗ್ಬೊ ಜೀವನಕ್ರಮದ ಪತನವನ್ನು ಪ್ರತಿನಿಧಿಸುತ್ತದೆ; ಅಷ್ಟೆ ಅಲ್ಲದೆ, ತಾನು ತನ್ನ ಕುಲದವರೊಡನೆ ಸಂಬಂಧವನ್ನು ಕಡಿದುಕೊಂಡಿರುವುದರಿಂದ ಈ ಗಂಭೀರ ಪರಿಸ್ಥಿತಿಗೆ ಯಾವ ಪರಿಹಾರವೂ ಇಲ್ಲ ಎನ್ನುವುದು ಅವನಿಗೆ ಖಚಿತವಾಗುತ್ತದೆ. ಈ ರೀತಿ ಅವನ ಪ್ರಪಂಚ ಕುಸಿದುಬಿದ್ದಾಗ, ತಾನು ಎಲ್ಲವನ್ನು ಊಲುವಿನ ಆದೇಶದಂತೆ ನೆರವೇರಿಸಿದರೂ, ಕೊನೆಗೆ ಊಲು ತನಗೆ ದ್ರೋಹ ಬಗೆದಿದ್ದಾನೆಂದು ಭಾವಿಸಿ ಎಸೂಲು ಹುಚ್ಚನಾಗುತ್ತಾನೆ. ಅವನ ಈ ಹುಚ್ಚಿಗೆ ಅಚೀಬೆ ಮನೋವೈಜ್ಞಾನಿಕ ಮತ್ತು ಅಲೌಕಿಕ ವಿವರಣೆಗಳನ್ನು ನೀಡುತ್ತಾನೆ. ಅಂತಿಮವಾಗಿ ನೋಡಿದಾಗ, ಈ ಎರಡು ವಿವರಣೆಗಳು ಬೇರೆಯಲ್ಲ. ಏಕೆಂದರೆ ಮೊದಲಿನಿಂದ ಎಸೂಲು ಉಮುವಾರೋನ ಜನರ ಮೇಲೆ ನೇರ ಆಡಳಿತದಿಂದ ತನ್ನ ಅಧಿಕಾರವನ್ನು ಹೇರಲು ಬಯಸಿದ್ದ. ತನ್ನ ಅಧಿಕಾರದಲ್ಲಿ ಅವರನ್ನು ಭಾಗಿಯಾಗಲು ಬಿಡದೆ, ಮುಖ್ಯ ಪುರೋಹಿತನ ಸ್ಥಾನದಿಂದ ಕುಲಕ್ಕೆ ಇರುವ ತನ್ನ ಕರ್ತವ್ಯಗಳನ್ನು ಬೇರ್ಪಡಿಸಲು ಎಡೆಬಿಡದೆ ಪ್ರಯತ್ನಿಸಿದ್ದ. ಇದನ್ನು ಪೂರ್ಣವಾಗಿ ಸಾಧಿಸಲು ತನ್ನನ್ನು ಊಲುವಿನ ಬಾಣವೆಂದು ಪರಿಗಣಿಸುತ್ತಾನೆ. ಆದರೆ ಕುಲ ಮತ್ತು ದೇವರ ನಡುವಿನ ಸಂಕೀರ್ಣ ಸಂಬಂಧವನ್ನು ಈ ರೀತಿ ಸುಲಭರೂಪಕ್ಕೆ ತರುವ ಅವನ ಪ್ರಯತ್ನ ಸೋಲಿನಲ್ಲಿ ಕೊನೆಗೊಳ್ಳುವುದು ಸಹಜ. ಅವನ ಈ ಸಂಕುಚಿತ ಸ್ವಾರ್ಥ ಪ್ರಪಂಚ ಎಂದಿದ್ದರೂ ಭೇದಿಸಲ್ಪಡುವಂಥದ್ದು. ಅವನಿಗೆ ಹಿಡಿದ ಹುಚ್ಚಿನ ಕಾರಣದಿಂದ ತನ್ನ ಅಂತಿಮ ಸೋಲಿನ ಅರಿವು ಎಸೂಲುಗೆ ಬರುವುದಿಲ್ಲ. ಉಮುವಾರೋನ ಜನರು ಎಸೂಲುಗೆ ಊಲು ಕೊಡುವ ಈ ಶಿಕ್ಷೆ ತಮ್ಮ ಸಾಂಪ್ರದಾಯಿಕ ನಂಬಿಕೆಗಳಿಗೆ ಅನುಗುಣವಾಗಿದೆ ಎಂದು ಧೃಡವಾಗಿ ನಂಬುತ್ತಾರೆ. ಆದರೆ ಊಲು ತನ್ನ ಪುರೋಹಿತನನ್ನು ನಾಶಮಾಡಲು ಹೊರಟ ಈ ಗಳಿಗೆ ಪ್ರಶಸ್ತವಾದದಲ್ಲ. ಏಕೆಂದರೆ ಜನರು ಗೆಣಸನ್ನು ಕೀಳಲಾಗದೆ ಕಂಗಾಲಾಗಿದ್ದ ಸಮಯದಲ್ಲಿ ಬಿಳಿಯರು ಮಧ್ಯ ಪ್ರವೇಶಿಸಿ ಗೆಣಸನ್ನು ತಮ್ಮ ದೇವರಿಗೆ ಅರ್ಪಿಸಿ ಕೀಳುವ ಕೆಲಸ ಆರಂಭಿಸಬಹುದೆಂಬ ಪರಿಹಾರವನ್ನು ಇಗ್ಬೋ ಜನರಿಗೆ ನೀಡುತ್ತಾರೆ. ಹೊಸ ಗೆಣಸಿನ ಹಬ್ಬದ ಬದಲಾಗಿ, ತಮ್ಮ ಕುಯ್ಲು ಹಬ್ಬವನ್ನು ಆಚರಿಸಲು ಅವರನ್ನು ಪ್ರಚೋದಿಸುತ್ತಾರೆ. ಉಮುವಾರೋನ ಜನರು ಈ ಪ್ರಚೋದನೆಗೆ ಸಂತೋಷದಿಂದ ಒಳಗಾಗುತ್ತಾರೆ.

ಉಮುವಾರೋ ಹಿಂದೆ ಊಲುವನ್ನು ಸೃಷ್ಟಿಸಿದ್ದು, ಈಗ ಆ ದೇವತೆ ಅಸಮರ್ಥನಾದ್ದರಿಂದ, ಬಿಳಿಯರ ದೇವರು ಉಮುವಾರೋನ ಹೊಸ ರಕ್ಷಕನಾಗಿ ಉದಯಿಸುತ್ತಾನೆ. ಹಿಂದೆ ಎಸೂಲು ಕಂಡ ಭಯಾನಕ ಸ್ವಪ್ನದಲ್ಲಿನ ಊಲುವಿನ ಸಾವು ಈಗ ಸತ್ಯ

ವಾಗಿ ಪರಿಣಮಿಸುತ್ತದೆ. ಈ ಚಾರಿತ್ರಿಕ ಸಂದರ್ಭದಲ್ಲಿ ಎಸೂಲು ಆಹುತಿಯಾ
ಉಮುವಾರೋನ ಚರಿತ್ರೆಯು ಮುಂದಿನ ಹಂತ ಆರಂಭವಾಗುತ್ತದೆ. ಚಿನುವ ಅಚೀಬ
ಯನ್ನು ಅತ್ಯಂತ ಸಮಂಜಸವಾಗಿ ಆಫ್ರಿಕದ ಚರಿತ್ರಕಾರನೆಂದು ಕರೆಯಲಾಗಿದೆ. ಅವನ
ಆಫ್ರಿಕ ಸಮಾಜ ಶಿಥಿಲವಾಗುವುದನ್ನು ತೋರಿಸುವುದರೊಂದಿಗೆ, ಆ ಸಮಾಜದ
ಸ್ವರೂಪದಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಚಿತ್ರಿಸಿದ್ದಾನೆ. ಇಂಥ ಸಂದಿಗ್ಧ
ಪರಿಸ್ಥಿತಿಯ ಸಮಯದಲ್ಲಿ ಆದ ಆಫ್ರಿಕ ಸಮಾಜದ ಚಾರಿತ್ರಿಕ ವಿಕಾಸ ಮತ್ತು ಅ
ಗತಿಯಲ್ಲಿ ಉದ್ಭವಿಸುವ ಅನಿವಾರ್ಯ ಬಿಕ್ಕಟ್ಟುಗಳನ್ನು ಆ ಸಂಸ್ಕೃತಿಯ ಒಳಗಿದ್ದುಕೊಂಡು
ಅಚೀಬೆ ಸಂಕೀರ್ಣವಾಗಿ ವಿಶ್ಲೇಷಿಸಿದ್ದಾನೆ. 'ಏರೋ ಆಫ್ ಗಾಡ್' ಅಚೀಬೆಯ
ಇತರ ಮೂರು ಕಾದಂಬರಿಗಳಂತೆ ಆಫ್ರಿಕದ ಆಗುವಿಕೆಯ ನಿಕಟವಾದ ಸಂದರ್ಭವನ್ನು
ನಿರೂಪಿಸುತ್ತದೆ.

ತಾಳ್ಮೆ ಒಂದು ಇದ್ದರೆ ಪರ್ವತವನ್ನೂ ದಾಟಬಹುದು.

ನಮ್ರತೆಯು ಅಹಿಂಸೆಯ ಒಂದು ಭಾಗ.

ಶೀಲ ಪ್ರಗತಿಗೆ ಮೂಲ, ಸಂಪತ್ತಿಗೆ ತಳಹದಿ, ಆನಂದ ಶಾಂತಿಗಳಿಗೆ ರಾಜಮಾರ್ಗ.

ಗಾಂಧೀಜಿ

ಎ ಮ್ಯಾನ್ ಆಫ್ ದಿ ಪೀಪಲ್

ಡಾ|| ಕೃಷ್ಣಮೂರ್ತಿ ಚಂದರ್

ಚಿನುವ ಅಚೇಬೆ ತನ್ನ ನಾಲ್ಕನೇ ಕಾದಂಬರಿ ಎ ಮ್ಯಾನ್ ಆಫ್ ದಿ ಪೀಪಲ್‌ನಲ್ಲಿ ಆಫ್ರಿಕಾದ ಸಮಕಾಲೀನ, ಅಂದರೆ ೧೯೬೦ರ ಈಚೀನ ಸಾಂಸ್ಕೃತಿಕ, ಸಾಮಾಜಿಕ ಹಾಗೂ ರಾಜಕೀಯ ಪರಿಸ್ಥಿತಿಯ ಕಟು ಟೀಕೆಯನ್ನು ಮಾಡುತ್ತಾನೆ. ಪ್ರಾಯಶಃ ಆತನ ಕಾದಂಬರಿಗಳಲ್ಲಿ ಇದೇ ಅತಿಹೆಚ್ಚು ನೇರವಾದ ಟೀಕೆಯನ್ನು ಮಾಡುವಂತಹದ್ದು ಎಂದು ತೋರುತ್ತದೆ. ಆತನ ಮಿಕ್ಕ ಕಾದಂಬರಿಗಳೂ ಗತ ಹಾಗೂ ವರ್ತಮಾನ ಸಮಾಜದ ಮೌಲ್ಯಗಳ ತುಲನೆಯನ್ನು ಮಾಡುವುದರ ಉದ್ದೇಶವನ್ನು ಹೊಂದಿದ್ದರೂ ಕೂಡ ಈ ಕಾದಂಬರಿಯಲ್ಲಿರುವಷ್ಟು ವ್ಯಂಗ್ಯ, ಅತ್ಯಂತ ನಿಷ್ಠುರ ಟೀಕೆ ಬೇರೆ ಯಾವುದರಲ್ಲೂ ಇಷ್ಟು ನೇರವಾಗಿ ಕಾಣಬರುವುದಿಲ್ಲ ಎಂದು ಅನಿಸುತ್ತದೆ. ಇಷ್ಟು ನಿಷ್ಠುರ ಟೀಕೆ ಬೇರಾವ ಆಫ್ರಿಕಾದ ಕಾದಂಬರಿಕಾರನೂ ಮಾಡಿಲ್ಲವೆಂಬುದರಲ್ಲಿ ಹೆಚ್ಚು ಪಾಲು ಸತ್ಯವಿದೆ. ಪ್ರಾಯಶಃ ಸ್ವಾತಂತ್ರ್ಯೋತ್ತರ ನೈಜೀರಿಯಾದ ರಾಜಕೀಯ ವ್ಯವಸ್ಥೆ—ಆ ವ್ಯವಸ್ಥೆಯ ಕಟ್ಟುವಿಕೆಯಲ್ಲಿ ಎಲ್ಲರ ಪಾಲೂ ಇದ್ದುದರಿಂದ—ಹಾಗೂ ಅದರ ಕಾರ್ಯಾಚರಣೆಯ ಭ್ರಮನಿರಸನವೇ ಇದಕ್ಕೆ ಕಾರಣವಿರಬೇಕು. ಆಫ್ರಿಕಾದ ಬರಹಗಾರರಲ್ಲಿ ಚಿನುವ ಅಚೇಬೆ ಬಾರಿಬಾರಿ ತನ್ನ ಓದುಗರೊಡನೆ, ಅದರಲ್ಲೂ ಆಫ್ರಿಕಾದ ಓದುಗರೊಡನೆ, ಅವರ ಗತಚರಿತ್ರೆ ಒಂದು ಕರಾಳ ರಾತ್ರಿಯಲ್ಲ ಎಂಬುದನ್ನು ಅರಿವು ಮಾಡಿಕೊಡುವುದೇ ಆಗಿದೆ ಎಂದು ಹೇಳುವುದರ ಸಂದರ್ಭದಲ್ಲಿ, ಸಮಕಾಲೀನ ಸಮಾಜ ಇಷ್ಟು ಮಟ್ಟಿಗೆ ಭ್ರಷ್ಟತೆಯಲ್ಲಿ ಮುಳುಗಿಹೋಗುವುದನ್ನು ಕಾಣುವುದು ಭ್ರಮನಿರಸವಾಗಿಯೇ. ಅದೇ ಕಾರಣಕ್ಕಾಗಿಯೇ ಅಚೇಬೆಯ ಲೇಖನಿ ಈ ಕಾದಂಬರಿಯಲ್ಲಿ ಸಮಕಾಲೀನ ರಾಜಕೀಯ ಹಾಗೂ ಅದರಿಂದಲೇ ಉಂಟಾದ ನೈತಿಕ ಪರಿಸ್ಥಿತಿಯ ಬಗ್ಗೆ ಅಷ್ಟು ವಿಷ ಕಾರುವುದು. ಇದೇ ಸಂದರ್ಭದಲ್ಲಿ, ಆತನ ಮೊದಲ ಕಾದಂಬರಿ

ಥಿಂಗ್ಸ್ ಫಾಲ್ ಅಪಾರ್ಟ್‌ನಲ್ಲಿ ಕಾಣಬರುವ ಅಚೇಬೆಯ ಮುನ್ನೋಲವುಗಳು ಆತನ ನಾಲ್ಕನೆಯ ಕಾದಂಬರಿ ಎ ಮ್ಯಾನ್ ಆಫ್ ದಿ ಪೀಪಲ್‌ನಲ್ಲಿ ಪೂರ್ಣಗೊಳ್ಳುತ್ತದೆ. ಆದರೆ ಈ ಎಲ್ಲ ಕಾದಂಬರಿಗಳಲ್ಲೂ ಕಂಡುಬರುವ ಮೂಲ ಎಳೆ ಒಂದೇ, ಅದು ಒಂದು ಸಂಸ್ಕೃತಿಯ ಅವನತಿ–ಪತನ. ಎ ಮ್ಯಾನ್ ಆಫ್ ದಿ ಪೀಪಲ್‌ನಲ್ಲಿ ಈ ವ್ಯಂಗ್ಯ ಅತಿ ತೀಕ್ಷ್ಣವಾಗಿರುವುದು ಪ್ರಾಯಶಃ ಈ ಕಾರಣಕ್ಕಾಗಿ: ಸ್ವಾತಂತ್ರ್ಯಪೂರ್ವ ನೈಜೀರಿಯಾದಲ್ಲಿನ ಒಳ ಬಿಕ್ಕಟ್ಟುಗಳಿಗೆ ಪ್ರಾಯಶಃ ಬ್ರಿಟೀಷರ ಆಡಳಿತವನ್ನು, ಒಂದು ಮಟ್ಟದಲ್ಲಾದರೂ ಜವಾಬ್ದಾರಿಯುತವನ್ನಾಗಿ ಮಾಡಬಹುದಿತ್ತು. ಆದರೆ ಸ್ವಾತಂತ್ರ್ಯೋತ್ತರ ನೈಜೀರಿಯಾದಲ್ಲಿನ ಬಹುತೇಕ ನ್ಯೂನತೆಗಳಿಗೆ, ಆ ಜನರೇ ಜವಾಬ್ದಾರರಾದ್ದರಿಂದ ಅಚೇಬೆಯ ಬರವಣಿಗೆ ಹೆಚ್ಚು ಖಾರವಾಗಿದೆ. ಹಾಗೆಂದ ಪಕ್ಷದಲ್ಲಿ ಅಚೇಬೆ ಐರೋಪ್ಯ ಆಡಳಿತ ಬರುವ ಮುಂಚೆ ಇದ್ದವೆಲ್ಲ ಅತ್ಯಂತ ಮನೋಹರವೆಂದೇನೂ ನುಡಿಯುವುದಿಲ್ಲ—ಆವಾಗಲೂ, ಆ ಸಮಾಜದಲ್ಲೂ ನ್ಯೂನತೆಗಳು ಬಹುತೇಕ ಇದ್ದವು. ಆದರೆ, ಅದರ ಜೊತೆಗೆ ಗಣನೀಯವಾದ ಅತ್ಯಂತ ಸುಂದರವಾದ ಅಂಶಗಳೂ ಇದ್ದವು. ಸಮಕಾಲೀನ ಸಾಮಾಜಿಕ ಪರಿಸ್ಥಿತಿಯಲ್ಲಿ ಆಫ್ರಿಕನ್ನರು ಹಾಗೂ ಬೇರೆಬೇರೆ ಸಾಂಸ್ಕೃತಿಕ ಹಿನ್ನೆಲೆಯ ಓದುಗರು ಈ ವಿಷಯಗಳನ್ನು ಪರಿಗಣನೆಗೆ ತೆಗೆದುಕೊಳ್ಳ ತಕ್ಕದ್ದು ಎಂದು ಅಚೇಬೆ ನುಡಿಯುತ್ತಾನೆ. ಆದರೆ ಅಂತಹ ಅವಗಾಹನೆಯ ಅವಶ್ಯಕತೆ ಏನು ಎನ್ನುವ ಪ್ರಶ್ನೆಗೆ. ಏಕೆಂದರೆ ಈ ರೀತಿಯ ಪರಿಸ್ಥಿತಿ ಮರುಕಳಿಸದಿರಲಿ ಎಂಬುದಕ್ಕೇ ಎಂದು ನುಡಿಯುತ್ತಿರುವಂತೆ ಕಾಣುತ್ತದೆ; ಹಾಗಾಗಿ ಆಫ್ರಿಕಾದ ಲೇಖಕ, ಅಧ್ಯಾಪಕ, ಚರಿತ್ರಕಾರ, ಸಾಮಾಜಿಕ ಶಾಸ್ತ್ರಜ್ಞ ಮಾನವೀಯ ಶಾಸ್ತ್ರಜ್ಞ ಇತ್ಯಾದಿ ಅನೇಕಾನೇಕ ಪಾತ್ರಗಳನ್ನು ನಿಭಾಯಿಸುತ್ತಿರುತ್ತಾನೆ, ತನ್ನ ಬರವಣಿಗೆಯ ಮೂಲಕ.

ಚಾರಿತ್ರಿಕವಾಗಿ ಎ ಮ್ಯಾನ್ ಆಫ್ ದಿ ಪೀಪಲ್ ಕಾದಂಬರಿಯ ಸಮಯ ನೈಜೀರಿಯಾದ ೧೯೬೪ಳನೇ ಇಸವಿ, ಈ ಕಾದಂಬರಿಯ ಕೇಂದ್ರವ್ಯಕ್ತಿ, ಒಂದು ರೀತಿಯಲ್ಲಿ ಕಥಾನಾಯಕ, ಶ್ರೀಯುತ ಎಂ. ಎ. ನಾಂಗರವರು. ಕಾದಂಬರಿಯ ಮೊದಲ ಪುಟಗಳಲ್ಲೇ ಈ ಶ್ರೀ ಎಂ. ಎ. ನಾಂಗರವರ ಪರಿಚಯ ನಮಗೆ ಸಿಗುತ್ತದೆ. ಕಾದಂಬರಿಕಾರನ ತಿಳಿಹಾಸ್ಯ ಹಾಗೂ ವ್ಯಂಗ್ಯಭರಿತ ಚಿತ್ರಣವಾದ ನಾಂಗ ಓದುಗರಿಗೆ ಒಳ್ಳೆಯವನಂತೆಯೇ ಕಾಣಿಸಿಕೊಳ್ಳುತ್ತಾನೆ. ಆತನ ಹಳ್ಳಿಯಾದ ಅನಾತ ಗ್ರಾಮದ ಶಾಲೆಯಲ್ಲಿನ ಉತ್ಸವವೊಂದರಲ್ಲಿ ನಾಂಗ ಮುಖ್ಯ ಅತಿಥಿಯಾಗಿ ಬರುತ್ತಾನೆ, ಅಲ್ಲಿ ಹಳ್ಳಿಯ ಇಡೀ ಜನಸ್ತೋಮ ನೆರೆದಿರುತ್ತದೆ. ಕಾದಂಬರಿಯ ನಿರೂಪಕನಾದ ಒಡಿಲಿ ಸಮಾಲು, ಯುವಕ, ಬಿಸಿ ರಕ್ತದ ತರುಣ. ಆತನಿಗೆ ಈ ಜನಸ್ತೋಮದ ಬಗ್ಗೆ ತಿರಸ್ಕಾರ, ಕರುಣೆ. ಹಣದುಬ್ಬರಕ್ಕೆ ಕಾರಣವಾದ ಈ ರಾಜಕಾರಣಿಗಳ ಬಗೆಗಿನ ಹಪೋರ್ಗಿದ್ದಾರ ಒಡಿಲಿಯನ್ನು ರೊಚ್ಚಿಗೆಬ್ಬಿಸುತ್ತದೆ, ಆತ ಇವೇ ನಾಂಗ ಹಿಂದೆ, ರಾಜಕಾರಣಕ್ಕೆ ಇಳಿಯುವ ಮೊದಲು, ಶಾಲೆಯಲ್ಲಿ ಮಾಸ್ತರಾಗಿದ್ದುದನ್ನೂ, ಆತನಿಗೆ ತಾನು, ಒಡಿಲಿ ಬಹಳ ಪ್ರಿಯವಾದ ವಿದ್ಯಾರ್ಥಿಯಾಗಿದ್ದುದನ್ನು ನೆನಪಿಸಿಕೊಳ್ಳುತ್ತಾನೆ. ಒಡಿಲಿ, ನಾಂಗ ರಾಜಕೀಯಕ್ಕೆ ಇಳಿದುದರ ವಿವರ ನೀಡುತ್ತಾನೆ, ೧೯೬೦ರಲ್ಲಿ ದೇಶ ಆರ್ಥಿಕ ದುಸ್ಥಿತಿಯನ್ನು ಎದುರಿಸಿದಾಗ, ನಾಂಗ ಪ್ರಧಾನಮಂತ್ರಿಯ

ಹದಿನೈದು ಮಿಲಿಯನ್ ಪೌಂಡ್ ನೋಟುಗಳನ್ನು ಮುದ್ರಿಸುವ ಯೋಜನೆಯನ್ನು ಬೆಂಬಲಿಸಿ ಆತನ ಆದರ ಸಂಪಾದಿಸುತ್ತಾನೆ. ಈ ಹಣದುಬ್ಬರ ಕಾಫಿಬೆಳೆಯ ಬೆಲೆಯ ಇಳಿತದಿಂದಾದ್ದರಿಂದ ಅದರ ಬಗ್ಗೆ ಯಾವುದೇ ರೀತಿಯ ರಚನಾತ್ಮಕ ಕಾರ್ಯಕ್ರಮ ಗಳಲ್ಲಿ ಕೈತೊಡಗಿಸುವುದಿಲ್ಲ. ಹೀಗಾಗಿ ನಾಂಗನ ಬಗ್ಗೆ ನಿರೂಪಕ ತನ್ನ ಅನಿಸಿಕೆಗಳನ್ನು ಓದುಗರಿಗೆ ತೆರೆದೇ ಇಡುತ್ತಾನೆ.

> ಈ ಅವಮಾನದ ಪ್ರಸಂಗವನ್ನು ಇಷ್ಟು ವಿವರವಾಗಿ ಹೇಳಬೇಕಾದದ್ದು ಏಕೆಂದರೆ ಖಾಲಿಯಾಗಿದ್ದ ಮಂತ್ರಿಪದವಿಯನ್ನು ಕಂಡು ಅದಕ್ಕಾಗಿ ನಾಚಿಕೆಯಿಲ್ಲದೆ ಕೂಗಾಡಿ, ಕಿರುಚಾಡಿದ್ದ ಗೌರವಾನ್ವಿತ ಚೀಫ್ ಶ್ರೀಯುತ ಎಂ. ಎ. ನಾಂಗರವರ ಬಗ್ಗೆ ನಾನೇನೂ ಉತ್ಸಾಹಿತನಾಗ ಬೇಕಾದ ಕಾರಣವೇನೂ ಇರಲಿಲ್ಲ.

ಶಾಲೆಯ ಉಪಾಧ್ಯಾಯರು ಹಾಗೂ ವಿದ್ಯಾರ್ಥಿಗಳು ಚೀಫ್ ನಾಂಗನಿಗೆ ಕೊಡುವ ಗಾರ್ಡ್ ಆಫ್ ಆನರ್—ಗೌರವ ಕಾದಂಬರಿಕಾರನಿಗೆ ಈ ಜನಗಳ, ಶೈಕ್ಷಣಿಕ ವ್ಯವಸ್ಥೆ ಯನ್ನು ಗೇಲಿಮಾಡಲು ಮತ್ತೊಂದು ಅವಕಾಶವನ್ನೀಯುತ್ತದೆ. ಒಬ್ಬರ ಬದಿಯಲ್ಲಿ ಮತ್ತೊಬ್ಬರು ನಿಲ್ಲುವುದನ್ನು ನಿರೂಪಕ ಬಹಳವಾಗಿ ವಿರೋಧಿಸಿದರೂ ಆತನಿಗೆ ಬೆಂಬಲ ವಾಗಿ ಯಾರೂ ನುಡಿಯುವುದಿಲ್ಲ. ಏಕೆಂದರೆ "ಅಲ್ಲಿದ್ದ ಉಪಾಧ್ಯಾಯರು ಕುತ್ತಿಗೆಯ ಮೇಲೆ ಸತ್ತೇಹೋಗಿದ್ದರು" (ಪುಟ ೯), ಆತನ ಮಿತ್ರ ಆಂಡ್ರ್ಯೂ, ಕಡೀಬೆ, ಚೀಫ್ ನಾಂಗ ತನ್ನ ಹಳ್ಳಿಯವ ಎಂಬ ಕ್ಷುಲ್ಲಕ ಕಾರಣದಿಂದಾಗಿ ಒಡಿಲಿಯನ್ನು ಬೆಂಬಲಿಸು ವುದಿಲ್ಲ! ಆದರೆ ನಿರೂಪಕನ ದೃಷ್ಟಿಕೋನ ಹಾಗೂ ಕಾದಂಬರಿಕಾರನ ದೃಷ್ಟಿಕೋನ ಎರಡೂ ಒಂದೇ ಅಲ್ಲ. ನಿರೂಪಕನಾದ ಒಡಿಲಿಯ ವರ್ತನೆಗಳನ್ನು, ಮೌಲ್ಯಗಳನ್ನು ಕಾದಂಬರಿಕಾರ ಬಹಳ ಸೂಕ್ಷ್ಮವಾಗಿ ಟೀಕಿಸುತ್ತಾನೆ ಕೂಡ.

ಚೀಫ್ ನಾಂಗನ ಭಾಷಣ ಬರೀ ಪೊಳ್ಳು ಪೊಳ್ಳಾಗಿದ್ದರೂ ಸಾಕಷ್ಟು ಕರತಾಡನ ಗಿಟ್ಟಿಸುತ್ತದೆ, ಜತೆಗೇ ಆತನ ಹುಸಿ ಸೇವಾಮನೋಭಾವದ ಮಾತುಗಳೂ ಕೂಡ, ಒಡಿಲಿಯನ್ನು ಉದ್ದೇಶಿಸಿ ಆತ ನುಡಿಯುತ್ತಾನೆ "ನಿನಗೆ ಮಂತ್ರಿ ಎಂದರೆ ಗೊತ್ತಿಲ್ಲವೇ? ಸೇವಕ ಎಂದರ್ಥ. ಎಷ್ಟೇ ಕೆಲಸವಿರಲಿ, ಇಲ್ಲದಿರಲಿ, ಆತ ತನ್ನ ಯಜಮಾನನನ್ನು ಕಾಣಲೇಬೇಕು" ಎಂದು ಎಲ್ಲರಿಗೂ ಕೇಳುವಂತೆ ಹೇಳಿ ಚಪ್ಪಾಳೆ ಗಿಟ್ಟಿಸುತ್ತಾನೆ.

ಆ ಸಮಾರಂಭದಲ್ಲಿ ಒಡಿಲಿ ಪಮಾಲು ಆಕರ್ಷಿತನಾಗುವುದು ಚೀಫ್ ನಾಂಗನ ಸ್ನೇಹಿತೆಯಿಂದ. ನಾಂಗ ಆಕೆಯನ್ನು ಯಾರಿಗೂ ಪರಿಚಯಿಸದೇ ಕಾಯ್ದುಕೊಂಡಿರು ತ್ತಾನೆ. ತನ್ನ ಮೊದಲ ಹೆಂಡತಿ ಬಹಳ ಕಾಡುಮೇಡಿನವಳಾದ್ದರಿಂದ ಈಕೆಯನ್ನು ಮದುವೆಯಾಗಬಯಸಿದ್ದಾನೆಂದು, ಏಕೆಂದರೆ ಆತ ಏರ್ಪಡಿಸುವ ಪಾರ್ಟಿಗಳಲ್ಲಿ ಹೋಸ್ಟೆಸ್ ಆಗಲು ಆತನ ಸ್ಥಾನಮಾನಕ್ಕೆ ತಕ್ಕಾಗಿರುವ ಹೊಚ್ಚಹೊಸ ಮಿಂಚಿನ ಹೆಂಡತಿ ಬೇಕೆಂದು ಚೀಫ್ ನಾಂಗ ಬಯಸಿದ್ದಾನೆಂದೂ ತಿಳಿದುಬರುತ್ತದೆ.

ಬಹಳಷ್ಟು ಮಟ್ಟಿಗೆ ಆತನ ಬಗ್ಗೆ ತಿರಸ್ಕಾರವಿದ್ದರೂ ವಿದೇಶಕ್ಕೆ ಹೋಗಲು ಬೇಕಾದ ಸ್ಕಾಲರ್‌ಶಿಪ್ ಆಸೆಗಾಗಿ ಚೀಫ್ ನಾಂಗನ ಮನೆಗೆ ಒಡಿಲಿ ಹೋಗುವುದು

ವಿಪರ್ಯಾಸದ ಸಂಗತಿ. ಆತನ ಮನೆಯಲ್ಲಿ ಮೂರು ರೀತಿಯ ಭಾಷಾ ಪ್ರಯೋಗಗಳನ್ನು ಒಡಿಲಿ ಕಾಣುತ್ತಾನೆ, ಚೀಫ್ ನಾಂಗನ ಇಂಗ್ಲಿಷ್ ಹಾಗೂ ಪಿಜಿನ್ ಆತನ ಐರೋಪ್ಯ ಉಪಾಧ್ಯಾಯರಿಂದ ಇಂಗ್ಲಿಷ್ ಕಲಿತು ಅತ್ಯಂತ ಸುಸಂಸ್ಕೃತವಾಗಿ ಮಾತನಾಡಬಲ್ಲ ಆತನ ಮಕ್ಕಳ ಇಂಗ್ಲಿಷು, ಹಾಗೂ ಆತನ 'ಬುಷ್' ಹೆಂಡತಿ ಮಾತನಾಡುತ್ತಿದ್ದ 'ಇಗ್‌ಬೊ' ಭಾಷೆ—ಆಕೆಗೆ ಇಗ್‌ಬೊ ಬಿಟ್ಟರೆ ಬೇರೆ ಯಾವ ಭಾಷೆಯೂ ಬರುವುದಿಲ್ಲ.

ಆ ಭವ್ಯವಾದ ಮಂತ್ರಿಯ ಬಂಗಲೆಯಲ್ಲಿದ್ದುಕೊಂಡೇ ಒಡಿಲಿ, ತನ್ನ ದೇಶದಲ್ಲಿನ ಸಮಾಜದ ವಿಭಿನ್ನತೆಯ ಬಗ್ಗೆ ಚಿಂತಿಸುತ್ತಾನೆ. ಇದೇ ರೀತಿಯಲ್ಲಿ ಆತನ ಮನಸ್ಸು ಒಂದಾದಮೇಲೊಂದರಂತೆ ಚೀಫ್ ನಾಂಗನ ನಿಜವಾದ ವ್ಯಕ್ತಿತ್ವದ ಮುಖವನ್ನು ಕಾಣತೊಡಗುತ್ತದೆ. ಚೀಫ್ ನಾಂಗನ ಉಮುಹಳ್ಳಿಯ ಮಧ್ಯಸಾಗುವ ಹೆದ್ದಾರಿಯ ಆರ್ಡರಿನ ನಿಜವಾದ ಮುಖ ಹಾಗೆಯೇ ದೊರಕುವುದು ಅದಕ್ಕೆ ಕಾರಣ ಎರಡು—ಒಂದು, ಇನ್ನೇನು ಬರಲಿರುವ ಚುನಾವಣೆಯಾದರೊ ಎರಡನೇಯದು ಆ ರಸ್ತೆಯಲ್ಲಿ ತಾನು ಇತ್ತೀಚೆಗೆ ಕೊಂಡಿರುವ ಹತ್ತು ಲಗ್ಸುರಿ ಬಸ್ಸುಗಳ ಚಲನವಲನೆಯ ಆಸಕ್ತಿ ಈ ರಸ್ತೆಯ ಅಸಾಧ್ಯತೆಯ ಬಗೆಗಿನ ನಿಪುಣರ ಅನಿಸಿಕೆಯ ಬಗೆಗಿನ ನಾಂಗನ ತಿರಸ್ಕಾರ ಆತನ ಇನ್ನೊಂದು ಮುಖವನ್ನು ತೋರುತ್ತದೆ.

ಈ ಕಾದಂಬರಿಯಲ್ಲಿ ಕಾಣಸಿಗುವ ಮತ್ತೊಂದು ವಸ್ತು ಇನ್ನೂ ಸಾಗುತ್ತಿರುವ ಕಪ್ಪುಜನರ ಮೇಲಿನ ಬಿಳಿಯರ ದಬ್ಬಾಳಿಕೆ ಹಾಗೂ ಕಪ್ಪುಜನರ ಒಲವು ಕೂಡ ಅಚೇಬೆ ಈ ವಸ್ತುವನ್ನು ಆತನ **ನೋ ಲಾಂಗರ್ ಅಟ್ ಈಸ್** ನಲ್ಲಿ ಹಾಗೂ ಈ ಕಾದಂಬರಿಯಲ್ಲಿ ವಿಶ್ಲೇಷಿಸುತ್ತಾನೆ. ಚೀಫ್ ನಾಂಗನನ್ನು ಜೀನ್ ಎಂಬ ಬಿಳಿಯ ಹೆಣ್ಣು 'ಮಿಕಾ' ಎಂದೂ, ಆತನ ಹೆಂಡತಿಯನ್ನು, ಮಾರ್ಗರೆಟ್ ಎಂದೂ ಅತ್ಯಂತ ಸಲಗೆಯಿಂದ ಸಾಧಿಸುವುದನ್ನು ಪ್ರತಿಭಟಿಸದೆ ಒಪ್ಪಿಕೊಳ್ಳುತ್ತಾನೆ. ನಿರೂಪಕ ಅತ್ಯಂತ ಕಹಿಯಾಗಿ ಹೇಳುವುದು ಇದು "ನಾವು ಬಿಳಿಯ ತೊಗಲಿನವರಿಂದ ಒಪ್ಪಿಕೊಂಡು ಬಂದಿರುವುದನ್ನು ಪ್ರಾಯಶಃ ಇಡೀ ಜಗತ್ತಿನಲ್ಲಾರೂ ನಮ್ಮವರೇ ಆದ ಜನರಿಂದಲೂ ಒಪ್ಪುವುದಿಲ್ಲ" ಎನ್ನುತ್ತಾನೆ. ಇದರ ವ್ಯಂಗ್ಯದ ಪರಮಾವಧಿ ಏನೆಂದರೆ ಆ ಹೆಂಗಸು ಜೀನ್ ಅಮೆರಿಕಾದಲ್ಲಿ ಆಫ್ರಿಕಾದ ಬಗೆಗಿನ ಕಲ್ಪನೆಯನ್ನು ಹೇಗೆ ಸುಧಾರಿಸಬಹುದು ಎಂಬುದರ ಬಗ್ಗೆ ತಿಳುವಳಿಕೆ ನೀಡಲು ಬಂದಿರುವ ಎಕ್ಸ್‌ಪರ್ಟ್‌ನ ಹೆಂಡತಿ! ಇದರ ಇನ್ನೊಂದು ಆಯಾಮವನ್ನು ಒಡಿಲಿಯ ಜೊತೆ ಶೀಘ್ರದಲ್ಲಿ ಆಕೆ ಲೈಂಗಿಕ ಸಂಪರ್ಕವನ್ನು ಇಟ್ಟುಕೊಳ್ಳುವುದು ತಂದುಕೊಡುತ್ತದೆ; ಆಕೆಯ ಉತ್ಕಟ 'ಕಪ್ಪು' ಪ್ರೇಮ ಆಳವಾದದ್ದಲ್ಲ, ನಿಜವಾದುದ್ದಲ್ಲ ಎಂದು ಬೇಗನೆ ಒಡಿಲಿ ಕಂಡುಕೊಳ್ಳುತ್ತಾನೆ.

ಈ ಸಂದರ್ಭದಲ್ಲಿ ಕಾದಂಬರಿಯನ್ನು ಒಡಿಲಿ ರಾಜಕೀಯರಂಗಕ್ಕೆ ಪ್ರವೇಶಿಸುವ ಮುಖ್ಯ ಕಾರಣ, ಆತನ ಹೆಣ್ಣು 'ಎಲ್‌ಸೀ' ಪ್ರವೇಶಿಸುತ್ತಾಳೆ. ಚೀಫ್ ನಾಂಗ ಆಕೆಯ ಜೀವನವನ್ನು ಪ್ರವೇಶಿಸಿ, ಆಕೆಯ ಜೊತೆಯೂ ಮಲಗುತ್ತಾನೆ, ಇದು ಒಡಿಲಿಯ ಹೃದಯವನ್ನು ಆಳವಾಗಿ ಕೆಣಕಿ, ಆತನನ್ನು ಭ್ರಮನಿರಸನಗೊಳಿಸುತ್ತದೆ. ಕೋಪಗೊಂಡ ಒಡಿಲಿಯ ಆರೋಪ, ಆಕ್ಷೇಪಗಳನ್ನು ಚೀಫ್ ನಾಂಗ ಶಾಂತವಾಗಿ ಎದುರಿಸಿ ತಾನು

ಎಸಗಿದ ಕಾರ್ಯಗಳಲ್ಲಿ ಯಾವ ತಪ್ಪೂ ಇಲ್ಲವೆಂದು ಪ್ರತಿವಾದಿಸುತ್ತಾನೆ, ರೋಷಾವಕ್ತ ಒಡಿಲಿ ಆತನ ಮನೆಯಿಂದ ಹೊರಬೀಳುತ್ತಾನೆ.

ಕಾದಂಬರಿಯು ಈ ಘಟನೆಯ ನಂತರ ಪೂರ್ಣವಾಗಿ ಸಾಮಾಜಿಕ ಹಾಗೂ ನೈತಿಕ ನೆಲೆಗಳ ವಿಶ್ಲೇಷಣೆಯಿಂದ ಕಾದಂಬರಿ ರಾಜಕೀಯ ವಿಶ್ಲೇಷಣೆಯತ್ತ ಹೆಚ್ಚು ಗಮನ ಹರಿಸುತ್ತದೆ. ಒಡಿಲಿ ಆತನ ಶಾಲಾಮಿತ್ರ ಮ್ಯಾಕ್ಸ್‌ವೆಲ್‌ನ ಮನೆಗೆ ತೆರಳುತ್ತಾನೆ. ಅಲ್ಲಿ ಸೇರುವ ಮಿತ್ರಕೂಟದಲ್ಲಿ ಚೀಫ್ ನಾಂಗನ ಈ ವ್ಯಕ್ತಿತ್ವದ ಬಗ್ಗೆ ಎಲ್ಲರೂ ತಿಳಿದಿರುವುದು ಹೊರಬರುತ್ತದೆ :

> "ಹಾಗಾದರೆ ಅದು ಚೀಫ್ ನಾಂಗನ, ಹೌದಾ" ಅಂದ ಯೂರೋಪಿನವ ಮತ್ತು ಪ್ರತಿಯೊಬ್ಬರೂ ನಗಲು ಪ್ರಾರಂಭಿಸಿದರು. "ಮತ್ತಾರು ಆಗಿರಲಿಕ್ಕೆ ಸಾಧ್ಯ ?" ಅಂದರು ಮತ್ತಾರೋ. (ಪುಟ ೭೭)

ಈ ಹೊಸ ರಾಜಕೀಯ ಪಕ್ಷದಲ್ಲಿ ಹಾಗೂ ಅದರ ಉದ್ದೇಶಗಳಲ್ಲಿ—

ಒಡಿಲಿಯ ಪಾತ್ರ ಎಲ್‌ಸೀಯ ಹಾಗೂ ಚೀಫ್ ನಾಂಗರಿಂದ ಪ್ರೇರಿತವಾದುದ್ದಾದರೆ ಕಿಸಿಮಿ ಕುಮಾರನ ಪಾತ್ರ ಆತನ ಬಿಳಿಪು ಹೆಣ್ಣು ಲೋರೆಟ್ಟ ಹೆಬ್ಬೆಯೊಡನಿನ ಪ್ರೇಮ, ಆಕೆಯ ಬಿಳಿಯ ಮಿತ್ರ ಫೆಡರಿಕ್ ಹರ್‌ಟೋಗ್‌ನ ವರ್ಣೀಯ ದ್ವೇಷ ಹಾಗೂ ಅದರಿಂದಲೇ ಆತ ಎಸಗುವ ಆಕೆಯ ಕೊಲೆಯಿಂದ ಪ್ರಚೋದಿತವಾಗಿರುತ್ತದೆ, ಪ್ರಾಯಶಃ ಅಚೇಬೆ ಹೊಸ ರಾಜಕೀಯ ರೀತಿ ರಿವಾಜುಗಳಿಗೆ, ಧ್ಯೇಯೋದ್ದೇಶಗಳಿಗೆ, ವೈಯುಕ್ತಿಕವಾದ ದ್ವೇಷ, ಅಸೂಯೆ ಅಥವಾ ಇನ್ಯಾವುದೇ ಆದ ಕಾರಣಗಳು ಸಕ್ರಿಯವಾದ ಕಾರಣಗಳಲ್ಲ ಎಂಬುದನ್ನು ಎತ್ತಿ ತೋರಿಸುತ್ತಾನೆ. ಇದೇ ಕಾರಣಕ್ಕಾಗಿ ಒಡಿಲಿಯ ರಾಜಕೀಯ ಆಸೆ, ಆಕಾಂಕ್ಷೆಗಳನ್ನು ಅಚೇಬೆ ಕೊಂಚ ವ್ಯಂಗ್ಯವಾಗಿಯೇ ನೋಡುತ್ತಾನೆಂಬುದು ಸರ್ವರಿಗೂ ಗೋಚರವಾಗುವ ವಿಷಯ.

ಎ ಮ್ಯಾನ್ ಆಫ್ ದಿ ಪೀಪಲ್ ಪ್ರಾಯಶಃ ಅಚೇಬೆಯ ಕಾದಂಬರಿಗಳಲ್ಲೆಲ್ಲ ಅತಿಯಾದ 'ಸಿನಿಕ' ಕಾದಂಬರಿ. ಕಾದಂಬರಿಯ ಯಾವ ಭಾಗದಲ್ಲೇ ಆಗಲಿ, ಯಾವ ಪಾತ್ರವೇ ಆಗಲಿ ಲೇಖಕನ ಸಹಾನುಭೂತಿಯನ್ನು ಪೂರ್ಣವಾಗಿ ಹೊಂದಿಲ್ಲದಿರುವುದು ಈ ಕಾದಂಬರಿಯ ವೈಶಿಷ್ಟ್ಯ. ಮ್ಯಾಕ್ಸ್‌ವೆಲ್‌ನಂತಹ ಆದರ್ಶವಾದಿಕೂಡ ಇದಕ್ಕೆ ಹೊರತಲ್ಲ—ಚುನಾವಣೆಯ ಸಮಯದಲ್ಲಿ ಆತ ಕೂಡ ಒತ್ತಡಕ್ಕೆ ಮಣಿಬಿದ್ದು ಸಂಶಯಾಸ್ಪದವಾದ ಕಡೆಗಳಿಂದ ಹಣವನ್ನು ಸ್ವೀಕರಿಸುತ್ತಾನೆ ; ನಿಧಾನವಾಗಿ ಆತನ ಆದರ್ಶವಾದವೂ, ಒಡಿಲಿಗೆ ಹೋಲಿಸಿ ನೋಡಿದಾಗ ಪೊಳ್ಳೆಂದು ತಿಳಿದುಬರುತ್ತದೆ. ಒಡಿಲಿಗೆ ಮ್ಯಾಕ್ಸ್ ಕಿರಿಯ ಮಂತ್ರಿಯೊಬ್ಬ ಕೂಡ ಈ ಹೊಸ ರಾಜಕೀಯ ಪಕ್ಷವನ್ನು ಆಶೀರ್ವದಿಸಿದ್ದಾನೆ, ಅದರಲ್ಲೂ ಆತನ ಪಾತ್ರವಿದೆ ಎಂದು ಹೇಳಿದಾಗ ಆತ ಯಾಕೆ ಬಿಚ್ಚುಮನಸ್ಸಿನಿಂದ ಈ ಸರಕಾರದಿಂದ ಹೊರಬಂದು ಈ ಕೆಲಸ ಮಾಡಬಾರದು ಎಂದು ಒಡಿಲಿ ಚಿಂತಿಸುತ್ತಾನೆ. ಅದಕ್ಕೆ ಮ್ಯಾಕ್ಸ್‌ನ ಪ್ರತಿಕ್ರಿಯೆ ಇದು :

> "ರಾಜೀನಾಮೆ ಕೊಡುವುದೇ ?" ಸಿಟ್ಟುಬಿಟ್ಟು ನುಡಿದ ಮ್ಯಾಕ್ಸ್ "ನೀನು ಎಲ್ಲಿದೀ ಅಂತ ಅಂದುಕೊಂಡಿದೀಯಾ—ಬ್ರಿಟನ್ ಅಥವಾ ಇನ್ಯಾವುದಾದರೂ....ತಮಾಷೆಗೆ ಮಾತನಾಡಬೇಡಿ, ಒಡಿಲಿ" (ಪುಟ ೪೭)

ಹಾಗಾಗಿ, ಐರೋಪ್ಯರೂ, ಅದರಲ್ಲೂ ಬ್ರಿಟೀಷರ ಆಡಳಿತವಿದ್ದರೂ, ಅವರಿಂದ ಕಲಿಯಬೇಕಾದನ್ನಾದ್ದರೂ ನಾವು ಕಲಿಯಲಿಲ್ಲವಲ್ಲ ಎಂಬ ಖೇದ ಕಾದಂಬರಿಕಾರನಲ್ಲಿದೆ. ನೈತಿಕವಾಗಿ ಹಾಗೂ ಆಂತರ್ಯದ ತತ್ವಗಳ ಬಗ್ಗೆ ಮಾತನಾಡಬೇಕಾದಾಗ ಇಂಗ್ಲೆಂಡಿನ, ಇಂಗ್ಲೆಂಡಿನ ಜನರನ್ನು ಒಂದು ರೀತಿಯಲ್ಲಿ ಮಾದರಿಯನ್ನಾಗಿಟ್ಟು, ಅದರ ಹೋಲಿಕೆಯಲ್ಲೂ ಆಫ್ರಿಕಾದವರು ಹೀಗೆ ಹಿಂದೆ ಬೀಳುವರಲ್ಲ ಎಂಬ ಅನಿಸಿಕೆ ಇದೆ.

ಇದೇ ವಾದದಲ್ಲಿ ಆಫ್ರಿಕಾದಲ್ಲಿನ ಸಿರಿವಂತ–ಬಡವನ ಮಧ್ಯೆ ಇರುವ ಅಂತರವನ್ನೂ ಅಚೀಬೆ ಎತ್ತಿ ತೋರುತ್ತಾನೆ, ಸಿರಿವಂತನಿಗೆ ಬಂದಿರುವ ಸಿರಿ ನೇರವಾಗಿ ಬಂದುದಲ್ಲ; ಚೀಫ್ ನಾಂಗನ ನಾಲ್ಕು ಅಂತಸ್ತಿನ ಮನೆ ಆತ ಅರ್ಧ ಮಿಲಿಯ ಪೌಂಡ್‌ಗಳ ಕಂಟ್ರಾಕ್ಟ್ ಕೊಡಿಸಿದ್ದಕ್ಕೆ ಐರೋಪ್ಯ ಕಟ್ಟಡದ ಕಂಪನಿಯೊಂದರ ಕೊಡುಗೆ! ಈ ನಾಲ್ಕಂತಸ್ತಿನ ಬಂಗಲೆಯನ್ನು ಕುಡುಕನೊಬ್ಬ ವಿವರಿಸುತ್ತಾನೆ. ಆತನ ಪ್ರಕಾರ ನಾಂಗ, ವಿ.ಐ.ಪಿ ಆದರೆ, ಆತ ಪಿ.ಐ.ವಿ—ಅದೇ ಪ್ರಪಂಚದ ತಿರುಗು, ಮುರುಗಾಟ, ಪೂರ್ ಇನೊಸೆಂಟ್ ವಿಕ್ಟಿಮ್. ಬಡ ಮುಗ್ಧ ಬಲಿಪಶು! ವಿಪರ್ಯಾಸವೋ ಎಂಬಂತೆ ಪ್ರತಿಯೊಬ್ಬ ಮಂತ್ರಿಯ ಭ್ರಷ್ಟಚಾರ, ಕಪಟತನ ಈಚೆ ಬರುತ್ತಿದ್ದಂತೆ, ನಮ್ಮ ಸ್ಥಾನವನ್ನು ಉಳಿಸಿಕೊಳ್ಳಲು ಪ್ರತಿಯೊಬ್ಬರೂ ಬೇರೆಯವನತ್ತ ಕೈತೋರುವುದು ಅಷ್ಟೇ ಅಲ್ಲ, ತಾವು ನಿರಪರಾಧಿ, ತಮ್ಮ ಮೇಲೆ ಅನ್ಯಥಾ ಅಪವಾದ ಹೊರಿಸಲಾಗುತ್ತಿದೆ ಎಂಬುದನ್ನು ಕೂಡ ಸಾಬೀತು ಮಾಡತೊಡಗುತ್ತಾರೆ; ಆದರೆ ಪ್ರತಿಯೊಬ್ಬನೂ ಭ್ರಷ್ಟಾಚಾರಿಯೇ, ಕಪಟಿಯೇ ಆದರೂ ಜನಸ್ತೋಮ ಇದು ಬಹಳ ಸಹಜವಾದ ವಿಷಯವೋ, ಬಹಳ ಸರಳವಾದ ಸಂಗತಿಯೋ ಎಂಬಂತೆ ಸುಮ್ಮನಿದ್ದು ಬಿಡುತ್ತಾರೆ. ಒಡಿಲಿ ನುಡಿಯುವಂತೆ ಅವರು "ಬುದ್ಧಿ, ತಿಳುವಳಿಕೆಯಿರುವ ಯಾವನೇ ಬಾಯಲಿಟ್ಟ ರಸಭರಿತ ತುತ್ತನ್ನು ಉಗುಳುವುದುಂಟೇ ?" ಎಂದು ಕೇಳುತ್ತಾರೆ! ಈ ರೀತಿಯ ವಿಷಯಗಳು ಹೊರಬಿದ್ದಾಗ ಅದು ಕೋಪಾಗ್ರಸ್ತನನ್ನಾಗಿ ಮಾಡದೆ, ಒಡಿಲಿಯನ್ನು ಖುಷಿಮಾಡುತ್ತದೆ—ಏಕೆಂದರೆ ಈ ವಿಷಯಗಳ ಬಗ್ಗೆ ಮಾತನಾಡಲು ಮತ್ತೊಂದು ಅಂಶ ಸಿಕ್ಕಿತಲ್ಲ ಎಂದು, ಈ ವಿಷಯವೇ ಒಡಿಲಿ ಒಬ್ಬ ರಾಜಕಾರಣಿಯಾಗುವುದಕ್ಕೂ ಅಡ್ಡಿ ಮಾಡುತ್ತದೆ. ಎಡ್‌ನಾಗೆ ಆತ ಚೀಫ್ ನಾಂಗನನ್ನು ಮದುವೆಯಾಗಬಾರದು ಎಂದು ಬರೆಯುವ ದೊಡ್ಡ ಕಾಗದ ಒಡಿಲಿಯ ಸಣ್ಣತನವನ್ನೇ ಎತ್ತಿ ತೋರಿಸುತ್ತದೆ. ಚೀಫ್ ನಾಂಗನ ರೀತಿಯಲ್ಲೇ ಆತ ಕೂಡ ಕುಮಾರ್ಗಗಳನ್ನು ಹಿಡಿಯುತ್ತಾನೆ. ಚೀಫ್ ನಾಂಗನಂತೆಯೇ ಕಡೆಯಲ್ಲಿ ಆತ ಕೂಡ ನಾಲ್ಕು ಜನ "ಬಾಡಿಗಾರ್ಡ್" ಅನ್ನೂ ಇಟ್ಟುಗೊಂಡು ತಿರುಗಾಡುತ್ತಾನೆ. ಒಡಿಲಿ ಈ ರಾಜಕೀಯದಲ್ಲಿ ಪಳಗಿದಂತೆ ಆತನಲ್ಲಿ ಮೊದಲಿದ್ದ ಆದರ್ಶವಾದವೂ ನಿಧಾನವಾಗಿ ಮರೆಯಾಗುವುದು ಗಮನಾರ್ಹವಾದ ಅಂಶ.

ಈ ರಾಜಕೀಯ ಹಣಾಹಣಿ ಅದರ ತುತ್ತತುದಿಯನ್ನು ಮುಟ್ಟುವುದು ಚೀಫ್ ನಾಂಗ ಒಡಿಲಿಗೆ ಲಂಚದಾಸೆ ತೋರುವುದರ ಘಟ್ಟದಿಂದ, ಆತ ತನ್ನ ನಾಮಪತ್ರವನ್ನು ವಾಪಸು ತೆಗೆದುಕೊಂಡಲ್ಲಿ ಆತನಿಗೆ ಇನ್ನೂರಐವತ್ತು ಪೌಂಡುಗಳ ಲಂಚವನ್ನು ಕೊಡುತ್ತೇನೆಂದಾಗ, ಒಡಿಲಿ ಈ ಲಂಚವನ್ನು ನಿರಾಕರಿಸಿದರೂ, ಆತನ ನಿಕಟ ಮಿತ್ರ ಮ್ಯಾಕ್ಸ್‌ವೆಲ್ ಇದೇ ಲಂಚದ ಆಸೆಯಿಂದ ಚೀಫ್ ಕೊಕೋನ ಪರವಾಗಿ ನಾಮಪತ್ರವನ್ನೂ ವಾಪಸ್ಸುಪಡೆದ ಎಂಬ ವಿಷಯ ತಿಳಿದಾಗ! ಆದರೆ ಮ್ಯಾಕ್ಸ್ ತನ್ನ ನಿಲುವನ್ನು "ಆ ಲಂಚಕ್ಕೆ ಯಾವುದೇ ಆದ ಕಾನೂನಿನ ಶರತ್ತಿಲ್ಲ" ಎಂದು ನುಡಿದು ಸಮರ್ಥಿಸಿಕೊಂಡಾಗ! ಒಡಿಲಿಯ ರಾಜಕೀಯ ಚುನಾವಣೆಯ ಪ್ರಚಾರ ಭರದಿಂದ ಶುರುವಾಗುತ್ತದೆ. ತಾನು ಸ್ಪರ್ಧಿಸುತ್ತೇನೆ ಎಂದು ತಿಳಿದ ತಕ್ಷಣ ಹೆದರಿ ತನಗೇ ಲಂಚದ ಆಸೆ ತೋರಿಸಿರುವುದು ತಮ್ಮ ನೈತಿಕ ವಿಜಯ ಎಂದು ಒಡಿಲಿ ಹರ್ಷಿಸುತ್ತಾನೆ.

ಈ ಕಾದಂಬರಿಯ ಕಡೆಯ ಪುಟಗಳಲ್ಲಿ ಕಾಣಬರುವ ರಾಜಕೀಯ ಚಟುವಟಿಕೆ ಅತಿ ಉದ್ವೇಗಮಟ್ಟದ್ದು ; ಹಾಗೂ ಘಟನೆಗಳು ಕೂಡ ಅತ್ಯಂತ ಭರದಿಂದ ಸಾಗುತ್ತವೆ. ಅರಿವಿಲ್ಲದಂತೆಯೇ ಒಡಿಲಿ ಚೀಫ್ ನಾಂಗನ ಚುನಾವಣಾ ಪ್ರಸಾರದ ಸಭೆಯೊಂದಕ್ಕೆ ಹಾಜರಾಗುತ್ತಾನೆ. ಈ ವಿಷಯ ನಾಂಗನಿಗೆ ತಿಳಿದುಬಂದು, ಆತನ ಅನುಚರರು ಒಡಿಲಿಯನ್ನು ಹಿಡಿದು ಸಭೆಯ ಪ್ರಾಂಗಣಕ್ಕೆ ತರುತ್ತಾರೆ. ಅಲ್ಲಿ ನಾಂಗ ಒಡಿಲಿಯನ್ನು ಅವಮಾನಿಸುವುದಷ್ಟೇ ಅಲ್ಲ, ಕಡೆಯಲ್ಲಿ ಕಪಾಳಕ್ಕೂ ಏಟು ಬಿಗಿಯುತ್ತಾನೆ. ಇದರಿಂದ ಉಂಟಾಗುವ ಜನರ ಗಲಿಬಿಲಿಯಲ್ಲಿ ಒಡಿಲಿಗೆ ಬಹಳ ಗಾಯಗಳಾಗುತ್ತವೆ. ಆಸ್ಪತ್ರೆಯಲ್ಲಿ ಒಡಿಲಿ, ತನ್ನ ನಾಮಪತ್ರ ಅಧಿಕಾರಿಗಳಿಗೆ ತಲುಪಲೇ ಇಲ್ಲವೆಂದೂ, ಮ್ಯಾಕ್ಸ್ ಚೀಫ್—ಕೋಕೋನ ಹೆಂಡತಿ ಚುನಾವಣಾ ಸಮಯದಲ್ಲಿ ಚುನಾವಣಾ ಪತ್ರಗಳನ್ನು ಅಡಗಿಸಿಕೊಂಡು ಮೋಸಮಾಡಬೇಕೆಂಬುದನ್ನು ತಿಳಿದಿದ್ದನ್ನೂ ಮುಚ್ಚಿಸಲು ಆತನ ಕೊಲೆಯಾಯಿತೆಂದೂ, ಇದೆಲ್ಲದರ ಕಡೆಗೆ ಚೀಫ್ ಕೋಕೋವನ್ನು ಮ್ಯಾಕ್ಸ್‌ನ ಫಿಯಾನ್ಸಿಯೊಂದಳೆಂದೂ ತಿಳಿದು ಬರುತ್ತದೆ ; ಇದೆಲ್ಲದರ ಫಲ :

> ಇಲ್ಲ, ನಮ್ಮ ಸರ್ಕಾರದ ಪತನದಲ್ಲಿ ಜನರ ಕೈವಾಡವೇನೂ ಇರಲಿಲ್ಲ. ಸರಳವಾಗಿ ಹೇಳಬೇಕೆಂದರೆ ಖಾಸಗಿ ಸೈನ್ಯಗಳು, ಹಿಡಿತವಿಲ್ಲದ ಜನರ ಗುಂಪುಗಳೂ ರಕ್ತದ ರುಚಿಕಂಡಿದ್ದು, ಅಧಿಕಾರದ ರುಚಿ ತಿಳಿದಿದ್ದು, ಚುನಾವಣೆಯ ಸಮಯದಲ್ಲಿ ಇದು ಕೈಮೀರಿ ಅವರನ್ನು ನೇಮಿಸಿಕೊಂಡ ಹಾಗೂ ಯಜಮಾನರ ದುರ್ನಾತಕ್ಕೂ ಕಾರಣವಾಯಿತು. ಇದಕ್ಕೆ ಸಾಮಾಜಿಕವಾದ ಹೊರ ಕಾರಣಗಳಾವುವೂ ಇರಲಿಲ್ಲ ಕೂಡ—ಅದರ ಬಗ್ಗೆ ನಾವಾರೂ ತಪ್ಪುಎಣಿಕೆಮಾಡುವುದು ಬೇಡ. (ಪುಟ ೧೪೪)

ಒಡಿಲಿಯ ಗೆಲವು ಆದರ್ಶದ ಗೆಲವಿಗಿಂತ ವೈಯುಕ್ತಿಕವಾದ ಗೆಲವು, ಚೀಫ್ ನಾಂಗನನ್ನು ಆಡಳಿತ ವಹಿಸಿಕೊಂಡ ಮಿಲಿಟರಿ ಬಂಧಿಸುತ್ತದೆ—ಎಡ್‌ನಾ ಒಡಿಲಿಯವಳಾಗುತ್ತಾಳೆ—ಇಲ್ಲಿಗೆ ಕಾದಂಬರಿಯ ಮುಕ್ತಾಯ.

ಈಗಾಗಲೇ ಉಲ್ಲೇಖಿಸಿರುವಂತೆ, ಎ ಮ್ಯಾನ್ ಆಫ್ ದಿ ಪೀಪಲ್ ಬ
ಬರೆದಿರುವ ವಿಮರ್ಶಕರೆಲ್ಲ ಈ ಕಾದಂಬರಿಯ ವ್ಯಂಗ್ಯ ಭರಿತ ಮುಕ್ತಾಯಕ್ಕೂ ಹಾಗ
ನೈಜೀರಿಯಾದಲ್ಲಿ ನಡೆದ ಮಿಲಿಟರಿಯ ಕ್ಷಿಪ್ರ ಕ್ರಾಂತಿಗೂ ಎಳೆಯನ್ನು ತೋರುತ್ತಾ
ಮಿಲಿಟರಿ ಅಧಿಕಾರ ವಹಿಸಿಕೊಂಡದ್ದು—ಕಾದಂಬರಿಯಲ್ಲಿ ಅವರ ಬಗೆಗಿನ ಉಲ್ಲೇ
ಕಡೆಯಲ್ಲಿ ಮುನ್ಸೂಚಿಯೆಂಬಂತೆ ಇದೆ—ಈ ಕಾದಂಬರಿ ಅಚ್ಚಾಗುತ್ತಿದ್ದಾಗ. ಆದ
ಚಿನುವ ಅಚೇಬೆ ಮಿಲಿಟರಿ ಸರ್ಕಾರವನ್ನೇನೂ ಬಹಳ ಕಾತುರದಿಂದಾಗಲೀ ಪ್ರ
ಯಿಂದಾಗಲೀ ಸ್ವಾಗತಿಸುವುದಿಲ್ಲ, ಹೊಸ ಆಡಳಿತವನ್ನು ಕೂಡ ಆತ ಸಂಶಯಾತ್ಮ
ದೃಷ್ಟಿಯಿಂದಲೇ ನೋಡುವಂತಿದೆ. ಸಮಕಾಲೀನ ಆಫ್ರಿಕಾ ಸಮಾಜವನ್ನಾತ ಅತ್ಯ
ಕಠೋರವಾಗಿ, ತೀಕ್ಷ್ಣ ದನಿಯಲ್ಲಿ ವಿಮರ್ಶಿಸುತ್ತಾನೆ. ತಾವೇ ಅತಿ ಪ್ರೀತಿಯಿಂದ ಕಟ್ಟ
ಸಾಮಾಜಿಕ ವ್ಯವಸ್ಥೆ, ತಮ್ಮ ಕಣ್ಣೆದುರೇ ಇಷ್ಟು ಭ್ರಷ್ಟವಾಯಿತೆಂಬ ನೋವು ಒಂ
ಕಡೆಯಿದ್ದರೆ ಚರಿತ್ರೆಯಿಂದ ನಾವು ಯಾವ ಪಾಠವನ್ನೂ ಕಲಿತಿಲ್ಲವಲ್ಲ ಎಂಬುದು ಅದ
ಮತ್ತೊಂದು ನೋವಿನ ಸಂಗತಿ ಈ ಕಾದಂಬರಿಯಲ್ಲೂ ಹಾಗೂ **ನೋ ಲಾಂಗ**
ಅಟ್ ಈಸ್ನಲ್ಲೂ ಕಾಣಸಿಗುತ್ತದೆ. ಆರ್ಥರ್ ರೇವನ್ಸ್‌ಕ್ರಾಫ್ಟ್ ಈ ಕಾದಂಬರಿ
ಬಗ್ಗೆ ಉಲ್ಲೇಖಿಸುತ್ತ ಹೀಗೆ ನುಡಿಯುತ್ತಾನೆ:

> ಎ ಮ್ಯಾನ್ ಆಫ್ ದಿ ಪೀಪಲ್ ಬಹುತೇಕ ಬೇರೆದೇ ರೀತಿ
> ಕಾದಂಬರಿ—ಕಣ್ಮರೆಯಾದ ವಸಾಹತುಶಾಹೀ ಶಕ್ತಿಯಿಂದ ಹೊರಬಂ
> ರಾಜಕೀಯ ವ್ಯವಸ್ಥೆಯನ್ನು ಸ್ವಪ್ರಯೋಜನೆಗೆ ಉಪಯೋಗಿಸಿಕೊಳ್ಳು
> (ಎಕ್ಸ್‌ಪ್ಲಾಯಿಟ್ ಮಾಡುವ) ಭ್ರಷ್ಟರಾಜಕಾರಣಿಗಳ ಬಗೆಗಿನ ವಿಡಂಬ
> ಈ ವ್ಯಾಖ್ಯಾನ ಎಷ್ಟು ಭ್ರಮನಿರಸನವಾಗಿದೆ ಎಂದರೆ ವೈಯುಕ್ತಿ
> ಸಿನಿಕತನದ ಆರೋಪದಿಂದ ಲೇಖಕ ಹೊರಬರುವುದಿಲ್ಲ. ಯಾವೊಂ
> ವ್ಯಕ್ತಿಯೂ ಶ್ಲಾಘನೀಯವಾಗಿಲ್ಲ ಮತ್ತು ಮಾನವನ ಸ್ವಭಾವದ
> ಸಿಗುವ ನಿಷ್ಠೆಯೂ ಬಹಳ ಕಮ್ಮಿಯಾದದ್ದು. (ಆರ್ಥರ್ ರೇವನ
> ಕ್ರಾಫ್ಟ್, ಚಿನುವ ಅಚೇಬೆ ೧೯೬೯, ಪುಟ ೩೧–೩೨)

ಹಾಗಾಗಿ, ಅಚೇಬೆ ಮನೋಜ್ಞವಾಗಿ ಚಿತ್ರಿಸುವ ಸಂಘರ್ಷ ಆತನ **ಥಿಂಗ**
ಫಾಲ್ ಅಪಾರ್ಟ್ ಹಾಗೂ **ಏರೋ ಆಫ್ ಗಾಡ್**ನಲ್ಲಿ ಸಾಂಸ್ಕೃತಿಕ ನೆಲೆಯಿಂ
ಸಾಮಾಜಿಕ ನೆಲೆಯನ್ನು ಪಸರಿಸುತ್ತ ಜೀವನದ ವಿವಿಧ ಆಯಾಮಗಳನ್ನು ವಸಾಹ
ಶಾಹೀ ಐರೋಪ್ಯ ಆಳ್ವಿಕೆಯ ಹಿನ್ನೆಲೆಯಲ್ಲಿ ಪರೀಕ್ಷಿಸುತ್ತ ಬಂದರೆ, **ನೋ ಲಾಂಗ**
ಅಟ್ ಈಸ್ ಹಾಗೂ **ಎ ಮ್ಯಾನ್ ಆಫ್ ದಿ ಪೀಪಲ್** ಈ ರೀತಿಯ ಸಂಘ
ವನ್ನು ಸ್ವಾತಂತ್ರ್ಯೋತ್ತರ ಆಫ್ರಿಕಾದ ರಾಜಕೀಯ ಹಿನ್ನೆಲೆಯಲ್ಲಿ ಚಿತ್ರಿಸಿ ಅದರಿಂದ ಇ
ಆಫ್ರಿಕಾದ ಸಮಾಜದ ತುಲನೆಗೆ ಒಳಪಡಿಸುವಂತೆ ಮಾಡುತ್ತಾನೆ. ಒಂದು ದೃಷ್ಟಿಕೋ
ದಿಂದ ನೋಡಿದರೆ, ಅದು ಯಾವ ಕಾರಣದಿಂದಲೇ ಆಗಲಿ, ಪತನವಾಗಲು ಪ್ರಾರಂಭಿ
ಸಮಾಜದ ಚಿತ್ರಣ **ಥಿಂಗ್ಸ್ ಫಾಲ್ ಅಪಾರ್ಟ್**ನಲ್ಲಿ ಪ್ರಾರಂಭವಾಗಿದ
ಎ ಮ್ಯಾನ್ ಆಫ್ ದಿ ಪೀಪಲ್ನ ಸಂಪೂರ್ಣ ವೈಯುಕ್ತಿಕ ಹಾಗೂ ಸಾಂಸ್ಕೃ

ಪತನದ ಚಿತ್ರಣದ ಮೂಲಕ ಪೂರ್ಣ ಪಥವನ್ನು ಕ್ರಮಿಸುತ್ತದೆ. ಇದೇ ಕಾರಣದಿಂದ ಆತನ ಇತ್ತೀಚಿನ ಕಾದಂಬರಿ ಆ್ಯಂಟ್‌ಹಿಲ್ ಆನ್ ದಿ ಸವಾನ್ನ (೧೯೮೭) ವನ್ನು ಎದುರು ನೋಡುವಂತೆಯೂ ಮಾಡುತ್ತದೆ.

ಚಿನುವ ಅಚೇಬೆಯ ನಾಲ್ಕು ಕಾದಂಬರಿಗಳನ್ನೂ ಓದಿದವರಿಗೆ **ಥಿಂಗ್ಸ್ ಫಾಲ್ ಅಪಾರ್ಟ್‌**ನ ತೀವ್ರತೆ ಹಾಗೂ **ಆ್ಯರೋ ಆಫ್ ಗಾಡ್‌**ನಲ್ಲಿ ಕಂಡುಬರುವ ಸಂಘರ್ಷಗಳ ಸಂಕೀರ್ಣತೆ **ನೋ ಲಾಂಗರ್ ಅಟ್ ಈಸ್** ಅಥವಾ **ಎ ಮ್ಯಾನ್ ಆಫ್ ದಿ ಪೀಪಲ್‌**ನಲ್ಲಿ ಕಾಣದೆ ಹೋಗಬಹುದು ; ಜೊತೆಗೇ ಅಚೇಬೆಯ ಕಥಾವಸ್ತು ಸಂಸ್ಕೃತಿಗಳ ಸಂಘರ್ಷದಿಂದ ಹೆಚ್ಚು ಸಾಮಾಜಿಕವಾದ ವಸ್ತುವಿನತ್ತ **ನೋ ಲಾಂಗರ್ ಅಟ್ ಈಸ್‌**ನಲ್ಲಿ ಹಾಗೂ ರಾಜಕೀಯ ವಸ್ತುವಿನತ್ತ **ಎ ಮ್ಯಾನ್ ಆಫ್ ದಿ ಪೀಪಲ್‌**ನಲ್ಲಿ ಓಲುತ್ತಿರುವುದನ್ನು ಕಾಣಬಹುದು. ಆದರೆ ಈ ಎರಡೂ ಕಾದಂಬರಿಗಳಲ್ಲಿನ ಸಾಮಾಜಿಕ ಕಾಳಜಿಯಿಂದಾಗಿ ಅವುಗಳ ಗಂಭೀರತೆಗೆ ಚ್ಯುತಿ ಬಂದಿದೆ ಎಂದು ಅರ್ಥವಲ್ಲ. ಅಚೇಬೆಯ ಕಾದಂಬರಿಗಳಲ್ಲಿ, ಮುಖ್ಯವಾದ ಲೇಖನಗಳಲ್ಲಿನ ವಸ್ತು ಸಮಕಾಲೀನ ಆಫ್ರಿಕಾದ ಸಮಾಜವೇ. ಆದರೆ ಕಾಲದ ಮುನ್ನಡೆಯ ದೃಷ್ಟಿಯಿಂದ ಅಚೇಬೆಯ ಮೊದಲನೇಯ, ಮೂರನೇಯ ಹಾಗೂ ಎರಡನೇಯ, ನಾಲ್ಕನೇಯ ಕಾದಂಬರಿಗಳು ಒಡಂಬಡುತ್ತವೆ ಎಂಬುದು ಕುತೂಹಲಕಾರಿಯಾದ ಸಂಗತಿ. ಬ್ರಿಟೀಷರು ಆಫ್ರಿಕಾದ ಸಮಾಜದ ಹೊರ ಅಂಚಿನಲ್ಲಿ ಬಂದುನಿಂತು, ಒಳಗೆ ಹೆಜ್ಜೆಯೂರುತ್ತಿರುವುದನ್ನು **ಥಿಂಗ್ಸ್ ಫಾಲ್ ಅಪಾರ್ಟ್** ಚಿತ್ರಿಸಿದ್ದರೆ, **ನ್ಯೂ ಲಾಂಗರ್ ಅಟ್ ಈಸ್**, ಬ್ರಿಟಿಷರ ಆಡಳಿತದ ನಂತರದ ಸ್ವಾತಂತ್ರ್ಯೋತ್ತರ ಆಫ್ರಿಕನ್ ಸಮಾಜ; ಆದರೂ ಐರೋಪ್ಯರ ಪ್ರಭಾವ ಗಾಢವಾಗಿ ಇದ್ದೇ ಇದೆ. **ಆ್ಯರೋ ಆಫ್ ಗಾಡ್‌**ನಲ್ಲಿ ಬ್ರಿಟೀಷರು ಗಾಢವಾಗಿ ಬೇರೂರಿ, ಆಫ್ರಿಕನ್ ಸಮಾಜವನ್ನು ಪೂರ್ಣವಾಗಿ ಹಿಡಿತದಲ್ಲಿಟ್ಟುಕೊಳ್ಳುತ್ತಿರುವ ಹೆಜ್ಜೆಯನ್ನು ಗುರುತಿಸುತ್ತಿದ್ದುದಾದರೆ, **ಎ ಮ್ಯಾನ್ ಆಫ್ ದಿ ಪೀಪಲ್**‌ನಲ್ಲಿ ಅಚೇಬೆ ಪುನಃ ಸಮಕಾಲೀನ ಆಫ್ರಿಕಾದ ಸ್ವಾತಂತ್ರ್ಯೋತ್ತರ ಸಮಾಜದ ಭ್ರಮನಿರಸನದ ದಿನಗಳ ಚಿತ್ರಣ ಕೈಗೊಳ್ಳುತ್ತಾನೆ. ಆ ಸಂಸ್ಕೃತಿಯನ್ನು ನಾವು ಅಷ್ಟು ಸಂಪೂರ್ಣವಾಗಿ, ಚಾಚಿದ ಕೈಗಳಿಂದ ಸ್ವಾಗತಿಸಿದುದ್ದಾರೂ ಏತಕ್ಕೆ ಎಂಬ ಪ್ರಶ್ನೆಯನ್ನೂ ಆ ಹೊರ ಸಂಸ್ಕೃತಿ ನಮ್ಮ ಸಂಸ್ಕೃತಿಯನ್ನು ಇಷ್ಟು ಸುಲಭವಾಗಿ ದಾಸ್ಯಕ್ಕೆ ಒಳಪಡಿಸಿದರ ಕಾರಣವಾದರೂ ಏನು ಎಂಬುದು ಅಚೇಬೆಯ ಮೂಲ ಧ್ಯೇಯವಾಗಿಬಿಡುತ್ತದೆ. ಸ್ವಾತಂತ್ರ್ಯೋತ್ತರ ದಿನಗಳಲ್ಲಿನ ಕಾದಂಬರಿಗಳಲ್ಲಿ ನಾವು ನಮ್ಮ ಚರಿತ್ರೆಯಿಂದ ಯಾವ ಪಾಠವನ್ನು ಕಲಿತೇ ಇಲ್ಲವಲ್ಲ ಎಂಬುದರ ನೋವಿನ ಅರಿವಿದೆ. ಅಚೇಬೆ ಮತ್ತೆ ಮತ್ತೆ ನಾಸು ನನ್ನ ಗತಕಾಲದ ಚಿತ್ರಗಳನ್ನೊಳಗೊಂಡ ಕಾದಂಬರಿಗಳಲ್ಲಿ ನಾವು ಎಡವಿದ್ದಾದರೂ ಎಲ್ಲಿ ಎಂಬುದರ ಪ್ರಶ್ನೆಯ ಉತ್ತರಕ್ಕಾಗಿ ಹೆಣಗುತ್ತಿರುವಂತೆ ಅನಿಸುತ್ತದೆ.

ತಂತ್ರದ ದೃಷ್ಟಿಯಿಂದ ನೋಡುವುದಾದರೆ, ಭಾಷೆಯ ಬಳಕೆಯಲ್ಲಿನ ವೈವಿಧ್ಯತೆ ಈ ಎರಡು ಕಾದಂಬರಿಗಳಲ್ಲಿ ಕಮ್ಮಿಯೇ ಎಂದು ಒಪ್ಪಬೇಕು ; ಹಾಗೆಯೇ, **ನೋ ಲಾಂಗರ್ ಅಟ್ ಈಸ್** ಮತ್ತು **ಎ ಮ್ಯಾನ್ ಆಫ್ ದಿ ಪೀಪಲ್** ನಲ್ಲಿ ಹೆಚ್ಚೆಚ್ಚು ವ್ಯಂಗ್ಯ ಮತ್ತು ವಿಡಂಬನೆಯ ಬಳಕೆಯೂ ಕಾಣಬರುತ್ತದೆ. ಇದಕ್ಕೆ ಕಾರಣ, ಇವೆರಡೂ ಕಾದಂಬರಿಯ ಮೂಲ ವಸ್ತುವಾದ ಸಾಮಾಜಿಕ ವಿಡಂಬನೆಯೇ ಎಂದು ಅನಿಸುತ್ತದೆ.

ಥಿಂಗ್ಸ್ ಫಾಲ್ ಅಪಾರ್ಟ್

ಪ್ರೊ|| ಪೋಲಂಕಿ ರಾಮಮೂ

ಚಿನುವ ಅಚೇಬೆಯವರ 'ಥಿಂಗ್ಸ್ ಫಾಲ್ ಅಪಾರ್ಟ್', ಅಂ
'ಅಸ್ತವ್ಯಸ್ತ', 'ಹರಿದು ಹಂಚಿದ ಬಾಳು' ಎನ್ನುವ ಅರ್ಥ
ಕಾದಂಬರಿ. ಆಫ್ರಿಕಾಖಂಡ ವಿಶ್ವ ಸಾಹಿತ್ಯಕ್ಕೆ ಕೊಟ್ಟ ಮಾ
ಕೊಡುಗೆ. ಇದು ಒಬ್ಬ ಆಗಂತುಕ ಮಾನವನ, ಒಂ
ಅನಾಮಧೇಯ ಬುಡಕಟ್ಟಿನ ದಾರುಣ ಕತೆಯಲ್ಲ; ಇಡಿ
ಒಂದು ದೇಶದ, ಇಡಿಯ ಒಂದು ಕಪ್ಪು ಜನಾಂಗದ ದುರಂ
ಪ್ರಗಾಥ. ಒಂದು ಜನಾಂಗದ ಜನಪದ, ಅಂದರೆ ಇಂಗ್ಲಿಷಿನ
ಹೇಳುವ ಕಲ್ಚರ್, ಕಾಲಗತಿಯಲ್ಲಿ ಮುಂದುವರಿಯುತ್ತಾ ತನ್ನ
ರುವ ಕೆಲವು ನ್ಯೂನತೆಗಳನ್ನು ಸರಿಪಡಿಸಿಕೊಳ್ಳುತ್ತಾ ಹೋ
ತ್ತದೆ. ಈ ಮಧ್ಯೆ ಬೇರೊಂದು ಜನಾಂಗದ ಸಂಸ್ಕೃತಿ ತನ್ನಲ್ಲಿರು
ಧರ್ಮವನ್ನ ಈ ಜನಪದದ ಮೇಲೆ ಬೀರುತ್ತದೆ. ಆಗ ನಾಡಿ
ಜನಪದ ಧರ್ಮಕ್ಕೂ ಹೊರಗಿನ ಸಂಸ್ಕೃತಿಯ ಧರ್ಮಕ್ಕೂ ತಿಕ್ಕಾ
ಶುರುವಾಗುತ್ತದೆ. ಕಪ್ಪು ಜನರ ಕಪ್ಪು ಜನಪದ ನೆಲಕ್ಕೆ ಹ
ಕೊಂಡಿರುವ ನೈಸರ್ಗಿಕ ಜೀವನ ಕ್ರಮ; ಬಿಳಿಜನರ ಬಿಳಿಧರ್ಮ
ಕ್ರಿಸ್ತ ಸಂಸ್ಕೃತಿ, ನಾಗರಿಕ ಜೀವನ ಕ್ರಮ. ಕಪ್ಪು ಜನರ ಕಪ್ಪು
ಬುಡಕಟ್ಟು ಕೌಟುಂಬಿಕವಾದದ್ದು; ಕಳ್ಳು ಬಳ್ಳಿ, ಬಂಧ
ಬಳಗದ್ದು; ಗ್ರಾಮೀಣ ಸಂಸಾರದ್ದು. ಆದರೆ ಬಿಳಿಜನರ ಬಿ
ಸಂಸ್ಕೃತಿ ಮತ್ತು ಕ್ರಿಸ್ತಧರ್ಮ ವ್ಯಕ್ತಿ ವಿಶೇಷತೆಯ ನ
ಮಾನವೀಯ ಮೌಲ್ಯವನ್ನು ಎತ್ತಿಹಿಡಿಯುವಂಥಾದ್ದು. ಇ
ರಿಂದಾಗಿ ಕಪ್ಪು ಜನಪದಕ್ಕೂ ಬಿಳಿ ಜನಾಂಗಕ್ಕೂ ತಿಕ್ಕಾ
ಅನಿವಾರ್ಯವಾಗುತ್ತದೆ. ಕಪ್ಪು ಜನರ ಕಪ್ಪು ಜನಪದದಲ್ಲಿ ಕೆಲ
ಆಚಾರ ವ್ಯವಹಾರಗಳು, ಮೂಢನಂಬಿಕೆಗಳು ಇಡಿಯ ಬುಡಕಟ್ಟ
ದೃಷ್ಟಿಯಿಂದ ಹಿತವಾಗಿದ್ದರೂ ವ್ಯಕ್ತಿಗಳಿಗೆ ಅಮಾನವೀಯವಾ
ಬಿಡುತ್ತವೆ. ಉದಾಹರಣೆಗೆ ಈ ಆಫ್ರಿಕಾಖಂಡದ ನೈಜೀರಿಯ
ನಾಡಿನ ಇಗ್ಬೊ ಜಾನಪದದವರಲ್ಲಿ ಹೆತ್ತ ಅವಳಿ ಮಕ್ಕಳನ

ಮಡಕೆಯಲ್ಲಿಟ್ಟು ಕಾಡಿನಲ್ಲಿ ಬಿಟ್ಟುಬರುವ ಮೂಢನಂಬಿಕೆ ಇದೆ. ಇದರಿಂದ ಹೆತ್ತ ತಾಯಂದಿರಿಗೆ ಕರಳು ಕಿತ್ತುಬರುವ ನೋವಾಗುತ್ತದೆ. ಆದರೆ ಆ ವ್ಯಕ್ತಿಗಳು ಜನಾಂಗದ ದೃಷ್ಟಿಯಿಂದ ಅದನ್ನ ಭರಿಸಬೇಕಾಗುತ್ತದೆ. ಈ ಮಧ್ಯೆ ಹೊರಗಿನ ಧರ್ಮ ತನ್ನ ಮಾನವೀಯ ಮೌಲ್ಯಗಳನ್ನು ಎತ್ತಿಹಿಡಿಯುತ್ತಾ, ಅದರಲ್ಲಿ ತಾಯಂದಿರು ಹೆತ್ತ ಅವಳಿ ಮಕ್ಕಳನ್ನು ಸಾಯಿಸಬೇಕಾಗಿಲ್ಲ ಎನ್ನುತ್ತದೆ. ಆಗ ತಾಯಿಕರಳು ಆ ಧರ್ಮದತ್ತ ವಾಲುತ್ತದೆ.

ಇದೀಗ ಜಗತ್ತಿನ ಎಲ್ಲಾ ಜನಾಂಗದವರ ಮುಂದೂ, ಎಲ್ಲಾ ಧರ್ಮಗಳ ಮುಂದೂ ಇರುವ ಸವಾಲು: ಧರ್ಮವೇ ಅಥವಾ ಮಾನವೀಯತೆಯೇ, ಜನಾಂಗವೇ ಅಥವಾ ಜನತೆಯೇ? ಆದ್ದರಿಂದ ಚಿನುವ ಅವರ 'ಥಿಂಗ್ಸ್ ಫಾಲ್ ಅಪಾರ್ಟ್' ಒಂದು ಜನಾಂಗ, ಒಂದು ಬುಡಕಟ್ಟು, ಒಂದು ಸಂಸ್ಕೃತಿ, ಒಂದು ಧರ್ಮ—ಇವೆಲ್ಲವನ್ನೂ ಮೀರಿದ, ಒಂದು ಮಾನವೀಯತೆಯ ಹೆಂಗರುಳಿನ ದುರಂತ ಪ್ರಗಾಥ; ಅಷ್ಟೇಯಲ್ಲ, ಇದು ಮಾನವನಲ್ಲೇ ಒಡಹುಟ್ಟಿದ ಪುರುಷ ಮತ್ತು ಪ್ರಕೃತಿಯ ಗಂಡು ಮತ್ತು ಹೆಣ್ಣು ತಾಯ್ತುಗಳ ದುರಂತ ಸಂಘರ್ಷ, ಸಂಗ್ರಾಮ.

'ಥಿಂಗ್ಸ್ ಫಾಲ್ ಅಪಾರ್ಟ್' ಕತೆ ಒಕೊಂಕ್ವೊ ಎನ್ನುವ ಕಥಾನಾಯಕನ ಗಂಡುಗಲಿತನದಿಂದ ಶುರುವಾಗುತ್ತದೆ. ಇಗ್ಬೊ ಜನಾಂಗದ ಈ ನಾಯಕ ಚಿಕ್ಕಂದಿನಿಂದಲೂ ಗಂಡುಗಲಿತನವನ್ನು ಬೆಳೆಸಿಕೊಂಡೇ, ಗಂಡೇ ಆಳು, ಗಂಡೇ ಬಾಳು ಎಂದು ನಂಬಿದವ. ಅವನ ತಂದೆ ಮಾತ್ರ ಹೆಂಗರಳಿನ ಮನಸಿಕರಾಯನಾಗಿದ್ದ; ಅವನು ಕೊಳಲು ಊದಿಕೊಂಡೇ, ಕಳ್ಳು ಕುಡಿದುಕೊಂಡೇ, ಸೋಮಾರಿಯಾಗಿ ಕಾಲಕಳೆದವ. ಒಕೊಂಕ್ವೊವಿಗೆ ತನ್ನ ತಂದೆಯ ಈ ಹೆಂಬೇಡಿತನ ತನಗೆ ಚಿರಂತನವಾಗಿ ಕಾಡುತ್ತಿದ್ದ ಅಪಮಾನ. ತಾನು ಮಾತ್ರ ತನ್ನ ತಂದೆಯಂತೆ ಹೆಂಬೇಡಿಯಾಗಬಾರದು, ಅವನಂತೆ ಕುಡಿಯುವ, ಕುಣಿಯುವ ಪಿಳ್ಳಂಗೋವಿ ಊದಿಕೊಂಡಿರುವ ಸೋಂಬೇರಿಯಾಗಬಾರದು, ಗಂಡುತನವನ್ನು ಬೆಳೆಸಿಕೊಂಡು, ಯಾವುದಕ್ಕೂ ಜಗ್ಗದ ಗಂಡುಗಲಿ ಬಾಳು ಬಾಳಬೇಕು ಎಂದೇ ಶಪಥ ಮಾಡಿಕೊಂಡವ.

ಕತೆ ಒಕೊಂಕ್ವೊ ಮಾಡುವ ಕುಸ್ತಿಯಿಂದಲೇ ಸುರುವಾಗುತ್ತದೆ. ಅವನು 'ಬೆಕ್ಕು' ಎನ್ನುವ ಮಹಾಸಾಹಸಿಯನ್ನು ಕುಸ್ತಿಯಲ್ಲಿ ಕೆಡವಿ ಎಲ್ಲರೂ ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವಂತೆ ಮಾಡಿದವ. ಅವನು ಗೆದ್ದಾಗ ಬಾರಿಸಿದ ಡೊಳ್ಳೇನು, ಊದಿದ ಕೊಳಲೇನು, ಹೊರಟ ಉದ್ಗಾರ ಖುಷಿ ಕೋಲಾಹಲಗಳೇನು! :

> 'ಒಕೊಂಕ್ವೊ ಎತ್ತರದ ದೈತ್ಯ ವ್ಯಕ್ತಿ. ಅವನ ಹುಬ್ಬಿನ ಪೊದೆಗಳು ಮೂಗಿನ ಹೊಳ್ಳೆಗಳು ಭಯಾನಕವಾದುವು. ಅವನು ಮಲಗಿದಾಗ ಅವನ ಉಸಿರಾಟ ಹೊರಮನೆಯಲ್ಲಿ ಮಲಗಿದ ಅವನ ಹೆಂಡಂದಿರು ಮತ್ತು ಮಕ್ಕಳಿಗೆಲ್ಲಾ ಕೇಳಿಸುವಷ್ಟು ಗದ್ದಲದ್ದು. ಅವನು ನಡೆದನೆಂದರೆ ಅವನ ಹಿಮ್ಮಡಿ ನೆಲಕ್ಕೆ ತಾಗುತ್ತಿರಲಿಲ್ಲ, ಅವನು ಯಾರ ಮೇಲಾದರು ಜಿಗಿದು ಬೀಳುತ್ತಾನೋ ಅನ್ನಿಸುತ್ತಿತ್ತು. ಅಷ್ಟೇ ಅಲ್ಲ ಅವನು ಅನೇಕ ವೇಳೆ ಹಾಗೇನೇ ಜನರ ಮೇಲೆ ಜಿಗಿದುಬಿದ್ದುದ್ದೂ ಉಂಟು. ಅವನಿಗೆ

> ಸ್ವಲ್ಪ ಉಗ್ಗು ಇತ್ತು. ಅವನಿಗೆ ಕೋಪ ಬಂದಾಗಲಂತೂ ಅವನ
> ಉಗ್ಗುತ್ತಾ ಮಾತು ಬರದಿದ್ದಾಗ ಅವನ ಮುಷ್ಟಿಯನ್ನೇ ಉಪಯೋಗಿ
> ಬಿಡುತ್ತಿದ್ದ. ಅವನಿಗೆ ಸೋತ ಜನರೆಂದರೆ ಆಗದು. ಆದ್ದರಿಂದ ಅವ
> ತಂದೆಯೊಂದಿಗೆ ಅವನಿಗೆ ತಾಳ್ಮೆ ಇರಲಿಲ್ಲ.

ಒಕೊಂಕ್ವೊವಿಗೆ ದೆವ್ವ ಹಿಡಿದಂತೆ ಹಿಡಿದ ಒಂದೇ ಒಂದು ತೆವಲೇನೆಂದರೆ ತಾನ ತನ್ನ ಗಂಡುಗಲಿತನದಿಂದೊಂದರಿಂದಲೇ ತನ್ನ ಹೇಡಿ ತಂದೆಯ ನೆನಪನ್ನಳಿಸಬೇಕೆಂಬುದು ಆದರೆ ತನ್ನ ಇಗ್ಬೊ ಜನಾಂಗ ಯಾವಾಗಲೂ ಒಬ್ಬ ವ್ಯಕ್ತಿಯ ಮೇಲುಕೀಳನ್ನ ಅವ ತಂದೆಯ ಮೇಲುಕೀಳಿನಿಂದ ಅಳೆಯುತ್ತಿರಲಿಲ್ಲ; ಅವನವನ ಸದ್ಯದ ಮೇಲುಕೀಳುಗ ಮೇಲೆಯೇ ಅವನವನ ಸ್ವಂತ ಕೆಲಸಕಾರ್ಯಗಳ ಮೇಲೆಯೇ ಅವನ ಬೆಲೆ ಕಟ್ಟುತ್ತಿತ್ತು ಅಷ್ಟೇ ಅಲ್ಲ ಇಗ್ಬೊ ಜನಾಂಗ ತನ್ನ ಕಟ್ಟಳೆಗಳನ್ನು ಕಾಲ ಮತ್ತು ಸಂದರ್ಭಕ್ಕೆ ತಕ್ಕಂ ಸ್ವಲ್ಪಮಟ್ಟಿಗೆ ಸಡಿಲಮಾಡಿಕೊಳ್ಳಬಲ್ಲ ಮಾನವೀಯತೆ, ಅಥವಾ ಹೆಂಗರುಳುತ ಉಳ್ಳದ್ದು. ಆದರೆ ಒಕೊಂಕ್ವೊ ಕಟ್ಟಳೆಯೆಂದರೆ ಚಾಚೂತಪ್ಪದೆ ಪಾಲಿಸಬೇಕೆನ್ನು ಕಠೋರವಾದದ ಗಂಡುಗಲಿ. ಇದೇ, ಈ ಗಂಡುಗಲಿತನವೇ, ಒಕೊಂಕ್ವೊವಿನ ದುರಂತ ನಾಂದಿಯಾಗುತ್ತದೆ.

ಒಕೊಂಕ್ವೊವಿನ ಈ ಗಂಡುಗಲಿತನದ ಗುಟ್ಟೇನು? ಇವನ ಕಠೋರತೆಂ ಮರ್ಮವೇನು? ಇವನೇಕೆ ತನ್ನಲ್ಲಿ ಎಲ್ಲಾ ಗಂಡುಗಳಲ್ಲಿ ಸಹಜವಾಗಿರುವ ಹೆಣ್ಣಿನ ವನ್ನ, ಅಂದರೆ ಪ್ರೇಮಕರುಣೆಗಳೆನ್ನುವ ಹೆಂಗರುಳಿನ ಅಂಶವನ್ನೇ ಹತ್ತಿಕ್ಕಿದ್ದಾನೆ?

ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಒಂದೇ: ಭಯ. ಒಕೊಂಕ್ವೊವಿನ ಜೀವ ಭಯ. ಭಯವೇ ಅವನ ಚೈತನ್ಯ, ಅವನ ಸಾಹಸ ಸಾಮರ್ಥ್ಯಗಳ ಬುನಾದಿ:

> ಬಹುಶಃ ಒಕೊಂಕ್ವೊ ತನ್ನ ಹೃದಯಾಂತರಾಳದಲ್ಲಿ ಕ್ರೂರಿಯಲ್ಲ. ಅ
> ಅವನ ಬಾಳೆಲ್ಲವು ಭಯದಿಂದ, ಅಯ್ಯೋ ಸೋತುಬಿಟ್ಟೇನು ಅನ್ನು
> ಆತಂಕದಿಂದ, ಬಲಹೀನನಾದೇನೆನ್ನುವ ಬುಗಿಲಿನಿಂದ ಆಳಲ್ಪಟ್ಟಿತ್ತು.
> ಭಯ, ಈವಿಲ್ ಅಂದರೆ ಕೇಡೆನ್ನುವ ಭಯಕ್ಕಿಂತಲೂ, ಮನಬಂದ
> ಆಟವಾಡಿಸುವ ದೇವತೆಗಳ ಭಯಕ್ಕಿಂತಲೂ, ಮಾಟ ಮಂತ್ರ
> ಭಯಕ್ಕಿಂತಲೂ, ಕಾಡಿನ ಭಯಕ್ಕಿಂತಲೂ, ನಿಸರ್ಗದ ರಕ್ತದ ಹ
> ರಕ್ತದ ಉಗುರುಗಳ ಭಯಕ್ಕಿಂತಲೂ, ಭಯಾನಕವಾದದ್ದು.
> ಎಲ್ಲಕ್ಕಿಂತಲೂ ಘೋರವಾದ ಈ ಭಯ ಹೊರಗಿನದಲ್ಲ: ಅವನ ಒಳ
> ಹುದುಗಿದ್ದ ಬುಗಿಲು. ಇದು ಅವನಿಗೆ ಅವನದೇ ಭಯ, ತಾ
> ತಂದೆಯಂತೆಯಾದೇನೋ ಎನ್ನುವ ತನಗೆ ತಾನೆ ಹೆದರುವ ಭಯ
> ಆದ್ದರಿಂದ ಒಕೊಂಕ್ವೊವಿನಲ್ಲಿದ್ದ ಒಂದೇ ಒಂದು ಭಾವೋದ್ರೇಕ:
> ತಂದೆ ಉನೋಕಾ ಪ್ರೀತಿಸಿದ್ದನ್ನೆಲ್ಲಾ ದ್ವೇಷಿಸುವುದು. ಅವುಗಳಲ್ಲಿ ಒ
> ಕರುಣೆ ಇನ್ನೊಂದು ಆಲಸ್ಯ.

ಹೀಗೆ ಒಕೊಂಕ್ವೊವಿನಲ್ಲಿನ ದ್ವಂದ್ವ ಗಂಡು ಮತ್ತು ಹೆಣ್ಣಿನ ದ್ವಂದ್ವ ಯಾವ
ುನುಷ್ಯನಲ್ಲಿ ಗಂಡು ಮತ್ತು ಹೆಣ್ಣಿನ ಅಂಶಗಳು, ಅಂದರೆ ಕಲಿತನ ಮತ್ತು ಕರುಣೆ,
ತಿ (power) ಮತ್ತು ಪ್ರೀತಿ (love) ಸಮತೋಲನದಲ್ಲಿರುತ್ತವೋ ಅವನು
ರಿಪೂರ್ಣನಾದ ಮಾನವನಾಗುತ್ತಾನೆ. ಅದಕ್ಕೇ ನಮ್ಮ ಪರಂಪರೆಯಲ್ಲಿ ಅರ್ಧನಾರೀ
್ವರ ಕಲ್ಪನೆ ಇದೆ. ಈಶ್ವರ ಅರ್ಧ ಶಿವ, ಅರ್ಧ ಪಾರ್ವತಿ ಹೀಗಾಗಿ ಈಶ್ವರನಲ್ಲಿ ಗಂಡು
ುತ್ತು ಹೆಣ್ಣು ಸಮತೋಲನದಲ್ಲಿವೆ. ನಾವೆಲ್ಲರೂ ಗಂಡಾಗಲೀ ಹೆಣ್ಣಾಗಲಿ ಗಂಡು
ಣ್ಣಿನ ಸಮಾಗಮದಿಂದ ಹುಟ್ಟಿದವರಲ್ಲವೇ? ಅದಕ್ಕೇ ನಮ್ಮಲ್ಲಿ ತಂದೆಯ ಗಂಡಿನ
ಂಶ, ತಾಯಿಯ ಹೆಣ್ಣಿನ ಅಂಶ ಎರಡೂ ಸೇರಿವೆ. ಆ ಸಮಭಾಗದ ತೂಕ ನಮ್ಮಲ್ಲಿ
ಪ್ಪಿದಾಗ, ಅಂದರೆ ನಾವು ಗಂಡೇ ಆಗಿಬಿಟ್ಟಾಗ ಗೂಳಿಯಾಗಿಬಿಡುತ್ತೇವೆ; ಹೆಣ್ಣೇ
ದಾಗ ಹೆಣ್ಣಿಗರಾಗಿ ಬಿಡುತ್ತೇವೆ. ಇವೆರಡರ ಸಮತೋಲನವೇ ಬಾಳು.

ಇಗ್ಬೊ ಬುಡಕಟ್ಟಿನಲ್ಲಿ ಈ ಗಂಡುಹೆಣ್ಣಿನ ಸಮತೋಲನ ಸಾಕಷ್ಟಿದೆ.
ುದರಲ್ಲಿರುವ ಕಟ್ಟಳೆಗಳ ಸಡಿಲತೆ, ಅನುಕೂಲಕ್ಕೆ ಬಾಗುವ ಪ್ರವೃತ್ತಿ ಇದರಲ್ಲಿನ
ಣ್ಣಿನ ಅಂಶವನ್ನ ಎತ್ತಿ ತೋರಿಸುತ್ತದೆ. ಆದರೆ ಒಕೊಂಕ್ವೊ ಇದಕ್ಕೆ ವಿರೋಧಿ.
ುವನು ಕಟ್ಟಾಗಂಡುಗಲಿ: ಕಟ್ಟಳೆಯನ್ನ ಚಾಚೂಮೀರದ ಕಠೋರಿ. ಇದರಿಂದಾಗಿ
ಕೊಂಕ್ವೊವಿಗೂ ತನ್ನ ಇಗ್ಬೊ ಸಮಾಜಕ್ಕೂ ಒಂದು ತೀವ್ರವಾದ ದುರಂತ ಪ್ರಸಂಗ
ುಂದೊದಗುತ್ತದೆ. ಈ ಪ್ರಸಂಗವೇ ಒಕೊಂಕ್ವೊವಿನ ಏಳು ಬೀಳನ್ನ, ಅದೇ ಕಾಲದಲ್ಲಿ
ನ್ನ ಸಮಾಜದ ಆಗುಹೋಗುಗಳನ್ನ ನಿರ್ಧರಿಸುತ್ತದೆ.

ಒಕೊಂಕ್ವೊ ಪಕ್ಕದಹಳ್ಳಿಯಿಂದ ಶಾಂತಿಯ ಒಪ್ಪಂದಕ್ಕಾಗಿ ಒಂದು ಕನ್ಯೆಯನ್ನೂ
ಬ್ಬ ಚಿಕ್ಕಮಗು ಇಕೆಮೆಫ್ಯೂನಾನನ್ನು ಪಡೆದಿರುತ್ತಾನೆ. ಆ ಕನ್ಯೆಯನ್ನು ಮದುವೆ
ುಾಗಿ, ಆ ಹುಡುಗನನ್ನ ತಾನೇ ಸಾಕುತ್ತಿರುತ್ತಾನೆ. ಆ ಮುಗ್ಧ ಮಗುವಾದರೋ
ಕೊಂಕ್ವೊವನ್ನೇ ತಂದೆಯೆಂದು ಪ್ರೀತಿಸುತ್ತದೆ. ಆ ಮಗು ಎಷ್ಟು ಮುದ್ದಾದ್ದು
ಪ್ರೇಮವುಳ್ಳದ್ದು ಎಂದರೆ ಅದು ಒಕೊಂಕ್ವೊವಿನ ಮಗನಾದ ನ್ವೋಯೇಯ
ೃದಯವನ್ನೂ ಗೆದ್ದಿರುತ್ತಾನೆ. ಆ ಮಗುವಿನ ಮೇಲೆ ಎಲ್ಲರಿಗೂ ಪ್ರೀತಿ.
ಕೊಂಕ್ವೊವೂ ಅವನನ್ನ ತನ್ನ ಮಗನಾಗಿ ಮಾಡಿಕೊಂಡುಬಿಟ್ಟಿರುತ್ತಾನೆ. ಆದರೆ
ುಂದುಸಾರಿ ಆ ಶಾಂತಿಗಾಗಿ ಬಳುವಳಿಯಾಗಿ ಕೊಟ್ಟಿದ್ದ ಮಗುವಿನ ಬಲಿ ಮಾಡಬೇಕಾಗು
ತ್ತದೆ. ಇಗ್ಬೊ ಸಮಾಜದ ಕಲ್ಯಾಣಕ್ಕಾಗಿ ಹೊರಗಿನ ಹಳ್ಳಿಯ ಶತ್ರುವಿನ ಮಗುವನ್ನ
ಬಲಿದಾನ ಮಾಡಬೇಕಾಗುತ್ತದೆ. ನಾಯಕನಾಗಿದ್ದ ಒಕೊಂಕ್ವೊವಿಗೆ ಈ ಸಂದಿಗ್ಧ
ುಂದೊದಗುತ್ತದೆ. ಮಗುವನ್ನು ಬಲಿಕೊಡದೇ ಬೇರೆ ದಾರಿಯಿಲ್ಲ; ತಾನು ತನ್ನ
ಸಮಾಜದ ಒಳಿತನ್ನು ಕಾಪಾಡಬೇಕಾದ ಗಂಡುಗಲಿ ತಾನು ಅಳುಕುವುದುಂಟೇ? ಈ
ಸಂದರ್ಭದಲ್ಲಿ ಮಾನವೀಯನಾದ ಒಬ್ಬೆರೀಕಾ ಎನ್ನುವ ಹಿರಿಯ ಒಕೊಂಕ್ವೊವಿಗೆ
ಒಂದು ಮಾನವೀಯ ಮಾರ್ಗವನ್ನ ತೋರಿಸುತ್ತಾನೆ. ಇಗೋ, ನೀನು ನಿನ್ನ
ಮಗನಂತಿರುವ ಇಕೆಮೆಫ್ಯೂನಾನನ್ನು ನೀನೇ ಕೈಯಾರೆ ಕೊಲ್ಲಬೇಡ. ಆ ಮಗು
ಸಾಯಬೇಕಾದ್ದು ತಪ್ಪಿಸುವಹಾಗಿಲ್ಲ. ನಾಯಕನಾದ ನೀನು ಆ ಬಲಿಯ ಕಾರ್ಯವನ್ನು
ನಿರ್ವಹಿಸಬೇಕು. ಆದರೆ ನೀನೇ ಆ ಮಗುವಿನ ವಧೆಯನ್ನು ಮಾಡಬೇಕೆಂದೇನಿಲ್ಲ.

ನೀನು ಮಾತ್ರ ಮನೆಯಲ್ಲಿರು. ನಿನ್ನ ಜನ ಆ ಹತ್ಯೆಯನ್ನ ಮಾಡಲಿ ಆಗ ನಿನಗೆ ನೀನೇ ಕೈಯಾರೆ ಕಂಡಮ್ಮನನ್ನ ಕೊಂದ ನೋವು ತಟ್ಟುವುದಿಲ್ಲ.

ಇಲ್ಲಿ ನೋಡಿ, ಹೇಗೆ ಇಗ್ಬೊ ಸಮಾಜದಲ್ಲೇ ಮಾನವೀಯ ಮಾರ್ಗಗಳಿಗೆ ಅವಕಾಶ ವಿದೆ, ಹೇಗೆ ಅದು ಮಾನವೀಯತೆ ಹೆಣ್ಣಾಗಿ ಬಾಗುತ್ತದೆ, ಅನುಕೂಲ್ಯವಾಗುತ್ತದೆ ಎನ್ನುವುದನ್ನ. ಅದೀಗ ಈ ಸಮಾಜದಲ್ಲಿರುವ ಬಾಗುವ ಬಗ್ಗುವ ಮಾನವೀಯ ವ್ಯವಸ್ಥೆ. ಆದರೆ ಗಂಡುಗಲಿಯಾದ ಒಕೊಂಕ್ವೊವಿಗೆ ತಾನೇ ಈ ಸಮಾಜದ ನಾಯಕನಾಗಿ ತನ್ನ ಸಮಾಜದ ಕಟ್ಟಳೆಗಳನ್ನ ತಾನೇ ಪಾಲಿಸಬೇಕಲ್ಲವೆ? ತಾನು ಹಿಂಜರಿದು ಮನೆಯಲ್ಲಿ ಕೂತರೆ ತನ್ನನ್ನು ಹೆಣ್ಣಿಗನೆಂದಾರಲ್ಲವೇ? ಆಗ ತಾನು ತನ್ನ ತಂದೆ ಉನೋಕೋನಂತೆ ಹೆಣ್ಣಿಗನಾಗುವುದಿಲ್ಲವೇ? ತಾನೆಂದೆಂದಿಗೂ ತನ್ನ ತಂದೆಯಾಗಬಾರದು: ಆ ತಂದೆಯ ಯಾವ ಮಾನವೀಯ ಅಥವಾ ಹೆಂಗರುಳಿನ ಕೆಲಸ ಮಾಡಬಾರದು. ಇದು ಸರ್ವಥಾ ಕೂಡದು. ಇದೀಗ ಒಕೊಂಕ್ವೊವಿನ ಅಮಾನುಷ ನಿಲುವು. ಅದಕ್ಕೆ ಒಕೊಂಕ್ವೊ ಒಬ್ಬೆರೀಕಾನ ಮಾನವೀಯ ಹಿತನುಡಿಯನ್ನ ತಳ್ಳಿಹಾಕುತ್ತಾನೆ. ತಾನೂ ಕಾಡಿಗೆ ಇಕೆಮೆಫ್ಯೂನಾನಬಲಿಗೆ ಅವರೊಡನೆ ನಡೆದು ಬರುತ್ತಾನೆ. ಈ ಅತ್ಯಂತ ಹೃದಯ ವಿದ್ರಾವಕವಾದ ಘಟನೆಯನ್ನ ನೋಡಿ:

> ಹೀಗೆ ಉಮೋಫಿಯಾದ ಜನರು ಕೈಯಲ್ಲಿ ಮಚ್ಚು ಹಿಡಿದು ಮುಂದೆ ನಡೆದರು. ಮಧ್ಯದಲ್ಲಿ ಇಕೆಮೆಫ್ಯೂನ, ತಲೆಯಮೇಲೆ ತೆಂಗಿನ ಕಳ್ಳಿನ ಮಡಕೆ ಹೊತ್ತುಕೊಂಡು, ಅವರೊಂದಿಗೆ ನಡೆದ. ಮುಂಚೆ ಅವನಿಗೆ ಸ್ವಲ್ಪ ಕಳವಳವಾಗಿತ್ತಾದರೂ ಈಗ ಮಾತ್ರ ಅವನಿಗೆ ಭಯವಿರಲಿಲ್ಲ. ಅವನಿಗೆ ಒಕೊಂಕ್ವೊ ತನ್ನ ತಂದೆಯಲ್ಲವೆನ್ನುವುದು ನಂಬಲಿಕ್ಕಾಗದ ವಿಷಯ. ಅವನು ತನ್ನ ನಿಜವಾದ ತಂದೆಯ ಬಗ್ಗೆ ಹಚ್ಚಿಕೊಂಡವನೇ ಅಲ್ಲ. ಮೇಲತ್ತೂ ಈ ಮೂರು ವರ್ಷಗಳಾದಮೇಲೆ ಒಕೊಂಕ್ವೊ ಜೊತೆಗೆ ಇದ್ದುದರಿಂದ ಅವನಿನ್ನೂ ದೂರ ಸರಿದಿದ್ದ. ಆದರೆ ಅವನ ತಾಯಿ ಮತ್ತು ತನ್ನ ಮೂರುವರ್ಷದ ಮಗು....ಹೌದು, ಈಗವಳು ಮೂರು ವರ್ಷದವಳಲ್ಲ, ಆರುವರ್ಷದವಳು. ಈಗ ಅವಳನ್ನ ಅವನು ಗುರುತು ಹಿಡಿಯಬಹುದೇ? ತುಂಬಾ ದೊಡ್ಡವಳಾಗಿರಬೇಕು. ಈಗ ಅವಳು; ಅವನ ತಾಯಿಯಂತೂ ಹಿಗ್ಗಿನಿಂದ ಅತ್ತೇಬಿಡುತ್ತಾಳೆ. ಅಲ್ಲದೆ ಒಕೊಂಕ್ವೊವನ್ನ ತನ್ನನ್ನ ಇಷ್ಟು ಚೆನ್ನಾಗಿ ನೋಡಿಕೊಂಡಿದ್ದಕ್ಕಾಗಿ ಮತ್ತು ತನ್ನನ್ನು ಹಿಂದಕ್ಕೆ ತಂದುಬಿಟ್ಟಿದ್ದಕ್ಕಾಗಿ ಮನಸಾರೆ ಕೊಂಡಾಡು ತ್ತಾಳೆ. ಅವಳು ತನಗೆ ಈ ಮೂರು ವರ್ಷ ಏನೇನಾಯಿತು ಅದೆಲ್ಲಾ ಕೇಳಿ ತಿಳಿಯಬಯಸುತ್ತಾಳೆ. ತನಗೆ ಅದೆಲ್ಲಾ ಜ್ಞಾಪಕವಿದೆಯೇ? ಅವಳಿಗೆ ಅವನು ನ್ವೋಯೇ ಬಗ್ಗೆ, ಅವನ ತಾಯಿಯ ಬಗ್ಗೆ, ಮತ್ತೆ ಮಿಡಿತೆಗಳ ಬಗ್ಗೆ....ಆದರೆ ತಕ್ಷಣ ಒಂದು ಯೋಚನೆ ಹೊಳೆಯಿತು. ತನ್ನ ತಾಯಿ ಸತ್ತುಹೋಗಿರಬಹುದು. ಆ ಯೋಚನೆಯನ್ನ ತನ್ನ ಮನಸ್ಸಿನಿಂದ ಕಿತ್ತು

ಹಾಕಲು ಯತ್ನಿಸಿದ. ಆಗ ಆ ಸಮಸ್ಯೆಯ ಪರಿಹಾರವನ್ನು ತಾನು ಚಿಕ್ಕವನಿದ್ದಾಗ ಮಾಡುತ್ತಿದ್ದ ತಂತ್ರದಿಂದ ಬಗೆಹರಿಸಲು ಪ್ರಯತ್ನಿಸಿದ. ಅವನಿಗೆ ಆ ಹಾಡು ಇನ್ನೂ ಜ್ಞಾಪಕವಿತ್ತು.

ಈಜೆ ಎಲೀನಾ, ಎಲೀನಾ !
ಸಾಲಾ
ಈಜೆ ಇಲಿಕ್ವಾ ಯಾ
ಇಕ್ವಾಹ ಅಕ್ವಾ ಒಲಿಗೋಲೀ
ಏಹೆ ದಂಡಾ ನೋಬೆ ಈಜೆ
ಏಹೆ ಉಜೂಜು ನೇತೆ ಎಗ್ವು
ಸಾಲಾ

ಆ ಹಾಡನ್ನ ಅವನು ತನ್ನ ಮನಸ್ಸಿನಲ್ಲೇ ಹಾಡಿಕೊಂಡ. ಆ ಹಾಡು ತಾನು ನಡೆಯುತ್ತಿರುವಂತೆ ತನ್ನ ಬಲಗಾಲಮೇಲೆ ಕೊನೆಯಾದರೆ, ಅವನ ತಾಯಿ ಬದುಕಿದ್ದಾಳೆ. ಅದು ಎಡಗಾಲಮೇಲೆ ಮುಗಿದರೆ, ಅವಳು ಸತ್ತಿದ್ದಾಳೆ. ಆ ಹಾಡು ಬಲಗಾಲಮೇಲೆ ಕೊನೆಯಾಯಿತು. ತಾಯಿ ಬದುಕಿದ್ದಾಳೆ, ಚೆನ್ನಾಗಿದ್ದಾಳೆ! ಮತ್ತೆ ಆ ಹಾಡನ್ನ ಹಾಡಿದ. ಆದರೆ ಈಗ ಅದು ಎಡಗಾಲ ಮೇಲೆ ನಿಂತಿತು. ಆದರೆ ಎರಡನೇ ಬಾರಿ ಲೆಕ್ಕಕ್ಕಿಲ್ಲ. ಯಾವಾಗಲೂ ಮೊದಲನೇ ಕೂಗೇ ಚುಕ್ವು ದೇವರ ಮನೆಗೆ ತಲುಪುತ್ತದೆ. ಅದೊಂದು ಮಕ್ಕಳಲ್ಲಿ ಪ್ರಿಯವಾದ ಆಟಿಕೆ. ಇಕೆಮೆಫ್ಯೂನಾ ಮತ್ತೊಮ್ಮೆ ಮಗುವಾಗಿಬಿಟ್ಟ.

ಸುತ್ತಲಿದ್ದ ಜನರಲ್ಲೊಬ್ಬ ಕೆಮ್ಮಿ ಗಂಟಲು ಸರಿಮಾಡಿಕೊಂಡ. ಇಕೆಮೆ ಫ್ಯೂನಾ ತಿರುಗಿ ನೋಡಿದ. ಆ ಮನುಷ್ಯ ದುರು ದುರು ನೋಡುತ್ತಾ "ನಿಲ್ಲಬೇಡ, ಮುಂದೆ ನಡಿ" ಎಂದು ಗದರಿಸಿದ. ಅವನು ಹೇಳಿದ ರೀತಿಗೆ ಇಕೆಮೆಫ್ಯೂನಾನ ಮೈಯೆಲ್ಲಾ ಭಯದಿಂದ ತಣ್ಣಗಾಯಿತು. ಅವನ ಕೈಗಳು ತಾನು ಹೊತ್ತಿದ್ದ ಕಪ್ಪು ಮಡಕೆಯ ಸುತ್ತ ಅದುರಿದುವು. ಯಾತಕ್ಕೆ ಒಕೊಂಕ್ವೊ ಹಿಂದೆ ಬಿದ್ದಿದ್ದಾನೆ? ಇಕೆಮೆಫ್ಯೂನಾನ ಕಾಲು ಹಾಗೆ ಕರಗುವಂತೆ ಕಂಡವು. ಆದರೆ ಹಿಂತಿರುಗಿ ನೋಡಲು ಅವನಿಗೆ ಹೆದರಿಕೆ.

ಗಂಟಲು ಸರಿಮಾಡಿಕೊಂಡ ವ್ಯಕ್ತಿ ತನ್ನ ಮಚ್ಚನ್ನು ಹೊರತೆಗೆದು ಎತ್ತಿಹಿಡಿದ. ಒಕೊಂಕ್ವೊ ತಲೆಯನ್ನ ತಿರುಗಿಸಿದ. ಅವನಿಗೆ ಆ ಹೊಡೆತದ ಸದ್ದು ಕೇಳಿತು. ಆ ಮಡಕೆ ಬಿದ್ದು ಮರಳಲ್ಲಿ ಒಡೆದು ಹೋಯಿತು. ಇಕೆಮೆಫ್ಯೂನಾ ಚೀರಿದ, ತನ್ನ ತಂದೆಯತ್ತ ಓಡಿದ: "ಅಪ್ಪಾ, ಇದೋ ಅವರು ನನ್ನ ಕೊಂದರು." ಭಯದಿಂದ ಕಂಗೆಟ್ಟ

ಒಕೊಂಕ್ವೊ, ತನ್ನ ಮಚ್ಚನ್ನು ಬಿಚ್ಚಿದ, ಒಂದೇ ಏಟಿಗೆ ಮಗುವನ್
ತರಿದುಬಿಟ್ಟ ! ತನ್ನನ್ನ ಅಂಜುಬುರುಕ ಎಂದರಲ್ಲಾ ಅನ್ನುವ ಭಯ ಅ
ನನ್ನು ಕಾಡಿತ್ತು.

ಇದೀಗ ಒಕೊಂಕ್ವೊವಿನ ಇಡಿಯ ಬಾಳಿನ ಮಹಾದುರಂತ. ಈ ಅಪ್ಪಾ ಎಂದು ಕರೆದ ಕಂದಮ್ಮನ ಕಗ್ಗೊಲೆ ಒಕೊಂಕ್ವೊವಿನ ಆತ್ಮಹತ್ಯೆಯ ಮೊದಲ ಪೆಟ್ಟೇ ಸರಿ. ಈ ಅಮಾನುಷ ದುರ್ಘಟನೆ ಒಕೊಂಕ್ವೊವಿನ ಬಾಳಿನ ದಿಕ್ಕನ್ನೇ ಬದಲಿಸಿ ಅವನ ಆತ್ಮಹತ್ಯೆಗೆ ನಾಂದಿಯಾಗಿಬಿಡುತ್ತದೆ.

ಇಲ್ಲಿ ನಾವು ಕಂಡುಕೊಳ್ಳಬೇಕಾದ ಸತ್ಯ ಒಕೊಂಕ್ವೊವಿನ ಕ್ರೌರ್ಯವಲ್ಲ: ಅವನ ಆಂತರಿಕಭಯ. ಆ ಭಯದ ಪರಿಣಾಮವೇ ಈ ಕ್ರೌರ್ಯ. ತನ್ನನ್ನು ತಂದೆಮಾಡಿ ಕೊಂಡು "ಅಪ್ಪಾ!" ಎಂದು ಮರೆಹೊಕ್ಕ ಕಂದಮ್ಮನನ್ನ ಕೊಲ್ಲಲು ಕೈಯೆತ್ತ ಬೇಕಾದರೆ ಅದು ಅವನ ಕ್ರೌರ್ಯವಾಗಲೀ, ಗಂಡುಗಲಿ ತನವಾಗಲಿ ಅಲ್ಲ: ಅವನ ಭಯದ ವಿಹ್ವಲತೆ. ಅದಕ್ಕೇ ಅವನು ಮಚ್ಚನ್ನು ಬೀಸಿ ಹೊಡೆಯುವುದಕ್ಕೆ ಮುಂಚೆ Dazed with fear ಅಂದರೆ 'ಭಯದಿಂದ ಕಂಗೆಡು'ತ್ತಾನೆ.

ಹೀಗೆ, ಮ್ಯಾಕ್ ಬೆತ್ತನಿಗೆ ತನ್ನ ತಂದೆಯಂತಿದ್ದ ದೊರೆ ಡಂಕನ್ನನನ್ನು ಕೊಲೆ ಮಾಡಲು ತಾನು ರಾಜನಾಗಬೇಕೆಂಬ ಮಹತ್ವಾಕಾಂಕ್ಷೆಗಿಂತಲೂ ತನ್ನಲ್ಲಿ ಹುದಿಗಿದ್ದ ಭಯವೇ ಹೇಗೆ ಕಾರಣವೋ ಹಾಗೇನೇ ಒಕೊಂಕ್ವೊವಿಗೆ ತಾನು ಗಂಡುಗಲಿ ಎನಿಸಿ ಕೊಳ್ಳಬೇಕೆನ್ನುವುದಕ್ಕಿಂತಲೂ ತನ್ನ ಭಯದಿಂದ ಪಾರಾಗುವುದೇ ಕಾರಣವಾಗಿ ಅವನಿಂದ ಇಕೆಮೆಫ್ಯೂನಾನ ಕೊಲೆಯಾಗಿ ಬಿಡುತ್ತದೆ. ಒಕೊಂಕ್ವೊ ಮ್ಯಾಕ್‌ಬೆತ್ತರು ಭಯಕ್ಕೆ ಕಂಗೆಟ್ಟ ದುರಂತ ವ್ಯಕ್ತಿಗಳು. ಇಬ್ಬರೂ ಕೊಲೆ ಮಾಡಿದ ಮೇಲೆ ಒಳಗೇ ಮುರಿದು ಬಿದ್ದು ಕೊನೆಗೆ ಸಾವನ್ನಪ್ಪುತ್ತಾರೆ.

ಭಯವೇ ಒಕೊಂಕ್ವೊವಿನ ವ್ಯಕ್ತಿತ್ವದ ಗುಟ್ಟು. ಅವನ ಗಂಡುಗಲಿತನ ಅವನು ತನ್ನ ಭಯವನ್ನು ಎದುರಿಸುವ ಸನ್ನಾಹ, ತಂತ್ರ. ಅವನ ಕ್ರೌರ್ಯ, ನಿರ್ದಯತೆ ಕಠೋರತೆ ತನ್ನ ಭಯದ ಹೋರಾಟಗಳಷ್ಟೇ. ಯಾವಾಗ ಒಕೊಂಕ್ವೊ ತನ್ನ ತಂದೆಯ ಖುಷಿಬಾಳಿನ ಹೆಣ್ಣುತನವನ್ನ, ಒಲವು ಕರುಣೆಗಳ ಹೆಂಗರಳುತನವನ್ನ ಅಲ್ಲಗಳೆದು ಗಂಡುಗಲಿತನವನ್ನ ಮೈಮೇಲೆ ಬರಿಸಿಕೊಂಡನೋ ಮೈತುಂಬಿ ಕುಣಿದನೋ ಆವಾಗಲೇ ಭಯ ಅವನಲ್ಲಿ ಮನೆಮಾಡಿಕೊಂಡುಬಿಟ್ಟಿತು. ಅಂದಿನಿಂದಲೇ ಒಕೊಂಕ್ವೊ ಕಠೋರತೆ ಕ್ರೌರ್ಯಗಳ ಕವಚ ತೊಟ್ಟುಬಿಟ್ಟ. ಆದರೆ ಭಯ ಮಾತ್ರ ಒಳಗೊಳಗೆ ಅವನಲ್ಲಿ ತನ್ನ ಕೊರೆಯುತ್ತಿತ್ತು. ಅವನ ಬಾಳಿನಲ್ಲಿ ಅತಿ ಘೋರವಾದ ಇಕೆಮೆಫ್ಯೂನಾನ ಕೊಲೆ ಅವನ ಈ ಕವಚವನ್ನ ಬೇಧಿಸಿ ಅವನ ಹೃದಯವನ್ನ ಇರಿದುಬಿಟ್ಟಿತು.

ಒಕೊಂಕ್ವೊ ತನ್ನನ್ನ ತಂದೆ ಮಾಡಿಕೊಂಡಿದ್ದ ಸಾಕು ಕಂದಮ್ಮನನ್ನ ಕೊಂದದ್ದು ತಾನು ತನ್ನ ಸ್ವಂತ ಮಗನಾದ ನ್ವೋಯೆಯನ್ನೂ, ತನ್ನನ್ನೂ ಸಾಂಕೇತಿಕ ವಾಗಿ ಕೊಂದಕೊಂಡದ್ದೇ. ಇಕೆಮೆಫ್ಯೂನಾನ ಕೊಲೆಯಿಂದ ನ್ವೋಯೆ ತಂದೆಯಿಂದ ದೂರ ಸರಿಯುತ್ತಾ ಹೋಗುತ್ತಾನೆ: ಕೊನೆಗೆ ತನ್ನ ತಂದೆಗೆ ಸಾವಿನಷ್ಟು ಘೋ

ವಾಗಿರುವ ಪರಧರ್ಮಕ್ಕೆ, ಕ್ರಿಸ್ತಧರ್ಮಕ್ಕೆ, ಸೇರಿಬಿಡುತ್ತಾನೆ. ಒಕೊಂಕ್ವೊವಾದರೋ, ತನ್ನ ಹಿತೈಷಿಯಾಗಿದ್ದ, ತನ್ನ ಸಾಕುಮಗನಾದ ಇಕೆಮೆಫ್ಯೂನಾನನ್ನು ಕೊಲ್ಲುವ ಕೈಯಾಗ ಬೇಡವೆಂದು ತನಗೆ ಹಿತನುಡಿದಿದ್ದ, ಎಜ್ಯೂಡು ಸತ್ತಾಗ, ಅವನ ಸಂಸ್ಕಾರಕ್ಕೆ ಹೋಗಿದ್ದ ಅವನ ಬಂದೂಕು ಅವನ ಕೈಯಿಂದ ಸಿಡಿದು ಎಜ್ಯೂಡುವಿನ ಮಗನನ್ನ ಕೊಂದು ಬಿಡುತ್ತದೆ. ಇದರಿಂದ ಒಕೊಂಕ್ವೊ ತನ್ನ ಜನಾಂಗದ ದೇವತೆಯ ಕೋಪಕ್ಕೆ ಈಡಾಗಿ, ಇದರಿಂದ ತನ್ನ ಜನರಿಂದಲೇ ತನ್ನ ಮನೆಮಾರಿನ ಧ್ವಂಸಕ್ಕೆ ತನ್ನೆಲ್ಲ ಜಾನುವಾರುಗಳ ಕೊಲೆಗೆ ಕಾರಣನಾಗಿಬಿಡುತ್ತಾನೆ. ಇಷ್ಟೇ ಅಲ್ಲ, ಈ ಘೋರಪಾಪಕ್ಕೆ ಏಳುವರ್ಷ ತನ್ನ ಹಳ್ಳಿ ಬಿಟ್ಟು ತನ್ನ ತಾಯಿಯ ಹಳ್ಳಿಗೆ ಗಡಿ ಪಾರಾಗಿಬಿಡುತ್ತಾನೆ.

ಒಕೊಂಕ್ವೊವಿನ ಈ ಏಳು ವರ್ಷದ ಗಡಿಪಾರಿನ ಜೀವನದಲ್ಲಿ, ತನ್ನ ಹಳ್ಳಿ ಕ್ರಿಶ್ಚಿಯನ್ ಮಿಷನರಿಗಳ ಪ್ರಭಾವದಿಂದ ಕ್ರಿಸ್ತಧರ್ಮದತ್ತ ವಾಲುತ್ತದೆ. ತನ್ನ ಮಗನಾದ ನ್ವೋಯೇ ಕ್ರಿಸ್ತಧರ್ಮಿಯಾಗಿ ಬಿಡುತ್ತಾನೆ. ಇದಕ್ಕೆ ಕಾರಣ ಇಗ್ಬೊ ಜನಾಂಗದ ಮೂಢನಂಬಿಕೆಗಳ, ಕಟ್ಟು ನಿಟ್ಟುಗಳ ಕಠೋರತೆಯೂ ಒಂದು ಪ್ರಬಲವಾದ ಕಾರಣ. ನ್ವೋಯೇ ಕಾಡಿನಲ್ಲಿ ಸಾಯಲು ಬಿಟ್ಟ ಅವಳಿ ಮಕ್ಕಳ ರೋದನವನ್ನ ಕೇಳಿ ಮಮ್ಮಲಮರುಗಿದವ. ಅವನಿಗಿಂತಲೂ ಹೆತ್ತತಾಯಂದಿರು ಅವಳ ಮಕ್ಕಳ ಸಾವಿಗೆ ಕಂಗೆಟ್ಟ ನಿಸ್ಸಹಾಯಕಿಯರು. ಅವರಿಗೆಲ್ಲಾ ಕ್ರಿಸ್ತಧರ್ಮ ಮಾನವೀಯವಾಗಿ ಕಾಣುತ್ತದೆ. ಈ ಧರ್ಮದಲ್ಲಿ ಅವಳಿಮಕ್ಕಳನ್ನ ಕೊಲೆಮಾಡುವಂತಿಲ್ಲ. ಇದರಲ್ಲಿ ಇಕೆಮೇಫ್ಯೂನಾರಂತಹ ಬಡಪಾಯಿಗಳ ಬಲಿತೆಗೆದುಕೊಳ್ಳುವುದಿಲ್ಲ. ಇದರಿಂದಾಗಿ ಇಗ್ಬೊ ಜನರಲ್ಲಿ ಕ್ರಿಸ್ತಧರ್ಮದ ಮಾನವೀಯತೆ ಹೆಚ್ಚು ಪ್ರಿಯವಾಗುತ್ತದೆ. ಅವರಲ್ಲಿ ಸಾಕಷ್ಟು ಜನ ಅದಕ್ಕೆ ಸೇರಿಬಿಡುತ್ತಾರೆ.

ಈ ಪರಿಸ್ಥಿತಿ ಗಡಿಪಾರಿನಿಂದ ಬಂದ ಒಕೊಂಕ್ವೊವಿಗೆ ತಲೆಕೆಡಿಸಿ ಬಿಡುತ್ತದೆ. ತನ್ನ ಧರ್ಮ, ತನ್ನ ಪೂರ್ವಜರು, ತನ್ನ ನೆಲ, ತನ್ನ ಜನ ಈ ಎಲ್ಲವೂ ಪರಕೀಯರಿಗೆ ಎರವಲಾಗಿ ಬಿಟ್ಟಿವೆ. ಇದನ್ನ ಇವನು ತಡೆಗಟ್ಟಲೇಬೇಕು. ಆದರೆ ಹೇಗೆ? ತನ್ನ ಜನ ಕ್ರಿಶ್ಚಿಯನ್ನರಾದರೂ ಅವರು ತಮ್ಮ ಇಗ್ಬೊ ಪೂರ್ವ ಜನರನ್ನ ಅಲ್ಲಗಳೆಯುತ್ತಿಲ್ಲ. ಮೇಲತ್ತೂ, ಈ ಕ್ರಿಸ್ತಮತಕ್ಕೆ ಸೇರಿದ ಸ್ವಜನರನ್ನು ತಾನಾಗಲೀ, ಹಿರಿಯರಾಗಲೀ, ಶಿಕ್ಷೆ ಮಾಡುವಂತಿಲ್ಲ. ಕೊಲೆಯಂತೂ ಮಾಡುವಹಾಗೇ ಇಲ್ಲ. ಹಾಗೆ ಕೊಲೆಮಾಡಿದರೆ ಸ್ವಜನರನ್ನ ಕೊಂದ ಪಾತಕ ತಪ್ಪುವುದಿಲ್ಲ. ಇದೀಗ ಒಕೊಂಕ್ವೊವಿಗೆ ಒದಗಿದ ಇಕ್ಕಟ್ಟು. ಇವನೇನುಮಾಡಬೇಕು? ಕ್ರಿಸ್ತಧರ್ಮದವರಲ್ಲಿ ಬಲವಿದೆ; ಅವರು ವಿದ್ಯಾಭ್ಯಾಸ ಕೊಡುತ್ತಾರೆ. ಒಳ್ಳೆಯದನ್ನ ಮಾಡುತ್ತಾರೆ. ಜನರನ್ನ ಅವರಿಂದ ಬಿಡಿಸಿಕೊಂಡು ಬರುವುದು ಹೇಗೆ? ಮೊದಲು ಜನ ಅದಕ್ಕೆ ಒಪ್ಪಬೇಕಲ್ಲವೇ? ಜನರಿಗೆ ಕ್ರಿಸ್ತಧರ್ಮದಿಂದ ಲಾಭವಾಗುತ್ತಿದೆ ಅವರಿಗೆ ವಿದ್ಯೆಸಿಗುತ್ತಿದೆ, ಅವರ ಬೆಳೆಗೆ ಒಳ್ಳೆಯ ಬೆಲೆಸಿಗುತ್ತಿದೆ. ಅವರ ಸ್ಥಿತಿ ಸುಧಾರಿಸುತ್ತಿದೆ. ಅವರಿಗೆ ಹೆಚ್ಚು ಸವಲತ್ತುಗಳು ಸಿಕ್ಕಿವೆ.

ಆದರೆ ಇದೆಲ್ಲಾ ಒಕೊಂಕ್ವೊವಿಗೆ ಭರಿಸಲಾರದ ನೋವು. ಒಮ್ಮೆ ಬಿಳಿಯರ ಡಿಸ್ಟ್ರಿಕ್ಟ್ ಕಮಿಷನರ್ ತನ್ನ ಜನರ ಆರು ಹಿರಿಯರನ್ನ ಸೆರೆಹಿಡಿದು ಮತ್ತೆ ಬಿಟ್ಟುಬಿಡುತ್ತಾರೆ. ಇದು ಒಕೊಂಕ್ವೊವಿಗೆ ತಾಳಲಾರದ ಅವಮಾನ. ಕೂಡಲೇ ಒಕೊಂಕ್ವೊ

ತನ್ನ ರಣರಂಗದ ಶಿರಸ್ತ್ರಾಣ, ಗುರಾಣಿಗಳನ್ನ ಹಿಡಿದು ಯುದ್ಧವಸ್ತ್ರಗಳಲ್ಲಿ ಹೊರಟು ಬರುತ್ತಾನೆ.

ಒಕೊಂಕ್ವೊ ಜನರನ್ನ ಸೇರಿಸಿ ಅವರಲ್ಲಿ ಅವರ ಧರ್ಮದ ಎಚ್ಚರವನ್ನು ತರಲು ಪ್ರಯತ್ನಿಸುತ್ತಾನೆ. ಅವನು ಅವರನ್ನು ಕುರಿತು ಮಾತಾಡುತ್ತಿದ್ದಾಗ ಆ ಕೂಟವನ್ನ ನಿಲ್ಲಿಸಲು ಬಿಳಿಯ ಸರ್ಕಾರದಿಂದ ಆಜ್ಞೆ ಬರುತ್ತದೆ. ಆ ಆಜ್ಞೆ ಹೊತ್ತ ಬೇಹುಗಾರನನ್ನ ಒಕೊಂಕ್ವೊ ತನ್ನ ಮಚ್ಚಿನಿಂದ ತರಿದುಬಿಡುತ್ತಾನೆ. ಆದರೆ ಆಶ್ಚರ್ಯವೇನೆಂದರೆ ಒಕೊಂಕ್ವೊವಿನ ಈ ಕೊಲೆಯನ್ನ ಯಾರೂ ಒಪ್ಪುವುದಿಲ್ಲ. “ಇವನು ಹೀಗೇಕೆ ಮಾಡಿದ”, ಎಂದು ಎಲ್ಲರೂ ಗುಸುಗುಸು ಮಾತನಾಡುತ್ತಾರೆ.

ಕೂಡಲೇ ಒಕೊಂಕ್ವೊ ತನ್ನ ಮಚ್ಚನ್ನು ಮರಳಿನಲ್ಲಿ ಒರೆಸಿ, ಕಾಡಿಗೆ ತನ್ನನ್ನ ತಾನು ಕೊಂದುಕೊಳ್ಳಲು ನಡೆದು ಬಿಡುತ್ತಾನೆ. ಈಗ ನಿಜವಾಗಿಯೂ ಒಕೊಂಕ್ವೊ ತನ್ನ ಜನರಿಂದಲೇ ತಾನು ಬಹಿಷ್ಕೃತ. ತಾನು ಒಬ್ಬಂಟಿ. ತನಗೆ ತನ್ನ ನೆಲವಿಲ್ಲ, ಜನವಿಲ್ಲ; ತಾನುಮಾತ್ರ ಈಗ ಯಾರಿಗೂಬೇಡಾದವ. ತನ್ನನ್ನು ತಾನು ಕೊಂದು ಕೊಂಡರೆ ತನ್ನ ಹೆಣವನ್ನೂ ಯಾರೂ ಮುಟ್ಟುವುದಿಲ್ಲ. ಇದೀಗ ಒಕೊಂಕ್ವೊವಿನ ಮಹಾದುರಂತ. ಈಗ ಅವನು ಬಾಳಿನಲ್ಲೂ ಸಾವಿನಲ್ಲೂ ತನ್ನ ನೆಲ ತನ್ನ ಜನರಿಂದ ಸಂಪೂರ್ಣ ಬಹಿಷ್ಕೃತ ತಾನು ಅನ್ಯ; ತಾನು ಏಕಾಕಿ; ತಾನು ಬೇವಾರ್ಸಿ.

ಒಕೊಂಕ್ವೊ ನೇಣು ಹಾಕಿಕೊಂಡು ಸತ್ತುಬಿಡುತ್ತಾನೆ. ಈ ಅವಸಾನವೇ ಇವನ ಘೋರ ದುರಂತ. ಇದರ ಮೊದಲ ಹೆಜ್ಜೆಯೇ ಅವನು ಗಂಡುಗಲಿಯಾಗುವ ಸಂಕಲ್ಪ. ಯಾವಾಗ ತನ್ನ ಗಂಡುತನವನ್ನು ಬೆಳಸಿಕೊಳ್ಳುತ್ತಾ ತನ್ನಲ್ಲಿರುವ ಹೆಂಗರುಳನ್ನು ಕತ್ತರಿಸಿಕೊಳ್ಳುತ್ತಾ ಹೋಗುತ್ತಾನೋ ಆವಾಗಲೇ ಅವನ ಆತ್ಮಹತ್ಯೆ ನಿಧಾನವಾಗಿ ಷುರುವಾಗುತ್ತದೆ. ಯಾವಾಗ ಅವನು ಗಂಡುತನವನ್ನು ತನ್ನ ಮೈಮೇಲೆ ಬರಸಿಕೊಂಡನೋ, ಯಾವಗಂಡುತನ ತನ್ನ ಮೈ ದುಂಬಿತೋ ಅಂದೇ ಹೆಂಗರುಳಿನ ಮಾನವೀಯ ತಂದೆಯ ಕೊಲೆಯಾಯಿತು. ಅನಂತರ ಒಂದೊಂದಾಗಿ ತನ್ನ ಸಾಕುಮಗನ ಕೊಲೆಯಾಯಿತು; ತನ್ನ ಸ್ವಂತ ಮಗನ ಕೊಲೆಯಾಯಿತು, ತನ್ನಿಂದ ತನ್ನ ಸಾಕುಮಗನ ಕೊಲೆಯನ್ನ ತಡೆದವನ ಮಗನ ಕೊಲೆಯೂ ಆಯಿತು, ಕೊನೆಗೆ ತನ್ನ ಕೈಯಾರೆ ತನ್ನದೇ ಕೊಲೆಯಾಯಿತು. ಹೀಗೆ ಕಂದನಾಗಿ ಹುಟ್ಟಿ ತಂದೆಯನ್ನ ‘ಕೊಂದ’, ತಂದೆಯಾಗಿ ಬೆಳೆದು ಕಂದನನ್ನ ಕೊಂದ, ತಂದೆಯೂ ಇಲ್ಲದ ಕಂದನೂ ಇಲ್ಲದ ತಬ್ಬಲಿ ತನ್ನನ್ನ ತಾನೆ ಕೊಂದುಕೊಂಡು ಯಾವ ವಾರಸುದಾರರೂ ಇಲ್ಲದೆ ಅಡವಿಯ ಬೇವಾರ್ಸಿ ಹೆಣವಾಗಿ ಸತ್ತ. ಆದರೆ ದಾರುಣತೆಯೇನೆಂದರೆ ಬಾಳಿನುದ್ದಕ್ಕೂ ಮಾನವೀಯವಾದ ಹೆಣ್ಣನ್ನು ಹತ್ತಿಕ್ಕಿ ಗಂಡುಕಚ್ಚೆ ಕಟ್ಟಿದ ಒಕೊಂಕ್ವೊ ಕೊನೆಗೆ ಸತ್ತ ಮೇಲಾದರೂ ಅವನ ಹೆಣವನ್ನ ಮಾನವೀಯ ಹೆಂಗರುಳಿನ ಕ್ರಿಸ್ತ ಧರ್ಮದವರು ಸಂಸ್ಕಾರ ಮಾಡುವಂತಾಗಿ, ಬಾಳಿನಲ್ಲಿ ಸಾಧ್ಯವಾಗದ ಹೆಂಗರುಳಿನ ಮಾನವೀಯತೆ ಸತ್ತಮೇಲೆ ಸಾಧ್ಯವಾಯಿತು. ಅಂದರೆ ಯಾವ ಪುರುಷತ್ವ ತಾನೇ ತಾನಾಗಿ ಏಕಮೇವಾ ದ್ವಿತೀಯವಾಗಿ ರಾರಾಜಿಸುತ್ತದೋ ಅದು ಸ್ತ್ರೀತ್ವದ ಒಲವಿಲ್ಲದೆ, ಸಾಂತ್ವನವಿಲ್ಲದೆ ತಾನೇ ತಾನಾಗಿ ಮುರಿದು ಬೀಳುತ್ತದೆ; ಪುರುಷವು ಪ್ರಕೃತಿಯ ಒಡನಾಟವಿಲ್ಲದೆ ಏಕಾಕಿಯಾಗಿ ತನ

ಹತ್ಯೆಯನ್ನು ತಾನೇ ಮಾಡಿಕೊಳ್ಳುತ್ತದೆ. ಒಕೊಂಕ್ವೊ ಬರೀಪುರುಷ, ಅವನ ತಂದೆ ಉನೋಕಾ ಬರೀ ಪ್ರಕೃತಿ: ಇಬ್ಬರಲ್ಲೂ ಏಕಾಕಿತನವಿದೆ, ಆತ್ಮಹತ್ಯೆಯು ನಡೆಯಿದೆ.

ಒಕೊಂಕ್ವೊ ಪೈಲುವಾನ, ಯೋಧ: ಹೋರಾಟವೇ ಅವನ ಜೀವಾಳ; ಉನೋಕಾ ವಿಲಾಸಿ, ಮನಸಿಕರಾಯ, ಕುಡಿಯುವ ಹಾಡುವ, ಸಾಲಮಾಡಿ ಹಾಲು ತುಪ್ಪ ಉಣ್ಣುವ ರಸಿಕ. ಯೋಧನ ಬಾಳು ಗಂಡಾದರೆ ಭೋಗಿಯ ಬಾಳು ಹೆಣ್ಣು. ಇವೆರಡರ ಸಮರಸವಿಲ್ಲದೆ ಬಾಳು ಹೆಣ್ಣು ಗಂಡಿನ ಸಮತೋಲನದ ಬಾಳಾಗದು.

ಚಿನುವ ಅಚೇಬೆಯ ಈ ಚಾರಿತ್ರಿಕ ಕಾದಂಬರಿ "ಥಿಂಗ್ಸ್ ಫಾಲ್ ಅಪಾರ್ಟ್", ಒಂದು ಜಾಗತಿಕ ಕಾದಂಬರಿಯೇ ಸರಿ. ಸ್ಥೂಲವಾಗಿ ಇದು ಆಫ್ರಿಕಾ ಖಂಡದ ಕಪ್ಪು ಜನಾಂಗದವರ ಕಪ್ಪು ಜಾನಪದದ ಅಸ್ತಿತ್ವದ ಸವಾಲಾದರೂ, ಸೂಕ್ಷ್ಮವಾಗಿ ಇದು ಕಠೋರ ಗಂಡುತನ ಮತ್ತು ಮಾರ್ದವದ ಹೆಣ್ಣುತನಗಳ, ಜಡವಾದ ಸನಾತನತೆ ಮತ್ತು ಚೇತನದ ಮಾನವೀಯತೆಗಳ, ಧರ್ಮ (low) ಮತ್ತು ಒಲವು (love)ಗಳ ಪರಸ್ಪರ ಮೇಲ್ಮೆಯ ಹೋರಾಟ. ಪ್ರತಿಯೊಂದು ಜನಾಂಗವೂ ತಂತನ್ನ ವಿಶೇಷತೆಯನ್ನು ತನ್ನ ಸಮಾಜದ ಏಳ್ಗೆಯನ್ನು ಮುಂದುವರಿಸಿಕೊಂಡು ಬರುತ್ತದೆ. ಆದರೆ ಕಾಲಗತಿಗನುಗುಣವಾಗಿ ಅದು ಹೊಸತನ್ನು ಚಲನಶೀಲತೆಯನ್ನು ಒಳಗೊಳ್ಳಬೇಕಾಗುತ್ತದೆ ಸಂಪ್ರದಾಯದಲ್ಲಿ ರೂಢಿಯಬಲವಿದೆ. ಆದರೆ ಚಲನೆಯಲ್ಲಿ ಹೊಸತನದ ಜೀವವಿದೆ. ಸಂಪ್ರದಾಯ ಧರ್ಮಕ್ಕೆ ಕಟ್ಟುಬಿದ್ದು, ಮಾನವೀಯ ಚಲನಶೀಲತೆಯನ್ನು ಕಳೆದುಕೊಳ್ಳುತ್ತದೆ. ಬರಿಯ ಚಲನಶೀಲ ಮಾನವೀಯತೆಯಾದರೋ ಧರ್ಮದ ಹಿಡಿತವಿಲ್ಲದ ಅಸ್ತವ್ಯಸ್ತವಾಗುತ್ತದೆ. ಈ ಅಸ್ತವ್ಯಸ್ತ ಪರಿಸ್ಥಿತಿಯೇ, ಈ ಹರಿದು ಹಂಚಿದ ಬಾಳೇ, ಈ 'ಥಿಂಗ್ಸ್ ಫಾಲ್ ಅಪಾರ್ಟ್' ಎನ್ನುವ ದುರಂತ ಕತೆ.

ಪ್ರಜಾಪ್ರಭುತ್ವದಲ್ಲಿ ಬಲಿಷ್ಠನಿಗಿರುವ ಅವಕಾಶಗಳು ದುರ್ಬಲನಿಗೂ ಇರಬೇಕು. ಅದೇ ನಿಜವಾದ ಪ್ರಜಾಪ್ರಭುತ್ವ.

ಗಾಂಧೀಜಿ

ವಿಮರ್ಶಕ ಚಿನುವ ಅಚೇಬೆ: ಒಂದು ಟಿಪ್ಪಣಿ

ಡಾ|| ಡಿ. ಎ. ಶಂಕ

ಡಾ|| ಜಾನ್‌ಸನ್‌ನಂತರದ ವಿಮರ್ಶಕರು ಸಮಾಜ ಮ
ಮಾನವನ ಬಗ್ಗೆ ತಮ್ಮ ವಿಚಾರಗಳಿಗೆ ಪೂರ್ಣ ಅಭಿವ್ಯಕ್ತಿ ನೀ
ವಾಗ ಎರಡು ಪ್ರತ್ಯೇಕ ಪ್ರಬಂಧ ವಿಧಾನಗಳನ್ನು ಉಪಯೊ
ಸಲೇ ಬೇಕಾಗಿದೆ: ಒಂದು ಶುದ್ಧ ಸಾಹಿತ್ಯಕವಾದದ್ದು ಮತ್ತೊಂ
ಸಾಮಾಜಿಕ–ಸಾಂಸ್ಕೃತಿಕವಾದದ್ದು. ಈ ಕೆಳಗಿನ ಕೆಲವು ಶೀರ್ಷಿ
ಗಳನ್ನು ಗಮನಿಸಿ : Essays in Criticism ; Cultu
and Anarchy ; Selected Essays ; Not
towards a Definition of Culture ; R
valuation; Education and the Universit
The New Criticism ; God witho
Thunder ; Language as Gesture ; T
Lion and the Honeycomb ; Essays
Solicitude. ಪರಿಪೂರ್ಣನಾದ ಮನುಷ್ಯ ಅದು ಹೇಗೆ
ವಿಭಜನೆಗೊಂಡು ಎರಡು ನಿರ್ದಿಷ್ಟ ವ್ಯಕ್ತಿತ್ವಗಳಾಗಿ ಮಾ
ಡಾಗುವ ಹಾಗೆ ತೋರುತ್ತದೆ, ಒಂದು ಸಾಹಿತ್ಯಕ ವ್ಯಕ್ತಿತ್ವವ
ಮತ್ತೊಂದು ಸಾಂಸ್ಕೃತಿಕವಾಗಿ. ವಿಮರ್ಶಕ ತನ್ನಲ್ಲಿ ಸಾಮಾ
ಹಾಗೂ ಸಾಹಿತ್ಯಕ ಕ್ರಿಯೆಗಳ ಎರಡೂ ಜವಾಬ್ದಾರಿಗಳನ್ನು
ಕಾಲದಲ್ಲಿ ಒಟ್ಟುಗೂಡಿಸಿಕೊಳ್ಳಲು ಪಾಶ್ಚಿಮಾತ್ಯ ಆಧು
ಮೌಲ್ಯಾಧಾರಿತ ನೆಲಗಟ್ಟು (etnos) ಅವಕಾಶ ಕೊಡುವು
ಎಂದು ತೋರುತ್ತದೆ. ಲೀವಿಸ್ ಮತ್ತು ಟ್ರಿಲ್ಲಿಂಗ್ ಕೂಡ ಇ
ಒಂದು ಸೀಮಿತ ಮತ್ತು ವಿಶಿಷ್ಟವಾದ ಅರ್ಥದಲ್ಲಿ ಮಾತ್ರ ಹ
ತಾಗುತ್ತಾರೆ.

ಅಚೆಬೆಯವರ ಸಾಹಿತ್ಯ ವಿಮರ್ಶೆಗಳನ್ನು ಬಹುಶಃ
ಹಿನ್ನೆಲೆಯಲ್ಲಿ ನೋಡಬೇಕಾಗುತ್ತದೆ. **Morning Yet**
Creation Day ಯ ಸಣ್ಣ ಮುನ್ನುಡಿಯಲ್ಲಿ ಆತ ಬರೆ

ತ್ತಾರೆ: "ಒಬ್ಬ ಬರಹಗಾರ ತಾನು ಬರೆಯುವುದಕ್ಕೆ ಯಾವುದೇ ಸಮರ್ಥನೆಯನ್ನೂ ಕೊಡಬೇಕಾಗಿಲ್ಲ. ಆದರೆ ಕೆಲವು ನಿರ್ದಿಷ್ಟ ಸಂದರ್ಭಗಳಲ್ಲಿ ಅಂದರೆ ತನ್ನ ಬರವಣಿಗೆಯ ಪ್ರಕಟನೆಯ ಸಂದರ್ಭದಲ್ಲಿ ಅಥವ ಮೊದಲ ಪ್ರಕಟನೆಯ ಸಮಯದಲ್ಲಿ ಇದ್ದ ಉತ್ತೇಜನವಾಗಲಿ, ಪರಿಸ್ಥಿತಿಗಳಾಗಲಿ ಮರೆಯಾದಾಗ ಆದರ ಪುನರ್‌ಹೇಳಿಕೆಗಾಗಿ ಕೆಲವು ಸ್ಪಷ್ಟೀಕರಣಗಳನ್ನು ನೀಡಬೇಕೆಂದು ಅನ್ನಿಸಬಹುದು. ಈ ವಿಚಾರದಲ್ಲಿ, ಯಾವುದೇ ರೀತಿಯ ಅನುಮಾನವು ಅವನ ಮನಸ್ಸಿನಲ್ಲಿ ಮೂಡಿದರೆ, ಅವರ ಪರಿಹಾರವು (ಅವನು ನನ್ನಂತಹವನೇ ಆಗಿದ್ದರೆ) ಸಾರ್ವಜನಿಕ ಆಸಕ್ತಿಗೆ ಸಂಬಂಧಿಸಿದ್ದಾಗಿರುತ್ತದೆ. ಇಲ್ಲಿ 'ಆಸಕ್ತಿ' (Public interest) ಯನ್ನು ಅದರ ಎರಡೂ ಅರ್ಥದಲ್ಲಿ ಉಪಯೋಗಿಸುತ್ತಿದ್ದೇನೆ." ನಾವು ಬಹಳಷ್ಟು ಮಂದಿ "ಸಾರ್ವಜನಿಕ ಆಸಕ್ತಿ" ಎನ್ನುವ ಪದದಿಂದ ದೂರವಿರಲು ಇಚ್ಛಿಸುತ್ತೇವೆ, ಏಕೆಂದರೆ ಅದು ಒಂದು ಸರ್ಕಾರಿ ಪದವಾಗಿಯೋ ಅಥವಾ ಒಂದು ದೊಡ್ಡದಾದ, ಫ್ಯಾಶನಬಲ್ ಅಲ್ಲದಂಥ ಕೆಲಸವಾಗಿ ನಮಗೆ ತೋರುತ್ತದೆ. ಆದರೆ ಇಂತಹ ಪದವನ್ನು ಅಚೀಬೆ ಸಹಜವಾಗಿ ಉಪಯೋಗಿಸಿ ಅದಕ್ಕೆ ಅದರ ಅರ್ಥವನ್ನು ಪುನರ್‌ಸ್ಥಾಪಿಸುತ್ತಾನೆ ಎಂಬುದು ಗಮನಾರ್ಹ. ಅಲ್ಲದೆ, 'ಆಸಕ್ತಿ' ಎಂಬ ಪದವು 'ಕಾಳಜಿ', 'ಅನುಕಂಪ' ಎಂಬ ತನ್ನ ಹೆಚ್ಚಿನ ಅರ್ಥವನ್ನೊಡಗೂಡಿಸಿಕೊಳ್ಳುವುದರಿಂದ ಅಚೀಬೆಯವರು ಬರೀ ಸಾಹಿತ್ಯದ ಧೋರಣೆಯಲ್ಲದ ಆದರೆ ವಿಶಾಲವಾದ ದೃಷ್ಟಿಯಿಂದ ಬರೆಯುತ್ತಾರೆಂಬುದನ್ನು ನಮಗೆ ಮನದಟ್ಟು ಮಾಡಿಸುತ್ತದೆ.

ತಮ್ಮ ಮುನ್ನುಡಿ ಕೊನೆಯಲ್ಲಿ ಅಚೀಬೆಯವರು ಈ ಮಾತುಗಳನ್ನು ಉಚ್ಚರಿಸುತ್ತಾರೆ: "ಧಾವಂತದಿಂದ ವಿಕಾಸಗೊಳ್ಳುತ್ತಿರುವ ನಮ್ಮ ಸನ್ನಿವೇಶದಲ್ಲಿ ಶುದ್ಧ ಸಾಹಿತ್ಯಕ ಪ್ರಬಂಧಗಳು (ನನ್ನ ಯಾವುದೇ ಬರಹ ಈ 'ಶುದ್ಧ' ಪರೀಕ್ಷೆಯಲ್ಲಿ ತೇರ್ಗಡೆಯಾಗುತ್ತದೆ ಎನ್ನುವುದರ ಬಗ್ಗೆ ನನಗೆ ನಂಬಿಕೆಯಿಲ್ಲ) ಬೇರೆ ತರಹದ ತೊಡಕನ್ನು ಮುಂದೊಡ್ಡುತ್ತವೆ." ತುಂಟತನ ಮತ್ತು ಪಂಡಿತರನ್ನು ವಿರೋಧಿಸುವ ನಿಲುವಿನಿಂದ ಕೂಡಿರುವ "ಶುದ್ಧ ಪರೀಕ್ಷೆ" ಎಂಬ ಈ ಪದ ಸಮುಚ್ಚಯ ಬಹಳಷ್ಟು ಬೇರೆಯೇ ಆದ ಮೌಲ್ಯಾಧಾರಿತ ನೆಲಗಟ್ಟಿನಿಂದ ಅಚೀಬೆಯವರು ಬರೆಯುತ್ತಿರುವುದನ್ನು ನಿರೂಪಿಸುತ್ತದೆ. ಅವರು ಏಕಕಾಲದಲ್ಲಿ ವ್ಯಕ್ತಿಗಳ ಮತ್ತು ಪುಸ್ತಕಗಳ, ಸಮಾಜದ ಮತ್ತು ಸಾಹಿತ್ಯದ ಭಾಷ್ಯಕಾರರಾಗಿರಲು ಇಚ್ಛಿಸುತ್ತಾರೆ; ಅಂದರೆ ಪರಿಪೂರ್ಣತಾ ದೃಷ್ಟಿಯಿಂದ ಎಂದು. ಇದರಿಂದಾಗಿ ಅವರ ಪ್ರಬಂಧಗಳು ಶುದ್ಧತೆಯ ಪರೀಕ್ಷೆಯಲ್ಲಿ ತೇರ್ಗಡೆಯಾಗದೇ ಇರುವುದೇ ಉತ್ತಮ. ಇದು ಅಚೀಬೆಯವರಿಗೂ ತಿಳಿದಿದೆ.

ಇದಕ್ಕೆ ಪೂರಕವಾಗಿ, ನಾವು ನೆನಪಿಡಲೇಬೇಕಾದ ಅಂಶ ಅಚೆಬೆಯವರು ಒಬ್ಬ ವರ್ಡ್ಸ್‌ವರ್ತ್ ಮತ್ತು ಆರ್ನಾಲ್ಡ್ ತರಹ ಉದ್ದೇಶಪೂರ್ವಕವಾಗಿ ಭೋದಕನೂ ಆಗಲು ಹೊರಟಿರುವ ಒಬ್ಬ ಸೃಷ್ಟ್ಯಾತ್ಮಕ ಬರಹಗಾರ ಎಂಬುದು. ಅಚೀಬೆ ತಮ್ಮ ಸೃಷ್ಟ್ಯಾತ್ಮಕ ಬರವಣಿಗೆಯಲ್ಲಿ ಇಡೀ ಸಮುದಾಯದ ಪ್ರಜ್ಞೆಯನ್ನು ಉದ್ದೇಶಪೂರ್ವಕವಾಗಿ ಒಳಗೊಳ್ಳುತ್ತಾರೆ ಮತ್ತು ತಮ್ಮ ಭೂತಕಾಲ ಕುರಿತಾದ ಕಾದಂಬರಿಗಳಲ್ಲಿ ವ್ಯಕ್ತಿಗಳನ್ನು ಸ್ವಲ್ಪ ಅಮುಖ್ಯಗೊಳಿಸುತ್ತಾರೆ. ಆದರೆ ತಮ್ಮ ವಿಮರ್ಶಾತ್ಮಕ ಬರವಣಿಗೆಗಳಲ್ಲಿ ಬರಹಗಾರ–ಸಮಾಜ ಮತ್ತು ಬರಹಗಾರ—ಓದುಗರ ಮಧ್ಯದ ಸಂಬಂಧವನ್ನು ಒಂದು

ಹೊಸ, ಪಾಶ್ಚಿಮಾತ್ಯವಲ್ಲದ ದೃಷ್ಟಿಯ ಮೂಲಕ ಮುಂಡಿಸುತ್ತಾರೆ. ಒಟ್ಟಾರೆ ಹೇಳುವುದಾದರೆ, ಅವರ ವಿಮರ್ಶೆಗಳು, ಮೌಲ್ಯಗಳಿಗಾಗಿ ತೊಡಗಿರುವ ಸೃಷ್ಟ್ಯಾತ್ಮಕ ಶೋಧನೆಯ ಶಿಶು. ಪುನಃ, ಈ ಸಂಬಂಧಗಳನ್ನು ಎತ್ತಿತೋರಿಸುವಲ್ಲಿ ಅಚೀಬೆಯವರ ಗದ್ಯವು ನಮ್ಮ ಪ್ರಚಲಿತ ವಿಮರ್ಶೆಯ ಪದಗಳಿಂದ ಯಶಸ್ವಿಯಾಗಿ ವಿಮುಖವಾಗಿ, ಜೀವನ ಮತ್ತು ಸಾಹಿತ್ಯಕ್ಕೆ ಸಂಬಂಧಪಟ್ಟಂತಹ ವಿಷಯಗಳಲ್ಲಿ ತನ್ನನ್ನು ತಾನೇ ತೊಡಗಿಸಿಕೊಳ್ಳುತ್ತದೆ. ಎಲಿಯಟ್–ಲೀವಿಸ್, ರಾನ್‌ಸಮ್–ಟೇಟ್–ಬ್ರೂಕ್ಸ್ ಶಾಲೆಯಿಂದ ಪಾರಾಗಿ ಪ್ರಚಲಿತ ವಿಮರ್ಶಾಪದಗಳನ್ನು ತ್ಯಾಜ್ಯ ಮಾಡಿರುವ ಮತ್ತೊಬ್ಬ ನಮ್ಮ ಕಾಲದ ಸಮಕಾಲೀನ ಸೃಷ್ಟ್ಯಾತ್ಮಕ ಬರಹಗಾರನನ್ನು ಹೆಸರಿಸುವುದು ಕಷ್ಟ. ಇದು ತನ್ನಷ್ಟಕ್ಕೆ ಒಂದು ಮಹತ್ವದ ಸಾಧನೆಯೇ. ಅಚೀಬೆಗೆ ಇದು ಸಾಧ್ಯವಾಗಿರುವುದಕ್ಕೆ ಕಾರಣ ಅವರು ಆಫ್ರಿಕನ್‌ನಾಗಿ ತಮ್ಮದೇ ಆದ ಸಂಸ್ಕೃತಿ ಮತ್ತು ಇತಿಹಾಸದಲ್ಲಿ ಬೇರು ಬಿಟ್ಟು ಬರೆಯುವುದರಿಂದ.

ನಾವು ಸಮಾಜ ಮತ್ತು ಕಲೆಯ ಬಗ್ಗೆ ಅವರ ಹೇಳಿಕೆಗಳನ್ನು ಒಟ್ಟುಗೂಡಿಸಿ ನೋಡಿದಾಗ ಕಂಡುಬರುವುದು ಅವರ ಮೂಲತಃ ಆಫ್ರಿಕನ್ ಆದಂತಹ ದೃಷ್ಟಿ. ಅಚೀಬೆ ಒತ್ತುಕೊಡುವುದನ್ನು ನೋಡಿ: "ಕಲೆಯು ಇಂದು ಮತ್ತು ಯಾವತ್ತು ಮಾನವನ ಹಿತಾಸಕ್ತಿಯನ್ನು ಕಾದುಕೊಂಡಿರತಕ್ಕದ್ದು. ನಮ್ಮ ಹಿರಿಯರು ತಮ್ಮದೇ ಆದ ಪುರಾಣಗಳನ್ನು ಮತ್ತು ಮಿಥ್‌ಗಳನ್ನು ರಚಿಸಿದ್ದರು, ಮತ್ತು ತಮ್ಮ ಕಥೆಗಳನ್ನು ಒಂದು ಮಾನವ ಸಹಜ ಕಾರಣಕ್ಕಾಗಿ (ಆಶ್ಚರ್ಯವನ್ನುಂಟು ಮಾಡಲು ಮತ್ತು ಆಹ್ಲಾದಕ್ಕಾಗಿ ಕೂಡ) ಹೇಳುತ್ತಿದ್ದರು. ಕೆತ್ತನೆಗಳನ್ನು ಮರ ಮತ್ತು ಟೆರ್ರ ಕೋಟದಲ್ಲಿ, ಶಿಲೆ ಮತ್ತು ಕಂಚಿನಲ್ಲಿ ತಮ್ಮ ಕಾಲದ ಬೇಡಿಕೆಗೆ ಅನುಸಾರ ಪೂರೈಸುತ್ತಿದ್ದರು. ಅವರ ಬರಹಗಾರರು ಸಮಾಜದಲ್ಲೇ ಜೀವಿಸಿ, ತಿರುಗಾಡಿದಂತಹವರು ಮತ್ತು ತಮ್ಮತನವನ್ನು ಸಮಾಜದಲ್ಲಿ ಕಂಡುಕೊಂಡು ಆ ಸಮಾಜದ ಒಳಿತಿಗಾಗಿ ತಮ್ಮ ಬರಹಗಳನ್ನು ಸೃಷ್ಟಿ ಮಾಡಿದಂತಹವರು. "ಬರಹಗಾರನ ಬೇರೆಯದೇ ಆದ ಚಿತ್ರವನ್ನು ಯುರೋಪ್ ನಮಗೆ ನೀಡುತ್ತದೆ" ಯುರೋಪಿನಿಂದ ನಾವು ಒಬ್ಬ ಬರಹಗಾರ ಅಥವಾ ಕಲಾಕಾರ ಸಮಾಜದ ಅಂಚಿನಲ್ಲಿ ಬದುಕುತ್ತಾನೆ ಎಂಬುದನ್ನು ಕಲಿಯುತ್ತೇವೆ—ಆತ ಗಡ್ಡಧಾರಿಯಾಗಿ, ವಿಚಿತ್ರವಾದ ಉಡುಗೆಯನ್ನು ತೊಟ್ಟು, ಸಾಮಾನ್ಯವಾಗಿ ಅಸಾಧಾರಣವಾದ, ಊಹಿಸಲಸಾಧ್ಯವಾದ ರೀತಿಯಲ್ಲಿ ವರ್ತಿಸುತ್ತಾನೆ." ಮತ್ತು ಐರೋಪ್ಯ ಬರಹಗಾರರು ಸಮಾಜವು ತಮಗಾಗಿ ಏನು ಮಾಡಬಹುದು ಅಥವಾ ಏನು ಮಾಡಿದೆ ಎಂದು ಆಲೋಚಿಸಿದರೆ, ಆಫ್ರಿಕದ ಬರಹಗಾರರು—ಅಂದರೆ ಅಚೀಬೆಯವರಂತಹ ಒಬ್ಬ ಬರಹಗಾರ ತನ್ನ ಸಮಾಜಕ್ಕಾಗಿ ತಾನು ಏನು ಮಾಡಬಲ್ಲ ಅಥವಾ ಏನು ಮಾಡಬಹುದು ಎಂಬುದರ ಬಗ್ಗೆ ಹೆಚ್ಚು ತಿಳಿದುಕೊಂಡಿರುತ್ತಾನೆ. ಈ ತಿಳುವಳಿಕೆ ಒಬ್ಬ ಬರಹಗಾರನಲ್ಲಿ ಇರಬೇಕಾದದ್ದು ಸಹಜ. ಏಕೆಂದರೆ, ಅಚೀಬೆಯವರು ಹೇಳುವ ರೀತಿಯಲ್ಲಿ, ನೈಜೀರಿಯಾದಲ್ಲಿ, ಹಿಂದಿನಕಾಲದಲ್ಲಿ, "ಕಲೆ ಮತ್ತು ಸಮಾಜದ ಅವಿಭಾಜ್ಯತೆಯ ಬಗ್ಗೆ ಜನರಿಗೆ ಆಳವಾದ ನಂಬಿಕೆ" ಇತ್ತು. ಮತ್ತು ಮಬಾರಿ (mbari) ಉತ್ಸವವೇ ಹೇಳುವ ಪ್ರಕಾರ: "ಸಂಸ್ಕೃತಿಯನ್ನು ಸೃಷ್ಟಿಸುವವರು ಮತ್ತು ಅದರ ಬಳಕೆದಾರರ ನಡುವೆ ಯಾವುದೇ ಧೃಡವಾದ ಅಡೆತಡೆ

ಗಳಿಲ್ಲ. ಕಲೆ ಎಲ್ಲರಿಗೂ ಸೇರಿದಂತಹದು ಮತ್ತು ಅದು ಸಮಾಜದ ಒಂದು 'ಕ್ರಿಯೆ.'" ಕಲೆಯನ್ನು ಒಂದು ಕ್ರಿಯೆ ಎಂದು ಪರಿಗಣಿಸುವ ಒಂದು ಸಂಸ್ಕೃತಿ, ಸಾಹಿತ್ಯ ಮತ್ತು ಇತರ ಲಲಿತ ಕಲೆಗಳನ್ನು ಜೀವನದ ಒಂದು ಭಾಗವನ್ನಾಗಿ ಮಾಡುತ್ತದೆ. ಇಲ್ಲಿ ಕಲೆಯು ಬದುಕಿನ ಒಂದು ಕ್ರಮ ಮಾತ್ರವಲ್ಲದೆ ಬದುಕಿಗೆ ಒಂದು ಮಾರ್ಗ ಕೂಡ.

ಅಚೀಬೆಯವರ ಪ್ರಬಂಧ "The Novelist as Teacher"ನ ಕೇಂದ್ರ ಅಭಿಪ್ರಾಯವು ಸಾಹಿತ್ಯ ಮತ್ತು ಜೀವನದ ಬಗ್ಗೆ ಇಗ್ಬೊ ಜನರಿಗಿರುವ ಈ ಸಾಂಪ್ರದಾಯಿಕ ನಿಲುವಿನಿಂದ ಪ್ರೇರಿತವಾದುದು. ಅಚೀಬೆಯವರು ಹೇಳುವುದೇನೆಂದರೆ: "ನನ್ನ ಕಾದಂಬರಿಗಳು (ಅದರಲ್ಲೂ ಭೂತಕಾಲ ಕುರಿತಾದಂಥ ನನ್ನ ಕಾದಂಬರಿಗಳು) ನನ್ನ ಓದುಗರಿಗೆ ತಮ್ಮ ಇತಿಹಾಸವು—ತನ್ನ ಎಲ್ಲಾ ನ್ಯೂನತೆಗಳನ್ನೊಳಗೊಂಡೂ—ಒಂದು ಸುದೀರ್ಘವಾದ ಅಮಾನುಷವಾದ ಕರಾಳ ರಾತ್ರಿಯಲ್ಲ ಮತ್ತು ಅದರಿಂದ ತಮ್ಮನ್ನು ದೇವರಪರವಾಗಿ ಬಿಡುಗಡೆ ಮಾಡಿದ ಮೊದಲ ಐರೋಪ್ಯನದಲ್ಲ ಎಂಬಷ್ಟನ್ನು ಮಾತ್ರ ಕಲಿಸಿದರೂ ನನಗೆ ತೃಪ್ತಿ. ನಾನು ಬರೆಯುವುದು ಬಹುಶಃ ಶುದ್ಧ ಸಾಹಿತ್ಯದಿಂದ ಬೇರೆಯೇ ಆದಂತಹ ಪ್ರಾಯೋಜಿಕ ಕಲೆ (Opplied art). ಆದರೆ ಶುದ್ಧ ಸಾಹಿತ್ಯ ವಲ್ಲ ಎಂದು ನಾವೇಕೆ ಒದ್ದಾಡಬೇಕು? (ಅದು ನನ್ನನ್ನು ಭಾದಿಸುವುದಿಲ್ಲ.) (But who cover?) ಕಲೆ ಮುಖ್ಯ, ಆದರೆ ನನ್ನ ಮನಸ್ಸಿನಲ್ಲಿರುವ ರೀತಿಯ ಕಲಿಕೆ ಕೂಡ ಮುಖ್ಯ. ಅವೆರಡೂ ಪರಸ್ಪರ ವಿರೋಧವಾಗಿರಬೇಕು ಎಂದೂ ನನಗೆ ಅನ್ನಿಸುವುದಿಲ್ಲ." ಅವು ಪರಸ್ಪರ ವಿರೋಧವಾಗಿಲ್ಲ ಎಂಬುದನ್ನು ಅವರ ಕಾದಂಬರಿಗಳಿಂದ ನಾವು ಮನಗಾಣಬಹುದು.

ಸಮಾಜದಲ್ಲಿ ತನ್ನ ಅಸ್ತಿತ್ವವನ್ನು ಹೊಂದಿರುವಂತಹ ಒಂದು ಕಲೆ ಮತ್ತು ತನ್ನ ಜನಗಳಿಂದ ಘೋಷಣೆಯನ್ನು ಪಡೆದುಕೊಂಡ ಬರಹಗಾರ ಈ ಮಾತುಗಳನ್ನು ಹೇಳದೇ ಇರಲಾಗುವುದಿಲ್ಲ: "ನಿಜವಾದ ಕಲಾಕಾರ ಮತ್ತು ಅವನ ಸಮುದಾಯದ ಮಧ್ಯೆ ಆಧ್ಯಾತ್ಮಿಕ ಸಂಬಂಧವಿರುತ್ತದೆ." ಅಂದರೆ ಎಲ್ಲಾ ನಿಜವಾದ ಬರಹಗಾರರಿಗೂ ತಮ್ಮ ಸಮುದಾಯದ ಜೊತೆ ಸಂವಹನ ಸಾಧಿಸುವ ಅಭಿಲಾಷೆ ಇದ್ದೇ ಇರುತ್ತದೆ. "ಈ ಸಮುದಾಯ ಕುರಿತಾದ ಪ್ರಜ್ಞೆ ಎನ್ನುವುದು ಏನು?" ಅಚೀಬೆಯವರು ಈ ಪ್ರಶ್ನೆಯನ್ನು ಕೇಳುವುದೇ ಅಲ್ಲದೆ ಅದಕ್ಕೆ ಉತ್ತರವನ್ನು ಸಹ ನೀಡುತ್ತಾರೆ: "ನಾನು ಅದು ಎರಡು ವಿಧ ಎಂದು ನಂಬುತ್ತೇನೆ ಒಂದು, ಈ ಚರಿತ್ರೆಯಲ್ಲಿ ಪಾಲ್ಗೊಂಡ ಅನಿಸಿಕೆ, ಮತ್ತು ಅದಕ್ಕೂ ಮುಖ್ಯವಾಗಿ, ಭವಿಷ್ಯದ ಪರಿಕಲ್ಪನೆ." ಇಲ್ಲಿ, ಅಚೀಬೆಯವರ Arrow of God ನಲ್ಲಿ ಎಜೆಲು ತನ್ನ ಮಕ್ಕಳಲ್ಲಿ ಒಬ್ಬನನ್ನು ಬಿಳಿಯರ ಶಾಲೆಗೆ ಕಳುಹಿಸಿದಂತಹದ್ದೇ ಆದ ಪಾತ್ರವನ್ನು ಆಫ್ರಿಕನ್ ಬರಹಗಾರ ನಿರ್ವಹಿಸಬೇಕಾಗುತ್ತದೆ. ಏಕೆಂದರೆ, "ಜೀವನವು ಯಾರು ತನ್ನ ಜೊತೆ ಒಪ್ಪಂದ ಮಾಡಿಕೊಳ್ಳುತ್ತಾರೋ ಅಂತಹವರಿಗೆ ಒಳ್ಳೆಯದನ್ನು ಮಾಡುತ್ತದಲ್ಲದೆ ತನ್ನಿಂದ ಪಲಾಯನ ಮಾಡುವವರಿಗಲ್ಲ." ಆದ್ದರಿಂದ ಬರಹಗಾರನಿಗೆ ಭೋದಕನಾಗದೆ ಮತ್ತು ನ್ಯಾಯಕ್ಕೆ ಹೋರಾಟ ಮಾಡುವಾತನಾಗದೇ ವಿಧಿಇಲ್ಲ. ವಸಾಹತುಶಾಹಿ ಸಂಪರ್ಕದ ಇಡೀ ಪ್ರಶ್ನೆ ಅದಕ್ಕೆ ಅಚೀಬೆಯವರ ಪ್ರತಿಕ್ರಿಯೆ ಎರಡನ್ನೂ ಈ ಆಲೋಚನೆಗಳ ಹಿನ್ನೆಲೆಯಲ್ಲಿ ಗಮನಿಸುವುದು

ಅತ್ಯಾವಶ್ಯಕ. ಪುನಃ, ಈ ಹಿನ್ನೆಲೆಯಲ್ಲೇ, ಅಚೀಬೆಯವರ ತತ್ಪರತೆಯನ್ನು ಅರ್ಥ ಮಾಡಿಕೊಳ್ಳಬೇಕು. ಈ ಹಿನ್ನೆಲೆಯಲ್ಲೇ ಅವರ "ಆಫ್ರಿಕನ್ ಸಾಹಿತ್ಯದ ಐರೋಪ್ಯ ವಿಮರ್ಶಕ ವಿನಯವಂತಿಕೆಯನ್ನು ಬೆಳೆಸಿಕೊಳ್ಳಬೇಕು ಮತ್ತು ತನ್ನ ಹೆಚ್ಚುಗಾರಿಕೆ ಹಾಗೂ ಅಹಂಕಾರಗಳನ್ನು ತೊಡೆದುಹಾಕಬೇಕು" ಎಂಬ ಕರೆಯನ್ನೂ ಅರ್ಥಮಾಡಿ ಕೊಳ್ಳಬೇಕು. ಮತ್ತೆ "ಸಾರ್ವತ್ರಿಕತೆ" ಕುರಿತಾದ ಯುರೋಪಿಯನ್ ಪರಿಕಲ್ಪನೆಯ ಬಗ್ಗೆ ಅವರಿಗಿರುವ ಅಸಹನೆಯನ್ನೂ ಈ ಹಿನ್ನೆಲೆಯಲ್ಲೇ ನಾವು ನೋಡಬೇಕು.

ಅಚೀಬೆ ತಮ್ಮನ್ನು ತಾವೇ ತೊಡಗಿಸಿಕೊಳ್ಳತಕ್ಕಂತಹ ಇನ್ನೆರಡು ಮುಖ್ಯ ಪ್ರಶ್ನೆಗಳು ಇಂಗ್ಲಿಷ್ ಭಾಷೆ ಮತ್ತು ರಾಷ್ಟ್ರೀಯ ಸಾಹಿತ್ಯಕ್ಕೆ ಸಂಬಂಧಪಟ್ಟಂತಹವು.

ಪಾಶ್ಚಿಮಾತ್ಯ ವಿಮರ್ಶಕರ ಬಗೆಗಿನ ಅಚೀಬೆಯವರ ಅಸಂತುಷ್ಟಿ ಬಹಳಷ್ಟು ಮಟ್ಟಿಗೆ ಅವರ ಭಾಷೆಗೆ ಮತ್ತು ಸಮಾಜದಲ್ಲಿ ಅದರ ಪಾತ್ರದ ಬಗೆಗಿನ ದೃಷ್ಟಿಕೋನಕ್ಕೆ ಸಂಬಂಧಪಟ್ಟದ್ದು. ಅಚೀಬೆಯವರ ಪ್ರಕಾರ: "ಯಾವ ಮನುಷ್ಯನೂ ಮತ್ತೊಬ್ಬನನ್ನು ಅವನ ಭಾಷೆ ಕಲಿಯದೇ ಅರ್ಥ ಮಾಡಿಕೊಳ್ಳಲಾಗುವುದಿಲ್ಲ ('ಇಲ್ಲಿ ಭಾಷೆ' ಎಂದರೆ ಬರೀ ಪದಗಳಲ್ಲ, ಒಬ್ಬ ಮನುಷ್ಯನ ಇಡೀ ಜಾಗತಿಕ ದೃಷ್ಟಿಕೋನ): ನಮ್ಮ ಭಾಷೆಯ ಪರಿಚಯ ಎಷ್ಟು ಮಂದಿ ಯುರೋಪಿಯನ್ನರು ಮತ್ತು ಅಮೇರಿಕನ್ನರಿಗಿದೆ? ನನಗೆ ಅಂತಹ ಒಬ್ಬರೂ ಗೊತ್ತಿಲ್ಲ." ಒಂದು ಭಾಷೆ ಮತ್ತು ಅದನ್ನು ನುಡಿಯುವ ಜನರ ಮಧ್ಯೆ ಇರತಕ್ಕಂತಹ ನಿಕಟ ಬಾಂಧವ್ಯವನ್ನು ನೋಡದ ಪಾಶ್ಚಿಮಾತ್ಯ ವ್ಯಕ್ತಿ ತನ್ನ ಜೊತೆ ತಪ್ಪು ಮೌಲ್ಯಗಳ ತಕ್ಕಡಿಯನ್ನು ತರುತ್ತಾನೆ, ಮತ್ತು ಆಫ್ರಿಕನ್ ಬರವಣಿಗೆ ಯಲ್ಲಿ ರಸಹೀನತೆಯನ್ನು ಗುರುತಿಸುತ್ತಾನೆ. ಆದ್ದರಿಂದಾಗಿ ಅಚೀಬೆ ಹೀಗೆ ಬರೆಯುತ್ತಾರೆ, "ಈ ಸತ್ಯವು ಯಾವಾಗ ಇಷ್ಟು ಸ್ವಪ್ರಕಾಶವಾಯಿತು ಮತ್ತು ಯಾರು ಇದು ಕಪ್ಪು ಮತ್ತು ಬಿಳಿ ಎರಡೂ ಜನಾಂಗಕ್ಕೂ ಅನ್ವಯಿಸಬೇಕು ಎಂಬುದನ್ನು ನಿಶ್ಚಯಿಸಿದರು ಎಂದು ಆಶ್ಚರ್ಯಪಡುತ್ತೇನೆ." ಅಚೀಬೆಯವರ ಅರ್ಥ ಏನೆಂದರೆ ಪಶ್ಚಿಮವೂ ತನ್ನ ಪ್ರಾಮುಖ್ಯತೆಗಳನ್ನು ತಪ್ಪಾಗಿ ಭಾವಿಸಿದೆ ಎಂದೂ ಮತ್ತು ಇಡೀ ಸಮುದಾಯದ ಬಗ್ಗೆ ತನ್ನ ಗಮನವನ್ನು ಹರಿಸಿರುವ ಆಫ್ರಿಕನ್ ಬರಹಗಾರ ಹೆಚ್ಚು ನಿರ್ವಿಕಾರಿ ಮತ್ತು ಬುದ್ಧಿವಂತ ಮತ್ತು ಅವನು ವ್ಯಕ್ತಿ ಮತ್ತು ಸಮಾಜದ ಹೊಣೆಗಾರಿಕೆಗಳನ್ನು (claims) ಸರಿಯಾಗಿ ತೂಗಬಲ್ಲ ಎಂಬುದು.

ಆಫ್ರಿಕದ ಬರಹಗಾರನು ಯಾವ ರೀತಿಯ ಇಂಗ್ಲಿಷ್ ಬರೆಯಬೇಕು ಎಂಬುದನ್ನು ಅಚೀಬೆ ಸರಿಯಾಗಿ ಹೇಳುತ್ತಾರೆ; ಸಮರ್ಪಕವಾಗಿ ಸೃಜನಶೀಲ ಬರವಣಿಗೆಯಲ್ಲಿ ಉಪಯೋಗಿಸುವಷ್ಟು ಇಂಗ್ಲಿಷ್ ಅನ್ನು ಒಬ್ಬ ಆಫ್ರಿಕನ್ ಯಾವತ್ತಾದರೂ ಕಲಿಯಬಲ್ಲನೆ ಎಂಬ ಪ್ರಶ್ನೆಗೆ ಇದು ನನ್ನ ಉತ್ತರ. ಹೌದು. ಇದಲ್ಲದೆ ನೀವು ನನ್ನನ್ನು ಅವನು ಅದನ್ನು ಮಾತೃಭಾಷೆಯಷ್ಟೇ ಸುಲಲಿತವಾಗಿ ಉಪಯೋಗಿಸಲು ಕಲಿಯಬಲ್ಲನೆ?' ಎಂದು ಕೇಳಿದರೆ ನಾನು ಈ ರೀತಿ ಉತ್ತರಿಸ ಬೇಕಾಗಬಹುದು; ನನ್ನ ಆಕಾಂಕ್ಷೆ ಅದಲ್ಲ. ಅದು ಅವಶ್ಯವೂ ಅಲ್ಲ ಮತ್ತು ಅವನು ಆ ರೀತಿ ಉಪಯೋಗಿಸಲು ಕಲಿಯುವುದು ಒಳ್ಳೆಯದೂ ಅಲ್ಲ. ಜಾಗತಿಕ ಭಾಷೆಯು ತೆರಬೇಕಾದ ದಂಡವೆಂದರೆ ನಾನಾ ತರಹದ ಉಪಯೋಗಕ್ಕೆ ತನ್ನನ್ನು ತಾನೇ ಒಳಪಡಿ

ಕೊಳ್ಳುವುದು. ಅವನ ಧ್ಯೆಯ ಏಕಕಾಲದಲ್ಲಿ ಸಾರ್ವತ್ರಿಕವೂ ಮತ್ತು ಅವನದ್ದೇ ಆದ ವಿಚಿತ್ರವಾದ ಅನುಭವವನ್ನು ಹೊರಬಲ್ಲ ಇಂಗ್ಲಿಷನ್ನು ಉಂಟುಮಾಡುವುದರ ಕಡೆಗಿರಬೇಕು." ಇದನ್ನು, ಗ್ರಂಥದಲ್ಲಿ ರಾಜರಾಯರು ತಮ್ಮ ಕಾಂತಾಪುರದ ಮುನ್ನುಡಿಯಲ್ಲಿ ಹೇಳಿದ ಮಾತಿನ ಜೊತೆ ತೌಲನಿಸಿ ನೋಡಬೇಕು; ನಾವು ಇಂಗ್ಲಿಷ್‌ನವರ ರೀತಿ ಬರೆಯಲಾಗುವುದಿಲ್ಲ. ನಾವು ಆ ರೀತಿ ಬರೆಯಲು ಬಾರದು. ನಾವು ಬರೇ ಭಾರತೀಯ ರ ಮಾದರಿಯಲ್ಲಿ ಕೂಡ ಬರೆಯಲಾಗುವುದಿಲ್ಲ. ನಾವು ಈ ದೊಡ್ಡ ಪ್ರಪಂಚವನ್ನು ನಮ್ಮದೇ ಆದ ಒಂದು ಭಾಗವಾಗಿ ನೋಡಲು ಕಲಿತಿದ್ದೇವೆ. ಆದ್ದರಿಂದ ನಮ್ಮ ವಿಧಾನ ಒಂದು ಪರಿಭಾಷೆಯಾಬೇಕು. ಹಾಗಾದಾಗ ಅದು ಎಂದಾದರೂ ಒಂದುದಿನ ಐರಿಷ್ ಅಥವಾ ಅಮೆರಿಕನ್ ಭಾಷೆಯಷ್ಟೇ ಪ್ರತ್ಯೇಕವಾಗಿಯೂ ಮತ್ತು ರಂಗುರಂಗಾಗಿಯು ಆಗುತ್ತದೆ."

ರಾಷ್ಟ್ರೀಯ ಮತ್ತು ಜಾತೀಯವಾದಂತಹ ಸಾಹಿತ್ಯಗಳ ಬಗೆಗಿನ ಅಚೇಬೆಯವರ ಅನಿಸಿಕೆಗಳು ಸ್ವಲ್ಪ ತೊಂದರೆಯನ್ನುಂಟು ಮಾಡುತ್ತದೆ. ಅವು ಭಾಷೆಯ ಬಗೆಗಿನ ಅವರ ಮೊದಲ ನಿಲುವುಗಳನ್ನು ಅಲ್ಲಗಳೆದಂತೆ ತೋರುವುವು. ಇಂಗ್ಲಿಷ್‌ನಲ್ಲಿ ಬರೆದ ಸಾಹಿತ್ಯವು, ಅವರು ಹೇಳುವ ಹಾಗೆ "ಇಡೀ ದೇಶವನ್ನು ತನ್ನ ಪ್ರಾಂತ್ಯವೆಂದು ಪರಿಗಣಿಸುತ್ತದೆ ಮತ್ತು ಅದರ ಉದ್ದಗಲಕ್ಕೂ ಅದಾಗಲೆ ಇರತಕ್ಕಂತಹ ಅಥವಾ ಮುಂದೆ ಉಂಟಾಗಬಹುದಾದ ಓದುಗರನ್ನು ಹೊಂದಿರುತ್ತದೆ." ಆದ್ದರಿಂದಲೇ ಅದನ್ನು ರಾಷ್ಟ್ರೀಯ ಎಂದೂ ಮತ್ತು ಯಾವ ಬರವಣಿಗೆಯೂ ಪ್ರಾಂತ್ಯ ಭಾಷೆಗಳಲ್ಲಿ ಇದೆಯೋ ಅದನ್ನು ಜಾತೀಯ (Ethnic) ಎಂದು ಕರೆಯಬೇಕು. ಅವರು ಮತ್ತೂ ಹೇಳುವುದೇನೆಂದರೆ "ಆಫ್ರಿಕನ್ ಭಾಷೆಗಳು ಇಡೀ ರಾಷ್ಟ್ರದಲ್ಲಿ ಚಲಾವಣೆಯಲ್ಲಿರುವ ಒಂದು ಪ್ರಮುಖ ಭಾಷೆಯನ್ನು ಸಮೃದ್ಧಿಗೊಳಿಸಲು ಉಪನದಿಗಳಾಗಿ ಬೆಳೆಯಬೇಕು. ಇಂದು, ಒಳ್ಳೆಯದಕ್ಕೋ ಅಥವ ಕೆಟ್ಟದಕ್ಕೋ ಆ ಭಾಷೆ ಇಂಗ್ಲಿಷ್ ಆಗಿದೆ." ಒಂದು ವಿಧದಲ್ಲಿ ಭಾರತದಲ್ಲಿನ ಸನ್ನಿವೇಶವು ಇದಕ್ಕೆ ವ್ಯತಿರಿಕ್ತವಾಗಿಲ್ಲದಿದ್ದರೂ, ನನಗನ್ನಿಸುವ ಪ್ರಕಾರ, ಅಚೇಬೆಯವರ ಆಲೋಚನೆಗಳನ್ನು ಒಪ್ಪಿಕೊಳ್ಳುವವರು ವಿರಳ. ಸಾಹಿತ್ಯಕ ಮತ್ತು ಸಾಮಾಜಿಕ ಆರ್ಥಿಕ ಪರಿಸ್ಥಿತಿಗಳು ಈ ಉಪನದಿಗಳನ್ನು ಬತ್ತಿಸಬಲ್ಲವು. ಮತ್ತು ಅಂತಹ ಒಂದು ಸ್ಥಿತಿಯಲ್ಲಿ, ಇಂಗ್ಲೀಷ್ ಭಾಷೆ ಕೂಡ ನಿಸ್ಸತ್ವವಾಗಬಹುದು. ಇದು ಒಂದು ನದಿಯನ್ನು ಸೇರುವ ಉಪನದಿಗಳ ಪ್ರಶ್ನೆಯಲ್ಲ; ಆದರೆ "ಪ್ರಮುಖ" ಅನ್ನತಕ್ಕಂತಹದು ತನ್ನನ್ನು ಸೇರುವ ದಿನಗಳಿಂದ ಪಡೆಯ ತಕ್ಕಂತಹ ಸತ್ವಕ್ಕೆ ಸಂಬಂಧಿಸಿದಂತದ್ದು; ಮತ್ತು ಈ ಉಪ ಭಾಷೆಗಳು ನಮ್ಮ ಸಂದರ್ಭದಲ್ಲಿ ಹೆಚ್ಚು ನಿಜವಾದ ರಾಷ್ಟ್ರೀಯ ಭಾಷೆಗಳು. ಏಕೆಂದರೆ, ಇಲ್ಲಿನ ಒಬ್ಬ ಸ್ಥಳೀಯ ಬರಹಗಾರ ಅಚೇಬೆಯ ಜೊತೆ ಹೇಳಬಲ್ಲ: "ಒಂದು ಸಮುದಾಯವಾಗಬಲ್ಲಂತಹ ಇಡೀ ಪ್ರಪಂಚವೇ ನನ್ನ ಓದುಗ. ನಾನು ಬರೆಯುವಾಗ, ನನ್ನ ಊರು, ನನ್ನ ಜಿಲ್ಲೆ, ನನ್ನ ಪ್ರಾಂತ್ಯ, ನನ್ನ ಜನಾಂಗದ ಬಗ್ಗೆ ಆಲೋಚಿಸುತ್ತೇನೆ." ಲೋರೆನ್ಸೋ ದಿ ಮೆಗ್ನಿಫಿಸಂಟ್ ತರಹ ಅವನು ಯಾವಾಗ ಹೆಚ್ಚು ಪ್ರಾಂತೀಯನಾಗುತ್ತಾನೋ ಆಗಲೇ ಹೆಚ್ಚು ಸಾರ್ವತ್ರಿಕನೂ ಆಗಬಲ್ಲ.

ಅನು : ಸಿ. ಪಿ. ರವಿಚಂದ್ರ

ಗೋಸುಂಬೆ [ಸಣ್ಣ ಕತೆ]

ಆ್ಯಂತೋನ್ ಚೆಹಾಫ್

ಹೊಸ ನಿಲುವಂಗಿಯೊಂದನ್ನು ಧರಿಸಿದ್ದ ಪೊಲೀಸ್ ಇನ್‌ಸ್ಪೆಕ್ಟರ್ ಆಕ್ಯುಮೆಲೊವ್* ಕೈಯಲ್ಲಿ ಒಂದು ಕಂತೆಯನ್ನು ಹಿಡಿದುಕೊಂಡು ಸಂತೆ ಬಯಲನ್ನು ಹಾದು ನಡೆದಿದ್ದ. ಮುಟ್ಟುಗೋಲು ಹಾಕಿಕೊಂಡಿದ್ದ 'ಗೂಸ್‌ಬೆರಿ' ಹಣ್ಣುಗಳಿಂದ ಪೂರ್ತಿ ತುಂಬಿದ್ದ ಮಂಕರಿಯನ್ನು ಕೈಯಲ್ಲಿ ಹಿಡಿದುಕೊಂಡಿದ್ದ ಕೆಂಗೂದಲಿನ ಪೊಲೀಸು ಪೇದೆ ಅವನ ಹಿಂದೆ ನಡೆದು ಬರುತ್ತಿದ್ದ. ಸುತ್ತಲೂ ನೀರವತೆ....ಸಂತೆ ಬಯಲಿನಲ್ಲಿ ಒಂದು ನರಪಿಳ್ಳೆಯೂ ಇದ್ದಿಲ್ಲ.... ಸಣ್ಣ ಅಂಗಡಿಗಳ ಮತ್ತು ಹೋಟೆಲುಗಳ ತೆರೆದಿದ್ದ ಬಾಗಿಲುಗಳು ಅನೇಕ ಹಸಿದ ಬಾಯಿಗಳಂತೆ ಮಂಕಾಗಿ ಸಮಸ್ತ ಭೂಮಂಡಲದೆಡೆ ಬಾಯಿ ತೆರೆದಿದ್ದವು. ಅವುಗಳ ಹತ್ತಿರ ಯಾವ ಭಿಕ್ಷುಕರೂ ನಿಂತಿದ್ದಿಲ್ಲ.

ಇದ್ದಕ್ಕಿದ್ದ ಹಾಗೆ ಆಕ್ಯುಮೆಲೊವ್‌ಗೆ ಒಂದು ಧ್ವನಿ ಕೇಳಿಸಿತು. "ಕಚ್ಚೀಯು, ಅಂ, ದರಿದ್ರ ಮುಂಡೇದೆ! ಅದನ್ನ ಬಿಡಬೇಡಿ, ಹುಡುಗರಾ! ಈಗ ಯಾರೂ ಕಚ್ಚೋ ಹಾಗಿಲ್ಲ. ಹಿಡೀರಿ ಅದನ್ನ! ಏಯ್!"

ಒಂದು ನಾಯಿ ಕುಂಯ್‌ಗುಟ್ಟುತ್ತಿದ್ದುದು ಕೇಳಿಸಿತು. ಆಕ್ಯುಮೆಲೊವ್ ಶಬ್ದ ಬಂದ ಕಡೆ ನೋಡಿದ. ಅವನು ಕಂಡಿದ್ದು ಇದು: ಒಂದು ನಾಯಿ ಮೂರು ಕಾಲಿನ ಮೇಲೆ ವರ್ತಕ ಪಿಚುಗಿನ್‌ನ ಸೌದೆ ಡಿಪೋದಿಂದ ಹೊರಗೆ ಓಡಿ ಬಂತು. ಗಂಜಿ ಹಾಕಿದ್ದ ಚೀಟಿ ಬಟ್ಟೆಯ ಅಂಗಿ ಮತ್ತು ಗುಂಡಿ ಹಾಕಿರದ ನಡುವಂಗಿಯನ್ನು ಧರಿಸಿದ್ದ ಒಬ್ಬ ಮನುಷ್ಯ ಅದನ್ನು ಹಿಡಿಯಲೆಂದು ಓಡಿ ಬರುತ್ತಿದ್ದ. ಅವನ ಇಡೀ ಮೈ ಮುಂದೆ ಬಾಗಿತ್ತು. ಆ ಮನುಷ್ಯ ಮುಗ್ಗರಿಸಿ ಆ ನಾಯಿಯನ್ನು ಅದರ ಹಿಂಗಾಲೊಂದನ್ನೆಳೆದು ನಿಲ್ಲಿಸಿದ. ಮತ್ತೊಂದು ಸಲ ಕುಂಯ್ಯೋ ಎಂದು ಶಬ್ದ.

* ರಷ್ಯನ್ 'ಆಕ್ಯುಮೆಲಿ' (ಹುಚ್ಚುಗೊಳಗಾದ) ಎಂಬುದರಿಂದ—ಅನುವಾದಕ

ಪುನಃ "ಅದನ್ನ ಬಿಡಬೇಡಿ!" ಎನ್ನುವ ಕೂಗು. ನಿದ್ದೆ ಮಂಪರಿನಲ್ಲಿದ್ದ ಮುಖಗಳು ಅಂಗಡಿಗಳಿಂದ ಹೊರಚಾಚಿದವು, ಮತ್ತು ಕಣ್ಣು ಮಿಟುಕಿಸುವಷ್ಟರಲ್ಲಿ ಭೂಮಿಯಿಂದ ಒಮ್ಮೆಲೆ ನೆಗೆದು ಬಂದರೇನೊ ಎಂಬಂತೆ ಜನರ ಗುಂಪೊಂದು ಸೌದೆ ಡಿಪೋದ ಸುತ್ತ ಸೇರಿತು.

"ಇದೊಂದು ಸಾರ್ವಜನಿಕ ದೊಂಬಿ ಅನ್ನಿಸುತ್ತೆ, ಸ್ವಾಮಿ!" ಎಂದ, ಪೇದೆ.

ಆಕ್ಯುಮೆಲೊವ್ ಜನರ ಗುಂಪಿನೆಡೆ ನಡೆದ. ಅಂಗಳದ ಮುಂದೆಯೇ ಮೇಲೆ ಹೇಳಿದ ಗುಂಡಿ ಹಾಕಿರದ ನಡುವಂಗಿಯ ವ್ಯಕ್ತಿಯನ್ನು ನೋಡಿದ. ಆ ವ್ಯಕ್ತಿ ತನ್ನ ಬಲಗೈಯನ್ನು ಮೇಲೆತ್ತಿ ರಕ್ತ ಸುರಿಯುತ್ತಿದ್ದ ಒಂದು ಬೆರಳನ್ನು ಜನಸಂದಣಿಗೆ ತೋರಿಸುತ್ತ ನಿಂತಿದ್ದ. "ಮಾಡ್ತೀನಿ ತಡಿ, ಪಿಶಾಚಿ ಮುಂಡೇದೆ!" ಎಂಬ ಮಾತು ಅವನ ಅಮಲಿನ ಮುಖದ ಮೇಲೆ ಬರೆದಂತೆ ಕಾಣುತ್ತಿತ್ತು. ಅವನ ಬೆರಳು ಜಯದ ಪತಾಕೆಯಂತೆ ಕಾಣುತ್ತಿತ್ತು. ಆಕ್ಯುಮೆಲೊವ್‌ಗೆ ಆ ವ್ಯಕ್ತಿ ಅಕ್ಕಸಾಲಿಗ ಖ್ರ್ಯುಯುಕಿನ್* ಎಂದು ಗೊತ್ತಾಯಿತು. ಗುಂಪಿನ ಮಧ್ಯೆಯೇ ತನ್ನ ಮುಂಗಾಲುಗಳನ್ನು ಅಗಲವಾಗಿ ಚಾಚಿ ಆ ಅಪರಾಧಿ ಕೂತಿತ್ತು. ಅದರ ಇಡೀ ಮೈ ಕಂಪಿಸುತ್ತಿತ್ತು. ಅದೊಂದು ಬಿಳಿಯ ಬೊರ್‌ಜೊಯ್ ನಾಯಿಮರಿಯಾಗಿತ್ತು. ಅದರ ಮೂತಿ ಚೂಪಾಗಿತ್ತು ಮತ್ತು ಅದರ ಬೆನ್ನಮೇಲೆ ಒಂದು ಹಳದಿ ಕಲೆ ಇತ್ತು. ಕಣ್ಣೀರು ತುಂಬಿದ್ದ ಅದರ ಕಣ್ಣಲ್ಲಿ ಅಪಾರ ನೋವು ಹಾಗೂ ಭೀತಿಯ ಭಾವವಿತ್ತು.

"ಏನಿದೆಲ್ಲ?" ಎಂದು ಆಕ್ಯುಮೆಲೊವ್ ಕೇಳಿದ, ಗುಂಪಿನೊಳಗೆ ದಾರಿ ಮಾಡಿಕೊಂಡು ಬಂದು. "ನೀನು ಇಲ್ಲಿ ಏನ್ಮಾಡ್ತಾ ಇದ್ದೀಯ? ನಿನ್ನ ಬೆರಳನ್ಯಾಕೆ ಮೇಲೆತ್ತಿದ್ದೀಯ? ಯಾರು ಕೂಗಿದ್ದು?"

"ನಾನು ಸುಮ್ಮನೆ ಹೋಗ್ತಾ ಇದ್ದೆ, ಸ್ವಾಮಿ. ಕುರಿಮರೀ ಹಾಗೆ ಸದ್ದಿಲ್ಲದೆ, ಎಂದು ಖ್ರ್ಯುಯುಕಿನ್ ಮಾತನ್ನಾರಂಭಿಸಿದ—ಬಾಯ ಮುಂದೆ ಕೈ ಹಿಡಿದು ಕೆಮ್ಮುತ್ತ "ನನಗಿಲ್ಲಿ ಮಿತ್ರಿ ಮಿತ್ರಿಚ್‌ನ ಹತ್ತಿರ ಯಾವುದೊ ಮರದ ಬಗ್ಗೆ ಸ್ವಲ್ಪ ವ್ಯವಹಾರವಿತ್ತು. ಒಮ್ಮೆಲೆ, ಯಾವ ಕಾರಣವೂ ಇಲ್ಲದೆ, ಈ ಪೀಡೆ ನನ್ನ ಬೆರಳನ್ನ ಕಚ್ತು. ನನ್ನನ್ನು ಕ್ಷಮಿಸಿ, ಆದರೆ ನಾನೊಬ್ಬ ಕೈ ಕೆಲಸದವ....ನಂದು ತುಂಬ ತೊಡಕಿನ ಕೆಲಸ. ನನಗೆ ಪರಿಹಾರ ಸಿಗುವಂತೆ ಮಾಡಿ—ಇನ್ನೊಂದು ವಾರ ಈ ಬೆರಳನ್ನು ಆಡಿಸಲಿಕ್ಕಾಗಲಿಕ್ಕಿಲ್ಲ. ಕ್ರೂರ ಪ್ರಾಣಿಗಳನ್ನು ಸಹಿಸಿಕೊಂಡಿರಬೇಕು ಅಂತ ಯಾವ ಕಾನೂನೂ ಇಲ್ಲ, ಸ್ವಾಮಿ. ಎಲ್ಲರೂ ಕಚ್ಚಲಿಕ್ಕೆ ಶುರು ಮಾಡಿದರೆ ಜೀವನ ನಡೆಸೋದು ವ್ಯರ್ಥ...."

"ಹುಂ....ಸರಿ, ಸರಿ" ಎಂದ ಆಕ್ಯುಮೆಲೊವ್, ಕಟುವಾಗಿ—ಕೆಮ್ಮುತ್ತ ಮತ್ತು ಹುಬ್ಬನ್ನು ತಿರುಚುತ್ತ. "ಸರಿ, ಸರಿ....ಇದು ಯಾರ ನಾಯಿ? ನಾನಿದನ್ನ ಇಲ್ಲಿಗೇ ಬಿಡಲ್ಲ. ನಾಯಿಗಳನ್ನ ಅಲೆದಾಡಲು ಬಿಡೋರಿಗೆ ಸರಿಯಾಗಿ ಪಾಠ ಕಲಿಸ್ತೀನಿ! ನಿಯಮಗಳನ್ನು ಪಾಲಿಸದೇ ಇರೋ ಜನರ ಬಗ್ಗೆ ಇಷ್ಟೊತ್ತಿಗೆ ಏನಾದರೂ ಮಾಡಬೇಕಿತ್ತು! ಅವನಿಗೆ—ಆ ಪಟಿಂಗನಿಗೆ ಸರಿಯಾದ ಶಿಕ್ಷೆ ಸಿಗುತ್ತೆ. ನಾಯಿಗಳನ್ನ ಮತ್ತು

* ರಷ್ಯನ್ 'ಖ್ರ್ಯುಯು-ಖ್ರ್ಯುಯು' (ಹಂದಿಯ 'ಡುರುಕ್' ಎಂಬ ಶಬ್ದ) ಎಂಬುದರಿಂದ—ಅನುವಾದ

ಕಂಡ ಕಂಡ ದನಕರುಗಳನ್ನ ಅಲೆದಾಡಲಿಕ್ಕೆ ಬಿಟ್ಟರೆ ಏನಾಗುತ್ತೆ ಅಂತ ಅವನಿಗೆ ತೋರಿಸ್ತೀನಿ! ಯಾವುದು ಸರಿ, ಯಾವುದು ತಪ್ಪು ಅನ್ನೋದನ್ನ ತೋರಿಸ್ತೀನಿ! ಎಲ್ಡಿರಿನ್!" ಎಂದು ಪೇದೆಯತ್ತ ತಿರುಗಿ ಅವನನ್ನು ಕೂಗಿ ಮಾತನ್ನು ಮುಂದುವರೆಸಿದ, "ಈ ನಾಯಿ ಯಾರದು ಅಂತ ಪತ್ತೆಹಚ್ಚು ಮತ್ತು ಒಂದು ಹೇಳಿಕೆ ತೆಗೊ. ಆಮೇಲೆ ತಕ್ಷಣ ಈ ನಾಯೀನ ಸಾಯಿಸಬೇಕು. ಇದು ಹುಚ್ಚು ನಾಯಿ ಅಂತ ಕಾಣುತ್ತೆ.... ನಾನು ಕೇಳ್ತಾ ಇದೀನಿ, ಯಾರ ನಾಯಿ ಇದು?"

"ಇದು ಜನರಲ್ ಝಿಗಲೊವ್ ಅವರಿಗೆ ಸೇರಿದ್ದು ಅನ್ನಿಸುತ್ತೆ", ಎಂದು ಗುಂಪಿನಲ್ಲಿ ಒಂದು ಧ್ವನಿ ಹೇಳಿತು.

"ಜನರಲ್ ಝಿಗಲೊವ್! ಹುಂ. ಎಲ್ಡಿ ನನ್ನ ಕೋಟು ತೆಗೀಲಿಕ್ಕೆ ಸ್ವಲ್ಪ ಸಹಾಯ ಮಾಡು, ಎಲ್ಡಿರಿನ್....ಛೆ, ಎಂಥ ಸೆಖೆ! ಮಳೆ ಬರುತ್ತೆ ಅಂತ ಕಾಣುತ್ತೆ." ಅವನು ಖ್ರ್ಯುಯುಕಿನ್ ಕಡೆಗೆ ತಿರುಗಿ ಹೇಳಿದ: "ನನಗೆ ಒಂದು ವಿಷಯ ಅರ್ಥವಾಗಲ್ಲ —ಇದು ನಿನ್ನ ಹ್ಯಾಗೆ ಕಚ್ತು? ನಿನ್ನ ಬೆರಳು ಹ್ಯಾಗೆ ಸಿಕ್ತು ಇದಕ್ಕೆ? ಇದಾದರೊ ಸಣ್ಣ ನಾಯಿ. ನೀನು ನೋಡಿದರೆ ಕಟ್ಟುಮಸ್ತಾದ ಆಸಾಮಿ! ನೀನೆಲ್ಲೊ ಒಂದು ಮೊಳೆಯಿಂದ ನಿನ್ನ ಬೆರಳನ್ನು ತರಚಿಕೊಂಡಿರಬೇಕು, ಆಮೇಲೆ ಅದಕ್ಕೆ ಹಣ ಪಡೀಬಹುದು ಅಂತ ಯೋಚನೆ ಮಾಡಿರ್ಬೇಕು. ನನಗೆ ಗೊತ್ತು ನೀವು ಎಂಥ ಜನ ಅಂತ! ಎಲ್ಲ ಧೂರ್ತರು!

"ಇವನು ಇದರ ಮೂತಿಯ ತುದಿಯನ್ನು ಹಚ್ಚಿದ ಸಿಗರೇಟಿಂದ ತಮಾಷೆಗೆಂತ ಸುಟ್ಟಿದ್ದಾನೆ, ಸ್ವಾಮಿ. ಆಮೇಲೆ ಇದು ಇವನನ್ನ ಕಚ್ಚಿದೆ. ಇದೇನೂ ಯಾರ ಮೂರ್ಖ ಕುನ್ನೀನೂ ಅಲ್ಲ! ಈ ಖ್ರ್ಯುಯುಕಿನ್ ಯಾವಾಗಲೂ ಏನಾದರೂ ಕೀಟಲೆ ಮಾಡ್ತಾನೇ ಇರ್ತಾನೆ, ಸ್ವಾಮಿ!"

"ಸುಳ್ಳು ಹೇಳಬೇಡ, ಮೆಳ್ಳೆಗಣ್ಣವನೇ! ನಾನ್ಹಾಗೆ ಮಾಡಿದ್ದನ್ನ ನೀನೇನೂ ನೋಡಿಲ್ಲ. ಅಂದಮೇಲೆ ಸುಳ್ಳು ಯಾಕೆ ಹೇಳ್ತೀಯ? ಮಾಸ್ವಾಮೇರು ತುಂಬ ಜಾಣರು. ಅವರಿಗೆ ಗೊತ್ತು ಯಾರು ಸುಳ್ಳು ಹೇಳ್ತಾರೆ, ಯಾರು ಸತ್ಯ ನುಡೀತಾರೆ ಅಂತ ನಾನು ಸುಳ್ಳು ಹೇಳ್ತಿದೀನಿ ಅನ್ನೋದಾದರೆ ನ್ಯಾಯಾಧೀಶರು ವಿಚಾರಣೆ ನಡೆಸಲಿ! ಕಾನೂನಿನಲ್ಲಿದೆ....ಈಗ ಎಲ್ಲರೂ ಸಮಾನ ಅಂತ. ನನ್ನೊಬ್ಬ ಅಣ್ಣನೇ ಇದ್ದಾನೆ ಪೊಲೀಸ್ ಇಲಾಖೆಯಲ್ಲಿ—ನಿಮಗೆ ಗೊತ್ತಾಗಬೇಕೂಂದ್ರೆ...."

"ವಾದ ಮಾಡಬೇಡ!"

"ಇಲ್ಲ, ಇದು ಜನರಲ್ಲರ ನಾಯಿ ಅಲ್ಲ", ಎಂದ ಪೇದೆ—ಅಗಾಧ ಪರಿಜ್ಞಾನ ಹೊಂದಿರುವನಂತೆ. "ಜನರಲ್ಲರ ಹತ್ತಿರ ಇಂಥ ಯಾವ ನಾಯೀನೂ ಇಲ್ಲ. ಅವರ ನಾಯಿಗಳೆಲ್ಲ ಭೇಟೆ ನಾಯಿಗಳು."

"ನಿನಗೆ ಖಂಡಿತ ಗೊತ್ತಾ?"

"ಖಂಡಿತ ಗೊತ್ತು, ಸ್ವಾಮಿ."

"ಹೌದು, ನೀನು ಹೇಳೋದು ನಿಜ! ಜನರಲ್ಲರ ನಾಯಿಗಳು ತುಂಬ ದುಬಾರಿಯವು. ಜಾತಿ ನಾಯಿಗಳು. ಇದಾದರೋ—ಹ್ಯಾಗಿದೆ ನೋಡಿದು! ಅಸಹ್ಯ, ಕೆಲಸಕ್ಕೆ ಬಾರದ

ಕುನ್ನಿ! ಇಂಥ ನಾಯಿಯನ್ನ ಯಾರಾದರೂ ಯಾಕೆ ಇಟ್ಟುಕೊಳ್ತಾರೆ? ನಿನಗೇನು ಹುಚ್ಚು ಹಿಡಿದಿದೆಯಾ? ಇಂಥ ನಾಯಿ ಮಾಸ್ಕೋದಲ್ಲಿ ಅಥವಾ ಪೀಟರ್ಸ್‌ಬರ್ಗ್‌ನಲ್ಲೇನಾದರೂ ಕಂಡು ಬಂದರೆ, ಏನಾಗುತ್ತೆ ಅಂತ ನಿನಗೆ ಗೊತ್ತಾ? ಯಾರೂ ಕಾನೂನಿನ ಬಗ್ಗೆ ಯೋಚನೆ ಮಾಡಲ್ಲ, ಒಂದು ಕ್ಷಣದಲ್ಲಿ ಅದನ್ನು ಕೊಂದುಹಾಕಿಬಿಡ್ತಾರೆ. ನೀನು ತೊಂದರೆಗೆ ಒಳಗಾಗಿರೋನು, ಖ್ರ್ಯುಕಿನ್. ನೆನಪಿರಲಿ, ಇದನ್ನ ಇಲ್ಲಿಗೇ ಬಿಡಬೇಡ. ಅದಕ್ಕೆ ಪಾಠ ಕಲಿಸಬೇಕು! ಇಷ್ಟೊತ್ತಿಗಾಗಲೇ...."

"ಕೊನೆಗೂ ಇದು ಜನರಲ್ಲದಿರಬಹುದು," ಎಂದ, ಪೇದೆ–ಮೆಲ್ಲಗೆ. "ಅದನ್ನು ನೋಡೇ ಹೇಳೋಕಾಗಲ್ಲ. ಅವರ ಅಂಗಳದಲ್ಲಿ ಮೊನ್ನೆ ಇಂಥದೇ ಒಂದು ನಾಯಿಯನ್ನ ನಾನು ನೋಡಿದೆ."

"ಹೌದು, ಇದು ಜನರಲ್ಲರದೇ!" ಎಂದು ಒಂದು ಧ್ವನಿ ಗುಂಪಿನಿಂದ ಬಂದಿತು.

"ಹುಂ! ಎಲ್ಡಿರಿನ್, ನಾನು ಕೋಟು ಹಾಕಿಕೊಳ್ಳಲಿಕ್ಕೆ ಸ್ವಲ್ಪ ಸಹಾಯ ಮಾಡು, ಎಲ್ಡಿರಿನ್....ಗಾಳಿ ಭರ್ ಅಂತ ಬೀಸಿದ ಹಾಗೆ ಅನ್ನಿಸಿತು ನನಗೆ. ನನ್ನ ಮೈ ನಡುಗ್ತಾ ಇದೆ. ಇದನ್ನ ಜನರಲ್ಲರ ಹತ್ತಿರ ತೆಗೊಂಡು ಹೋಗು. ಮತ್ತೆ ಆ ಜನರಿಗೆ ಕೇಳು. ಇದು ನನಗೆ ಸಿಕ್ತು, ಅದಕ್ಕೇ ಇದನ್ನು ಕಳಿಸಿದ್ರು ಅಂತ ಹೇಳು. ಆ ಮೇಲೆ ಆ ಜನರಿಗೆ ಹೇಳು ಇದನ್ನು ಬೀದಿಗೆ ಬಿಡಬೇಡಿ ಅಂತ. ಇದು ತುಂಬ ದುಬಾರಿಯ ನಾಯಿ ಇರಬೇಕು. ಆಮೇಲೆ, ಪ್ರತಿಯೊಬ್ಬ ಅವಿವೇಕಿಯೂ ಇದರ ಮೂತೀನ ಸಿಗರೇಟಿಂದ ತಿವೀಬಹುದು ಅಂತ ತಿಳಿದುಕೊಂಡಿದ್ದರೆ ಇದು ಹಾಳಾಗಿ ಹೋಗುತ್ತೆ. ನಾಯಿ ತುಂಬ ಸೂಕ್ಷ್ಮ ಪ್ರಾಣಿ. ಆಮೇಲೆ, ನೀನು, ಕೈ ಕೆಳಗೆ ಮಾಡು, ಮೂರ್ಖ! ನಿನ್ನ ದರಿದ್ರ ಬೆರಳನ್ನು ಎಲ್ಲರಿಗೂ ತೋರಿಸೋದನ್ನ ನಿಲ್ಲಿಸು. ತಪ್ಪು ನಿಂದೇ...."

"ಅಗೋ, ಜನರಲ್ಲರ ಮುಖ್ಯ ಅಡಿಗೆಯಾಳು ಈ ಕಡೇನೇ ಬರ್ತಾ ಇದಾನೆ. ನಾವವನನ್ನ ಕೇಳೋಣ...ಏಯ್, ಪ್ರೊಖೊರ್! ಬಾ ಇಲ್ಲಿ, ಮುದುಕ! ಈ ನಾಯೀನ ನೋಡು....ಇದು ನಿಮ್ಮದಾ?

"ಇದೊಳ್ಳೆ ಪ್ರಶ್ನೆ! ನಮ್ಮ ಜೀವಮಾನದಲ್ಲೇ ಇಂಥ ನಾಯಿ ನಮ್ಮ ಹತ್ತಿರ ಇದ್ದಿಲ್ಲ!"

"ಇನ್ನ ಯಾವ ಪ್ರಶ್ನೆಗಳನ್ನೂ ಕೇಳೋದು ಬೇಕಿಲ್ಲ, ಎಂದ ಅಕ್ಯುಮೆಲೊವ್. "ಇದೊಂದು ಬೀದಿ ನಾಯಿ. ಇಲ್ಲಿ ಮಾತಾಡ್ತಾ ನಿಲ್ಲೋದ್ರಿಂದ ಏನು ಪ್ರಯೋಜನ? ಇದೊಂದು ಬೀದಿ ನಾಯಿ ಅಂತ ನಿನಗೆ ಹೇಳಿದೀವಿ. ಹಾಗಾಗಿ, ಇದು ಬೀದಿ ನಾಯೀನೇ. ಇದನ್ನ ಕೊಂದು ಹಾಕಿ ಬಿಡು. ಅಲ್ಲಿಗೆ ಮುಗೀತು ಈ ವಿಷಯ."

"ಇದು ನಮ್ಮದಲ್ಲ," ಎಂದು ಪ್ರೊಖೊರ್ ಮಾತನ್ನು ಮುಂದುವರೆಸಿದ. "ಇದು ಜನರಲ್ಲರ ತಮ್ಮನಿಗೆ ಸೇರಿದ್ದು. ಮೊನ್ನೆ ಬಂದಿದ್ರಲ್ಲ, ಅವರು. ನಮ್ಮ ಜನರಲ್ಲರಿಗೆ ಬೊರ್‌ಜೊಯ್ ನಾಯಿಗಳಲ್ಲಿ ಆಸಕ್ತಿ ಇಲ್ಲ. ಆದರೆ ಅವರ ತಮ್ಮ, ಅವರಿಗಿಷ್ಟ...."

"ಏನು, ಜನರಲ್ಲರ ತಮ್ಮ ಬಂದಿದ್ದಾರಾ? ವ್ಲದೀಮಿರ್ ಇವಾನಿಚ್?" ಎಂದು ಅಕ್ಯುಮೆಲೊವ್ ಆಶ್ಚರ್ಯದಿಂದ ಕೇಳಿದ. ಅವನ ಮುಖದ ಮೇಲೆ ಆನಂದದ ಭಾವವಿತ್ತು. "ಎಂಥ ಕೆಲಸ ಆಯ್ತು ಅಂತೀನಿ! ನನಗೆ ಗೊತ್ತೇ ಇರಲಿಲ್ಲ. ಇಲ್ಲಿರಲಿಕ್ಕೇಂತ ಬಂದಿದಾರಾ?

"ಹೌದು."

"ಎಂಥ ಕೆಲಸ ಆಯ್ತು ನೋಡು! ಅವರ ತಮ್ಮನನ್ನು ನೋಡಬೇಕಿತ್ತು! ಮತ್ತೆ ನನಗೆ ಗೊತ್ತೇ ಆಗಲಿಲ್ಲ. ಹಾಗಾದರೆ ಇದು ಅವರ ನಾಯೀನಾ? ತುಂಬ ಸಂತೋಷ! ತೆಗೊ ಇದನ್ನ....ಇದು ತುಂಬ ಒಳ್ಳೆ ನಾಯಿಮರಿ! ಅವನ ಬೆರಳು ಕಚ್ಚಿತೇಯ? ಹ್ಹ—ಹ್ಹ—ಹ್ಹ! ಸುಮ್ನಿರು ಈಗ, ನಡುಗಬೇಡ. ಗುರ್ ಅಂತೀಯಾ.... ಈ ಮುಂಡೇದಕ್ಕೆ ಕೋಪ ಬಂದಿದೆ....ಎಂಥ ಕುನ್ನಿ ಅಂತೀನಿ!"

ಪ್ರೊಖೊರ್ ನಾಯಿಯನ್ನು ಕರೆದ, ಮತ್ತು ಅದರೊಡನೆ ಸೌದೆ ಡಿಪೋದಿಂದ ಹೊರಗೆ ಹೊರಟ. ಜನರ ಗುಂಪು ಖ್ರ್ಯುಯುಕಿನ್ನನನ್ನು ನೋಡಿ ನಕ್ಕಿತು.

"ಆದರೂ ನಿನ್ನ ಬಿಡಲ್ಲ!" ಎಂದು ಅಕ್ಯುಮೆಲೊವ್ ಅವನನ್ನು ಹೆದರಿಸಿದ. ನಂತರ, ತನ್ನ ನಿಲುವಂಗಿಯನ್ನು ಹೊದ್ದು ಸಂತೆ ಬಯಲನ್ನು ಹಾದು ಮುಂದೆ ನಡೆದ.

ಅನುವಾದ: ಶ್ರೀನಿವಾಸ್ ಸುತ್ರಾವೆ

ಭಾರತದಲ್ಲಿ ಉಚಿತ ಕಡ್ಡಾಯ ಪ್ರಾಥಮಿಕ ಶಿಕ್ಷಣ ಜಾರಿಗೆ ಬರಬೇಕು. ಈ ಗುರಿಯನ್ನು ಸಾಧಿಸಲು ಮಕ್ಕಳ ಮನಸ್ಸು, ಶರೀರ ಮತ್ತು ಆತ್ಮಶಕ್ತಿಗಳನ್ನು ಬೆಳಸಿಕೊಳ್ಳಲು ಸಾಧ್ಯವಾಗುವ ಉಪಯುಕ್ತ ಉದ್ಯೋಗವನ್ನು ಅವರಿಗೆ ಕಲಿಸಬೇಕು.

ದುಃಖ ಎನ್ನುವುದು ತ್ಯಾಗ ಅಲ್ಲ. ಯಾವ ತ್ಯಾಗದಿಂದ ಮನುಷ್ಯನಿಗೆ ಆನಂದ ಲಭಿಸುತ್ತದೆಯೋ ಅದೇ ನಿಜವಾದ ತ್ಯಾಗ.

ಗಾಂಧೀಜಿ

ನಾನು, ನನ್ನ ಕಾವ್ಯ

ಕೆ. ವಿ. ತಿರುಮಲೇಶ್

"ಯಾಕೆ ಕವಿತೆ, ಯಾಕೆ ಕಾವ್ಯ?" ಎಂಬ ಪ್ರಶ್ನೆ ನಾನು ಬರೆಯಲು ಆರಂಭಿಸಿದ ಕಾಲದಲ್ಲಿ ನನ್ನ ಮನಸಿನೊಳಗೆ ಎದ್ದಿರಲೇ ಇಲ್ಲ. ಆಮೇಲೆಯೂ ನಾನಾಗಿ ಈ ಪ್ರಶ್ನೆಯನ್ನು ಹಾಕಿಕೊಂಡ ದ್ದಿಲ್ಲ. ಆದರೆ ಇತರರು—ವಿಮರ್ಶಕರು, ವಿದ್ವಾಂಸರು—ನನ್ನ ಬಳಿ ಈ ಪ್ರಶ್ನೆಯನ್ನು ಕೇಳಿದ್ದಾರೆ. ಸಾಹಿತ್ಯ ಚಳುವಳಿಗಳು ಬಂದಾಗ ಲೆಲ್ಲ ಸಾಹಿತ್ಯದ ಉದ್ದೇಶಕ್ಕೆ ಸಂಬಂಧಿಸಿಯೂ ಪ್ರಶ್ನೆಗಳೇಳುತ್ತವೆ. ಇಂಥ ಪ್ರಶ್ನೆಗಳಿಗೆ ನನ್ನ ಬಳಿ ಖಂಡಿತವಾದ ಉತ್ತರಗಳಿಲ್ಲ. ಯಾಕೆ ಕವಿತೆ? ಅದು ಬಹುಶಃ ಏನನ್ನೋ ಹೇಳಿಕೊಳ್ಳುವುದಕ್ಕೆ ಅಥವಾ ಹೇಳದೆ ಇರುವುದಕ್ಕೆ, ಭಾಷೆಯ ಸಾಧ್ಯತೆಗಳನ್ನ ಹುಡುಕುವುದಕ್ಕೆ, ಅಥವಾ ಅಡಗಿಸುವುದಕ್ಕೆ, ಸುಖ, ದುಃಖ, ಕೋಪ, ತಾಪಗಳನ್ನು ಮೆರೆಸುವುದಕ್ಕೆ ಅಥವಾ ಮರೆಸುವುದಕ್ಕೆ.

ಕವಿತೆ ಬರೆಯೋ ಕ್ರಿಯೆ ನನಗೆ ಅತ್ಯಂತ ಪ್ರಿಯವಾದ್ದು. ಬರೆಯುವ ಮೊದಲೇ ಕವಿತೆ ಮನದೊಳಗೆ ಸಿದ್ಧವಾಗಿರುತ್ತದೆಯೆ? ಹಾಗೇನೂ ಇಲ್ಲ. ಯಾವುದೋ ವಿಚಾರ ಮನಸ್ಸನ್ನು ತುಂಬಿ ಕೊಂಡಿರಬಹುದು. ಒಬ್ಬನೇ ನಡೆಯುತ್ತಿರೋವಾಗ, ಯಾರ ಜತೆಯೋ ಮಾತಾಡುತ್ತಿರೋವಾಗ, ಯಾರೋ ಹಾಡುತ್ತಿರೋ ವಾಗ, ಯಾವದೋ ಪುಸ್ತಕ ಓದುತ್ತ ಇರೋವಾಗ. ಕವಿತೆಯ ವಿಚಾರಗಳು ಆಗಾಗ ಮನಸ್ಸನ್ನು ಹಾಯ್ದು ಹೋಗುತ್ತಲೇ ಇರುತ್ತವೆ. ಆದರೆ ಕವಿತೆಯ ರೂಪು ತಾಳುವುದು ಕೆಲವು ಮಾತ್ರವೇ. ಕವಿತೆ ಬರೆಯೋದಕ್ಕೆ ಮೊದಲು ಮನೆಯ ಟೆರೇಸಿನಲ್ಲಿ ಅಡ್ಡಾಡಬಹುದು. ಹೀಗೆ ಅಡ್ಡಾಡುತ್ತ ಹೈದರಾಬಾದು ಮತ್ತು ಸಿಕಂದರಾಬಾದು ನಗರಗಳ ಪಾರ್ಶ್ವನೋಟದಲ್ಲಿ ತಲ್ಲೀನನಾಗ ಬಹುದು. ಎಡೆಬಿಡದೆ ಸಾಗುತ್ತಿರುವ ಟ್ರೇನುಗಳನ್ನು ನೋಡ ಬಹುದು. ಸಂಜೆಯ ಬೆಳಕಿಳಿದು ಪೇಟೆಬೀದಿಗಳಲ್ಲಿ ವಿದ್ಯುದ್ದೀಪಗಳು ಉರಿಯುವ ಸಮಯ. ಹಕ್ಕಿಗಳು, ಕೂಲಿಕೆಲಸಗಾರರು ಮನೆಗೆ

ಮರಳುವ ಸಮಯವೂ ಹೌದು. ದಕ್ಷಿಣದ ಈ ಪೀಠ ಭೂಮಿಗೆ ಅದರದೇ ಸೌಂದರ್ಯವಿದೆ. ಇತಿಹಾಸಪೂರ್ವವನ್ನು ನೆನಪಿಗೆ ತರುವ ಹೆಬ್ಬಂಡೆಗಳು. ಗುಂಪಿನಲ್ಲಿದ್ದೂ ಒಂಟಿಯಾಗಿ ತೋರುವ ಅತಿ ಎತ್ತರದ ತಾಳೆಮರಗಳು. ಇವೂ ನನ್ನ ಕವಿತೆಗೆ ಪ್ರತಿಮೆಗಳು.

ಮನುಷ್ಯರು, ಪರಿಸರ, ಚರಿತ್ರೆ, ವರ್ತಮಾನ, ಭವಿಷ್ಯ—ಸಣ್ಣ ಪುಟ್ಟ ಸಂಗತಿಗಳೂ ಸೇರಿದಂತೆ ಸಕಲವೂ ನನ್ನ ಕವಿತೆಗೆ ವಸ್ತುಗಳೇ. ಒಂದೆಡೆ ಕಾಫ್ಕಾ ಹೇಳಿದ ನೆನಪು: ಸಣ್ಣ ಪುಟ್ಟ ವಸ್ತುಗಳೆಂದರೆ ನಮಗೆಲ್ಲ ನಿಸ್ಸಾರ, ಆದರೆ ಯೋಚಿಸಿ ನೋಡಿದರೆ, ಎಲ್ಲರ ಬದುಕೂ ಇಂಥ ವಸ್ತುಗಳಿಂದಲೇ ತುಂಬಿರುವುದು—ಎಂಬುದಾಗಿ. ಕವಿ, ಕಲಾವಿದ, ಚಿತ್ರಕಾರ ಇಂಥ ವಸ್ತುಗಳ ಬಗ್ಗೆ ಯೋಚಿಸದೆ ಇದ್ದರೆ ಇನ್ನೇತರ ಬಗ್ಗೆ ಯೋಚಿಸಬೇಕು? ಮಹಾಕಾವ್ಯಗಳನ್ನು ಬರೆದ ನಮ್ಮ ಹಿಂದಿನ ಕವಿಗಳು ಕೂಡ ಇಂಥ ವಿಷಯಗಳನ್ನು ಮರೆಯಲಿಲ್ಲ. ನಮ್ಮ ಶಿಲ್ಪ ಸಂಪ್ರದಾಯದಲ್ಲಿ ಕೂಡ ಇದೇ ಕಂಡುಬರುವುದು. ಗೊಮ್ಮಟನ ಪ್ರತಿಮೆ ಒಂದು ಅಖಂಡ ಶಿಲೆ, ಅದರ ರಚನೆಯಲ್ಲಿ ಚಿಕ್ಕ ವಿವರಗಳು ಕಡಿಮೆಯಿರಬಹುದು. ಆದರೆ ದೇವಾಲಯಗಳ ಗೋಡೆಗಳ ಶಿಲ್ಪರಚನೆ ಹಾಗಲ್ಲ—ಅಲ್ಲಿನ ನರ್ತಕಿಯರು, ಅವರ ಒಡ್ಯಾಣ ಗೆಜ್ಜೆಗಳು, ಕಾಲುಗಳ ಭಂಗಿ. ಇವೆಲ್ಲ ಸೂಚಿಸುವ ಜೀವನಾಸಕ್ತಿ ಅದ್ಭುತವಾದ್ದು. ಹೀಗಿರುತ್ತ ಕವಿ ಮೋಡಗಳ ಮೇಲೆಯೆ ನಡೆಯಬೇಕೆಂದರೆ ಹೇಗೆ?

ನನ್ನ ಕಾವ್ಯ ಎಷ್ಟರ ಮಟ್ಟಿಗೆ ನಮ್ಮ ಪರಂಪರೆಗೆ ಸೇರಿದ್ದು, ಎಷ್ಟರ ಮಟ್ಟಿಗೆ ಹೊರತಾದ್ದು ಎಂದು ಕೇಳಿದವರಿದ್ದಾರೆ. ಪ್ರತಿಯೊಬ್ಬ ಮನುಷ್ಯನೂ ತೀವ್ರವಾಗಿ ಚಿಂತಿಸಬಲ್ಲವನಾಗಿದ್ದರೆ ಅನೇಕ ದಿಕ್ಕುಗಳಲ್ಲಿ ವಿಷಕ್ರಮಿಸಲು ಯತ್ನಿಸುತ್ತಾನೆ. ಅಂಥವನ ಮೇಲೆ ಅನೇಕ ಪ್ರಭಾವಗಳು ಬೀಳುತ್ತವೆ. ಒಂದು ಪರಂಪರೆಯೆಂದರೆ ಅದು ಬೆಳ್ಳಿಯ ಸರಿಗೆಯಹಾಗಲ್ಲ. ಬಹಳ ಸಂಕೀರ್ಣವಾದ್ದು. ಅದರಲ್ಲಿ ತೋರಮಟ್ಟಿನ ಲಕ್ಷಣಗಳನ್ನು ಮಾತ್ರವೆ ಗುರುತಿಸುವುದು ಸಾಧ್ಯ. ಪರಂಪರೆ ಕೂಡ ಕಾಲದಿಂದ ಕಾಲಕ್ಕೆ ಬದಲಾಗುತ್ತ ಹೋಗುತ್ತದೆ—ಭಾಷೆ ಕೂಡ ಬದಲಾಗುವುದಿಲ್ಲವೆ? ಆದ್ದರಿಂದ ಯಾರೊಬ್ಬನ ಸಾಹಿತ್ಯವಾದರೂ ಅದು ಪರಂಪರೆಗೆ ಸೇರುತ್ತದೆಯೋ ಇಲ್ಲವೋ ಎಂದು ಪೂರ್ವಭಾವಿಯಾಗಿ ನಿರ್ಣಯಿಸುವುದು ಸಾಧ್ಯವಿಲ್ಲ. ಒಬ್ಬನ ಸಾಹಿತ್ಯ ಪರಂಪರೆಗೆ ಏನು ಮಾಡಿದೆ ಎಂಬ ಪ್ರಶ್ನೆ ಹೆಚ್ಚು ಸಮಂಜಸವಾದುದು. ಯಾವುದೇ ಕಾರಣಕ್ಕೂ ಅನುಭವಗಳನ್ನು ಸೀಮಿತಗೊಳಿಸುವುದಕ್ಕಿಂತ ಅವನ್ನು ವಿಸ್ತರಿಸಿಕೊಳ್ಳುವುದರಲ್ಲಿ ನನಗೆ ಆಸಕ್ತಿ. ಆದ್ದರಿಂದ ಯಾವುದನ್ನೂ ಬೇಡವೆಂದು ನಾನು ದೂರವಿಡಲಾರೆ. ನನ್ನ ಓದುವಿಕೆಗೆ ಹಲವು ದಿಕ್ಕುಗಳು. ಯಾವುದು ನಮ್ಮ ಸಂಸ್ಕೃತಿಯಿಂದ ಹೆಚ್ಚು ದೂರವಾಗಿದೆಯೋ ಅದರಲ್ಲಿ ನನಗೆ ಹೆಚ್ಚಿನ ಆಸಕ್ತಿ.

ಕಲಾ ಪ್ರಪಂಚದಲ್ಲಿ ಪಿಕಾಸೋ ಮಾಡಿದ ಪ್ರಯೋಗಗಳಿಗೆ ಲೆಕ್ಕವಿಲ್ಲ. ಲೋಕದ ಸಕಲ ವಸ್ತುಗಳೂ ಅವನ ಕಲೆಗೆ ಆಹಾರವೇ. ಗೂರ್ನಿಕಾದಂಥ ಅದ್ಭುತ ಕಲಾಕೃತಿಗಳನ್ನು ಅವನು ಸೃಷ್ಟಿಮಾಡಿದ. ತಮ್ಮ ವಾಯುದಳದ ಸಾಮರ್ಥ್ಯವನ್ನರಿಯಲು

ಜರ್ಮನ್ ನಾಯಿಗಳು ಸ್ಪೇನಿನ ಗೂರ್ನಿಕಾ ಎಂಬ ಚಿಕ್ಕ ಪ್ರದೇಶವೊಂದರ ಮೇಲೆ ಧಾಳಿಮಾಡಿದರು. ಅದು ಸ್ಪೇನಿನ ಅಂತಃಕಲಹದ ಕಾಲವಾದ್ದರಿಂದ ಗೂರ್ನಿಕಾ ನಿಸ್ಸಹಾಯಕವಾಗಿತ್ತು. ಈ ವಿಧ್ವಂಸದ ಬಗ್ಗೆ ಪಿಕಾಸೋ ರಚಿಸಿದ ಗೋಡೆಚಿತ್ರವೇ ಗೂರ್ನಿಕಾ. ಫ್ರಾಂಕೋನ ಪತನವಾಗುವತನಕ ತಾನು ಸ್ಪೇನಿಗೆ ಮರಳಲಾರೆನೆಂದು ಪಿಕಾಸೋ ಶಪಥ ಮಾಡಿದ್ದ. ಆದರೆ ಪಿಕಾಸೋನಿಗಿಂತ ಹೆಚ್ಚು ಕಾಲ ಫ್ರಾಂಕೋ ಹಟದಿಂದ ಎಂಬಂತೆ ಬದುಕಿ ಉಳಿದ. ಇದೇ ಪಿಕಾಸೊ "ವೀನಸ್ ದು ಗಾಸ್" (ಗ್ಯಾಸಿನ ವೀನಸ್) ಎಂಬಂಥ ಕೃತಿಗಳನ್ನು ರಚಿಸಿದ. ಗ್ಯಾಸ್ ಒಲೆಯ ಬರ್ನರನ್ನು ಒಂದು ಪೀಠದ ಮೇಲೆ ನಿಲ್ಲಿಸಿ ಅದಕ್ಕೊಂದು ಹೆಸರನ್ನು ಕೊಟ್ಟದ್ದು ಮಾತ್ರ; ಅದೇ "ವೀನಸ್ ದು ಗಾಸ್!"

ಪಿಕಾಸೋನ ನಾನು ನೋಡಿಲ್ಲ. ಆದರೂ ಆತನನ್ನ ಮಾದರಿಯಾಗಿ ನಾನು ತೆಗೆದುಕೊಂಡಿದ್ದೇನೆ.

೧೯೬೮ರಲ್ಲಿ ನಾನು ರಿಚರ್ಡ್ ಹ್ಯಾರಿಸ್ ಬರೆದ "ಡೆತ್ ಆಫ್ ಎ ರೆವೊಲ್ಯೂಶನರಿ: ಚೆ ಗವೇರಾಸ್ ಲಾಸ್ಟ್ ಮಿಶನ್" ಎಂಬ ಪುಸ್ತಕವನ್ನು ಓದಿದೆ. ಇದಕ್ಕೂ ಮೊದಲು ಕಾಸರಗೋಡಿನಲ್ಲಿ, ತಿರುವನಂತಪುರದಲ್ಲಿ ವಿದ್ಯಾರ್ಥಿಯಾಗಿದ್ದಾಗಲೆ, ನನಗೆ ಚೆಯ ಚಟುವಟಿಕೆಗಳ ಬಗ್ಗೆ ಆಸಕ್ತಿಯಿತ್ತು. (ಚೆಯೆಂಬುದು ಅರ್ನೆಸ್ಟೊಗವೇರಾನಿಗೆ ಅವನ ಗೆಳೆಯರು ಹಾಕಿದ ಅಡ್ಡಹೆಸರು.) ಚೆಯಂತೆ ನನಗೂ ಆಸ್ತಮಾದ ತೊಂದರೆಯಿದೆ. ಆದರೆ ಚೆಯಂತೆ ನಾನು ಮಾರ್ಕ್ಸಿಸಮಿಗೆ ಬದ್ಧನಲ್ಲ. ಯಾವುದೇ ಒಂದು ರಾಜಕೀಯ ಆದರ್ಶಕ್ಕೂ ನಾನೂ ಬದ್ಧನಲ್ಲ. ನನ್ನ ತಾತ್ವಿಕ ನೆಲೆಗಟ್ಟೇ ಇದಕ್ಕೆ ಕಾರಣವಾಗಿರಬಹುದು—ಎಲ್ಲವನ್ನೂ ಇದಮಿತ್ಥಂ ಎಂದು ತೆಗೆದುಕೊಳ್ಳಲಾರದವನು ನಾನು. ಏನೇ ಇದ್ದರೂ ಒಂದು ಆದರ್ಶಕ್ಕೆ ಬದ್ಧರಾಗಿ ದುಡಿಯುವವರ ಮೇಲೆ ನನಗೆ ಆದರವಿದೆ. ೧೯೬೭ರಲ್ಲಿ ಚೆ ಮೃತನಾದ. ಬೊಲೀವಿಯಾ ಸರಕಾರಿ ಸೇನೆಯ ಗುಂಡಿಗೆ ಇವನು ಬಲಿಯಾಗಿರಬಹುದು. "ಬೊಲೀವಿಯಾದಲ್ಲಿ ಚೆ" ಕವಿತೆಯ ಹಿನ್ನೆಲೆ ಇದು.

ಐಗುಪ್ತದ ಪಿರಮಿಡ್ಡುಗಳ ಬಗ್ಗೆಯೂ ಅರೇಬಿಯದ ಸುಂದರಿಯರ ಬಗ್ಗೆಯೂ ನಾನು ಬರೆದಿದ್ದೇನೆ. ಕುಳಿತಲ್ಲೇ ಖಂಡಾಂತರಗಳನ್ನು ನೆಗೆಯುವುದೆಂದರೆ ನನಗೆ ಇಷ್ಟ.

ಅಸ್ಪೃಶ್ಯತೆ ಒಂದು ಪಾಪ, ಘೋರ ಅಪರಾಧ.

ಗಾಂಧೀಜಿ

ಬೊಲೀವಿಯಾದಲ್ಲಿ ಚೆ

ಕೆ. ವಿ. ತಿರುಮಲೇಶ

ಬೊಲೀವಿಯಾ

ಆ ಒಂದು ಹೆಸರಿಗೇ ನಾನು
ಎದ್ದು ಕುಳಿತಿದ್ದೆನಲ್ಲ, ನಿದ್ದೆಗಣ್ಣನು ಹಿಸುಕಿ—
ಏನದಕ್ಷರವೆ ಪಠ್ಯ ಪುಸ್ತಕದ ನಡುವೆ
ಯಾವ ಅನಾಮಿಕ ಬರಹಗಾರ
ಕಲ್ಪಿಸಿದ ಉಪಮೆಯೋ
ರೂಪಕವೊ ಸಂಕೇತವೊ
ಪ್ರತಿಮೆಯೊ ಪ್ರತೀಕವೊ
ಕಪ್ಪು ಮಸಿಯ ಆ
ಕೆಟ್ಟ ಚಿತ್ರದಲು ಎದ್ದಿತ್ತು
ಒಂದು ಭೂಖಂಡವೇ
ಕತ್ತಲ ಮೇಲೆ ಕತ್ತಲನು ಹೊತ್ತು

ಪ್ರತಿಮೆಯಲ್ಲ ಪ್ರತೀಕವಲ್ಲ
ಬೊಲೀವಿಯಾ
ಸೈಮನ್ ಬೊಲೀವರನು ಬದುಕಿದ್ದ ನಾಡು
ಅವನಿಂದಲೇ ಬಂತು ಆ ಹೆಸರು—
ದಟ್ಟಕಾಡುಗಳ ಗುಡ್ಡಬೆಟ್ಟಗಳ
ಎಡೆಬಿಡದೆ ಮಳೆಬೀಳುವ ನಾಡು
ಶಾಲೆಯ ಹುಡುಗರು ನಾವು
ಯಾರೂ ಕಂಡುದಿಲ್ಲ—
ಆದರೂ ಕಲ್ಪಿಸಿದ್ದುಂಟು
ಕುಲಗೋತ್ರ ಗೊತ್ತಿರದ ಹೆಮ್ಮರಗಳ ಸುತ್ತ
ತೊಡೆಗಾತ್ರದ ಬಳ್ಳಿಗಳಂತೆ

ಸುತ್ತಿ ತೊನೆವ ಏರಿಳಿವ
ಹೆಬ್ಬಾವುಗಳ ಕಂಡು ಬೆಚ್ಚಿದುದುಂಟು
ಅಲ್ಲಲ್ಲಿ ಬಂಡೆಗಳ ಮೇಲೆ
ಬಿಸಿಲ ಕಾಯಿಸುವ ಇಗುವಾನಾಗಳ
ನೋಡಿ ಹೆದರಿಕೊಂಡುದೂ ಉಂಟು—
ನದೀ ದಂಡೆಯಲಿ ತನಗೆ ತಾವೇ
ಬೇಕೆಂದಾಗ ಅರಳುವ ಅಥವ ಮುಚ್ಚುವ
ನರಭಕ್ಷಕ ಹೂವುಗಳು
ಕನಸಿನೊಳಗೂ ಬರುವುವು
ನಡೆಯುವಂತಿಲ್ಲ ನೆಲದಲ್ಲಿ
ಇಳಿಯುವಂತಿಲ್ಲ ನೀರಲ್ಲಿ
ಬಿಳಲನೂ ಹಿಡಿಯುವಂತಿಲ್ಲ
ಬೊಲೀವಿಯಾ !
ದಿಕ್ಕೆಟ್ಟು ಅಲೆಯುತ್ತ
ಎಷ್ಟೊ ಒಳ ಬಂದಿರುವೆ
ನನ್ನ ಆಕ್ರಂದನಕೆ ಧ್ವನಿಯಿರದಂತೆ
ಮಾಡುವುದು ಈ ನಿನ್ನ
ಭೀಕರ ಮೌನ—
ಹೇಗೆ ಮುರಿಯಲಿ ಅದನ್ನ

ಇಂಟಿ ಪೆದ್ರೊ

ಕ್ಯಾಕರಿಸಿ ಉಗುಳಿ
ಸರಿಪಡಿಸಿಕೊಂಡನು ಗಂಟಲನ್ನ
ಪೆದ್ರೊ—ಇಂಟಿ ಪೆದ್ರೊ

ಸೆಪ್ಟೆಂಬರ್ ೨೨
ಡಾಗ ಇಲ್ಲೊ ಸೆಕೊ

ಒಂದು ಅತಿಪುಟ್ಟ ಭಾಷಣವ
ಮಾಡಿದನು ಪೆದ್ರೊ—

ಕ್ರಾಂತಿಯ ಕುರಿತಾಗಿ
ಚೆಯ ಕುರಿತಾಗಿ
ತಿಳಿಸುವುದಾಗಿತ್ತು
ಅವನ ಉದ್ದೇಶ

ಪೆಡ್ರೊ ಹೇಳಿದ್ದೇನು ?
ಚೆ ನಮ್ಮ ನಾಯಕನು
ಚೆ ನಮ್ಮ ಗೆಳೆಯನು
ಇಂಟಿ ಪೆದ್ರೊ ನಾನು
ಅವನ ಹಿಂಬಾಲಕನು

ಭಯೋತ್ಪಾದಕರು ನಾವಲ್ಲ
ಅವರು ಸರಕಾರಿ ನೌಕರರು
ಸುಂಕದ ಕಟ್ಟೆ ಮಾಲಿಕರು
ಪೇಟೆಯಲ್ಲಿ ಕುಳಿತವರು
ಕೆಲಸದ ಗುತ್ತಿಗೆ ಹಿಡಿದವರು
ನಾವು ಮಾತ್ರ ನಿಮ್ಮವರೇ—

ಈ ಉಡುಗೆಯ ನೋಡಿ
ಬೆಚ್ಚುವುದು ಬೇಡ
ನಮ್ಮ ಗಡ್ಡದ ಬಗ್ಗೆಯೂ
ಸಂದೇಹ ಬೇಡ
ಯಾವಾತ ಬಹು ದೊಡ್ಡ
ಸಿಗಾರುಗಳ ಸೇದುವಾ
ಆ ಫಿಡೆಲ್ ಕಾಸ್ಟ್ರೊ ಕೂಡ
ಹೀಗೇ ಇರುವಾತ
ಅಂಥ ಕಾಸ್ಟ್ರೋನ ಗೆಳೆಯ ಚೇ
ಗವೇರಾ
ಬಂಡಾಯಗಾರ

ಕ್ರಾಂತಿಗಳ ಮಾಡುವುದು
ನಮ್ಮ ಕೆಲಸ—
ನಿಮಗೆಂದು ಕ್ರಾಂತಿ
ದಬ್ಬಾಳಿಕೆಯ ನೊಗವ
ಚಿಕಿತ್ಸೆಯೆಂದು ಕ್ರಾಂತಿ

ಮನುಷ್ಯ ಗೌರವ ನಿಮಗೆ
ಸಿಗಲೆಂದು ಕ್ರಾಂತಿ
ಎಂದು ? ಆ ದಿನ ಎಂದು ?
ನೀವು ಬಯಸಿದರೆ
ಇಂದು...

ಎದುರಿಗಿದ್ದವರೊಟ್ಟು ೧೫ ಮಂದಿ
ಕಡೆದ ಕಲ್ಲಿನಂತವರು ಕುಳಿತಿದ್ದರು
ಅವರ ತಳವಿರದ ಕಣ್ಣುಗಳು
ಇಳಿ ಮಧ್ಯಾಹ್ನದ ಬಿಸಿಲಲ್ಲಿ
ಕಂತಿದ್ದವು.
ಊರ ಶಾಲಾವತಾರ
ಹಳೆಹಂಚಿನ ಮಾಡು
ಜೇಡಿಮಣ್ಣಿನ ಗೋಡೆ
ಕಿಡಿಗೇಡಿ ಚಿತ್ರಗಳು ಮಸಿಯಲ್ಲಿ
ಅದ ಮಾಯಿಸಲು ನಡೆಸಿದ
ವಿಫಲ ಯತ್ನಗಳು ಅಲ್ಲಲ್ಲಿ
ಸಭೆಗೆ ಬಂದವರಲ್ಲಿ ೫ ಜನ
ಅದೇ ಶಾಲೆಯ ಹುಡುಗರು

ಪೆದ್ರೊ—ಇಂಟಿ ಪೆದ್ರೊ
ಕೇಳಿಕೊಂಡನು ತನಗೆ ತಾನೇ
ತಾ ಹೇಳಿದ್ದು ಸರಿಯೆ ?
ಛೇ ಹೇಳಿದ್ದು ಇದುವೆ ?
ಅಲ್ಲಲ್ಲ ! ಸರಿಹೋಯ್ತು !
ತಿದ್ದಿ ಹೇಳುವುದಕೆಂದು ಬಾಯನು ತೆರೆದ
ಗಂಟಲಾರಿತ್ತು ಹೊರಡಲೊಲ್ಲದು ಮಾತು
ಸನ್ನೆಯ ಮಾಡಿದನು ಪೆದ್ರೊ
ಆ ಕೂಡಲೆ ಯಾರೊ
ಹೋಗಿ ತಂದರು ನೀರು
ಒಂದು ಬಿಂದಿಗೆ ತುಂಬ
ಅರ್ಧವನು ಕುಡಿದು ಪೆದ್ರೊ
ಇನ್ನರ್ಧದಲಿ ಮುಖ ತೊಳೆದ
ಹಾ ! ಎಷ್ಟು ಹಿತವಾಗಿದೆ !

ಎಂದು ನುಡಿದ !
ಜನ ತಲೆದೂಗಿದರು.

ಎಲ್ಲಿ ಹದಿನಾರನೇ ವ್ಯಕ್ತಿ ?
ಊರ ದಾರಿಯಲವನು
ಸರ ಸರನೆ ಹೊರಟಿದ್ದ
ಕರೆತರಲು ಪೋಲೀಸು ಪಡೆಯನು.

ತಾನಿರಿಯಾ

ಬೆಟ್ಟದಲಿ ಹುಟ್ಟಿ ರಿಯೋ ಗ್ರಾಂಡ್
ಬಯಲಲ್ಲಿ ಹರಿಯುವುದು
ಕಡಲ ಸೇರುವುದು
ಕಡಿದಾದ ಕಡೆ ಮೊರೆವ
ಹರವಾದ ಕಡೆ ಮೆರೆವ
ತಿರುವುಗಳಲ್ಲಿ ಮಡುಗಟ್ಟುವ
ಅದಕ್ಕೂ ಹಲವು ವಿಕಾರಗಳು
ಮನುಷ್ಯನ ಮನಸ್ಸಿನಂತೆಯೇ

ಅದರಾಚೆಗಿರುವನು ಚೆ
ಗವೇರ ಬಂಡಾಯಗಾರ
ಅವನ ಸೇರಲೆಂದು
ಹೊರಟಿದ್ದರಂದು
ಒಂಬತ್ತು ಮಂದಿ ಗೆರಿಲ್ಲಾ ಯೋಧರು
ಅವನ ಸ್ನೇಹಿತರು, ಹಿಂಬಾಲಕರು
ಎಲ್ಲಿ ನದಿ ಹರಡಿ ತೆಳುವಾಗಿತ್ತೊ
ಅಲ್ಲಿ ದಾಟುವುದೆಂದು
ನೀರಿಗಿಳಿದರು
ಒಬ್ಬರ ಹಿಂದೊಬ್ಬರು.

ಆರುಗಂಟೆಯ ಸಮಯ
ಬೊಲೀವಿಯಾದಲ್ಲಿ

ಕತ್ತಲಾಗುವುದು ಬಲುಬೇಗ
ಒಮ್ಮೆಲೇ ಮುಸುಕೆಳೆದ
ಕಂಬಳಿಯ ಹಾಗೆ ಮುಚ್ಚುವುದು
ಮೇಲೆ ನಕ್ಷತ್ರಗಳೂ ಇಲ್ಲ
ಮುಗಿಲ ಮೂಲೆಯಲಿ ಮಾತ್ರ
ಬೆಳಕು ಇನ್ನೂ ಸ್ವಲ್ಪ
ಉಳಿದ ಹಾಗಿತ್ತು

    ಎಲ್ಲರಿಗಿಂತ ಮುಂದಿದ್ದವನು
    ಜೋವಾಖಿನ್
    ಆವನೆ ಹಂಗಡದ ನೇತಾರ
    ಎಲ್ಲರಿಗಿಂತ ಹಿಂದೆ ತಾನಿಯಾ
    ತಾನಿಯಾ ! ಓ ! ಅವಳ ಕುರಿತೇನು
    ಹೇಳಿಲ್ಲ, ಈಗಿನ್ನು
    ಹೇಳೋದಾದರೆ ಇಷ್ಟೆ :
    ಸರಕಾರಿ ಗುಂಡಿಗೆ
    ಮೊದಲು ಬಲಿಯಾದವಳು ಅವಳೆ

ಬಿಳಿಯ ಕುಪ್ಪಸ ತೊಟ್ಟಿದ್ದಳು ತಾನಿಯಾ
ಕೆಂಪು ಕಾಲಂಗಿಯನು ಉಟ್ಟಿದ್ದಳು—
ಮುಸ್ಸಂಜೆ ಬೆಳಕು
ಅವಳ ಮೇಲೆ ತುಸು
ಹೆಚ್ಚು ಹೊತ್ತು ನಿಂತಿರಬೇಕು.

    ರಿಯೋ ಗ್ರಾಂದಿನಲಿ ಕೊಚ್ಚಿಹೋಗುತ್ತ
    ಏನೆಂದುಕೊಂಡಿರಬಹುದು ತಾನಿಯಾ ?
    ಚೆ ! ನಿನಗೆ ವಿದಾಯ
    ಬೊಲೀವಿಯಾ ನಿನಗೂ ವಿದಾಯ
    ಎಂದುಕೊಂಡಿರಬಹುದೆ ?
    ಆಹಾ ! ಇಷ್ಟು ತಣ್ಣಗಿರಬೇಕೆಂದರೆ
    ಈ ನೀರು
    ಎಷ್ಟು ಹಿಮಗಡ್ಡೆಗಳ
    ಹಾದು ಬಂದಿರಬೇಕು !
    ಎಲ್ಲಿಹೋಯಿತು ಹಗಲು
    ಎಲ್ಲಿಹೋಯಿತು ಸಂಜೆ

ಇಷ್ಟು ಬೇಗನೆ ಇಲ್ಲಿ
ಕತ್ತಲಾಗುವುದೆಂದೆ ?

ಈಗ ಇನ್ನೇನು ಹೇಳಿದರು ಅವು
ಉಳಿದವರ ವಿಚಾರಗಳೆ ವಿನಾ
ತಾನಿಯಾಳದಲ್ಲ—
ತಾನಿಯಳ ಮನವ ಹೊಗುವವರು ಮೊದಲು
ಬೊಲೀವಿಯದ ಅರಣ್ಯಗಳಲ್ಲಿ
ಅಲೆಯಬೇಕು
ಆಕೆ ಅಲೆದಂತೆ
ರಿಯೋಗ್ರಾಂದಿನಲಿ ಕೊಚ್ಚಿಹೋಗಬೇಕು
ಆಕೆ ಹೋದಂತೆ

ಕನಸ ಕಾಣುವನು ಚೆ

ಚೇಯ ಕಾಡುವುದು ಆಗಾಗ
ಉಬ್ಬಸ ರೋಗ
ಇಂದು ತುಸು ಜ್ವರವೂ
ಸೇರಿರುವುದು ಪ್ರತ್ಯೇಕ
ಆದ್ದರಿಂದಲೆ ಕನಸು—
ಕನಸಿನೊಳ ಬಂದವರು
ತನ್ನಂತೆ ಇಬ್ಬರು
ಒಬ್ಬ ಚೆ ಗವೇರ
ಇನ್ನೊಬ್ಬನೂ ಚೆ ಗವೇರ

ಒಬ್ಬನೆಂದನು : "ಚೆ !
ಎತ್ತಣಿಂದ ಬಂದೆ ನೀ
ಎತ್ತಕಡೆ ಹೋಗುವಿ ?
ಈ ಕಾಡು, ಈ ಬೆಟ್ಟ,
ಈ ದೇಶ, ಈ ನದೀ ವಲಯ
ಗೆಳೆಯ—

ಈ ನಿನ್ನ ಗೆರಿಲ್ಲಾ ವೇಶ
ಯಾವುದೂ ನಿಜವಲ್ಲ
ಬರಿ ಕನಸು
ಮರೆತುಬಿಡು ಕ್ಯೂಬ
ಮರೆತುಬಿಡು ಕಾಸ್ಟ್ರೊ
ಅದು ಬೇರೆ ಕಾಲ
ಬೇರೆಯೇ ಸತ್ಯ !"

ಅದಕೆಂದನವನು : "ಚಿ !
ಈ ಕಾಡು, ಈ ಬೆಟ್ಟ,
ಈ ದೇಶ, ಈ ನದೀವಲಯ
ಹಾಗೂ ನನ್ನ ಗೆರಿಲ್ಲಾ ವೇಶ
ಯಾವುದೂ ನಿಜವಲ್ಲ ಎನುವುದಕೆ
ನೀನಾದರೂ ಯಾರು—
ನೀ ಕೂಡ ಅದೆಲ್ಲದರ
ಭಾಗವೇ ಆಗಿರುವ ಮೋಶೆ ?"

ಸರಳುವನು ಚೆ
ಅಚೀಚೆ ಚೆಲ್ಲಿರುವ
ಔಷಧಿಯ ಕುಪ್ಪಿ, ಬಂದೂಕ,
ಬೋರಲಾಗಿಟ್ಟ ಡೈರಿ ಒಳಹೊರಗೆ
ಕವಿತೆಯ ತುಣುಕುಗಳು ಅನೇಕ

ಕುರಿಗಳಿವೆ! ಕುರಿಗಳಿವೆ!

ಕುರಿಗಳಿವೆ ಕುರಿಗಳಿವೆ
ಕೊಪ್ಪಲಲ್ಲಿ ಕುರಿಗಳಿವೆ
ಒಂದನೊಂದು ಮುಟ್ಟಿಕೊಂಡ
ಬೋಳದಂಥ ಮರಿಗಳಿವೆ

ಮನೆಗಳಿವೆ ಮನೆಗಳಿವೆ
ಕೇರಿಯುದ್ದ ಮನೆಗಳಿವೆ
ಕಿಡಿಗಳೆದ್ದು ಒಲೆಯ ಸುತ್ತ
ಸಿಡಿದು ಹಾಳಾಗುತಿವೆ

ಆರುತಿವೆ ಆರುತಿವೆ
ಬೀದಿದೀಪ ಆರುತಿವೆ
ತಡವಾಗಿ ಬಂದವರ
ಗುರುತುಗಳ ಕೇಳುತಿವೆ

ಹೊಂಚುತಿವೆ ಹೊಂಚುತಿವೆ
ಮರೆಯಲ್ಲಿ ಹೊಂಚುತಿವೆ
ಕೆಂಡದಂಥ ಕಣ್ಣುಗಳು
ಈ ಕಡೆಗೇ ಮಿಂಚುತಿವೆ !

ಪ್ರೇಮದ ಬಲಕ್ಕಿಂತ ಉನ್ನತವಾದದ್ದು, ಬಲವಾದದ್ದು ಇನ್ನೊಂದಿಲ್ಲ.

ವ್ಯಕ್ತಿಯಲ್ಲಿರುವ ಉತ್ತಮ ಅಂಶವನ್ನು ಬೆಳಕಿಗೆ ತರುವುದೇ ನಿಜವಾದ ಶಿಕ್ಷಣ. ಮಾನವತ್ವದ ಪುಸ್ತಕಕ್ಕಿಂತ ಉತ್ತಮ ಪುಸ್ತಕ ಯಾವುದಿದೆ?

ಗಾಂಧೀಜಿ

ಹಾಸಿಗೆಗಿಂತ ಉದ್ದ ಕಾಲು ಚಾಚದಿರಿ!

ಜಿ. ಟಿ. ನಾರಾಯಣರಾವ್

(ಕಳೆದ ಸಂಚಿಕೆಯಿಂದ ಮುಂದುವರಿದದ್ದು)

ಸರಿಯೋ ತಪ್ಪೋ ಅಂತೂ ನಾವಿಂದು ಆಧುನಿಕ ಪಾಶ್ಚಾತ್ಯ ತಂತ್ರ ವಿದ್ಯೆಯ ದಾಸರೂ ಹೌದು, ಪ್ರಭುಗಳೂ ಹೌದು. ನಿಸರ್ಗವನ್ನು ತಿಳಿದೋ ತಿಳಿಯದೆಯೋ ಸೂರೆ ಮಾಡಿ (ಬರಗಿ ಸ್ವಾಹಾಕರಿಸಿ) ಈ ತಂತ್ರವಿದ್ಯೆಯನ್ನು ಅಭಿವರ್ಧಿಸುವಲ್ಲಿ ಅಪಾರ ಧನ ಮತ್ತು ಶ್ರಮ ವಿನಿಯೋಜಿಸಿದ್ದೇವೆ. ಈ ತಂತ್ರವಿದ್ಯೆ ಪ್ರಧಾನವಾಗಿ ನಾಲ್ಕು ಸೂತ್ರಗಳನ್ನು ಆಧರಿಸಿ ವಿಕಸಿಸಿದೆ: ಅಧಿಕ ಬಂಡವಾಳ, ಕಡಿಮೆ ಕಾರ್ಮಿಕರು, ಫಾಸಿಲ್ ಇಂಧನ, ಸಾರಿಗೆ ಜಾಲ. ಇವುಗಳ ಅರ್ಥವಿಷ್ಟು:

ಅಧಿಕ ಬಂಡವಾಳ ಹೂಡಿ ಬೃಹದುದ್ಯಮಗಳನ್ನು ಸಂಸ್ಥಾಪಿಸ ಬೇಕಾಗುತ್ತದೆ. ಶ್ರೀಮಂತ ರಾಷ್ಟ್ರಗಳಿಗೆ ಮಾತ್ರ ಇದು ಸಾಧ್ಯ ವಾದೀತು—ಉದಾಹರಣೆಗೆ ಅಮೆರಿಕ. ಅಲ್ಲಿ ಅಂದು—ಆಧುನಿಕ ತಂತ್ರ ವಿದ್ಯಾಸ್ಫೋಟನೆಯ ಆರಂಭ ದಿನಗಳಂದು—ಜನಸಂಖ್ಯೆ ಪರಿಮಿತವಾಗಿತ್ತು, ಭೌಗೋಲಿಕ ಪ್ರದೇಶ ವಿಶಾಲವಾಗಿತ್ತು, ಯೂರೋಪಿನಿಂದ ವಲಸೆಬಂದ ಪರಿಣಿತರ ಸಮೂಹ ಸ್ಥಳೀಯರನ್ನು ಸದೆಬಡಿದು ತನ್ನ ಪ್ರಭುತ್ವವನ್ನು ವಿಸ್ತರಿಸುವುದರಲ್ಲಿ ಮಗ್ನ ವಾಗಿತ್ತು, ನೈಸರ್ಗಿಕ ಸಂಪನ್ಮೂಲಗಳು ಅಪಾರವಾಗಿದ್ದರೂ ಅವು ಅನನ್ವೇಷಿತವಾಗಿ ಇನ್ನೂ ಕೈಗಾರಿಕೋದ್ಯಮಗಳಿಗೆ ಲಭ್ಯವಾಗಿರ ಲಿಲ್ಲ. ಸೂತ್ರ ರೂಪದಲ್ಲಿ ಹೇಳುವುದಾದರೆ: ಪರಿಣಿತರ ಪುಟ್ಟ ಸಮೂಹ, ಅಪಾರ ಆದರೆ ಅನನ್ವೇಷಿತ ಸಂಪನ್ಮೂಲಗಳು, ಅಗಾಧ ಪ್ರದೇಶ—ಇವನ್ನು ಒಂದುಗೂಡಿಸಿ ಬದುಕನ್ನು ಶ್ರೀಮಂತಗೊಳಿಸು ವುದು ಹೇಗೆ? ಯಂತ್ರಾವಲಂಬಿಯಾಗುವುದೊಂದೇ ಇಲ್ಲಿಯ ಸುಲಭ ಪರಿಹಾರ. ಸ್ಥಳೀಯರ ಹಾಗೂ ವಲಸೆಗಾರ ಕಾರ್ಮಿಕರ ಸಂಖ್ಯೆಯನ್ನು ಮಿತಿಯಲ್ಲಿಯೂ ಹತೋಟಿಯಲ್ಲಿಯೂ ಇಡುವುದ ರಲ್ಲಿ ಈ ಅಲ್ಪಸಂಖ್ಯಾತ ಪ್ರಭುಗಳಿಗೆ ಪಟ್ಟಭದ್ರ ಹಿತಾಸಕ್ತಿಯಿತ್ತು.

ಯಂತ್ರಸ್ಥಾವರಗಳು, ಸ್ವಯಂಚಲಿಗಳು, ಬೃಹದುತ್ಪಾದನೆ, ಸಮಪರಶುರಾಮ ಸೃಷ್ಟಿ—ಎಲ್ಲ ಸರಿ. ಇವುಗಳ ಹಿನ್ನೆಲೆಯಲ್ಲಿ ಅಧಿಕ ಬಂಡವಾಳ ಅನಿವಾರ್ಯ ಅಗತ್ಯ ಇದನ್ನು ಒಂದೋ ರಾಷ್ಟ್ರ ಭರಿಸಬೇಕು—ಸೋವಿಯತ್ ಒಕ್ಕೂಟದಲ್ಲಿಯಂತೆ; ಅಥವಾ ಸ್ವಂತೋದ್ಯಮನಿರತ ಹಿರಿ ಬಂಡವಾಳಗಳು ಪೂರೈಸಬೇಕು. ಅಮೆರಿಕ ರಾಷ್ಟ್ರ ಐತಿಹಾಸಿಕ ಕಾರಣಗಳಿಂದಾಗಿ ಈ ಎರಡನೆಯ ಹಾದಿ ಹಿಡಿಯಿತು.

ಯಂತ್ರ ಚಾಲೂ ಆಗಲು ಇಂಧನ ಅಗತ್ಯ. ಇಂಧನ ಅಗ್ಗವಾದಷ್ಟೂ ಸುಲಭವಾಗಿ ಹಾಗೂ ಸಮೃದ್ಧವಾಗಿ ಲಭ್ಯವಾದಷ್ಟೂ ಉತ್ಪಾದನೆಗೆ ವಿಶೇಷ ನೂಕುಬಲ ಒದಗುತ್ತದೆ. ಫಾಸಿಲ್ ಇಂಧನ (ಅಂದರೆ ಪೆಟ್ರೋಲಿಯಮ್ ಉತ್ಪನ್ನಗಳು) ಈ ಅಗತ್ಯವನ್ನು ಅದ್ಭುತವಾಗಿ ಪೂರೈಸಿತು. ಸ್ವತಃ ಅಮೆರಿಕದಲ್ಲಿ ಇದು ವಿಪುಲವಾಗಿ ದೊರೆಯುತ್ತಿತ್ತು. ಅಲ್ಲದೇ ಅರೆಬಿಯನ್ ರಾಜ್ಯಗಳಲ್ಲಿ ಇದರ ಅಕ್ಷಯಭಂಡಾರವೇ ಪ್ರಾಪ್ತವಾಗಿ ಆ ಪ್ರದೇಶ ಬೃಹದುದ್ಯಮಗಳ ಹಾಗೂ ಅಂತಾರಾಷ್ಟ್ರೀಯ ರಾಜಕಾರಣಗಳ ಆಡುಂಬೊ ವಾಯಿತು.

ಹೀಗೆ ಒಂದು ಇನ್ನೊಂದಕ್ಕೆ—ಅಧಿಕ ಬಂಡವಾಳ, ಬೃಹದುದ್ಯಮ, ಕಡಿಮೆ ಕಾರ್ಮಿಕರು ಮತ್ತು ಸಮೃದ್ಧ ಫಾಸಿಲ್ ಇಂಧನ—ಕೊಕ್ಕೊಡುತ್ತ ಕೈಗಾರಿಕೋದ್ಯಮ ವಿಶೇಷವಾಗಿ ಅಮೆರಿಕ ದೇಶದಲ್ಲಿ, ಅಭಿವರ್ಧಿಸಿತು. ಫಲ? ಅತ್ಯಧಿಕ ಉತ್ಪಾದನೆ. ಇದ ಲಾಭದಾಯಕ ವಿತರಣೆಯಾದ ಹೊರತು ಬೃಹದುದ್ಯಮ ಸ್ಥಿರವಾಗಿ ನಿಲ್ಲದು, ಮುಂದವರಿಯದು. ವಿತರಣೆ ಎಲ್ಲಿಗೆ? ಪ್ರಪಂಚಾದ್ಯಂತ ಮಾರುಕಟ್ಟೆ ಅರಸುವುದು ಅಗತ್ಯವಾಯಿತು. ಅಲ್ಲಿಗೆ ವ್ಯಾಪಕ ಸಂಪರ್ಕಜಾಲ ಹೆಣೆಯಬೇಕಾಯಿತು. ಹೀಗೆ ಬೆಳೆಯಿತು ಸಾರಿಗೆ ಸಂಪರ್ಕ ವ್ಯವಸ್ಥೆ.

ಮೇಲೆ ವಿವರಿಸಿರುವ ನಾಲ್ಕು ಸೂತ್ರಗಳನ್ನು ಆಧರಿಸಿರುವ ಆಧುನಿಕ ತಂತ್ರವಿದ್ ತನ್ನ ಅಕ್ಟೋಪಸ್ ಬಹುಕರಗಳನ್ನು ಚಾಚಿ ನಿಸರ್ಗದಿಂದ ಸಂಪನ್ಮೂಲಗಳನ್ ದೋಚಿ ಹಿಂಜೋಲಿನಲ್ಲಿ ಪರಿಸರ ಮಾಲಿನ್ಯವನ್ನು ಉರುಚಿ ವಿಸ್ತರಿಸಿದೆಯೇ ವಿನ ನಿಸರ್ಗದೊಡನೆ ಹೊಂದಿ ಅದಕ್ಕೆ ಅನುವರ್ತಿಯಾಗಿ ಬೆಳೆದು ಅಭಿವರ್ಧಿಸಿಲ್ಲ. ಇಂ ಬೆಳೆವಣಿಗೆ ವರ್ತಮಾನ ಯುಗದ ಅಸಂಖ್ಯಾತ ಮಾನವನಿರ್ಮಿತ ಸಮಸ್ಯೆಗಳಿಗೆ ಕಾರಣವಾಗಿದೆ.

ಮೊದಲನೆಯದಾಗಿ, ನಗರಗಳ ಅತಿ ಲಂಬನೆ. ಒಂದು ಕಾಲದಲ್ಲಿ ಜನಜೀವನಕ ಅವಶ್ಯವಾದ ಸಮಸ್ತ ಸೌಲಭ್ಯಗಳೂ ಒಂದೆಡೆ ದೊರೆಯುವಂತಿದ್ದ ನಗರಗಳು ಈಗ ಅದ ಜನಜೀವನಕ್ಕೆ ಆರೋಗ್ಯ, ಆರ್ಥಿಕತೆ, ಜೀವನಮಟ್ಟ, ಸೌಕರ್ಯ ಒಂದೊಂದರಲ್ಲ ಮಾರಕವಾಗುವಂತೆ ಬೆಳೆದು ಹೋಗಿವೆ; ಬೆಳೆಯುತ್ತಲೇ ಇವೆ. ಹೀಗಿದ್ದರೂ ನಗರಗಳ ಹಳ್ಳಿಗಳಿಂದ ಜನರನ್ನು ಈಗಲೂ ಆಕರ್ಷಿಸುತ್ತಿವೆ. ಉದಾಹರಣೆಗೆ ಗ್ರಾಮಗಳ ಸಮೂ ವಾಗಿ ಅವುಗಳ ಸಾಮೂಹಿಕ ಕೊಡುಗೆ ಮೇಲೆ ನಿಂತಿರುವ ಭಾರತದಲ್ಲಿ ಆವೇ ಗ್ರಾಮಗ ಸ್ಥಿತಿಗತಿ ಶೋಚನೀಯವಾಗಿದ್ದರೆ ನಗರಗಳ ಸ್ಥಿತಿಗತಿ ನರಕಸದೃಶವಾಗಿವೆ. ಇಂ ಶಿರೋಭಾರ ಹಾಗೂ ಪಾದಕ್ಷೀಣ ವೃದ್ಧಿ ಯಾವ ರಾಷ್ಟ್ರಕ್ಕೂ ಆರೋಗ್ಯಕರವ ಅಪೇಕ್ಷಣೀಯವೂ ಅಲ್ಲ.

ಎರಡನೆಯದಾಗಿ, ತಂತ್ರವಿದ್ಯೆಯ ಫಲಗಳು ಕೃಷಿ ತೋಟಗಾರಿಕೆ ಕ್ಷೇತ್ರಗಳನ್ನು ಆಕ್ರಮಿಸಿ ಅಲ್ಲಿ ಹೊಸ ನಮೂನೆಯ ಪರಿಸರಮಾಲಿನ್ಯ ಸಮಸ್ಯೆಗಳಿಗೆ ಕಾರಣವಾಗಿವೆ. ಡಿಡಿಟಿ ಮೊದಲಾದ ಕೀಟನಾಶಕಗಳ ವ್ಯಾಪಕ ಬಳಕೆಯೇ ಆಗಲಿ, ಕೃತಕ ಗೊಬ್ಬರಗಳ ಉಪಯೋಗವೇ ಆಗಲಿ, ದಿಢೀರ್ ವೈದ್ಯಕೀಯ ಸೇವೆಗಳ ಸೌಲಭ್ಯವೇ ಆಗಲಿ ಜನ ಜೀವನದ ಗುಣಮಟ್ಟವನ್ನು ಎತ್ತರಿಸಿವೆ ಎಂದು ಹೇಳಲಾಗುವುದಿಲ್ಲ. ಪರಿಣಾಮ ತದ್ವಿರುದ್ಧವೇ ಆಗಿರುವುದು ದೀರ್ಘಕಾಲೀನ ಪರಿಶೀಲನೆಗಳಿಂದ ಕಂಡುಬಂದಿದೆ.

ಮೂರನೆಯದಾಗಿ, ಆಧುನಿಕ ತಂತ್ರವಿದ್ಯೆ ಒದಗಿಸಿರುವ ವ್ಯಾಪಕ ಸೌಲಭ್ಯಗಳ ಉಪ್ರೋತ್ಪನ್ನವಾಗಿ ಪೋಲುಮಾಡುವಿಕೆ (ಅಂದರೆ ಅಪವ್ಯಯ—consumerism ಅನುಭೋಗಾತಿರೇಕತ್ವ) ಜನಜೀವನದ ಅವಿಭಾಜ್ಯ ಅಂಗವೇ ಆಗಿಹೋಗಿದೆ. ಸಾವಿರ ಜನ ಮಾಡುವ ಕೆಲಸವನ್ನು ಒಂದು ಯಂತ್ರ ಕ್ಷಿಪ್ರವಾಗಿ ಮಾಡಿ ಮುಗಿಸಿ ಜನರ ಅಷ್ಟು ಶ್ರಮ ಕಾಲ ಮುಂತಾದವನ್ನು ಉಳಿತಾಯ ಮಾಡುತ್ತದೆ ನಿಜ. ಹೀಗೆ ಲಭಿಸುವ ವಿರಾಮ ಆ ಜನರಲ್ಲಿ ಸಮವಾಗಿ ಹಂಚಿಹೋಗಿ ಅವರ ಬದುಕು ಹಸನಾದರೆ ಯಂತ್ರದಿಂದ ಆ ಮಂದಿಗೆ ಉಪಕಾರವಾಯಿತೆನ್ನಬಹುದು. ಆದರೆ ವಾಸ್ತವ ಪರಿಸ್ಥಿತಿ ಹೀಗೆ ಕಾಣುವುದಿಲ್ಲ. ಇಂಥ ಲಾಭ ಏನಿದ್ದರೂ ಮಾಲಿಕರಿಗೆ ಲಭಿಸುತ್ತಿದೆಯೇ ಹೊರತು ಕಾರ್ಮಿಕರಿಗೆ ಅಲ್ಲ. ಪರಿಣಾಮವಾಗಿ ಎರಡುವರ್ಗ ತಲೆದೋರಿ ಒಟ್ಟಾರೆ ಅಶಾಂತಿಯ ವಾತಾವರಣ ಮೂಡಿದೆ. ಇದರಿಂದ ಮಾಲಿಕರಿಗೆ ಸುಖವಿಲ್ಲ, ಕಾರ್ಮಿಕರಿಗೂ ಇಲ್ಲ. ಮಾನವನ ಮೇಲೆ ಯಂತ್ರ ಸವಾರಿ ಮಾಡುವ ಈ ತಿರುಗಾಮುರುಗಾ ಸನ್ನಿವೇಶ ಆಡಳಿತಗಾರರ, ಅಂತೆಯೇ ಜನರ ಕೂಡ, ತಲೆತಿನ್ನುತ್ತಿದೆ. ತಂತ್ರವಿದ್ಯೆಯ ನೇಪಥ್ಯನಿರ್ದೇಶನದಕಹಿ ಫಲವಿದು.

ನಾಲ್ಕನೆಯದಾಗಿ, ನೈಸರ್ಗಿಕ ಸಂಪನ್ಮೂಲಗಳ ಅವ್ಯಾಹತ ದರೋಡೆ ಮತ್ತು ಪರಿಸರಮಾಲಿನ್ಯದ ನಿರಂತರ ಏರಿಕೆ. ಯಂತ್ರದ ತಾಮಸಿಕ ಹಸಿವೆ ನೀಗಲು ರಾಕ್ಷಸ ಗಾತ್ರದಲ್ಲಿ ಶಕ್ತಿ ಬೇಕು, ಕಚ್ಚಾ ಸಾಮಗ್ರಿಯೂ ಬೇಕು. ಇವುಗಳಿಗೋಸ್ಕರ ನಿಸರ್ಗವನ್ನು ನಿರ್ದಾಕ್ಷಿಣ್ಯವಾಗಿ ಹನನ (ಸೂರೆ) ಮಾಡಬೇಕು—ನಿಸರ್ಗದ ಮೇಲಿನ ಅತ್ಯಾಚಾರ. ಒಟ್ಟಿನಲ್ಲಿ ನಿಸರ್ಗಕ್ಕೆ ಮೂರು ಬಗೆಯ ನಷ್ಟಗಳು (ಯಾವ ಲಾಭವೂ ಇಲ್ಲದೇ) ಸಂಭವಿಸುತ್ತವೆ : ಸಂಪನ್ಮೂಲಗಳ ಸೋರಿಕೆ, ಸಿದ್ಧವಸ್ತುಗಳ ಪೇರಿಕೆ, ತ್ಯಾಜ್ಯ ವಸ್ತುಗಳ ಏರಿಕೆ.

ತಂತ್ರವಿದ್ಯೆಯ ಕಾರಣವಾಗಿ ಮಾನವನ ಬದುಕಿನಲ್ಲಿ ಪ್ರಗತಿ ಆಗಿದೆ, ನಿಜ. ಅಂತಿಮ ವಿಶ್ಲೇಷಣೆಯಲ್ಲಿ ಶಕ್ತಿವಿನಿಯೋಗದ ಮೊತ್ತವೇ ಪ್ರಗತಿಯ ಮಾನಕ. ೧೯೪೦ ರಲ್ಲಿ ಪ್ರತಿಯೊಬ್ಬ ಅಮೆರಿಕನ್ನನಿಗೂ ದಿನವಹಿ ೧೫೩ ಗುಲಾಮರು ಒದಗಿಸಬಹುದಾದ ಸ್ನಾಯು ಸೇವೆಗೆ ಸಮಾನವಾದ ಸೇವೆ ಬೇರೆ ಬೇರೆ ಹಂತಗಳಲ್ಲಿ ಶಕ್ತಿವಿನಿಯೋಗದಿಂದ ದೊರೆಯುತ್ತಿತ್ತೆಂದು ಅಂದಾಜು ಮಾಡಲಾಗಿದೆ. ೧೯೭೦ರ ವೇಳೆಗೆ ಈ ಸಂಖ್ಯೆ ೪೦೦ಕ್ಕೆ ನೆಗೆದಿತ್ತಂತೆ. ಪ್ರಪಂಚದ ಬಹುಸಂಖ್ಯಾತರು ಇಂಥ ಅದೃಷ್ಟವಂತರಲ್ಲ ನಿಜ. ಆದರೆ ಇವರ ಪೈಕಿ ಹೆಚ್ಚಿನವರ ಹಿರಿ ಆಸೆ ಇರುವುದು ಈ ತೆರನಾದ ಸುಖ ಗಿಟ್ಟಿಸುವುದರತ್ತ. ಮಾನವನ ಈ ಸುಪ್ತ ಹಾಗೂ ಆದಮ್ಯ ಪ್ರವೃತ್ತಿಯ ಪರಿಣಾಮವಾಗಿ ಪ್ರಪಂಚದಲ್ಲಿ ಶಕ್ತಿವಿನಿಯೋಗ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತ ಬಂದಿದೆ.

ನಿಸರ್ಗದಿಂದ ಕಚ್ಚಾ ಸಾಮಗ್ರಿ ಸಂಗ್ರಹಿಸಲು ಶಕ್ತಿ ಬೇಕು, ಇದನ್ನು ಕಾರ್ಖಾನೆಗೆ ಸಾಗಿಸಲು ಶಕ್ತಿ ಬೇಕು, ಕಾರ್ಖಾನೆ ಕಾರ್ಯೋದ್ಯುಕ್ತವಾಗಿ ಸಿದ್ಧವಸ್ತುಗಳನ್ನು ನಿರ್ಮಿಸಲು ಶಕ್ತಿ ಬೇಕು, ಜನರಾದರೂ ಈ ವಸ್ತುಗಳಿಂದ ಸೇವೆ ಅಥವಾ ಉಪಯೋಗ ಪಡೆಯಲು ಶಕ್ತಿ ಬೇಕು, ಕೊನೆಯದಾಗಿ ಉಪಯೋಗಾನಂತರ ಉಳಿಯುವ ಶೇಷವಸ್ತುವಿನ ವಿಲೇವಾರಿಗೆ ಕೂಡ ಶಕ್ತಿ ಬೇಕು. ಆದರೆ ಈ ತೆರನಾದ ನಿರಂತರ ಶಕ್ತಿವಿನಿಯೋಗ ವೈಜ್ಞಾನಿಕ, ರಾಜಕೀಯ, ಮತ್ತು ಇತರ ಕಾರಣಗಳಿಂದಾಗಿ ಕೈಗೂಡದೆ ಇಂದು ಬಾಳಬಂಡಿ ಗಡಬಡಾಯಿಸುವಂಥ ಪರಿಸ್ಥಿತಿ ಸರ್ವವ್ಯಾಪಿ ಆಗುತ್ತಿದೆ.

ಕಲ್ಲಿದ್ದಲಿನ ದಹನದಿಂದ ಉತ್ಪಾದನೆಯಾಗುವ ಶಕ್ತಿಯನ್ನು ಶಕ್ತಿವಿನಿಯೋಗದ ಮಾನಕವಾಗಿ ಬಳಸುವುದು ವಾಡಿಕೆ. ೧೯೦೦ರಿಂದ ೧೯೭೦ರ ತನಕ ಜನಸಂಖ್ಯೆ ಮತ್ತು ಶಕ್ತಿವಿನಿಯೋಗ ವೃದ್ಧಿಸುತ್ತ ಬಂದಿವೆ ಮತ್ತು ೧೯೭೦ರಿಂದ ೨೦೦೦ದ ತನಕದ ಪ್ರವೃತ್ತಿ ಹೀಗಿರಬಹುದು ಎಂಬ ಸಂಗತಿಗಳನ್ನು ಈ ಕೆಳಗಿನ ಯಾದಿ ಶ್ರುತಪಡಿಸುತ್ತದೆ:

ಇಸವಿ	ಜನಸಂಖ್ಯೆ (ಕೋಟಿಗಳಲ್ಲಿ)	ಶಕ್ತಿವಿನಿಯೋಗ (ದಶಲಕ್ಷ ಮೆಟ್ರಿಕ್ ಟನ್ ಕಲ್ಲಿದ್ದಲಿಗೆ ಸಮಾನ)	ತಲಾಶಕ್ತಿವಿನಿಯೋಗ (ಮೆಟ್ರಿಕ್ ಟನ್ ಕಲ್ಲಿದ್ದಲಿಗೆ ಸಮಾನ)
೧೯೦೦	೧೫೦	೬೨೫	೦.೩೬೭೬
೧೯೧೦	೧೭೫	೧೧೫೦	೦.೬೫೭೧
೧೯೨೦	೨೧೦	೧೨೫೦	೦.೫೯೫೨
೧೯೩೦	೨೨೦	೨೦೦೦	೦.೯೦೯೧
೧೯೪೦	೨೪೦	೨೨೫೦	೦.೯೩೭೫
೧೯೫೦	೨೫೦	೩೧೫೦	೧.೨೬
೧೯೬೦	೩೧೦	೪೩೫೦	೧.೪೫
೧೯೭೦	೩೭೫	೬೮೨೫	೧.೮೨
೧೯೮೦	೪೫೦	೧೦೦೦೦	೨.೨೨೨೨
೧೯೯೦	೫೬೦	೧೫೦೦೦	೨.೬೭೮೬
೨೦೦೦	೬೪೦	೨೨೫೦೦	೩.೧೫೬೩

ಮಾನವನ ಶಕ್ತಿದಾಹ ವರ್ಷದಿಂದ ವರ್ಷಕ್ಕೆ, ಅದೂ ಪ್ರಸಕ್ತ ಶತಮಾನದಲ್ಲಿ, ಹೇಗೆ ಉಲ್ಬಣ ಸ್ಥಿತಿಗೇರಿದೆ ಎಂಬುದನ್ನು ಈ ಯಾದಿಯ ಕೊನೆಯ ನೀಟಸಾಲಿನ ಸಂಖ್ಯೆಗಳು ಸ್ಪಷ್ಟಪಡಿಸುತ್ತವೆ. ಇಷ್ಟೊಂದು ಅಗಾಧ ಶಕ್ತಿಯ ಗಮನಾರ್ಹ ಭಾಗ ಒದಗುವುದು ಮುಖ್ಯವಾಗಿ ಫಾಸಿಲ್ ಇಂಧನಗಳಿಂದ. ಇವುಗಳ ಜೊತೆ ಹೆಸರಿಸಬಹುದಾದವು ಸ್ನಾಯು ಶಕ್ತಿ, ಜಲ ಶಕ್ತಿ, ಪರಮಾಣುಶಕ್ತಿ. ಮಾರುತಶಕ್ತಿ, ಭೂಶಾಖಶಕ್ತಿ, ಸೌರಶಕ್ತಿ ಮತ್ತು ಸಾಗರ ತರಂಗಶಕ್ತಿ ಗಣನೀಯ ಮೊತ್ತದಲ್ಲೇನೂ ಉತ್ಪಾದನೆ ಆಗುತ್ತಿಲ್ಲ. ಸ್ನಾಯು

ಶಕ್ತಿ (ಜನರ ಹಾಗೂ ಪ್ರಾಣಿಗಳ ನೇರ ಶ್ರಮ ಕಾರ್ಯದಿಂದ ಉತ್ಪನ್ನವಾಗುವ ಶಕ್ತಿ ; ಉದಾಹರಣೆಗೆ ಕೈಚರಕ, ಎತ್ತಿನಬಂಡಿ ಇತ್ಯಾದಿ) ಮತ್ತು ಜಲಶಕ್ತಿ (ಜಲವಿದ್ಯುದಾಗರಗಳು) ಪರಿಸರಮಾಲಿನ್ಯಕ್ಕೆ ಕಾರಣವಾಗುವುದಿಲ್ಲ. ಆದರೆ ಇವುಗಳಿಂದ ಪ್ರಪಂಚದ ಬೃಹದ್ಯಂತ್ರ ಸ್ಥಾವರಗಳಾಗಲೀ ಸಂಚಾರ ಸಾಧನಗಳಾಗಲೀ ಚಾಲೂ ಆಗಲಾರವು. ಇವುಗಳಿಗೆ ಫಾಸಿಲ್ ಇಂಧನ ಶಕ್ತಿ ಬೇಕೇಬೇಕು. ಪರಮಾಣುಶಕ್ತಿ ಇನ್ನೂ ವ್ಯಾಪಕೋಪಯೋಗಕ್ಕೆ ಬಂದಿಲ್ಲ. ದುರ್ದೈವವೆಂದರೆ ಇವು ಪರಿಸರ ಮಾಲಿನ್ಯಕ್ಕೆ ಕಾರಣವಾಗುತ್ತವೆ. ಅಲ್ಲದೇ ಇವನ್ನು ಒದಗಿಸುವ ಮೂಲಗಳು—ಕಲ್ಲಿದ್ದಲು ಹಾಗೂ ಎಣ್ಣೆಬಾವಿಗಳು, ಮತ್ತು ವಿಕಿರಣಪಟು ಧಾತುಗಳು—ಸಂತತವಾಗಿ ಒದಗುವ ಭರವಸೆ ಏನೂ ಇಲ್ಲ. ಹೀಗಾಗಿ ಶಕ್ತಿ ವಿನಿಯೋಗ ಗಗನಕ್ಕೆ ಏರುತ್ತಿದ್ದಂತೆ ಮಾನವನ ಭವಿಷ್ಯದ ಬಗ್ಗೆ ಕಳವಳ ಉಂಟಾಗುತ್ತಿದೆ. ಒಂದಿಗೇ ಹೊಸ ಮತ್ತು ಮಾಲಿನ್ಯರಹಿತ ಮೂಲಗಳ ಶೋಧನೆ ಜರೂರಾಗಿ ಆಗಬೇಕೆಂಬ ಅಂಶವೂ ವೇದ್ಯವಾಗುತ್ತಿದೆ.

ಮಾಲಿನ್ಯರಹಿತ ಶಕ್ತಿಯನ್ನು ಮಿತವ್ಯಯದಲ್ಲಿ ಸಮೃದ್ಧವಾಗಿ ಉತ್ಪಾದಿಸುವ ದಿಶೆಯಲ್ಲಿ ಈಗ ವಿವಿಧ ಪ್ರಯೋಗಗಳು ನಡೆಯುತ್ತಿವೆ. ಹಲವು ಮಂದಿ ಸ್ವತಂತ್ರ ಚಿಂತನಶೀಲ ವಿಜ್ಞಾನಿಗಳು ತಂತ್ರವಿದ್ಯೆ ಈ ತನಕ ಅಭಿವರ್ಧಿಸಿ ಬಂದಿರುವ ಜಾಡೇ ದೋಷಪೂರಿತವಾದದ್ದು, "ನಿಸರ್ಗವನ್ನು ಸೂರೆಗೈದು (exploit) ತಂತ್ರವಿದ್ಯೆಯನ್ನು ಬೆಳೆಸು" ಎಂಬ ಅನಾರೋಗ್ಯಕರ ತತ್ತ್ವಾಧಾರಿತವಾದದ್ದು, ತತ್ಪರಿಣಾಮವಾಗಿ ಮನುಕುಲ ಇಂದಿನ ತೊಂದರೆಗಳನ್ನು ಎದುರಿಸಿ ಬಾಳಬೇಕಾಗಿದೆ. ಪರಿಸ್ಥಿತಿ ಹೀಗೆಯೇ ಮುಂದುವರಿದದ್ದಾದರೆ ಈ ಪರಿಸ್ಥಿತಿ ಖುದ್ದು ಮಾನವನನ್ನೇ ದಹಿಸಿಬಿಡಬಲ್ಲ ಭಸ್ಮಾಸುರಕರವಾಗದಿರದು, ಆದ್ದರಿಂದ ಈಗಿಂದೀಗಲೇ ತಂತ್ರವಿದ್ಯೆಯ ಆಧಾರ ತತ್ತ್ವವನ್ನೇ ಪುನರ್ವ್ಯಾಖ್ಯಿಸಿ ಆ ವ್ಯಾಖ್ಯಾನಾನುಸಾರ ನವ ತಂತ್ರವಿದ್ಯೆಯನ್ನು ರೂಪಿಸಿ ಅಭಿವರ್ಧಿಸಬೇಕು, ಇದೊಂದೇ ಶಾಶ್ವತ ಮಾನವ ಕಲ್ಯಾಣ ಸಾಧಿಸಬಲ್ಲದು ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ನಿಸರ್ಗದಿಂದ ಬೇರ್ಪಟ್ಟ ಪ್ರಾಣಿ ಮಾನವ ಅಲ್ಲ, ನಿಸರ್ಗದ ಒಡೆಯ ಮಾನವ ಅಲ್ಲ, ನಿಸರ್ಗದ ಶತ್ರುವೂ ಮಾನವ ಅಲ್ಲ. ಆತ ನಿಸರ್ಗದ ಶಿಶು. ನಿಸರ್ಗದ ಅಖಂಡತೆಯ ಅವಿಭಾಜ್ಯ ಆದರೆ ಅನಂತಸೂಕ್ಷ್ಮ ಅಂಶ. ಆದ್ದರಿಂದ ಮಾನವ ನಿಸರ್ಗವನ್ನು ಸೂರೆಮಾಡಿ ಅಥವಾ ಕಬಳಿಸಿ ಬದುಕಲಾರ. ಬದಲು, ನಿಸರ್ಗದೊಡನೆ ಹೊಂದಿಕೊಂಡು ಬದುಕಲು ಕಲಿಯಬೇಕು. ಆಗ ಮಾತ್ರ ಆತನ ಬಾಳು ಹಸನಾದೀತು, ಸಾರ್ಥಕವಾದೀತು ಎಂಬುದಾಗಿ ಇವರು ಹೇಳುತ್ತಾರೆ. ಇಂಥ ರಚನಾತ್ಮಕ (ವಿನಾಶಾತ್ಮಕ ಅಲ್ಲ) ತಂತ್ರವಿದ್ಯೆಗೆ ಸದ್ಯದಲ್ಲಿ ಬೇರೆ ಬೇರೆ ಹೆಸರುಗಳುಂಟು : ಪರ್ಯಾಯ (alternative) ನಿಮ್ನ ವೆಚ್ಚ ((low cost), ಮಧ್ಯವರ್ತಿ (intermediate), ಸ್ವಸಹಾಯ (self–help), ಪ್ರಗತಿಪರ (progressive), ಸಮುಚಿತ (appropriate) ಸರಿಯಾದ (correct) ತಂತ್ರವಿದ್ಯೆ.

ಭಾರತದಂಥ ಅಭಿವೃದ್ಧಿಶೀಲ ದೇಶಕ್ಕೆ ಪರ್ಯಾಯ ತಂತ್ರವಿದ್ಯೆಯೇ ಯೋಗ್ಯವಾದದ್ದು ಎಂಬ ವಾದವಿದೆ. ಪಾಶ್ಚಾತ್ಯ ತಂತ್ರವಿದ್ಯೆ ಅಧಿಕ ಬಂಡವಾಳ, ಮಿತ ಕಾರ್ಮಿಕರು, ಫಾಸಿಲ್ ಇಂಧನ ಮತ್ತು ವ್ಯಾಪಕ ಸಂಪರ್ಕಜಾಲ ಇವನ್ನು ಆಧರಿಸಿ

ಅಭಿವರ್ಧಿಸಿದೆ ಎಂದು ಹಿಂದೆ ವಿವರಿಸಿರುವುದು ಸರಿಯಷ್ಟೆ. ಭಾರತ ಕುರಿತಂತೆ ಈ ನಾಲ್ಕು ಕೂಡ ಋಣಾತ್ಮಕ ಗುಣಗಳಾಗುತ್ತವೆ: ಇದು ಆರ್ಥಿಕವಾಗಿ ಬಡದೇಶ; ಅಮಿತ ಜನರಿಗೆ ಯೋಗ್ಯ ಸೇವಾವಕಾಶ ಒದಗಿಸುವುದು ಇಲ್ಲಿಯ ಸಮಸ್ಯೆ; ಫಾಸಿಲ್ ಇಂಧನಕ್ಕಾಗಿ ಇದು ಅನ್ಯ ರಾಷ್ಟ್ರಗಳನ್ನು ಅವಲಂಬಿಸಬೇಕಾಗಿದೆ; ಸಾರಿಗೆ ಸಂಪರ್ಕ ಜಾಲ ಇಲ್ಲಿ ವ್ಯಾಪಕವಾಗಿ ಹಬ್ಬಿಲ್ಲ. ಆದ್ದರಿಂದ ಸ್ನಾಯು ಶಕ್ತಿಯನ್ನೂ ಜಲಶಕ್ತಿ, ಜೈವಿಕಶಕ್ತಿ, ಸೌರಶಕ್ತಿ, ಮಾರುತಶಕ್ತಿ ಮೊದಲಾದ ಫಾಸಿಲ್ ಇಂಧನಾವಲಂಬಿಯಲ್ಲದ ಶಕ್ತಿಮೂಲಗಳನ್ನೂ ಆಧರಿಸಿದ ಚಿಕ್ಕಪುಟ್ಟ ಯಂತ್ರ ಸ್ಥಾವರಗಳನ್ನು ದೇಶಾದ್ಯಂತ ಸ್ಥಾಪಿಸುವುದರ ಮೂಲಕ ಭಾರತ ಹೊಸ ಜಾಡು ಹಿಡಿಯಬಹುದೆಂದು ಸೂಚಿಸಲಾಗಿದೆ.

ಸಮಾರೋಪವಾಗಿ ಇಷ್ಟು ಹೇಳಬಹುದು :

* ನಿಸರ್ಗದ ಶಿಶುವಾದ ಮಾನವ ಅದಕ್ಕೆ ಅನುವರ್ತಿಯಾಗಿ ಬಾಳಿದರೆ ಮಾತ್ರ ಅವನಿಗೆ ಸುಖ ಸಂತೃಪ್ತಿ ಸಮೃದ್ಧಿ ಲಭಿಸುತ್ತವೆ. ನಿಸರ್ಗಹನನ ಅವನ ನೀತಿಯಾದರೆ ಪ್ರತಿಹನನ ಕಟ್ಟಿಟ್ಟ ಬುತ್ತಿ—ವರ್ತಮಾನ ಪರಿಸ್ಥಿತಿ ಇದಕ್ಕೆ ಸ್ಪಷ್ಟ ನಿದರ್ಶನ.

* ಭಾರತದಲ್ಲಿರುವ ನಾವು ಎಂದಿಗಿಂತ ಹೆಚ್ಚಾಗಿ ಇಂದು ಈ ಮೇಲಿನ ತತ್ತ್ವವನ್ನು ಅನುಷ್ಠಾನಕ್ಕೆ ತರಬೇಕು. ತಂತ್ರವಿದ್ಯೆಯ ಉತ್ಪನ್ನಗಳನ್ನು ಅತಿಯಾಗಿ ಅವಲಂಬಿಸಿ ಅನುಭೋಗಾತಿರೇಕತ್ವದ ದಾಸರಾಗಿ ಮುಂದುವರಿದದ್ದಾದರೆ ನಾವು ಸೃಷ್ಟಿಸುತ್ತಿರುವ ಪರಿಸರಮಾಲಿನ್ಯಕ್ಕೆ ನಾವೇ ಬಲಿಯಾಗುವುದು ಶತಸ್ಸಿದ್ಧ.

* ಹಾಸಿಗೆಗಿಂತ ಉದ್ದಕ್ಕೆ ಕಾಲು ಚಾಚುವುದು ಖಂಡಿತ ಪ್ರಗತಿ ಅಲ್ಲ, ಅವಿವೇಕ; ಆತ್ಮಹತ್ಯೆಯ ಯತ್ನ.

ಮುಗಿದುದು

ದೇವರಿಗೆ ಭಯಪಡಬೇಕು; ಮನುಷ್ಯರಿಗೆ ಭಯಪಡಬಾರದು.

ಗಾಂಧೀಜಿ

ಶ್ರೀಸಾಮಾನ್ಯ ಉವಾಚ—ಸಂಜೆಗಣ್ಣಿನ ಹಿನ್ನೋಟ

ಪ್ರೊ|| ಎ. ಎನ್. ಮೂರ್ತಿರಾವ್

ಮುಂದುವರಿದುದು

ಅಂಥ ಉದ್ದೇಶವೇನೂ ಇಲ್ಲದೆ ತಮ್ಮ ಸ್ವಂತ ಹಿತಕ್ಕಾಗಿಯೇ ಕೈಕೊಂಡ ಕಾರ್ಯಕ್ರಮಗಳಿಂದಲೂ ನಮಗೆ ಪ್ರಯೋಜನ ವಾಯಿತು. ಅವರು ರೈಲುಮಾರ್ಗಗಳನ್ನು ಹಾಕಿಸಿದ್ದು ತಮ್ಮ ಸೈನ್ಯವನ್ನು ಎಲ್ಲಿಗೆಂದರೆ ಅಲ್ಲಿಗೆ ಬೇಗ ಸಾಗಿಸುವುದಕ್ಕಾಗಿ; ಇರಬಹುದು. ಆದರೆ ಅದರಿಂದ ನಮಗೂ ಪ್ರಯೋಜನವಾಯಿತು. "ಅವರಿಗೆ ಕಾರಕೂನರ ಅವಶ್ಯಕತೆಯಿತ್ತು. ಅದಕ್ಕೋಸ್ಕರ ನಮಗೆ ಇಂಗ್ಲಿಷ್ ವಿದ್ಯೆಯನ್ನು ಕಲಿಸಿದರು" ಎಂದು ನಾವು ಹೇಳುವುದುಂಟು. ಈ ಮಾತಿನಲ್ಲಿ ಉತ್ಪ್ರೇಕ್ಷೆಯಿದೆ. ಅದು ಸಂಪೂರ್ಣವಾಗಿ ಸತ್ಯ ಎಂದುಕೊಂಡರೂ ಆದರಿಂದ ಭಾರತೀಯರ ಮೇಲೆ ಅದ್ಭುತ ವಾದ ಸತ್ಪರಿಣಾಮವಾಯಿತೆಂಬುದನ್ನು ಒಪ್ಪಲೇಬೇಕು. ಕಾರಕೂನರನ್ನು ತಯಾರುಮಾಡುವ ಪ್ರಯತ್ನವೇ ಅವರ ಚಕ್ರಾಧಿಪತ್ಯದ ಬುಡಕ್ಕೆ ಕೊಡಲಿಪೆಟ್ಟೂ ಆಯಿತು. ಅವರಲ್ಲಿ ಆಲೋಚನಾಪರರಾದ ಕೆಲವರಿಗೆ ಅದು ಹಾಗಾಗುತ್ತದೆ ಎಂಬುದರ ಅರಿವೂ ಇತ್ತು. ಭಾರತದಲ್ಲಿದ್ದ ೫೦೦–೬೦೦ ಸಣ್ಣ ದೊಡ್ಡ ರಾಜರಿಗೆ ಬೆಳಗೆದ್ದರೆ ನೆರೆಯ ರಾಜ್ಯದ ಮೇಲೆ ಯುದ್ಧ ಹೂಡಿ ಸುಲಿಗೆ ಮಾಡುವುದೇ ಕೆಲಸ. ಬ್ರಿಟಿಷರು ಅವರನ್ನೆಲ್ಲ ಹದಕ್ಕೆ ತಂದು 'ಮುದುಗಿದ ಹಾಗಿರು' ಎಂದದ್ದು ತಾವು ಚಕ್ರೇಶ್ವರರಾಗಿ ಮೆರೆಯುವುದಕ್ಕೋಸ್ಕರ. ಆದರೆ ಅದರಿಂದ ಭಾರತೀಯರಿಗೆ 'ನಾವೆಲ್ಲ ಸಂಸ್ಕೃತಿಯ ದೃಷ್ಟಿಯಿಂದ ಮಾತ್ರವಲ್ಲ, ರಾಜಕೀಯ ದೃಷ್ಟಿಯಿಂದಲೂ ಒಂದು ಎಂಬ ಭಾವನೆ ಬಂತು. ಅಲ್ಲದೆ, ಶತ್ರು ಸೈನ್ಯದ, ಪಿಂಡಾರಿಯವರ, ಠಕ್ಕರ ಭಯವಿಲ್ಲದೆ ಜೀವನ ನಡೆಸುವುದು ಸಾಧ್ಯವಾಯಿತು. ದೇಶಾದ್ಯಂತ ದಿನನಿತ್ಯದ ಆಡಳಿತವನ್ನು ನಡೆಸಿಕೊಂಡು ಹೋಗುವುದಕ್ಕೆ ಪ್ರಪಂಚದಲ್ಲೇ ಅತ್ಯಂತ ದಕ್ಷವಾದದ್ದು ಎಂದು ಹೆಸರುಗೊಂಡ 'ಇಂಡಿಯನ್ ಸಿವಿಲ್

ಸರ್ವಿಸ್' ಅನ್ನು ಅವರು ಸ್ಥಾಪಿಸಿದರು. ನಮಗೆ ಸ್ವಾತಂತ್ರ್ಯ ಬಂದಮೇಲೆ ಆಡಳಿತ ಯಂತ್ರ ಎಂದಿನಂತೆ ತನ್ನ ಪಾಡಿಗೆ ತಾನು ನಡೆಯುವಂತಾದದ್ದು ಈ ಸಿವಿಲ್ ಸರ್ವಿಸ್‌ನಿಂದ. ಅದರಿಂದಾದ ಉಪಕಾರ ಅಷ್ಟಿಷ್ಟಲ್ಲ. ಅದನ್ನು 'ಬ್ಯುರಾಕ್ರಸಿ' ಎಂದು ಬಯ್ಯುವವರು ಕೂಡ ಅದನ್ನು ಮೆಚ್ಚುತ್ತಾರೆ.

ಆಗಿನ ಶಾಂತಿಯನ್ನು ಶ್ಮಶಾನ ಶಾಂತಿ ಎಂದು ಕರೆಯುವುದುಂಟು. ಆ ಮಾತಿನಲ್ಲಿ ಸತ್ಯಾಂಶವಿಲ್ಲದಿಲ್ಲ. ಆದರೂ ಜನ ಬಹುಕಾಲ ಕಾಣದಿದ್ದ ನೆಮ್ಮದಿ ಬ್ರಿಟಿಷರ ಆಳ್ವಿಕೆಯಿಂದಾಗಿ ಲಭಿಸಿತೆಂಬುದನ್ನು ಒಪ್ಪಬೇಕು. ಇಂಥ ಪ್ರಯೋಜನಗಳ ಅರಿವ ನಮಗೆಲ್ಲ ಚಿಕ್ಕವಯಸ್ಸಿನಲ್ಲೇ ಮುಂದಟ್ಟಾಗುವಂತೆ ಬ್ರಿಟಿಷರು ಎಚ್ಚರಿಕೆ ವಹಿಸಿದರು. 'ಬ್ರಿಟಿಷರ ಆಳ್ವಿಕೆಯಿಂದಾದ ಪ್ರಯೋಜನಗಳು' ಎಂಬ ಶೀರ್ಷಿಕೆಯುಳ್ಳ ಅಧ್ಯಾಯವೊಂದು ಆಗಿನ ಪಠ್ಯಪುಸ್ತಕಗಳಲ್ಲಿ ಇರುತ್ತಿತ್ತು ಎಂದು ಹಿಂದೆಯೇ ಹೇಳಿದ್ದೇನೆ. ಆ ಪ್ರಯೋಜನಗಳನ್ನು ಉತ್ಪ್ರೇಕ್ಷಿಸುವುದು ಸುಲಭ; ದೇಶಾಭಿಮಾನದ ಉರುಬಿನಲ್ಲಿ ಅವನ್ನು ಮರೆಯುವುದೂ ಸುಲಭ. ನ್ಯಾಯದ ದೃಷ್ಟಿಯಿಂದ ನಾವು ಇವೆರಡರ ನಡುವಣ ದಾರಿಯನ್ನು ಹಿಡಿಯಬೇಕಾಗುತ್ತದೆ.

ಮಿಷನರಿಗಳ ಪ್ರಚಾರಕ್ಕೆ ನಾವು ಕೊಟ್ಟ ನೆರವು

ಬ್ರಿಟಿಷ್ ಸರಕಾರ ತಾನಾಗಿ ಕ್ರೈಸ್ತಮತ ಪ್ರಚಾರಕ್ಕೆ ಕೈಹಾಕಲಿಲ್ಲ; ಆದ ಪ್ರಚಾರಕ್ಕೆ ಅವಕಾಶ ಕೊಟ್ಟಿತು. ಅದರ ಇಜ್ಜತ್ (prestige) ಮಿಷನರಿಗಳಿ ಸಹಾಯಕವಾಯಿತು. ಈ ಸಂದರ್ಭದಲ್ಲಿ ನಾವು—ಹಿಂದುಗಳು—ಸ್ವಲ್ಪ ಆತ್ಮವಿಶ್ಲೇಷಣ ಮಾಡಿಕೊಂಡರೆ, ಅವರ ಮತಾಂತರ ಪ್ರಯತ್ನಕ್ಕೆ ನಾವೂ ಅರಿವಿಲ್ಲದೆ, ಉದ್ದೇಶವಿಲ್ಲದೆ ನೆರವಾದೆವು ಎಂಬ ವಿಚಿತ್ರ ಸತ್ಯ ಗೋಚರವಾದೀತು. ಬಹುಶಃ ನಾನು ಆರನೆ ಫಾರಮ್ಮಿನಲ್ಲಿದ್ದಾಗ ನಡೆದ ಒಂದು ಪ್ರಸಂಗದಿಂದಾಗಿ ಇದು ನನ್ನ ಮತ್ತು ಕೆಲವರ ಸ್ನೇಹಿತರ ಗಮನಕ್ಕೆ ಬರುವಂತಾಯಿತು. ಮೈಸೂರು ಮಾರ್ಕೆಟಿನಿಂದ ಇಂದಿನ ಗಾಂ ಚೌಕದ ಕಡೆಗೆ ಹೋಗುವಾಗ (ನಮ್ಮ ಸ್ಕೂಲು ಇದ್ದದ್ದು ಆ ರಸ್ತೆಯ ಎಡಗಡೆಯಲ್ಲಿ ಬಲಗಡೆಯಲ್ಲಿರುವ ಅಂಗಡಿ ಸಾಲು ಮುಗಿದ ಮೇಲೆ ಒಂದು ಗಲ್ಲಿ ಇಂದಿನ ಸಿಟಿ ಬಸ್ ಸ್ಟ್ಯಾಂಡ್ ಕಡೆಗೆ ಹೋಗುತ್ತದೆ. ಅದರ ಆರಂಭದಲ್ಲೇ ಭಕ್ಷಿ ನರಸಪ್ಪನ ದೇವಸ್ಥಾ ಎಂಬುದೊಂದು ಈಗಲೂ ಇದೆ. ಆ ಗುಡಿಯ ಹೆಬ್ಬಾಗಿಲಿಗೆ ಹೊಂದಿಕೊಂಡಂತೆ ಕೆಲ ರೂಮುಗಳಿದ್ದವು. ನನ್ನ ಸಹಪಾಠಿ ಡಿ. ವಿ. ರಾಮಸ್ವಾಮಿ ಎಂಬವನು ಅಲ್ಲಿ ಒಂದ ರೂಮನ್ನು ಬಾಡಿಗೆಗೆ ತೆಗೆದುಕೊಂಡು ಅಲ್ಲಿ ವಾಸಿಸುತ್ತಿದ್ದ. ನಾವು ಆಗಾಗ ಸಂಜೆಯ ಹೊತ್ತು—ರಜದ ದಿನಗಳಲ್ಲಿ ಬೆಳಗಿನ ಹೊತ್ತು ಕೂಡ—ಅಲ್ಲಿ ಹರಟೆಗೆ ಸೇರುತ್ತಿದ್ದೆವು ಕೆಲವು ವೇಳೆ ಇಸ್ಪೀಟು ಕಚೇರಿ ನಡೆಯುತ್ತಿದ್ದದ್ದೂ ಉಂಟು. ನನ್ನ ಇಸ್ಪೀಟಾ ಆರಂಭವಾದದ್ದು ಕೊನೆಗೊಂಡದ್ದು, ಎರಡೂ ಅಲ್ಲೇ. ನಮ್ಮ ಸ್ಕೂಲಿನಲ್ಲಿ ಜವಾನನಾ ದ್ದವನೊಬ್ಬ—ಅವನ ಹೆಸರು ನೆನಪಿದೆ; ಡ್ಯಾನಿಯಲ್—ರಾಮಸ್ವಾಮಿಗೆ ಹೋಟ ನಿಂದ ಊಟ ತಂದುಕೊಡುತ್ತಿದ್ದ; ನಾವೆಲ್ಲ ಹೋದಾಗ ತಿಂಡಿ ಕಾಫಿಗಳನ್ನು ತರುತ್ತಿದ ಈ ನೆರವಿಗಾಗಿ ರಾಮಸ್ವಾಮಿ ತಿಂಗಳಿಗೆ ಎರಡು ರೂಪಾಯಿ ಕೊಡುತ್ತಿದ್ದ.

ಒಂದುದಿನ ನಾವು ಡಾನಿಯೆಲ್‌ನನ್ನು ಮಾತಿಗೆಳೆದು ಅವನ ಚರಿತ್ರೆಯನ್ನು ತಿಳಿದುಕೊಂಡೆವು. ಅವನ ತಂದೆ ಜಾತಿಯಲ್ಲಿ ಪಂಚಮ. ಪಾದ್ರಿಗಳು ಅವನಿಗೆ ಹೇಳಿದ ಂತೆ: "ನಿಮ್ಮ ಹಿಂದೂಗಳು ನಿನ್ನನ್ನು ನಾಲ್ಕು ಮಾರು ಹತ್ತಿರಕ್ಕೂ ಬರಗೊಡಿಸುವು ದಿಲ್ಲ. ನಮ್ಮ ಮತದಲ್ಲಿ 'ದೇವರೆದುರಿಗೆ ಎಲ್ಲರೂ ಸಮಾನರು ಎಂಬ ನಂಬಿಕೆಯಿದೆ. ನೀನೇಕೆ ಕ್ರೈಸ್ತನಾಗಬಾರದು?"

ವಯಸ್ಸಾಗಿದ್ದ ತಂದೆ ಒಪ್ಪಲಿಲ್ಲ. ಅವನು ಸತ್ತಮೇಲೆ ಮಗ ಒಪ್ಪಿದ. ಪಾದ್ರಿಗಳು ಅವನಿಗೆ ಮದುವೆ ಮಾಡಿಸಿದರು, ಕೆಲಸ ಕೊಡಿಸಿದರು, ಒಟ್ಟಿನಲ್ಲಿ ಅವನ ಬದುಕಿನ ಮಟ್ಟವನ್ನು ಏರಿಸಿದರು. ಎಲ್ಲ ವಿಷಯಗಳಲ್ಲೂ ತಮ್ಮ ಸಮಾನ ಎಂಬಂತೆ ನಡಸಿಕೊಳ್ಳ ದಿಲ್ಲವಾದರೂ ಅವನಿಗೆ "ನಾನು ಹುಟ್ಟಿನಿಂದಲೇ ಕೀಳು, ನಾನು ಹತ್ತಿರ ಬಂದರೆ ಮೈಲಿಗೆ" ಎಂಬ ಭಾವನೆ ಬರದಂತೆ ನಡಸಿಕೊಂಡರು. (ಎಲ್ಲರೂ ಸಮಾನ ಎಂಬ ಘನವಾದ ತತ್ವವನ್ನು ನಂಬುವ ಜನರಲ್ಲೂ ನಿರಪೇಕ್ಷವಾದ ಸಮಾನತೆ ಇರುವುದು ಥಿಯರಿಯಲ್ಲಿ. ಅದು ಆಚರಣೆಗೆ ಬರುವುದು ಭಾಗಶಃ ಮಾತ್ರ.) ಅವನಿಗೆ ಆತ್ಮಗೌರವ ಬಂದಂತಾಯಿತು. ನಾವು ಅವನಿಗೆ ಆ ಗೌರವವನ್ನು ಕೊಡಲಿಲ್ಲ. ಅಂದಮೇಲೆ ಮಿಷನರಿಗಳ ಪ್ರಚಾರಕ್ಕೆ ನಮ್ಮ ಮೂಢ ನಂಬಿಕೆಗಳು ನೆರವು ಕೊಟ್ಟವು! ಇದು ಈಗ ಎಲ್ಲರಿಗೂ ತಿಳಿದ ವಿಷಯ. ಆಗ ನಮಗೆ ಹೊಸದು.

ನಾನು ಅವನನ್ನು ಕೇಳಿದೆ: "ನೀನು ಮುಂಚೆ ಪೂಜೆ ಮಾಡುತ್ತಿದ್ದ ರಾಮ ದೇವರು ಕೃಷ್ಣದೇವರು ಎಲ್ಲರನ್ನೂ ದೂರಮಾಡಿಕೊಂಡೆ. ಅದರಿಂದ ನಿನ್ನ ಮನಸ್ಸಿನಲ್ಲಿ ಆತಂಕ ತಳಮಳ ಏನೂ ಆಗಲಿಲ್ಲವೆ?"

"ದೂರ ಯಾಕೆ ಮಾಡಿಕೋಬೇಕು ಬುದ್ಧಿ? ಹಿರೇರ ಕಾಲದಿಂದ ಬಂದ ದ್ಯಾವರನ್ನು ಬಿಡೋಕಾಯ್ತದ? ಈ ದ್ಯಾವರಿಗೆ ಶರಣು ಅಂದ್ಹಂಗೆ ಆ ದ್ಯಾವರಿಗೂ ಅಂತೀವಿ."

"ಕಿರಿಸ್ತಾನನಾದ ಮೇಲೆ ನಮ್ಮ ದೇವರ ಹತ್ತಿರಕ್ಕೆ ಯಾರು ಸೇರಿಸ್ತಾರೊ ನಿನ್ನ?"—ಮುಂಚೆಯೂ ನಾವು ಸೇರಿಸುತ್ತಿರಲಿಲ್ಲವೆಂಬುದನ್ನು ನಾನು ಮರೆತೆ!

"ಗುಡೀಗೆ ಹಿಂದೂ ಸೇರಿಸ್ತಿರನಿಲ್ಲ, ಈಗಲೂ ಸೇರಿಸಾಕಿಲ್ಲ. ಸೇರಿಸಿದ್ರೂ ನಾವು ಹೋಗಾಕಾಯ್ತದ? ಪಾದ್ರಿಗಳು ಒಪ್ಯಾರ? ಮನೇ ವಳಗ ದ್ಯಾವರ ಪಟ ಇಟ್ಕತೀವಿ. ನಮ್ಮನ್ನ ಚರ್ಚಿಗೆ ಸೇರಿಸ್ತಾರಲ್ಲ, ಅಲ್ಲಿಗೂ ಹೋಯ್ತೀವಿ. ಸ್ತೋತರ ಹೇಳಿಕೊಟ್ಟವ್ರೆ, ಹೇಳ್ತೀವಿ."

ಡಾನಿಯಲ್ ಪ್ರಸಂಗವನ್ನು ಈಗ ನೆನಪಿಗೆ ತಂದುಕೊಂಡರೆ ಎರಡು ಅಂಶಗಳು ಎದ್ದು ಕಾಣುತ್ತವೆ. ೧. ನಾವು, ಅಂದರೆ ಹಿಂದೂಮತದವರು, ಅವನನ್ನು ಅಷ್ಟೊಂದು ಕಡೆಗೆ ತಿರಸ್ಕಾರಗಳಿಂದ ಕಂಡಿದ್ದರೂ ಸಂಪ್ರದಾಯ ಅದನ್ನೆಲ್ಲ ಸಹ್ಯವಾಗಿಸಿತ್ತು; ಮನಸ್ಸಿನಲ್ಲಿ ರಾಮ, ಕೃಷ್ಣ, ಇತ್ಯಾದಿ ದೇವರುಗಳ ವ್ಯಾಮೋಹ ಉಳಿದೇ ಇತ್ತು. ಸಂಪ್ರದಾಯದ ಹಿಡಿತ ಎಷ್ಟಿದೆ ಎಂಬುದು ನಾವು ಗಮನಿಸಬೇಕಾದದ್ದು. ೨. ಇತ್ತ ರಾಮ ಕೃಷ್ಣರನ್ನೂ ಅತ್ತ ಕ್ರೈಸ್ತರ ದೇವರನ್ನೂ ಏಕಕಾಲದಲ್ಲಿ ಭಜಿಸುವುದು ಡಾನಿಯಲ್‌ಗೆ ತಪ್ಪು ಎನ್ನಿಸಲಿಲ್ಲ.

ಮೇಲಿನ ಸಂಭಾಷಣೆ ನಡೆದು ಸುಮಾರು ೫೦ ವರ್ಷಗಳು ಕಳೆದಮೇಲಿನದು ನಾನು ಈಗ ಹೇಳಲಿರುವ ಅನುಭವ. ೧೯೬೮ರಲ್ಲೋ ೬೯ರಲ್ಲೋ ನಾನು ಪ್ರಸಿ ವೈದ್ಯರೊಬ್ಬರ ಸಲಹೆ ಪಡೆಯಲು ವೆಲ್ಲೂರಿನ ಕ್ರೈಸ್ತ ಆಸ್ಪತ್ರೆಗೆ ಹೋಗಬೇಕಾಯಿತು ಆಸ್ಪತ್ರೆಗೆ ಸೇರಿದ ಅತಿಥಿಗೃಹದ ಮೂರನೆ ಮಹಡಿಯ ಮೇಲೆ, ನನ್ನ ರೂಮು. ಅ ಅತಿಥಿಗಳ ಸಹಾಯಕ್ಕಾಗಿ ನೇಮಿಸಿದ್ದ ಸುಮಾರು ೨೦-೨೫ ವಯಸ್ಸಿನ ಯುವ ನೊಡನೆ ನಾನೂ ನನ್ನ ಮಗ ರಾಜುವೂ ಮಾತಿಗೆ ತೊಡಗಿದೆವು. ತಾನು ಕ್ರೈಸ್ತನಾ ಸಂದರ್ಭವನ್ನು ವಿವರಿಸುತ್ತ ಅವನು ಹೇಳಿದ ಒಂದು ಮಾತು ನೆನಪಿನಲ್ಲಿ ನಿಂತಿದೆ "ನನಗೆ ಶುಭ್ರತೆ ಕಲಿಸಿದವರು ಪಾದ್ರಿಗಳು; ನನಗೆ ಸ್ತೋತ್ರಗಳನ್ನು ಹೇಳಿಕೊಟ್ಟವರು ಅವರೇ; ಒಳ್ಳೆಯದು ಕೆಟ್ಟದ್ದು ಎಂಬುದರ ತಿಳಿವಳಿಕೆ ಕೊಟ್ಟವರೂ ಅವರೇ."

ನನಗೂ ರಾಜುವಿಗೂ ಈ ಯೋಚನೆ ಬಂತು: ಪಾದ್ರಿಗಳು ಅವನಿಗೆ ಕಲಿಸಿ ಶುಭ್ರತೆಯನ್ನು ನಾವು (ಹಿಂದೂಗಳು) ಕಲಿಸಬಾರದಿತ್ತೆ? ನಾವು ಹೇಳುವ ಸ್ತೋತ್ರ ಗಳನ್ನು ಅವನಿಗೂ ಕಲಿಸಬಾರದಿತ್ತೆ? ಆ ಕೆಲಸವನ್ನು ಪಾದ್ರಿಗಳಿಗೇಕೆ ಬಿಟ್ಟುಕೊಟ್ಟೆವು ಅವರು ಕೊಟ್ಟ ತಿಳಿವಳಿಕೆಯನ್ನು ನಾವೇ ಕೊಡಬಹುದಾಗಿತ್ತಲ್ಲ! ಈ ಪ್ರಶ್ನೆಗಳ ಉತ್ತರವಾಗಿ ನಾವು ಪುರಂದರದಾಸರಂತೆ "ಅಪರಾಧಿ ನಾನಲ್ಲ, ಅಪರಾಧವೆನಗಿಲ್ಲ ಎಂದು ಹಾಡಬಹುದು. ನಿಜವಾದ ಅಪರಾಧಿ ಸಂಪ್ರದಾಯ. ಆ ಸಂಪ್ರದಾಯ ಯಾವನೊಬ್ಬ ವ್ಯಕ್ತಿಯ, ಯಾವುದೊಂದು ಜಾತಿಯ, ಯಾವುದೊಂದು ತಲೆಮಾರಿನ ನಿರ್ಮಿತಿಯಿಲ್ಲ. ಎಷ್ಟೋ ಕಾಲದಲ್ಲಿ ಯಾವುದೋ ಕಾರಣಗಳಿಂದ ಎಷ್ಟೋ ಎಳೆಗಳ ಹೆಣೆದುಕೊಂಡು ಅಸ್ತಿತ್ವಕ್ಕೆ ಬಂದದ್ದು. ಅದು ನಮ್ಮೆಲ್ಲರನ್ನೂ—ಯಾವುದೊಂದ ಜಾತಿಯವರನ್ನು ಮಾತ್ರವಲ್ಲ, ನಾಲ್ಕು 'ವರ್ಣ'ದವರನ್ನೂ 'ಅಸ್ಪೃಶ್ಯ'ರನ್ನೂ ಕೂಡ ತನ್ನ ಪುಂಗಿಯ ಲಯಕ್ಕೆ ಕುಣಿಸುತ್ತಿತ್ತು. ಅದರ ಪರಿಣಾಮ ಇಬ್ಬಗೆಯದು: ಅದ ಅತ್ತ ಡಾನಿಯಲ್‌ನಲ್ಲಿ ನಮ್ಮ ಮತದವರ ತಿರಸ್ಕಾರವನ್ನು ಮರೆಸಿ ನಮ್ಮ ದೇವರ ಗಳನ್ನು ಕುರಿತ ನಂಬಿಕೆಯನ್ನೂ ಮುಂದುವರಿಸಿತು. ಇತ್ತ ನಮ್ಮಲ್ಲಿ "ನಮ್ಮ ಮೂ ನಂಬಿಕೆಗಳಿಂದಾಗಿ ಜನ ನಮ್ಮ ಮತವನ್ನು ಬಿಟ್ಟು ಹೋಗುತ್ತಿದ್ದಾರೆ" ಎಂಬುದನ ಕಂಡ ಮೇಲೂ ಆ ನಂಬಿಕೆಗಳನ್ನು ಮುಂದುವರಿಸಿತು. ಅದು ನಮ್ಮನ್ನು ದುಷ್ಟರಾಗಿ ಲಿಲ್ಲ; ಅವಿಚಾರಿಗಳನ್ನಾಗಿಸಿತು; "ಇದು ದುಷ್ಟತನ" ಎಂಬ ಅರಿವೇ ಇಲ್ಲದೆ ನಾವೆಲ್ಲ— ನಾಲ್ಕು 'ವರ್ಣ'ದವರು ಮತ್ತು 'ಪಂಚಮರು'*—ಸಂಪ್ರದಾಯವನ್ನು ಮುಂದ ವರಿಸಿದೆವು.

ವೆಲ್ಲೂರಿನ ಕ್ರೈಸ್ತ ಯುವಕ "ನನಗೆ ಶುಭ್ರತೆಯನ್ನು ಕಲಿಸಿದವರು ಪಾದ್ರಿ ಗಳು" ಎಂದಾಗ ನಾಲ್ಕನೆಯ ದಶಕದಲ್ಲಿ ನಡೆದ ಪ್ರಸಂಗವೊಂದು ನೆನಪಿಗೆ ಬಂತು. ವೇಳೆಗೆ ಗಾಂಧೀಜಿ ಅಸ್ಪೃಶ್ಯತೆಯ ವಿರುದ್ಧವಾಗಿ ಚಳುವಳಿ ಹೂಡಿದ್ದರು. ಆಗ ನ ಸಹೋದ್ಯೋಗಿ ಮತ್ತು ಪ್ರಿಯ ಸ್ನೇಹಿತ ಟಿ. ಕೃಷ್ಣಮೂರ್ತಿ—ಅವನು ಯುನೆಸ್ಕೊ ದಲ್ಲಿದ್ದು ನಿವೃತ್ತಿ ಪಡೆದು ಇಂದಿಗೆ ನಾಲ್ಕೈದು ವರ್ಷಗಳ ಹಿಂದೆ ತೀರಿಕೊಂಡ— ನನ್ನೊಡನೆ ಮಹಾರಾಜಾ ಕಾಲೇಜಿನಲ್ಲಿದ್ದ.

*'ಪಂಚಮ'ರಲ್ಲಿ ಕೂಡ 'ಎಡಗೈ ಬಲಗೈ'ನವರಲ್ಲಿ ಮೇಲುಕೀಳು ಭಾವನೆಯಿತ್ತಷ್ಟೆ!

ಮುಂದುವರಿಯುವು

ಪುಸ್ತಕ ವಿಭಾಗ

ಲಿಯೋ ಟಾಲ್‌ಸ್ಟಾಯ್ ಅವರ ಮಹಾ ಕಾದಂಬರಿ

ಯುದ್ಧ ಮತ್ತು ಶಾಂತಿ

ಅನುವಾದ
ಪ್ರೊ|| ದೇಜಗೌ



ರೊಸ್ತೋವ್ ಸತ್ಯನಿಷ್ಠನಾದ ಯುವಕ. ಉದ್ದೇಶಪೂರ್ವಕವಾಗಿ ಅವನೆಂದೂ ಸುಳ್ಳು ಹೇಳಿದವನಲ್ಲ. ನಡೆದದ್ದನ್ನು ನಡೆದಂತೆಯೇ ಕರಾರುವಾಕ್ಕಾಗಿ ವಿವರಿಸುವುದೆಂದು ಅವನು ತನ್ನ ಕತೆ ಆರಂಭಿಸಿದನು. ಆದರೆ ತನಗರಿವಿಲ್ಲದಂತೆಯೇ, ಅನೈಚ್ಛಿಕವಾಗಿಯೇ, ಅನಿವಾರ್ಯವೆಂಬಂತೆ ಅವನು ಸುಳ್ಳಿನ ಕಡೆಗೆ ಜಾರಿದನು. ತನ್ನಂತೆಯೇ ಆಕ್ರಮಣಕ್ಕೆ ಸಂಬಂಧಿಸಿದ ಕತೆಗಳನ್ನು ಕೇಳಿದ್ದ, ಕೇಳಿಕೊಂಡಿದ್ದ ಆಕ್ರಮಣದ ಬಗ್ಗೆ ತಮಗೆ ತೋಚಿದಂತೆ ನಿರ್ದಿಷ್ಟಭಾವನೆಯನ್ನು ರೂಪಿಸಿಕೊಂಡಿದ್ದ ಅವನ ಶ್ರೋತೃಗಳು, ಅವನೇನಾದರೂ ನಿಜ ನುಡಿದಿದ್ದರೆ, ಅವನನ್ನು ನಂಬುತ್ತಿರಲಿಲ್ಲ; ಅಥವಾ ಇನ್ನೂ ಕೇಳೆಂದರೆ, ರೊಸ್ತೋವ್‌ನೇ ತಪ್ಪಿತಸ್ಥರೆಂದು ನಿರ್ಧರಿಸುತ್ತಿದ್ದರು. ರಾವುತ ದಾಳಿಯನ್ನು ವರ್ಣಿಸುವ ಕಥಕರಿಗೆ ಸಂಭವಿಸುವ ಅನುಭವ ಅವನಿಗೆ ಸಮನಿಸದಿದ್ದಾಗ ಹಾಗೆ ನಿರ್ಧರಿಸುವುದೇ ಸಹಜವಾಗುತ್ತಿತ್ತು. ಎಲ್ಲರೂ ಕುಕ್ಕುಲೋಟದಲ್ಲಿ ಓಡಿದುದಾಗಿಯೂ, ತಾನು ಕುದುರೆಯಿಂದ ಕೆಳಗೆ ಬಿದ್ದು ಕೈ ಉಳುಕಿಸಿಕೊಂಡುದಾಗಿಯೂ, ಫ್ರೆಂಚ್ ಸೈನಿಕರಿಂದ ತಪ್ಪಿಸಿಕೊಳ್ಳುವ ಸಲುವಾಗಿ ಕಾಡಿಗೆ ಓಡಿದುದಾಗಿಯೂ ಅವನು ಹೇಳಲು ಸಾಧ್ಯವಾಗಲಿಲ್ಲ. ಜತೆಗೆ ವಾಸ್ತವವಾಗಿ ನಡೆದದ್ದನ್ನು ನಡೆದಂತೆಯೇ ವಿವರಿಸಬೇಕಾಗಿದ್ದರೆ ಅವನು ಪ್ರಯತ್ನ ಪೂರ್ವಕವಾಗಿ ಸಂಕಲ್ಪಿಸಿಕೊಳ್ಳಬೇಕಾಗಿತ್ತು. ನಿಜ ಹೇಳುವುದು ತುಂಬ ಕಠಿನ. ಅದು ಯುವಕರಿಗೆ ಸಾಮಾನ್ಯವಾಗಿ ಸಾಧ್ಯವಾಗುವುದಿಲ್ಲ. ಭಾವೋದ್ರೇಕ ದಿಂದ ಉದ್ದೀಪ್ತವಾಗಿದ್ದ ಆ ಸನ್ನಿವೇಶದಲ್ಲಿ ಅವನೆಂತು ವ್ಯೂಹದ ನಡುವೆ ಬಿರುಗಾಳಿ ಯಂತೆ ಬೀಸಿ, ದಾರಿಮಾಡಿಕೊಂಡು, ಎಡಬಲಗಳಲ್ಲಿ ಸಿಕ್ಕಿದವರನ್ನು ಕುಸುರಿದರಿದ ನೆಂಬುದನ್ನು, ಮಾಂಸವನ್ನೆಂತು ಅವನ ಕತ್ತಿ, ರುಚಿನೋಡಿತೆಂಬುದನ್ನು ಅವನೆಂತು ಸುಸ್ತಾಗಿ ಕೆಳಗೆ ಬಿದ್ದನೆಂಬುದನ್ನು, ಅಂತೆಯೇ ಇತರ ಸಾಹಸಕಾರ್ಯಗಳ ವಿವರಗಳನ್ನು ತಿಳಿಯಲು ಅವನ ಶ್ರೋತೃಗಳು ಕುತೂಹಲರಾಗಿದ್ದರು. ತನಗೆ ತೋರಿದ್ದನ್ನೆಲ್ಲ ಅವನು ವಿವರಿಸಿದನು.

ಕಥೆ ಮುಂದುವರಿದು, 'ಕದನಕಾಲದಲ್ಲಿ ಎಂಥ ವಿಚಿತ್ರೋನ್ಮಾದವನ್ನು ಯೋಧರು ಅನುಭವಿಸುತ್ತಾರೆಂಬುದನ್ನು ನೀವು ಕಲ್ಪಿಸಿಕೊಳ್ಳಲಾರಿರಿ' ಎಂದವನು ಹೇಳುತ್ತಿದ್ದಾಗ, ಬೋರಿಸ್ ನಿರೀಕ್ಷಿಸಿಕೊಂಡಿದ್ದ ರಾಜಕುಮಾರ ಆಂಡ್ರ್ಯೂ ಕೋಣೆಯೊಳಗೆ ಪ್ರವೇಶಿಸಿ ದನು. ಯುವಕರಿಗೆ ಸಹಾಯಮಾಡುವುದೆಂದರೆ ಆಂಡ್ರ್ಯೂಗೆ ತುಂಬ ಪ್ರೀತಿ. ಯಾರಾ ದರೂ ಅವನ ಸಹಾಯ ಅಪೇಕ್ಷಿಸಿದ್ದಾದರೆ ಅವನು ಉಬ್ಬಿಹೋಗುತ್ತಿದ್ದ. ಹಿಂದಿನ ದಿನ ತನ್ನ ವರ್ತನೆಯಿಂದ ತೃಪ್ತಿಪಡಿಸಿದ್ದ ಬೋರಿಸ್‌ನ ಬಗ್ಗೆ ಅವನಿಗೆ ಸದಭಿಪ್ರಾಯವಿತ್ತು. ಬೋರಿಸ್‌ನ ಇಷ್ಟಾರ್ಥವನ್ನು ನೆರವೇರಿಸುವುದೆಂದು ಅವನು ನಿರ್ಧರಿಸಿಕೊಂಡಿದ್ದನು. ಕುತುಜೋವನ ಕಡತಗಳನ್ನು ಚಕ್ರವರ್ತಿಕುಮಾರನಿಗೆ ತಲುಪಿಸಲು ಹೊರಟಿದ್ದ ಅವನು ಬೋರಿಸ್‌ನನ್ನು ಪ್ರತ್ಯೇಕವಾಗಿ ಸಂಧಿಸುವ ಸಲುವಾಗಿ ಬಂದಿದ್ದನು. ರಾವುತನೊಬ್ಬ ತನ್ನ ಸೈನಿಕ ಸಾಹಸಗಳನ್ನು ವರ್ಣಿಸುತ್ತಿದ್ದುದನ್ನು ಕಂಡಾಗ (ರಾಜಕುಮಾರ ಆಂಡ್ರ್ಯೂಗೆ ಅಂಥವರನ್ನು ಕಂಡರಾಗುತ್ತಿರಲಿಲ್ಲ) ಬೋರಿಸ್‌ನನ್ನು ಹಿತಹಾಸದಿಂದ ಆದರಿಸಿದನು. ಅರೆಮುಚ್ಚಿದ ಕಣ್ಣುಗಳಿಂದಲೆಂಬಂತೆ ಮುಖಸಿಂಡರಿಸಿಕೊಂಡು ರೊಸ್ತೋವ್ ಕಡೆಗೆ ನೋಡಿ, ಉಪೇಕ್ಷೆಯಿಂದ ಮಣಿದು, ಮಂಕು ಕವಿದವನಂತೆ ಮೆತ್ತೆಯ ಮೇಲೆ ಕುಸಿದನು.

ಅಂಥ ಕೆಟ್ಟ ಗುಂಪಿನಲ್ಲಿ ಸಿಕ್ಕಿಬಿದ್ದುದಕ್ಕಾಗಿ ಅವನು ಕಿರಿಕಿರಿಗೊಂಡನು. ಆ ಸಂದರ್ಭ ವನ್ನು ಗ್ರಹಿಸಿದ ರೊಸ್ತೋವ್‌ನ ಮುಖ ವಿವರ್ಣವಾಯಿತು. ಆದರೆ ಆದರಿಂದ ಅವನಿಗೆ ಕಳವಳವಾಗಲಿಲ್ಲ. ಏಕೆಂದರೆ ಅವನಿಗೆ ಆಂಡ್ರೂ ಅಪರಿಚಿತನಷ್ಟೆ. ಬೋರಿಸ್‌ನ ಕಡೆಗೆ ಕಣ್ಣು ಹಾಯಿಸಿದಾಗ, ಅವನು ಸಹ ತನ್ನಂಥ ರಾವುತನ ಬಗ್ಗೆ ನಿರ್ಲಕ್ಷ್ಯದಿಂದಿದ್ದಂತೆ ರೊಸ್ತೋವ್‌ಗೆ ಭಾಸವಾಯಿತು.

ರಾಜಕುಮಾರ ಆಂಡ್ರೂವಿನ ನಡೆನುಡಿ ಅಹಿತಕರವೂ ವ್ಯಂಗ್ಯಾತ್ಮಕವೂ ಆದ ಧ್ವನಿಯಿಂದ ಕೂಡಿದ್ದರೂ, ಹೋರಾಟ ನಡಸುತ್ತಿದ್ದ ಸೈನಿಕನಾಗಿ ಆಂಡ್ರೂ ಮೊದಲಾದ ಸಹಾಯಾಧಿಕಾರಿಗಳನ್ನು ಅತ್ಯಂತ ತಾತ್ಸಾರದಿಂದ ಕಾಣುತ್ತಿದ್ದರೂ, ರೊಸ್ತೋವ್ ಗಾಬರಿ ಸಂಕೋಚಗಳಿಂದ ತೆಪ್ಪಗಾದನು. ಸಿಬ್ಬಂದಿಯ ಬಗೆಗೆ ಏನಾದರೂ ವಿಶೇಷ ವರ್ತಮಾನವಿದೆಯೆ, ಎಂದು ಬೋರಿಸ್ ಪ್ರಶ್ನಿಸಿದನು.

'ಪ್ರಾಯಶಃ ನಾವು ಮುಂದೆ ಸಾಗುತ್ತೇವೆ' ಎಂದಷ್ಟೇ ಬಲ್ಕೋನ್‌ಸ್ಕಿ ಉತ್ತರಿಸಿದನು. ಅಪರಿಚಿತನ ಸಮ್ಮುಖದಲ್ಲಿ ಹೆಚ್ಚು ಹೇಳುವುದು ಅವನಿಗೆ ಇಷ್ಟವಾಗಲಿಲ್ಲ.

ಪಡೆಗಳ ಕಪ್ತಾನರಿಗೆ ಮೇವು ಭತ್ಯದ್ವಿಗುಣಗೊಳ್ಳುತ್ತದೆಂಬ ಗಾಳಿಸುದ್ದಿ ನಿಜವೆ? ಎಂದು ಬೋರಿಸ್ ಅತ್ಯಂತ ವಿನಯದಿಂದ ಕೇಳಿದನು. ಅಂಥ ಪ್ರಮುಖ ಸರ್ಕಾರಿ ನಿರೂಪದ ಬಗ್ಗೆ ತನ್ನ ಅಭಿಪ್ರಾಯ ನೀಡಲಾಗದೆಂದು ಆಂಡ್ರೂ ಮುಗುಳುನಗೆಯಿಂದಲೆ ಉತ್ತರಿಸಿದನು. ಬರ್ಗ್ ವಿನೋದಾರ್ಥವಾಗಿ ನಕ್ಕನು.

ಆಂಡ್ರೂ ಬೋರಿಸ್‌ನನ್ನು ಸಂಬೋಧಿಸಿ 'ನಿಮ್ಮ ವ್ಯವಹಾರದ ಬಗ್ಗೆ ಆ ಮೇಲೆ ಮಾತಾಡೋಣ (ಅವನು ರೊಸ್ತೋವ್‌ನ ಕಡೆಗೆ ಕಣ್ಣು ಹೊರಳಿಸಿದನು) ಪರಿಶೀಲನೆಯ ನಂತರ ನನ್ನೆಡೆಗೆ ಬನ್ನಿ ಏನು ಸಾಧ್ಯವೋ, ಮಾಡೋಣ' ಎಂದನು.

ರಾಜಕುಮಾರ ಆಂಡ್ರೂ ಕೋಣೆಯ ಸುತ್ತ ಕಣ್ಣು ಹಾಯಿಸಿ, ರೊಸ್ತೋವ್ ಕಡೆಗೆ ತಿರುಗಿದನು. ರೊಸ್ತೋವ್‌ನ ಅದಮ್ಯ ಬಾಲಿಶ ಕ್ಲೇಶ ಕ್ರೋಧಕ್ಕೆ ತಿರುಗಲಾಗಿ, ಅವನು ಆಂಡ್ರೂ ಕಡೆಗೆ ಗಮನ ಹರಿಸಲಿಲ್ಲ. 'ನೀವು ಷಾನ್ ಗ್ರಾಬರ್ನ್ ಪ್ರಕರಣ ಕುರಿತು ಮಾತಾಡುತ್ತಿದ್ದಿರಲ್ಲವೆ? ನೀವು ಅಲ್ಲಿದ್ದಿರೇನು?' ಎಂದು ಆಂಡ್ರೂ ಪ್ರಶ್ನಿಸಿದನು.

'ಹೌದು, ಅಲ್ಲಿದ್ದೆ' ಎಂದು ಸೇನಾಪತಿ ಸಹಾಯಕನನ್ನು ಅವಹೇಳಿಸಲೆಂಬಂತೆ ರೊಸ್ತೋವ್ ಕುಪಿತಗೊಂಡನು.

ರಾಹುತ ಸಿಪಾಯಿಯ ಮನೋಭಾವವನ್ನರಿತ ಬಲ್ಕೋನ್‌ಸ್ಕಿಯ ಮುಖದಲ್ಲಿ ನಗೆಯಾಡಿತು. ತುಸು ಉಪೇಕ್ಷೆಯ ಮುಗುಳುನಗೆಯಿಂದ 'ನಿಜ. ಆ ಪ್ರಕರಣದ ಬಗ್ಗೆ ಅನೇಕ ಕಥೆಗಳು ಜನರ ಬಾಯಲ್ಲಿವೆ' ಎಂದು ನುಡಿದನು.

'ಕಥೆಗಳೆ! ಹೌದು' ಎಂದು ರೊಸ್ತೋವ್ ಹಠಾತ್ತನೆ ಕೆರಳಿದ ಕಣ್ಣುಗಳನ್ನು ಬೋರಿಸ್ ಕಡೆಗೊಮ್ಮೆ, ಬಲ್ಕೋನ್‌ಸ್ಕಿಯ ಕಡೆಗೊಮ್ಮೆ ಹಾಯಿಸುತ್ತ ಗಟ್ಟಿಯಾಗಿ ಅನುಕರಿಸಿದನು. 'ಹೌದು ಹಲವು ಕಥೆಗಳಿವೆ! ಆದರೆ ಹಗೆಯ ಗುಂಡೇಟಿಗೆ ಎದೆಯೊಡ್ಡಿರುವ ಧೀರರ ಕಥೆಗಳವು! ಅವು ಕೆಲಸಮಾಡದೆ ಬಹುಮಾನಗಳನ್ನು ಗಟ್ಟಿಸಿಕೊಳ್ಳುವ ಆಡಳಿತ ಕಚೇರಿಯ ಅಣ್ಣರ ಕತೆಗಳಂತಲ್ಲದೆ, ತಿರುಳುತೂಕಗಳುಳ್ಳ ಕತೆಗಳು.

'ನಾನು ಯಾವ ವರ್ಗಕ್ಕೆ ಸೇರಿದವನೆಂದು ನೀವು ಊಹಿಸಿಕೊಂಡಿದ್ದೀರಿ?' ಎಂದು ರಾಜಕುಮಾರ ಆಂಡ್ರೂ ಪ್ರಶಾಂತವೂ ಸ್ನೇಹಮಯವೂ ಆದ ಮಂದಹಾಸವನ್ನು ಬೀರಿದನು.

ವಿಲಕ್ಷಣ ರೀತಿಯ ಉದ್ರೇಕ ಭಾವವೂ, ಆ ಮನುಷ್ಯನ ಸ್ವಸ್ಥ ಚಿತ್ತತೆಗಾಗಿ ಗೌರವ ಭಾವವೂ ಆ ಕ್ಷಣದಲ್ಲಿ ಅವನ ಹೃದಯದಲ್ಲಿ ಬೆರೆತುವು. 'ನಿಮ್ಮ ಬಗ್ಗೆ ನಾನು ಮಾತಾಡುತ್ತಿಲ್ಲ. ನಿಮ್ಮ ವಿಷಯವೇ ನನಗೆ ಗೊತ್ತಿಲ್ಲ. ಮುಚ್ಚುಮರೆಯಿಲ್ಲದೆ ಹೇಳ ಬಹುದಾದರೆ, ತಿಳಿಯಲಿಷ್ಟವಿಲ್ಲ. ಸಾಮಾನ್ಯ ಸೇನಾಡಳಿತ ಸಿಬ್ಬಂದಿವರ್ಗದ ಬಗ್ಗೆ ಮಾತಾಡುತ್ತಿದ್ದೇನೆ'.

'ಈಗ ನಾನಿಷ್ಟೇ ಹೇಳಬಲ್ಲೆ' ಎಂದು ರಾಜಕುಮಾರ ಆಂಡ್ರೂ ಅಧಿಕಾರದ ಧ್ವನಿಯಲ್ಲಿ ಮಧ್ಯೆ ಬಾಯಿಹಾಕಿದನು. 'ನೀವು ನನಗೆ ಅವಮಾನ ಮಾಡಬೇಕೆಂದಿದ್ದೀರಿ. ನೀವು ಸಾಕಷ್ಟು ಆತ್ಮಗೌರವವನ್ನು ಹೊಂದಿರದಿದ್ದರೆ ಹಾಗೆ ಮಾಡುವುದು ಸುಲಭವೆಂದು ಈ ಕೂಡಲೇ ಒಪ್ಪಿಕೊಳ್ಳುತ್ತೇನೆ; ಆದರೆ ನೀವು ಆಯ್ದು ಕೊಂಡಿರುವ ಸ್ಥಳ ಮತ್ತು ಕಾಲಗಳು ಸರಿಯಾಗಿಲ್ಲವೆಂಬುದನ್ನು ನಿಮಗೆ ತಿಳಿಸಬೇಕಾಗಿದೆ. ಒಂದೆರಡು ದಿನಗಳಲ್ಲಿ ನಾವು ಇನ್ನೂ ಗಂಭೀರವೂ ಘನತರವೂ ಆದ ದ್ವಂದ್ವಯುದ್ಧದಲ್ಲಿ ಭಾಗವಹಿಸ ಬೇಕಾಗಿದೆ. ಜತೆಗೆ ನನ್ನ ಮುಖ ಕಂಡರೆ ನಿಮಗಾಗುವುದಿಲ್ಲವೆಂದು ನಿಮ್ಮ ಹಳೆಯ ಗೆಳೆಯನೆಂದು ಹೇಳಿಕೊಳ್ಳುವ ದ್ರುಬೆತ್‌ಸ್ಕಾಯ್ ಹೇಳಿದ್ದಾನೆ.' ಅವನು ಮೇಲೇಳುತ್ತ 'ಏನಾದರೂ ಆಗಲಿ, ನನ್ನ ಹೆಸರು ವಿಳಾಸಗಳು ನಿಮಗೆ ಗೊತ್ತಿರಬೇಕು. ನನಗಾಗಲಿ ನಿಮಗಾಗಲಿ ಅವಮಾನವಾಗಿದೆಯೆಂದು ನಾನು ಭಾವಿಸುವುದಿಲ್ಲವೆಂಬುದನ್ನು ನೀವು ಮರೆಯದಿರಿ. ಈ ವಿಷಯವನ್ನು ಇಲ್ಲಿಗೆ ಕೈಬಿಡಬಹುದೆಂಬುದೇ ನಿಮಗಿಂತ ನಾನು ಹಿರಿಯವನಾಗಿ ನೀಡುವ ಬುದ್ಧಿವಾದ. ಶುಕ್ರವಾರ ಪರಿಶೀಲನೆ ಮುಗಿದನಂತರ ನಾನು ನಿಮ್ಮನ್ನೂ ದ್ರುಬೆತ್‌ಸ್ಕಾಯ್ ಅವರನ್ನೂ ಎದುರು ನೋಡುತ್ತಿರುತ್ತೇನೆ. ನಮಸ್ಕಾರ' ಎಂದವನು ನುಡಿದು, ಇಬ್ಬರಿಗೂ ಮಣಿದು, ಹೊರಗೆ ಹೊರಟನು.

ರಾಜಕುಮಾರ ಆಂಡ್ರೂ ನಿರ್ಗಮಿಸಿದ ನಂತರ ಅವನೊಡನೆ ತಾನೇನು ಹೇಳ ಬೇಕಿತ್ತೆಂಬುದನ್ನು ಕುರಿತು ರೊಸ್ತೋವ್ ಆಲೋಚಿಸತೊಡಗಿದನು. ಹೇಳಬೇಕಾದ್ದನ್ನು ಹೇಳದಿದ್ದುದಕ್ಕಾಗಿ ಅವನ ಕೋಪ ಮತ್ತಷ್ಟು ಕೆರಳಿತು. ಕೂಡಲೇ ತನ್ನ ಕುದುರೆ ಯನ್ನು ತರಿಸಿ, ಬೋರಿಸ್‌ನಿಂದ ಉದಾಸೀನವಾಗಿ ಬೀಳ್ಕೊಂಡು, ಮನೆಯ ಕಡೆಗೆ ಹೊರಟನು. ಮರುದಿನವೇ ಕೇಂದ್ರ ಕಾರ್ಯಸ್ಥಾನಕ್ಕೆ ಹೋಗಿ, ಆ ಸೋಗಿನ ಸಹಾಯಾಧಿಕಾರಿಯನ್ನು ಸವಾಲಿಸುವುದೇ ಅಥವಾ ಆ ವಿಷಯವನ್ನಲ್ಲಿಗೆ ಮುಕ್ತಾಯ ಗೊಳಿಸುವುದೇ ಎಂಬ ಪ್ರಶ್ನೆ ದಾರಿಯುದ್ದಕ್ಕೂ ಅವನ ಚಿತ್ತವನ್ನು ಕಲಕುತ್ತಿತ್ತು. ಅಲ್ಪನೂ, ದುರ್ಬಲನೂ, ಆದರೆ ದುರಭಿಮಾನಿಯೂ ಆದ ಆ ಮನುಷ್ಯ ತಾನು ಪಿಸ್ತೂಲನ್ನು ಗುರಿಯಿಟ್ಟೊಡನೆಯೇ ಗಾಬರಿಗೊಳ್ಳುವ ದೃಶ್ಯವನ್ನು ಕಂಡಾಗ ತನಗುಂಟಾಗುವ ಆನಂದವನ್ನು ನೆನೆದು ಅವನ ಕೋಪ ಇಳಿಯಲಿಲ್ಲ. ಯಾವ ಸಹಾಯಾಧಿಕಾರಿಯನ್ನು ತಾನು ದ್ವೇಷಿಸುತ್ತಿದ್ದನೋ ಅವನೇ ತಾನು ಬಲ್ಲ ಜನರ ಪೈಕಿ ತನ್ನ ಗೆಳೆಯನಾಗಬಲ್ಲನೆಂಬ ವಿಷಯ ಮನಸ್ಸಿಗೆ ಹೊಳೆದಾಗ ಅವನಿಗೆ ಅಚ್ಚರಿಯಾಯಿತು.

ಅಧ್ಯಾಯ ೮

ರೊಸ್ತೋವ್ ಬೋರಿಸ್‌ನನ್ನು ಭೇಟಿಯಾದ ಮಾರನೆಯದಿನವೇ ಆಸ್ಟ್ರಿಯಾ
ಮತ್ತು ರಷ್ಯಾ ಸೇನೆಗಳ ಪರಿಶೀಲನೆ ಜರುಗಿತು. ಹೊಸದಾಗಿ ರಷ್ಯಾದಿಂದ ಬಂದಿದ್ದ ದಳ
ಗಳೂ, ಕುತುಜೋವ್‌ನ ನೇತೃತ್ವದ ದಂಡಯಾತ್ರೆಯಲ್ಲಿ ಸೇರಿದ್ದ ದಳಗಳೂ ಪರಿಶೀಲನೆ
ಗೊಳಪಟ್ಟಿದ್ದುವು. ರಷ್ಯಾ ಸಾರ್ವಭೌಮ ಮತ್ತು ಅವನ ಮಗ, ಆಸ್ಟ್ರಿಯಾ ಚಕ್ರವರ್ತಿ
ಮತ್ತು ಅವನ ಮಗ, ಈ ನಾಲ್ವರೂ ಎಂಬತ್ತು ಸಾವಿರ ಯೋಧರ ಮಿತ್ರ ಸೈನ್ಯವನ್ನು
ಪರಿಶೀಲಿಸಿದರು.

ಪ್ರಾತಃಕಾಲದಿಂದ ಶುಭ್ರವಸನಭೂಷಿತ ಚಟುಲಗತಿಯ ಸೈನ್ಯ ಕಾವಲು
ಕೋಟೆಯ ಮುಂದಣ ಬಯಲಿನಲ್ಲಿ ಓರಣಗೊಳ್ಳುತ್ತಿತ್ತು. ಚಲಿಸುತ್ತಿದ್ದ ಸಹಸ್ರ
ಸಹಸ್ರ ಪಾದಗಳೂ ಬಂದೂಕಗಳೂ ಅಧಿಕಾರಿಗಳ ಆಜ್ಞೆಗನುಸಾರವಾಗಿ ತುಸು ತಡೆದು
ಹಾರಾಡುತ್ತಿದ್ದ ಬಾವುಟಗಳೊಡನೆ ತಿರುಗುತ್ತಿದ್ದುವು; ಅದೇ ತೆರನ ವಿವಿಧ ಸಮವಸ್ತ್ರ
ಧಾರಿ ಪದಾತಿಪಂಕ್ತಿಗಳನ್ನು ಸುತ್ತುವರಿಯುತ್ತಿದ್ದುವು. ಅಷ್ಟರಲ್ಲಿ ಗೊರಸುಗಳ ಲಯ
ಬದ್ಧ ಚಲನೆಯೂ, ನೀಲಿಕೆಂಪು ಹಸರು ಜಡೆಗಳ ಸಮವಸ್ತ್ರಗಳನ್ನು ಧರಿಸಿದ ಬೆಡಗಿನ
ಅಶ್ವದಳದ ಝಣಝಣತ್ಕಾರವೂ ಕೇಳಿಸಿದುವು. ನೀಟಾಗಿ ಉಡುಪು ಧರಿಸಿದ ವಾದ್ಯ
ಗಾರರು ಕೃಷ್ಣ ಕಪಿಲಶ್ವೇತ ಧೂಸರವರ್ಣರಂಜಿತವಾದ ಕುದುರೆಗಳನ್ನೇರಿ ಮುಂಭಾಗ
ದಲ್ಲಿ ಸಾಗುತ್ತಿದ್ದರು. ಬಂಡಿಗಳಲ್ಲಿ ಮಿರುಗುತ್ತಿದ್ದ ಫಿರಂಗಿಗಳ ದಣದಣ ಶಬ್ದದೊಡನೆ
ಪಂಜುಗಳ ವಾಸನೆಯೊಡನೆ ಫಿರಂಗಿದಳ ಪದಾತಿ ಮತ್ತು ಅಶ್ವದಳದ ನಡುವೆ ಗೊತ್ತಾದ
ಸ್ಥಾನವನ್ನು ಆಕ್ರಮಿಸಿಕೊಂಡಿತು. ಕಂಠವಸ್ತ್ರಾದಿ ಭೂಷಣಗಳನ್ನು ಧರಿಸಿದ್ದ, ಕೊರಳ
ಪಟ್ಟಿಗಳಿಂದ ಬಿಗಿಗೊಂಡಿದ್ದ, ಕೆಂಪು ಕತ್ತುಗಳ, ಸೇದಿಕೊಂಡಿದ್ದ ತೆಳ್ಳನೆಯ ಅಥವಾ
ದಪ್ಪನೆಯ ನಡುಗಳ, ಪೂರ್ಣ ಪ್ರದರ್ಶನ ಸಮವಸ್ತ್ರಗಳ ಸೇನಾಧಿಪತಿಗಳು ಮಾತ್ರವಲ್ಲ
ಸುಗಂಧಲೇಪಿತ ನಾಜೂಕಿನ ಅಧಿಕಾರಿಗಳಷ್ಟೆ ಅಲ್ಲ, ಕ್ಷುರಿತ ಪ್ರಕ್ಷಾಲಿತ ಮುಖದ
ಮೆರಗುಕೊಟ್ಟ ಆಯುಧಗಳುಳ್ಳ ಪ್ರತಿಯೊಬ್ಬ ಸೈನಿಕನೂ, ಮೈಗೂದಲು ಸ್ಯಾಟಿನ್
ಬಟ್ಟೆಯಂತೆ ಹೊಳೆಯುವತನಕ, ಒದ್ದೆಯಾದ ಕೇಸರದ ಪ್ರತಿಯೊಂದು ಕೂದಲೂ
ನುಣ್ಣಗಾಗುವ ತನಕ ಮಾಲೀಸು ಮಾಡಿದ್ದ, ಪ್ರತಿಯೊಂದು ಕುದುರೆಯೂ ಮುಂ
ನಡೆಯಲಿದ್ದ ಘಟನೆ ಸಣ್ಣದಲ್ಲವೆಂದೂ, ಅತಿಮುಖ್ಯವೂ ಬಹು ಗಂಭೀರವೂ ಆದ
ಸಂಗತಿಯೆಂದೂ ಭಾವಿಸಿದಂತಿತ್ತು. ಆ ಸೈನ್ಯಸಾಗರದಲ್ಲಿ ತಾನೊಂದು ಹನಿಯೆಂದು
ತಾನೊಬ್ಬ ಅಲ್ಪನೆಂದು ಪ್ರತಿಯೊಬ್ಬ ಸೇನಾಧಿಪತಿಯೂ, ಪ್ರತಿಯೊಬ್ಬ ಯೋಧನೂ
ಅರಿತುಕೊಂಡಿದ್ದುಂಟು. ಆದರೂ ಆ ಅಪರಿಮಿತ ಸಾಕಲ್ಯದ ಒಂದು ಅಂಶವಾಗಿ
ತಾನೊಂದು ಶಕ್ತಿಯ ಕಿರಣವೆಂಬುದನ್ನು ಪ್ರತಿಯೊಬ್ಬನೂ ಅರಿತಿದ್ದನು.

ಬೆಳಗಿನ ಜಾವದಿಂದ ಸತತೋತ್ಸಾಹದ ಚಟುವಟಿಕೆಗಳೂ ಪ್ರಯತ್ನಗಳು
ಪ್ರಾರಂಭವಾಗಿ, ಹತ್ತು ಗಂಟೆಯೊಳಗಾಗಿ ಸುವ್ಯವಸ್ಥೆಯಲ್ಲಿ ಮುಕ್ತಾಯಗೊಂಡಿದ್ದುವು
ವಿಶಾಲವಾದ ಬಯಲಿನಲ್ಲಿ ಸಾಲುಗಳನ್ನು ರೇಖಿಸಲಾಗಿತ್ತು. ಮೂರು ಸಾಲುಗಳ
ಇಡೀ ಸೈನ್ಯವನ್ನು ವಿಸ್ತರಿಸಲಾಗಿತ್ತು: ಮುಂಭಾಗದಲ್ಲಿ ಅಶ್ವದಳ; ಅದರ ಹಿಂ
ಫಿರಂಗಿದಳ; ಇನ್ನು ಹಿಂದೆ ಪದಾತಿದಳ.

ಪ್ರತಿ ಎರಡು ತಂಡಗಳ ನಡುವೆ ರಸ್ತೆಯಷ್ಟು ಜಾಗವನ್ನು ಸಿದ್ಧಗೊಳಿಸಲಾಗಿತ್ತು. ಆ ಸೈನ್ಯದ ಮೂರು ವಿಭಾಗಗಳನ್ನು ಸ್ಪಷ್ಟವಾಗಿ ಗುರುತಿಸಲಾಗಿತ್ತು : ಕುತುಜೋವ್‌ನ ಯುದ್ಧ ಸನ್ನದ್ಧ ಸೈನ್ಯ(ಅಗ್ರಭಾಗದ ಬಲಪಾರ್ಶ್ವದಲ್ಲಿದ್ದ ಪಾವ್‌ಲೊಗ್ರಾಡ್ ಸೈನಿಕರು); ಇತ್ತೀಚೆಗೆ ರಷ್ಯಾದಿಂದ ಬಂದಿದ್ದ ಕಾವಲು ಮತ್ತುಶಾಶ್ವತ ಪಡೆಗಳು; ಮತ್ತು ಆಸ್ಟ್ರಿಯಾ ಸೈನ್ಯ. ಆದರೆ ಎಲ್ಲರೂ ತಂತಮ್ಮ ಸ್ಥಾನಮಾನಗಳಿಗನುಗುಣವಾಗಿ ಒಂದೇ ಕ್ರಮದಲ್ಲಿ, ಒಂದೇ ಅಧೀನದಲ್ಲಿ ನಿಂತಿದ್ದುವು.

ಗಾಳಿಗೆ ಸಿಕ್ಕಿದ ಎಲೆಗಳ ಮರ್ಮರದಂತೆ ಭಾವೋದ್ರಿಕ್ತವಾದ ಮಂದ ನಿನಾದತರಂಗ ಹಬ್ಬಿತು. 'ಅವರು ಬರುತ್ತಿದ್ದಾರೆ! ಅವರು ಬರುತ್ತಿದ್ದಾರೆ!' ಎಚ್ಚರಿಕೆಯ ಧ್ವನಿ ಕೇಳಿಸಿತು. ಅಂತಿಮ ಸಿದ್ಧತೆಯ ಗಡಿಬಿಡಿ ಇಡೀ ಸೈನ್ಯದಲ್ಲೆಲ್ಲ ಹರಡಿತು.

ಆಲ್‌ಮೂತ್ಸ್ ಕಡೆಯಿಂದ ತಮ್ಮೆದುರಿಗೆ ಗುಂಪೊಂದು ಸನ್ನಿಹಿತವಾಗುತ್ತಿತ್ತು. ಆ ಸಮಯದಲ್ಲಿ ಹಗಲು ಪ್ರಶಾಂತವಾಗಿದ್ದರೂ, ಬೀಸುತ್ತಿದ್ದ ಗಾಳಿಯ ಲಘು ಹೊಡೆತ ಜವಳಿಭಲ್ಲೆಯಗಳ ಕೇತನ ಸದೃಶ ಪಟ್ಟಿಗಳನ್ನು ಅಲುಗಾಡಿಸಿತು ; ಬಿಚ್ಚಿದ ಬಾವುಟಗಳು ಯಷ್ಟಿಗಳಿಗೆ ಬಡಿಯುತ್ತಿದ್ದುವು. ಚಕ್ರವರ್ತಿಗಳ ಆಗಮನಕ್ಕಾಗಿ ಇಡೀ ಸೈನ್ಯವೇ ತನ್ನ ಸಂತೋಷವನ್ನು ವ್ಯಕ್ತಪಡಿಸುತ್ತಿದ್ದಂತೆ ಆ ಅಲ್ಪ ಚಲನೆಯಿಂದ ಭಾಸವಾಗುತ್ತಿತ್ತು. 'ಮುಂದಕ್ಕೆ ದೃಷ್ಟಿಯಿರಲಿ!' ಎಂದೊಂದು ಗರ್ಜನೆ ಕೇಳಿಸಿತು. ಅನಂತರ ಸೂರ್ಯೋದಯ ಸಮಯದ ಕುಕ್ಕುಟಸ್ವನದಂತೆ, ನಾನಾ ದಿಕ್ಕುಗಳಿಂದ ಅಂಥದೇ ಧ್ವನಿ ಅನುರಣಿತ ವಾಯಿತು. ಕೂಡಲೆ ನಿಶ್ಶಬ್ದ ನೆಲಸಿತು.

ಆ ಶ್ಮಶಾನ ಮೌನದಲ್ಲಿ ವಾಜಿಗಳ ಪದಾಘಾತ ಮಾತ್ರ ಕೇಳಿಸುತ್ತಿತ್ತು. ಅದು ಚಕ್ರವರ್ತಿಗಳ ಪರಿವಾರದಿಂದ ಬಂದ ಶಬ್ದವಾಗಿತ್ತು. ಚಕ್ರವರ್ತಿಗಳು ಪಾರ್ಶ್ವದ ತನಕ ಸವಾರಿಸಿದರು. ಪ್ರಥಮ ಅಶ್ವದಳದ ಕಹಳೆಗಳು ರೂಢಿಯ ಹಾಡನ್ನು ಬಾಜಿಸಿ ದುವು. ಅದು ಕಹಳೆಯವರ ವಾದನದಂತಿರದೆ, ಚಕ್ರವರ್ತಿಗಳ ಆಗಮನದಿಂದ ಹಿಗ್ಗಿದ ಇಡೀ ಸೈನ್ಯದ ಆನಂದವೇ ಸಹಜ ಸಂಗೀತವಾಗಿ ಉಕ್ಕಿದಂತೆ ಭಾಸವಾಗುತ್ತಿತ್ತು. ಈ ಎಲ್ಲ ಧ್ವನಿ ತುಮುಲದ ನಡುವೆ ಚಕ್ರವರ್ತಿ ಅಲೆಕ್ಸಾಂಡರನ ತಾರುಣ್ಯೋತ್ಸಾಹದ ಪ್ರೇಮಾರ್ದ್ರ ಧ್ವನಿಮಾತ್ರ ಸ್ಪಷ್ಟವಾಗಿ ಕೇಳಿಸುತ್ತಿತ್ತು. ಅವನು ಒಸಗೆ ನುಡಿ ಉಚ್ಚರಿಸು ತ್ತಿದ್ದಂತೆ, ಮೊದಲ ದಳ ಕಿವಿ ಕಿವುಡಾಗುವಂತೆ, ನಿರಂತರವಾಗಿ, ಹರ್ಷೋತ್ಸಾಹದಿಂದ 'ಉಘೇ, ಭಲೇ, ಜೈ' ಎಂದು ಮೊಳಗಿತು. ಆ ಮೊಳಗನ್ನು ಕೇಳಿದ ಸೈನಿಕರು ತಮ್ಮ ಶಕ್ತಿಯ ಅಗಾಧತೆಗೂ ಸಂಖ್ಯೆಯ ಅಪಾರತೆಗೂ ಬೆಚ್ಚೆರಗಾದರು.

ಕುತುಜೋವ್ ಸೈನ್ಯದ ಅಗ್ರಪಂಕ್ತಿಗಳ ಕಡೆಗೆ ಮೊದಲು ತ್ಸಾರ್ ಚಕ್ರವರ್ತಿ ಹೊರಳಿದನು. ಅಲ್ಲಿಯೇ ನಿಂತಿದ್ದ ರೊಸ್ತೋವ್‌ನ ಮೈಯಲ್ಲೆಲ್ಲ ಇತರ ಸೈನಿಕರಿಗಾದ ಆನಂದಾನುಭವವೆ ಸಂಚರಿಸಿದಂತಾಯಿತು. ಆತ್ಮವಿಸ್ಮೃತಿಯ ಅನುಭವ, ಅಪಾರ ಶಕ್ತಿಯ ಅರಿವು ಮತ್ತು ವಿಜಯೋತ್ಸವ ಕೇಂದ್ರವಾಗಿದ್ದ ಚಕ್ರವರ್ತಿಯ ಭಾವಾವಿಷ್ಟ ಆಕರ್ಷಣೆಗಳಿಂದಾಗಿ ಅವನು ಮರವಟ್ಟು ನಿಂತನು.

ಆ ಮನುಷ್ಯನ ಬಾಯಿಂದ ಒಂದು ಮಾತು ಹೊರಡುವುದೆ ತಡ, ಅಸಂಖ್ಯಾತ ಜನತೆ (ಆ ಜನ ಸಮುದ್ರದಲ್ಲಿ ತಾನೊಬ್ಬ ಕ್ಷುದ್ರ ಹನಿಯಾಗಿದ್ದ) ಅಗ್ನಿಯಲ್ಲಿ

ಧುಮುಕಲು, ನೀರಿನಲ್ಲಿ ಬೀಳಲು, ಅಪರಾಧಗಳನ್ನೆಸಗಲು, ಸಾಯಲು, ಅಥವಾ ಅತ್ಯಂತ ಸಾಹಸದ ಕಾರ್ಯಗಳನ್ನೆಸಗಲು ಸಿದ್ಧವಾಗಿದ್ದುದನ್ನು ನೆನೆಸಿಕೊಂಡಾಗ, ರೊಸ್ತೋವ್‌ನ ಮೈ ವಿಕಂಪಿಸುತ್ತಿತ್ತು; ಅವನ ಹೃದಯದ ಚಲನೆ ನಿಂತು ಹೋದಂತೆ ಅನುಭವವಾಗುತ್ತಿತ್ತು.

'ಉಘೇ ಉಘೇ ಉಘೇ' ಎಂಬ ಮೊಳಗು ಎಲ್ಲ ಕಡೆಗಳಿಂದಲೂ ಅನುರಣನಗೊಳ್ಳುತ್ತಿತ್ತು. ನಿಂತಲ್ಲೆ ಹೆಜ್ಜೆಹಾಕುತ್ತ, 'ಉಘೇ' ಎಂದು ಘೋಷಿಸುತ್ತ, ಒಂದಾದ ಮೇಲೊಂದು ದಳ ತ್ಸಾರನನ್ನು ಸ್ವಾಗತಿಸಿದುವು....ಅನಂತರ ಸಕಲ ದಳಗಳೂ ಹೆಜ್ಜೆ ಹಾಕುತ್ತ 'ಉಘೇ ಉಘೇ' ಎಂದು ಕೂಗಿದ ಧ್ವನಿ ತೀವ್ರವಾಗುತ್ತ, ಕಿವಿಯನ್ನು ಗಡಚಿಕ್ಕುವ ಗರ್ಜನೆಯಲ್ಲಿ ಲೀನವಾಯಿತು.

ತ್ಸಾರ್ ತನ್ನ ಹತ್ತಿರಕ್ಕೆ ಬರುವ ತನಕ ಮೌನದಲ್ಲದ್ದಿ ನಿಶ್ಚಲವಾಗಿದ್ದ ಪ್ರತಿಯೊಂದು ದಳವೂ ಜೀವರಹಿತ ಆಕೃತಿಯಂತೆ ಕಾಣುತ್ತಿತ್ತು. ಅವನು ಸನ್ನಿಹಿತವಾಗುತ್ತಿದ್ದಂತೆ ಅದಕ್ಕೆ ಜೀವ ಬಂದಂತಾಗುತ್ತಿತ್ತು. ಒಡನೆಯೇ ಹೊರಹೊಮ್ಮಿದ ಮೊಳಗು, ಅವನು ಮುಂದೆ ಮುಂದೆ ಹೆಜ್ಜೆ ಇಡುತ್ತಿದ್ದಂತೆ ಹಿಂದಿನ ಸಾಲಿನ ಗರ್ಜನೆಯಲ್ಲಿ ಲೀನಗೊಳ್ಳುತ್ತಿತ್ತು. ಆ ಭಯಂಕರ ಗರ್ಜನೆಯ ಪ್ರವಾಹದ ಮೂಲಕ, ಕಲ್ಲಿನಂತೆ ನಿಶ್ಚಲವಾಗಿ ನಿಂತಿದ್ದ, ಚೌಕಾಕಾರದಲ್ಲಿ ಅಳವಡಿಸಿದ್ದ ಸೈನ್ಯದ ನಡುವೆ, ಪರಿವಾರದ ನೂರಾರು ಸವಾರರು ನಿಶ್ಚಿಂತವಾಗಿ, ಅನಿರ್ಬಂಧವಾಗಿ, ಆದರೆ ಸಮಸೂತ್ರವಾಗಿ ಚಲಿಸುತ್ತಿದ್ದರು. ಅವರ ಮುಂದೆ ಚಕ್ರವರ್ತಿಗಳು ಸಾಗುತ್ತಿದ್ದರು. ಇಡೀ ಮನುಷ್ಯ ರಾಶಿಯ ಅವಿಭಕ್ತವೂ ಭಾವೋದ್ವೇಗ ಪೂರಿತವೂ ಆದ ಗಮನ ಅವರಲ್ಲಿ ಕೇಂದ್ರೀಕೃತವಾಗಿತ್ತು.

ಸುಂದರನೂ ಯುವಕನೂ ಆದ ಚಕ್ರವರ್ತಿ ಅಲೆಕ್ಸಾಂಡರ್ ಕುದುರೆ ಕಾವಲು ಪಡೆಯ ಸಮವಸ್ತ್ರವನ್ನು ತೊಟ್ಟಿದ್ದನು. ಪೃಷ್ಠಾಗ್ರಭಾಗಗಳು ಎದ್ದಿದ್ದ ಫರಂಗಿ ಟೋಪಿಯನ್ನು ಓರೆಯಾಗಿ ಧರಿಸಿದ್ದನು. ಗಟ್ಟಿಯಾಗಿರದಿದ್ದರೂ, ಅನುರಣನ ಶೀಲದ ಅವನ ಧ್ವನಿ ಮತ್ತು ಆಹ್ಲಾದಕರ ವದನ ಪ್ರತಿಯೊಬ್ಬರ ಗಮನವನ್ನು ಆಕರ್ಷಿಸಿದ್ದುವು.

ರೊಸ್ತೋವ್ ಕಹಳೆಯವರಿಗೆ ತೀರ ಹತ್ತಿರದಲ್ಲಿದ್ದನು. ಅವನ ಹರಿತ ನೋಟ ತ್ಸಾರ್‌ನನ್ನು ಗುರುತಿಸಿತಲ್ಲದೆ, ಅವನ ಸಾರುವಿಕೆಗಾಗಿ ಹಾತೊರೆದಿತ್ತು. ಅವನು ಇಪ್ಪತ್ತು ಹೆಜ್ಜೆ ದೂರದಲ್ಲಿರುವಾಗಲೇ ನಿಕೊಲಾಸ್ ಅವನ ಚಾರುತರ ಪ್ರಮುದಿತ ತರುಣ ವದನದ ಪ್ರತಿಯೊಂದು ವಿವರವನ್ನು ಸ್ಪಷ್ಟವಾಗಿ ಗುರುತಿಸಿದನು. ತನಗೆಂದೂ ಗೊತ್ತಿರದ ಆನಂದೋನ್ಮಾದವೂ ಅನುರಾಗವೂ ಅವನ ಮನಸ್ಸನ್ನೆಲ್ಲ ವ್ಯಾಪಿಸಿಕೊಂಡುವು. ಚಕ್ರವರ್ತಿಯ ಪ್ರತಿಯೊಂದು ಲಕ್ಷಣವೂ ಪ್ರತಿಯೊಂದು ಚಲನೆಯೂ ಅವನಿಗೆ ಮೋಹಕವಾಗಿ ತೋರುತ್ತಿದ್ದುವು.

ಪಾವ್‌ಲೊಗ್ರಾಡ್ ತುಕಡಿಯ ಮುಂದೆ ನಿಂತುಕೊಂಡು, ಆಸ್ಟ್ರಿಯಾ ಚಕ್ರವರ್ತಿಯೊಡನೆ ಫ್ರೆಂಚ್‌ಭಾಷೆಯಲ್ಲಿ ತ್ಸಾರ್ ಏನನ್ನೊ ಉಸುರಿ, ಮುಗುಳುನಗೆ ಸೂಸಿದನು.

ಆ ಮುಗುಳುನಗೆಯನ್ನು ಗಮನಿಸಿದ ರೊಸ್ತೋವ್ ಅನೈಚ್ಛಿಕವೆಂಬಂತೆ ಮಂದಹಾಸ ಬೀರಿದನು; ತನ್ನ ಚಕ್ರವರ್ತಿಯ ಮೇಲಣ ಪ್ರೇಮ ಪ್ರವಾಹವಾಗಿ ಅವನ ಧಮನಿಧಮನಿಗಳಲ್ಲಿ ಸಂಚರಿಸಿತು. ಯಾವುದಾದರೂ ಬಗೆಯಲ್ಲಿ ಆ ಪ್ರೇಮವನ್ನು ಪ್ರಕಟ

ಬೇಕೆಂದು ಅವನು ಹಂಬಲಿಸಿದನು. ಅದು ಅಸಾಧ್ಯವೆಂದರಿತ ಅವನು ಗೋಳ್ಗರೆಯು ಲೆಂಬಂತೆ ಭಾವಾವಿಷ್ಟನಾದನು. ತ್ಸಾರ್ ಆ ದಳದ ಕರ್ನಲ್ಲನ್ನು ಕರೆದು, ಕೆಲವು ಮಾತು ಗಳನ್ನು ಸೊಲ್ಲಿಸಿದನು.

'ಅಯ್ಯೋ ದೇವರೆ, ಚಕ್ರವರ್ತಿ ನನ್ನನ್ನು ಮಾತಾಡಿಸಿದರೆ ನನ್ನಗತಿ ಏನಾಗ ಬಹುದು? ಸುಖೋನ್ಮಾದದಿಂದ ನಾನು ಸತ್ತುಬಿಡಬಹುದು!' ಎಂದು ರೊಸ್ತೋವ್ ಮನಸ್ಸಿನಲ್ಲಿಯೇ ಅಂದುಕೊಂಡನು.

ತ್ಸಾರ್ ಅಧಿಕಾರಿಗಳನ್ನು ಸಂಬೋಧಿಸಿ ಎರಡು ನುಡಿ ಆಡಿದನು. 'ಬಂಧುಗಳೆ, ನಿಮ್ಮೆಲ್ಲರಿಗೂ ನನ್ನ ಧನ್ಯವಾದಗಳು! ನಿಮ್ಮನ್ನು ನಾನು ಹೃತ್ಪೂರ್ವಕವಾಗಿ ವಂದಿಸು ತ್ತೇನೆ' ರೊಸ್ತೋವ್‌ನ ಪಾಲಿಗೆ ಒಂದೊಂದು ಪದವೂ ದೇವವಾಣಿಯಾಗಿತ್ತು. ತ್ಸಾರನಿಗಾಗಿ ಆ ಕೂಡಲೇ ಸಂತೋಷವಾಗಿ ಮರಣವನ್ನಪ್ಪಲು ಸಹ ಅವನು ಸಿದ್ಧ ವಾಗಿದ್ದನು!

'ನೀವು ಸಂತ ಜಾರ್ಜ್ ಲಾಂಛನಗಳನ್ನು ಪಡೆದುಕೊಂಡಿದ್ದೀರಿ. ಆ ಗೌರವವನ್ನು ಉಳಿಸಿಕೊಳ್ಳುತ್ತೀರೆಂದು ನಂಬಿದ್ದೇನೆ.'

'ಓ ಅವರಿಗಾಗಿ ಸಾಯುವುದೆ? ಸಾಯೋಣ!' ಎಂದು ರೊಸ್ತೋವ್‌ನ ತಲೆಯ ಲ್ಲೊಂದು ಆಲೋಚನೆ ಮಿಂಚಿತು.

ತ್ಸಾರ್ ಮತ್ತೇನೊ ನುಡಿದ. ರೊಸ್ತೋವ್‌ನಿಗದು ಕೇಳಿಸಲಿಲ್ಲ. ಉಸಿರಿಗೆ ಆಯಾಸವಾಗುವವರೆಗೆ ಸೈನಿಕರು 'ಉಘೇ' ಘೋಷಿಸಿದರು.

ತನ್ನ ಪೂರ್ಣಪರಮಾನಂದವನ್ನು ವ್ಯಕ್ತಪಡಿಸಬೇಕಾಗಿದ್ದರೆ, ಕ್ಲೇಶವಾದರೂ ಸರಿಯೆ ಎಂಬ ಆಸೆಯಿಂದ ರೊಸ್ತೋವ್ ಸಹ ಕಾಟರದ ಮೇಲೆ ಬಾಗಿ, ತನ್ನ ಶಕ್ತಿಯನ್ನೆಲ್ಲ ಒಗ್ಗೂಡಿಸಿಕೊಂಡು ಉದ್ಘೋಷಿಸಿದನು.

ಅನಿಶ್ಚಿತ ಸ್ಥಿತಿಯಲ್ಲೆಂಬಂತೆ ತ್ಸಾರ್ ಅಶ್ವದಳದ ಮುಂದೆ ಕೆಲವು ಕ್ಷಣ ನಿಂತನು.

'ಚಕ್ರವರ್ತಿ ಅನಿಶ್ಚಯಸ್ಥಿತಿಯಲ್ಲಿರುವುದು ಸಾಧ್ಯವೆ?' ಎಂದು ರೊಸ್ತೋವ್ ಯೋಚಿಸಿದನು. ಆ ಅನಿಶ್ಚಯತೆಯೂ ಅವನಿಗೆ ಗಂಭೀರವಾಗಿಯೂ ಮನಮೋಹಕ ವಾಗಿಯೂ ತೋರಿತು. ತ್ಸಾರ್ ಏನು ಮಾಡಿದರೂ ಅದರಲ್ಲೊಂದು ವಿಶೇಷ ಕಾಣುತ್ತಿತ್ತು.

ಆ ಸಂದೇಹವಿದ್ದದ್ದೂ ಕೇವಲ ಕೆಲವು ಕ್ಷಣ ಮಾತ್ರ. 'ಚೂಪು ಮೊನೆಯ ಬೂಟುಗಳುಳ್ಳ, ತ್ಸಾರ್‌ನ ಪಾದ ತಾನು ಸವಾರಿಸುತ್ತಿದ್ದ ಮೋಟು ಬಾಲದ ಪಿಂಗಲ ವರ್ಣದ ಕುದುರೆಯ ತೊಡೆಸಂದಿಯನ್ನು ಸ್ಪರ್ಶಿಸಿತು. ಬಿಳಿಯ ಕೈಗೌಸನ್ನು ತೊಟ್ಟಿದ್ದ ಅವನ ಕೈ ಲಗಾಮನ್ನು ಹಿಡಿದೆಳೆಯಿತು. ಕ್ರಮವಿಹೀನವಾಗಿ ತೊನೆದಾಡುತ್ತಿದ್ದ ಅಂಗರಕ್ಷಕ ದಳದೊಡನೆ ಅವನು ಮುಂದೆ ಹೋದನು. ಇತರ ದಳಗಳನ್ನು ಪರಿವೀಕ್ಷಿ ಸುತ್ತ ಅವನು ದೂರ ದೂರ ಸರಿದನು. ಚಕ್ರವರ್ತಿಗಳನ್ನು ಸುತ್ತುವರಿದಿದ್ದ ಪರಿವಾರ ಗಳ ನಡುವೆ ರೊಸ್ತೋವ್‌ಗೆ ಅವನ ಟೋಪಿಯ ಬಿಳಿಯಗರಿಗಳು ಮಾತ್ರ ಕಾಣಿಸುತ್ತಿ ದ್ದುವು.

ಪರಿವಾರದ ಪೈಕಿ ರೊಸ್ತೋವ್ ಗುರುತಿಸಿದ ವ್ಯಕ್ತಿಗಳಲ್ಲಿ ಬಲ್ಕೋನ್‌ಸ್ಕಿಯೂ ಒಬ್ಬ. ಬಲ್ಕೋನ್‌ಸ್ಕಿ ತನ್ನ ಕುದುರೆಯಮೇಲೆ ನಿರ್ಲಕ್ಷ್ಯವಾಗಿ ಸೋಮಾರಿಯಂತೆ

ಕುಳಿತಿದ್ದನು. ಹಿಂದಿನ ದಿನದ ತಮ್ಮ ಕಲಹ ರೊಸ್ತೋವ್‌ಗೆ ನೆನಪಾಯಿತು. ಅವನ ಮೇಲೆ ವಿಾಸೆ ಹುರಿಮಾಡುವುದೇ ಬೇಡವೇ ಎಂಬ ಪ್ರಶ್ನೆ ರೊಸ್ತೋವ್‌ನ ತಲೆಯನ್ನು ಹೊಕ್ಕಿತು. 'ನಿಜಕ್ಕೂ ಕೂಡದು!' ಎಂದವನೀಗ ಯೋಚಿಸಿದನು. 'ಅಂಥ ಸಂದರ್ಭದಲ್ಲಿ ಅದರ ಬಗ್ಗೆ ಯೋಚಿಸುವುದಾಗಲಿ, ಮಾತಾಡುವುದಾಗಲಿ ತರವೆ? ಅಂಥ ಪ್ರೇಮದ ಸನ್ನಿವೇಶದಲ್ಲಿ, ಆನಂದದ ಮತ್ತು ಆತ್ಮತ್ಯಾಗದ ಸಮಯದಲ್ಲಿ ನಂನಮ್ಮ ಕಲಹಾವಮಾನಗಳು ಎಷ್ಟರವು? ನಾನೀಗ ಪ್ರತಿಯೊಬ್ಬರನ್ನು ಕ್ಷಮಿಸಿ, ಪ್ರೀತಿಸುತ್ತೇನೆ.'

ಚಕ್ರವರ್ತಿ ಎಲ್ಲ ಪಡೆಗಳನ್ನು ದಾಟಿದನಂತರ, ಅವನ ಸಮ್ಮುಖದಲ್ಲಿ ಸೈನ್ಯದ ಸಾಂಪ್ರದಾಯಿಕ ಕವಾಯಿತು ಜರುಗಿತು. ರೊಸ್ತೋವ್ ತನ್ನ ಅರಬ್ಬೀ ಟಾಕಣದ ಮೇಲೆ ಕುಳಿತು, ತನ್ನ ದಳದ ಹಿಂದೆ, ಒಂಟಿಯಾಗಿ, ಚಕ್ರವರ್ತಿಗೆ ಕಾಣುವಂತೆ ಕವಾಯಿತು ಪ್ರದರ್ಶಿಸಿದನು.

ಕುಶಲ ಸವಾರನಾದ ರೊಸ್ತೋವ್ ಚಕ್ರವರ್ತಿಯ ಸಮ್ಮುಖವನ್ನು ಸಾರುವ ಮುನ್ನ ಎರಡು ಸಾರಿ ತನ್ನ ಟಾಕಣವನ್ನು ತಿವಿದು, ಭಾವೋದ್ರೇಕಗೊಳಿಸಿ, ಕುಲುಕೋಟಕ್ಕೆ ಅಣಿಗೊಳಿಸಿದ್ದನು. ಚಕ್ರವರ್ತಿಯ ದೃಷ್ಟಿ ತನ್ನಮೇಲೆ ಬೀಳಬಹುದೆಂಬ ಅರಿವಿನಿಂದಲೇಬಂತೆ ಆ ಟಾಕಣ ನೊರೆತುಂಬಿದ ತನ್ನ ಮೂತಿಯನ್ನು ಎದೆತನಕ ಬಾಗಿಸಿ ಬಾಲವನ್ನು ನಿಗುರಿಸಿ, ನೆಲವನ್ನು ಮುಟ್ಟದೆ ಗಾಳಿಯಲ್ಲಿ ತೇಲುತ್ತಿರಬಹುದೆಂಬಂತೆ, ನಯ ನಾಜೂಕುಗಳಿಂದ ಎತ್ತರಕ್ಕೆ ತನ್ನ ಕಾಲುಗಳನ್ನೆತ್ತಿ, ಹೃದಯಂಗಮವಾಗಿ ಮುಂದೆ ಜಾರಿತು.

ಕಾಲುಗಳನ್ನು ಹಿಂದಕ್ಕೆ ಚಾಚಿ, ಹೊಟ್ಟೆಯನ್ನು ಒಳಗೆಳೆದುಕೊಂಡು, ಕುದುರೆಯೊಡನೆ ತಾದಾತ್ಮ್ಯಹೊಂದಿ, ಹುಬ್ಬುಜರ್ಬಿನಿಂದ, ಪರಮಾನಂದದಿಂದ ರೊಸ್ತೋವ್ ಚಕ್ರವರ್ತಿಯ ಮುಂದೆ ಸವಾರಿಸಿದನು.

'ಶಹಭಾಸ್, ಪಾವ್‌ಲೊಗ್ರಾಡ್ ಹುಡುಗರು ತುಂಬ ನಿಸ್ಸೀಮರು!' ಎಂದು ಚಕ್ರವರ್ತಿ ಉದ್ಗರಿಸಿದನು.

'ಅಯ್ಯೋ ದೇವರೆ, ಈ ಕ್ಷಣದಲ್ಲಿ ಬೆಂಕಿಗೆ ಹಾರಬೇಕೆಂದು ಚಕ್ರವರ್ತಿ ನನಗೆ ಆಜ್ಞಾಪಿಸಿದ್ದರೆ ನನಗೆಷ್ಟು ಆನಂದವಾಗುತ್ತಿತ್ತು!' ಎಂದು ರೊಸ್ತೋವ್ ಆಲೋಚಿಸಿದನು.

ಪರಿವೀಕ್ಷಣೆ ಮುಗಿದನಂತರ, ಹೊಸದಾಗಿ ಬಂದಿದ್ದ ಅಧಿಕಾರಿಗಳೂ ಕುತುಜೋವ್‌ನ ಅಧಿಕಾರಿಗಳೂ ಗುಂಪುಗುಂಪಾಗಿ ಸೇರಿ, ಪ್ರಶಸ್ತಿಗಳ ಬಗ್ಗೆ, ಆಸ್ಟ್ರಿಯಾದವರ ಬಗ್ಗೆ, ಅವರ ಸಮವಸ್ತ್ರದ ಬಗ್ಗೆ, ಅವರ ವ್ಯೂಹ ರಚನೆಯ ಬಗ್ಗೆ, ಬೋನಪಾರ್ಟೆಯ ಬಗ್ಗೆ ಮಾತಾಡತೊಡಗಿದರು. ಎಸೆನ್ ಸೈನ್ಯ ಆಗಮಿಸಿ, ಪ್ರಶ್ಯ ತಮ್ಮ ಕಡೆಗೆ ಸೇರಿಕೊಂಡದ್ದಾದರೆ, ಬೋನಪಾರ್ಟೆಯ ಬೇಳೆ ಬೇಯಲಾರದೆಂದೂ ಅವರು ತರ್ಕಿಸಿದರು.

ಆದರೆ ಪ್ರತಿಯೊಂದು ಗುಂಪಿನಲ್ಲಿಯೂ ಮಾತು ಮುಖ್ಯವಾಗಿ ಚಕ್ರವರ್ತಿ ಅಲೆಕ್ಸಾಂಡರನನ್ನು ಕುರಿತದ್ದಾಗಿತ್ತು. ಅವನ ಪ್ರತಿಯೊಂದು ನಡೆನುಡಿಗಳನ್ನು ಭಾವಪರವಶತೆಯಿಂದ ವರ್ಣಿಸಲಾಗಿತ್ತು.

ಚಕ್ರವರ್ತಿಯ ನೇತೃತ್ವದಲ್ಲಿ ಆದಷ್ಟು ಬೇಗ ಶತ್ರುವಿನಮೇಲೆ ಧಾಳಿ ಮಾಡ ಬೇಕೆಂಬುದೇ ಅವರೆಲ್ಲರ ಏಕಮಾತ್ರ ಹಂಬಲವಾಗಿತ್ತು. ಚಕ್ರವರ್ತಿಯೇ ಸೈನ್ಯವನ್ನು ನಡೆಸುವುದಾದರೆ, ಎಂಥ ಅಸಮಶೂರರನ್ನಾದರೂ ಜಯಿಸಬಹುದೆಂಬ ಭರವಸೆ ಅವರದು. ರೊಸ್ತೋವ್ ಮತ್ತು ಇತರ ಅಧಿಕಾರಿಗಳು ಸಹ ಅದೇರೀತಿ ನೆನೆದು ಕೊಂಡರು.

ಎರಡು ಯುದ್ಧಗಳಲ್ಲಿ ಗೆದ್ದಿದ್ದರೆ ಎಷ್ಟು ಆತ್ಮವಿಶ್ವಾಸ ಮೂಡುತ್ತಿತ್ತೋ! ಅದಕ್ಕಿಂತ ಮಿಗಿಲಾದ ಭರವಸೆ ಅವರಲ್ಲಿ ಮೂಡಿತ್ತು.

ಅಧ್ಯಾಯ ೯

ಪರಿಶೀಲನೆ ಮುಗಿದ ಮಾರನೆಯ ದಿನವೆ ಬೋರಿಸ್ ಅತ್ಯುತ್ತಮ ಸಮವಸ್ತ್ರ ವನ್ನು ಧರಿಸಿ, ಗೆಳೆಯ ಬರ್ಗ್‌ನ ಶುಭಾಶಯಗಳೊಡನೆ ಬಲ್ಕೊನ್‌ಸ್ಕಿಯನ್ನು ನೋಡುವ ಸಲುವಾಗಿ ಆಲ್‌ಮೂತ್ಸ್‌ಗೆ ಸವಾರಿಸಿದನು. ಅವನ ಸ್ನೇಹದ ಲಾಭವನ್ನು ಬಳಸಿ ಕೊಂಡು, ಉತ್ತಮ ಹುದ್ದೆಯನ್ನು ಪಡೆಯುವುದೇ ಬೋರಿಸ್‌ನ ಉದ್ದೇಶವಾಗಿತ್ತು. ಪ್ರಮುಖ ವ್ಯಕ್ತಿಯ ಸಹಾಯಾಧಿಕಾರಸ್ಥಾನ ಸೈನ್ಯದಲ್ಲಿಯೇ ಅತ್ಯಂತ ಆಕರ್ಷಣೀಯ ವಾದದ್ದೆಂದು ಅವನು ಬಗೆದಿದ್ದನು. 'ತನ್ನ ತಂದೆ ಒಂದೊಂದು ಸಲ ಹತ್ತು ಸಾವಿರ ರೂಬಲ್‌ಗಳನ್ನು ಕಳಿಸುವುದರಿಂದ, ಮತ್ತೊಬ್ಬರ ಅಡಿಯಾಳಾಗುವುದಿಲ್ಲವೆಂದು, ಇನ್ನೊಬ್ಬರ ಮುಂದೆ ಹಲ್ಲುಗಿಂಜುವುದಿಲ್ಲವೆಂದು ಮಾತಾಡುವುದು ರೊಸ್ತೋವ್‌ನಂಥ ವರಿಗೆ ಮಾತ್ರ ಸಾಧ್ಯ. ಆದರೆ ನಾನು ರಿಕ್ತಹಸ್ತ; ತಲೆ ಮಾತ್ರ ಇದೆ. ನನ್ನ ಪುರೋಭಿ ವೃದ್ಧಿಯ ಮಾರ್ಗವನ್ನು ನಾನೇ ಕಂಡುಕೊಳ್ಳಬೇಕಾಗಿದೆ. ಸಿಕ್ಕಿದ ಯಾವೊಂದು ಅವಕಾಶವನ್ನೂ ಕಳೆದುಕೊಳ್ಳಕೂಡದು' ಎಂದವನು ತನ್ನೊಳಗೆ ವಾದಿಸಿದನು.

ಆ ದಿನ ಅವನು ರಾಜಕುಮಾರ ಆಂಡ್ರೂನನ್ನು ಆಲ್‌ಮೂತ್ಸ್‌ನಲ್ಲಿ ಭೇಟಿ ಮಾಡಲು ಸಾಧ್ಯವಾಗಲಿಲ್ಲ. ಸರ್ವಕಾರ್ಯಕೇಂದ್ರವಾಗಿ, ರಾಯಭಾರಿ ದಳಗಳ ನಿವಾಸಸ್ಥಾನವಾಗಿ, ತಮ್ಮ ಪರಿವಾರಗಳೊಂದಿಗೆ, ಕುಟುಂಬಗಳೊಂದಿಗೆ, ಆಸ್ಥಾನಿಕ ರೊಂದಿಗೆ ಇಬ್ಬರು ಚಕ್ರವರ್ತಿಗಳೂ ನೆಲೆಗೊಂಡಿದ್ದ ಆ ನಗರದ ವೈಭವವನ್ನು ನೋಡಿ ದಾಗ, ಆ ಸ್ವರ್ಗಲೋಕದಲ್ಲಿರುವ ಹಂಬಲ ತೀವ್ರವಾಗುತ್ತಿತ್ತು.

ಅವನನ್ನು ಬಲ್ಲವರು ಯಾರೂ ಅಲ್ಲಿರಲಿಲ್ಲ. ಅವನು ಠಿಕಾವಾದ ಕಾವಲು ಪಡೆಯ ಸಮವಸ್ತ್ರವನ್ನು ಧರಿಸಿದ್ದರೂ, ಗರಿತುರಾಯಿ, ಬಿರುದುಪಟ್ಟಿ ಮತ್ತು ಬಹು ಮಾನಗಳಿಂದ ಭೂಷಿತರಾದ ಸ್ಥಾನಿಕರು ಮತ್ತು ಸೈನಿಕರು, ಸುಂದರ ರಥಗಳಲ್ಲಿ ಕುಳಿತು ಬೀದಿಗಳಲ್ಲಿ ಸಾಗುತ್ತಿದ್ದ ಆ ಮಹಾವ್ಯಕ್ತಿಗಳು ಅವನಿಗೆ ಆಕಾಶ ಪ್ರಮಾಣರೆಂಬಂತೆ ಕಾಣುತ್ತಿದ್ದರು. ತಾನೊಬ್ಬ ಕಾವಲುಪಡೆಯ ಯಃಕಶ್ಚಿತ್ ವ್ಯಕ್ತಿಯಾದದ್ದರಿಂದ, ಅವರು ತನಗೆ ನಮಸ್ಕಾರ ಮಾಡುವುದಿರಲಿ, ತನ್ನ ಅಸ್ತಿತ್ವವನ್ನು ಸಹ ಗಮನಿಸುತ್ತಿರ ಲಿಲ್ಲ. ಮಹಾ ದಂಡನಾಯಕ ಕುತುಜೋವ್‌ನ ವಸತಿಗೃಹದಲ್ಲಿ ಬಲ್ಕೊನ್‌ಸ್ಕಿಯ ಬಗ್ಗೆ ಅವನು ವಿಚಾರಿಸಿದನು. ಅವನಂಥ ಹಲವು ಅಧಿಕಾರಿಗಳು ನಿರಂತರವಾಗಿ ತಮ್ಮಲ್ಲಿಗೆ ಬರುತ್ತಿದ್ದು, ಅವರ ಬಗ್ಗೆ ಅಲ್ಲಿಯ ಎಲ್ಲರಿಗೂ ಬೇಸರವಾಗಿತ್ತೆಂಬ ಭಾವನೆ

ಯನ್ನು ಮೂಡಿಸಲೆಂಬಂತೆ ಸಹಾಯಾಧಿಕಾರಿಗಳು ಮಾತ್ರವಲ್ಲ, ಸೇವಕರು ಸಹ ಅವನ ಕಡೆಗೆ ತಾತ್ಸಾರದಿಂದ ನೋಡುತ್ತಿದ್ದರು. ಆದರೂ ಅವನು ಮಾರನೆಯದಿನ, ಅಂದರೆ ನವಂಬರ್ ಹದಿನೈದರಂದು ರಾತ್ರಿಯೂಟದ ನಂತರ ಮತ್ತೆ ಆಲ್ ಮೂತ್ಸ್‌ಗೆ ಹೋದನು. ಕುತುಜೋವ್‌ನ ಮನೆಯೊಳಗೆ ಜುಣುಗಿ, ಅವನು ಬಲ್ಕೋನ್‌ಸ್ಕಿಯನ್ನು ವಿಚಾರಿಸಿದನು. ಅವನಿಗೆ ವಿಶಾಲಾಂಗಣವನ್ನು ತೋರಿಸಲಾಯಿತು. ಪ್ರಾಯಶಃ ಅದನ್ನು ಹಿಂದೆ ನೃತ್ಯಪ್ರದರ್ಶನಕ್ಕೆ ಬಳಸುತ್ತಿದ್ದರೆಂದು ತೋರುತ್ತದೆ. ಅದರಲ್ಲೀಗ ಐದು ಮಂಚಗಳಿದ್ದುವು. ಜತೆಗೆ ಮೇಜು ಕುರ್ಚಿ ಮತ್ತು ತಂತಿವಾದ್ಯವೇ ಮೊದಲಾದ ಹಲವು ಬಗೆಯ ಸಾಮಾನುಗಳಿದ್ದುವು. ಬಾಗಿಲ ಬಳಿಯಿದ್ದ ಪರ್ಶಿಯನ್ ಮೇಲಂಗಿ ಧರಿಸಿದ್ದ ಸಹಾಯಾಧಿಕಾರಿ ಮೇಜಿನ ಮುಂದೆ ಕುಳಿತು ಬರಹದಲ್ಲಿ ಮಗ್ನನಾಗಿದ್ದನು. ರಕ್ತವರ್ಣದ ಬಲಿಷ್ಠ ನೆಸ್‌ವೀತ್‌ಸ್ಕಿ ತನ್ನ ಪಕ್ಕದಲ್ಲಿ ಕುಳಿತಿದ್ದ ಅಧಿಕಾರಿಯೊಡನೆ ಗಹಗಹಿಸುತ್ತ, ತನ್ನ ತೋಳೆ ತಲೆದಿಂಬಾಗಿರಲು ಮಂಚದ ಮೇಲೆ ಮಲಗಿದ್ದ. ಮೂರನೆಯವನು ತಂತಿವಾದ್ಯದಲ್ಲಿ ವಿಯನ್ನಾವಾಲ್ಸ್ (ಭ್ರಮಣ ನೃತ್ಯ) ಸಂಗೀತವನ್ನು ನುಡಿಸುತ್ತಿದ್ದನು. ನಾಲ್ಕನೆಯವನು ಅದನ್ನೇ ರಾಗವಾಗಿ ಹಾಡುತ್ತಿದ್ದನು. ಬಲ್ಕೋನ್‌ಸ್ಕಿ ಅಲ್ಲಿರಲಿಲ್ಲ. ಬೋರಿಸ್‌ನನ್ನು ಕಂಡಾಗ ಅವರಲ್ಲೊಬ್ಬರೂ ಕದಲಲಿಲ್ಲ. ಬರೆಯುತ್ತಿದ್ದವನನ್ನು ಮಾತಾಡಿಸಿದಾಗ, ಅವನು ಕೋಪದಿಂದ ಬೋರಿಸ್‌ನ ಕಡೆ ತಿರುಗಿ, ಬಲ್ಕೋನ್‌ಸ್ಕಿ ಕೆಲಸದಮೇಲಿದ್ದನೆಂದೂ, ಅವನನ್ನು ಕಾಣಬೇಕಾದರೆ ಎಡಬಾಗಿಲಿನ ಮೂಲಕ ಸ್ವಾಗತಗೃಹಕ್ಕೆ ಹೋಗಬೇಕೆಂದೂ ಅವನನ್ನು ನಿವಾರಿಸಿದನು. ಬೋರಿಸ್ ಅವನನ್ನು ವಂದಿಸಿ, ಸ್ವಾಗತಗೃಹದೊಳಗೆ ಹೋದಾಗ, ಅಲ್ಲಿ ಸುಮಾರು ಹತ್ತುಮಂದಿ ಅಧಿಕಾರಿಗಳೂ ಸೇನಾಧಿಪತಿಗಳೂ ಕಣ್ಣಿಗೆ ಬಿದ್ದರು.

ಅವನು ಪ್ರವೇಶಿಸಿದಾಗ, ಅವಜ್ಞೆಯಿಂದ ಅಧೋವದನನಾಗಿದ್ದ (ನನ್ನ ಕರ್ತವ್ಯವಾಗದಿದ್ದರೆ ನಾನೊಂದು ಕ್ಷಣವೂ ನಿನ್ನೊಂದಿಗೆ ಮಾತಾಡುತ್ತಿಲಿಲ್ಲ ಎಂಬ ಸವಿನಯ ಖೇದದ ವಿಲಕ್ಷಣ ಪ್ರವೃತ್ತಿಯನ್ನು ಸ್ಪಷ್ಟವಾಗಿ ಅಭಿವ್ಯಕ್ತಿಸುವಂತಿದ್ದ) ರಾಜಕುಮಾರ ಆಂಡ್ರೂ ಅನೇಕ ಪದಕಗಳಿಂದ ಅಲಂಕೃತನಾಗಿದ್ದ ಹಿರಿಯ ರಷ್ಯನ್ ಸೇನಾಪತಿಯ ಮಾತುಗಳನ್ನು ಆಲಿಸುತ್ತಿದ್ದನು. ಮೆಟ್ಟುಗಾಲಿನಲ್ಲಿ ನೆಟ್ಟಗೆ ನಿಂತು ಏನನ್ನೋ ವರದಿ ಮಾಡುತ್ತಿದ್ದ ಅವನ ಕೆಂಪು ಮೋರೆಯಲ್ಲಿ ಸೈನಿಕ ಸಹಜವಾದ ವಿಧೇಯ ಮನೋಧರ್ಮ ಅಭಿವ್ಯಕ್ತಗೊಂಡಿತ್ತು.

'ಹಾಗಾದರೆ ದಯೆಯಿಟ್ಟು ಕಾಯಿರಿ' ಎಂದು ರಾಜಕುಮಾರ ಆಂಡ್ರೂ ರಷ್ಯನ್ ಭಾಷೆಯಲ್ಲಿ ಸೇನಾಪತಿಯೊಡನೆ ನುಡಿದನು. ತಾತ್ಸಾರವಾಗಿ ಮಾತಾಡುವಾಗ ಅವನ ರಷ್ಯನ್ ಭಾಷೆ ಫ್ರೆಂಚ್ ಭಾಷೆಯ ಗತ್ತನ್ನನುಸರಿಸುತ್ತಿತ್ತು. ಬೋರಿಸ್ ಕಣ್ಣಿಗೆ ಬಿದ್ದ ಕೂಡಲೇ, ತನ್ನ ಮಾತಿಗೆ ಕಿವಿಗೊಡುವಂತೆ ಯಾಚಿಸುತ್ತ ತನ್ನನ್ನೇ ಹಿಂಬಾಲಿಸುತ್ತಿದ್ದ ಸೇನಾಪತಿಯನ್ನು ಲಕ್ಷಿಸದೆ, ಆಂಡ್ರೂ ತಲೆ ಕುಣಿಸುತ್ತ, ಉತ್ಸಾಹದ ಮುಗುಳುನಗೆಯೊಡನೆ ತನ್ನ ಗೆಳೆಯನತ್ತ ತಿರುಗಿದನು.

ಸೈನಿಕ ನ್ಯಾಯಸೂತ್ರಗಳಲ್ಲಿ ತಾಬೆದಾರಿಕೆಯ ಮತ್ತು ಶಿಸ್ತಿನ ನಿಯಮಗಳನ್ನು ವಿಧಿಸಿರುವುದುಂಟಷ್ಟೆ. ಬೋರಿಸ್ ಮೊದಲುಗೊಂಡು ಪ್ರತಿಯೊಬ್ಬ ಸೈನಿಕನಿಗೂ ಆ

ಗೊತ್ತಿದ್ದುವು. ಸ್ವಂತ ವಿನೋದಕ್ಕಾಗಿ ಲೆಫ್ಟಿನೆಂಟ್ ದ್ರುಬೆತ್‌ಸ್ಕಾಯ್ ಜತೆ ಆಂಡ್ರೂ ಹರಟೆ ಹೊಡೆಯುತ್ತಿದ್ದಾಗ, ಕೆಂಪು ಮೂತಿಯ ಸೇನಾಪತಿ ಕಾದುಕೊಂಡಿದ್ದ ವಿಧೇಯತೆಯ ಭಂಗಿಯಲ್ಲಿ, ಅವುಗಳ ಜತೆಗೆ ತಾನು ಮೊದಲೇ ಊಹಿಸಿಕೊಂಡಿದ್ದ ವಿಶೇಷ ರೀತಿಯ ಪರಾಧೀನ ಮನೋಭಾವವೂ ಅತ್ಯವಶ್ಯವೆಂಬುದನ್ನು ಬೋರಿಸ್ ಆ ಕ್ಷಣದಲ್ಲಿ ಗ್ರಹಿಸಿಕೊಂಡನು. ಲಿಖಿತ ಶಾಸನಕ್ಕನುಸಾರವಾಗಿಯಲ್ಲದೆ, ಅಲಿಖಿತ ಕಾನೂನಿಗನುಗುಣವಾಗಿಯೂ ಇನ್ನು ಮುಂದೆ ತಾನು ಸೇವೆ ಸಲ್ಲಿಸುವುದಾಗಿ ಅವನು ನಿರ್ಧರಿಸಿಕೊಂಡನು. ಮುಂಚೂಣಿಯಲ್ಲಿರುವಾಗ ತನ್ನಂಥ ಲೆಫ್ಟಿನೆಂಟನನ್ನು ಬೇಕಾದರೆ ಆ ಸೇನಾಪತಿ ನಿರ್ನಾಮ ಮಾಡಬಹುದಿತ್ತು. ರಾಜಕುಮಾರ ಆಂಡ್ರೂವಿನ ಅನುಗ್ರಹಕ್ಕೆ ಪಾತ್ರನಾಗಿರುವಾಗ ತಾನು ಆ ಸೇನಾಪತಿಗಿಂತ ಎತ್ತರದ ಸ್ಥಾನದಲ್ಲಿದ್ದುದಾಗಿ ಭಾವಿಸಿಕೊಂಡನು. ಆಂಡ್ರೂ ಅವನ ಬಳಿ ಸಾರಿ, ಕೈಕುಲುಕಿದನು. 'ನಿನ್ನೆ ನಾನು ನಿಮಗೆ ಸಿಗದಿದ್ದುದರಿಂದ ತುಂಬ ವ್ಯಥೆಯಾಗಿದೆ. ನಿನ್ನೆಯೆಲ್ಲ ಜರ್ಮನರೊಡನೆ ಗಡಿಬಿಡಿಯಲ್ಲಿದ್ದೆ. ವ್ಯೂಹಗಳ ಸಮೀಕ್ಷೆಗಾಗಿ ವೇರಾದರ್ ಜತೆ ನಾವು ಹೋಗಿದ್ದೆವು. ಜರ್ಮನರು ನಿಶ್ಯಕ್ತರಾಗಿರಲು ಪ್ರಯತ್ನಿಸಿದರೆ, ಅದಕ್ಕೆ ಕೊನೆಮೊದಲೇ ಇಲ್ಲ.'

ರಾಜಕುಮಾರ ಆಂಡ್ರೂ ಪ್ರಸ್ತಾಪಿಸಿದ ಸಂಗತಿ ಸರ್ವೇಸಾಮಾನ್ಯವಾಗಿ ಎಲ್ಲರಿಗೂ ಗೊತ್ತಿದ್ದ ವಿಷಯವೆಂದು ಭಾವಿಸಿದ ಬೋರಿಸ್ ನಸುನಕ್ಕನು. ಆದರೆ ವೇರಾದರನ ಹೆಸರನ್ನಾಗಲೀ, ವ್ಯೂಹರಚನೆ ಎಂಬ ಮಾತನ್ನಾಗಲೀ ಅವನು ಕೇಳಿದ್ದು ಅದೇ ಮೊದಲು.

'ಏನಯ್ಯ ಮಿತ್ರ, ಸಹಾಯಾಧಿಕಾರಿಯಾಗಬೇಕೆನ್ನುವ ಅಪೇಕ್ಷೆ ಈಗಲೂ ನಿನಗಿದೆಯೆ? ನಾನು ನಿನ್ನ ವಿಷಯವನ್ನು ಮರೆತಿಲ್ಲ.'

'ಅದು ಸರಿ–ಏನು ಕಾರಣಕ್ಕೋ ಬೋರಿಸ್‌ನ ಮುಖ ವಿವರ್ಣವಾಯಿತು– ಮಹಾ ದಂಡಾಧಿಕಾರಿಗಳನ್ನೇ ಆ ಬಗ್ಗೆ ವಿಚಾರಿಸಬೇಕೆಂದಿದ್ದೆ. ನನ್ನ ವಿಚಾರವಾಗಿ ರಾಜಕುಮಾರ ಕುರಾಗಿನ್‌ರಿಂದ ಅವರಿಗೊಂದು ಪತ್ರ ಬಂದಿದೆ. ಕಾವಲುಪಡೆಯವರು ಕಾರ್ಯಾಚರಣೆಯಲ್ಲಿ ತೊಡಗಿರುವುದಿಲ್ಲವಾದ್ದರಿಂದ ನಾನು ಕೇಳಬೇಕೆಂದುಕೊಂಡೆ' ಎಂದವನು ಕ್ಷಮೆ ಯಾಚಿಸುವವನಂತೆ ನುಡಿದನು.

'ಸರಿ, ಸರಿ. ಆ ಬಗ್ಗೆ ಮಾತಾಡೋಣ. ಈ ವ್ಯಕ್ತಿಯ ವ್ಯವಹಾರದ ಬಗ್ಗೆ ವರದಿ ಒಪ್ಪಿಸಿದ ನಂತರ, ನಿಮ್ಮ ವಿಷಯುವನ್ನೆತ್ತಿಕೊಳ್ಳುತ್ತೇನೆ' ಎಂದು ರಾಜಕುಮಾರ ಆಂಡ್ರೂ ಉತ್ತರಿಸಿದನು.

ಕೆಂಪು ಮೂತಿಯ ಸೇನಾಪತಿಯ ವಿಷಯ ಮಾತಾಡಲು ರಾಜಕುಮಾರ ಆಂಡ್ರೂ ಅತ್ತ ಹೋದನು. ಇತ್ತ ಸಹಾಯಾಧಿಕಾರಿಯೊಡನೆ ತನ್ನ ಮಾತು ಮುಗಿಯದಿದ್ದರೂ, ಮಧ್ಯೆ ಪ್ರವೇಶಿಸಿದ ಬೋರಿಸ್‌ನ ಧಾರ್ಷ್ಟ್ಯವನ್ನು ಸಹಿಸದ ಸೇನಾಪತಿ ಅವನನ್ನೆ ದುರುಗುಟ್ಟಿಕೊಂಡು ನೋಡುತ್ತಿದ್ದನು. ವಿಧೇಯತೆಗೆ ಸಂಬಂಧಿಸಿದ ಅಲಿಖಿತ ಕಾನೂನಿನ ಅನುಕೂಲಗಳ ಬಗೆಗಿನ ತನ್ನ ಅಭಿಪ್ರಾಯ ಸೇನಾಪತಿಗೆ ಹಿಡಿಸಲಿಲ್ಲವೆಂಬುದೂ ಬೋರಿಸ್‌ಗೆ ಗೊತ್ತಾಗಲಾಗಿ, ಅವನ ಮನಸ್ಸಿಗೆ ಇರಿಸುಮುರಿಸಾಯಿತು. ಅವನು ಅಲ್ಲಿಂದ ದೂರ ಸರಿದು, ಆಂಡ್ರೂವಿಗಾಗಿ ಅಸಹನೆಯಿಂದ ಕಾಯುತ್ತಿದ್ದನು.

ಆಂಡ್ರೂ ಹಿಂದಿರುಗಿದ ನಂತರ ಅವರು ತಂತಿವಾದ್ಯ ಸಂಗೀತ ಜರುಗುತ್ತಿದ್ದ ವಿಶಾಲಾಂಗಣಕ್ಕೆ ಸರಿದರು. 'ನೋಡಯ್ಯ ಮಿತ್ರ, ನಿನ್ನ ವಿಷಯವೇ ನನ್ನ ತಲೆಯಲ್ಲಿ ತುಂಬಿಕೊಂಡಿದೆ. ನೀನು ಮಹಾ ದಂಡನಾಯಕರನ್ನು ನೋಡಿದರೆ ಪ್ರಯೋಜನ ವಾಗುವುದಿಲ್ಲ. ಅವರು ಸವಿಸವಿಯಾಗಿ ಮಾತಾಡುತ್ತಾರೆ. ಭೋಜನಕ್ಕೂ ನಿನ್ನನ್ನು ಕರೆಯುತ್ತಾರೆ. ('ಅಲಿಖಿತ ಕಾನೂನಿನ ಮಟ್ಟಿಗೆ ಅದು ಸರಿಯೇ ಸರಿ' ಎಂದು ಬೋರಿಸ್ ಯೋಚಿಸಿದ.) ಆದರೆ ಅದರಿಂದ ಏನೂ ಲಾಭವಾಗುವುದಿಲ್ಲ, ಬಹು ಬೇಗ ನಮ್ಮಂಥ ಅಂಗರಕ್ಷಕರ ಮತ್ತು ಸಹಾಯಾಧಿಕಾರಿಗಳ ಒಂದು ಪಡೆಯೇ ನಿರ್ಮಾಣ ಗೊಳ್ಳುತ್ತದೆ. ಈಗ ನಾವೇನು ಮಾಡಬೇಕು, ಗೊತ್ತೆ? ಕಚೇರಿಯ ಮೇಲಧಿಕಾರಿ ಯೊಬ್ಬನಿದ್ದಾನೆ. ಅವನ ಹೆಸರು ರಾಜಕುಮಾರ ಡೊಲ್ಗೊರೂಕೊವ್. ತುಂಬ ಒಳ್ಳೆಯವ. ಈಗ ಕುತುಜೋವ್‌ನಾಗಲಿ, ಅವರ ಸಿಬ್ಬಂದಿವರ್ಗವಾಗಲಿ, ನನ್ನಂಥವ ರಾಗಲಿ ಲೆಕ್ಕಕ್ಕಿಲ್ಲವೆಂಬುದು ಪ್ರಾಯಶಃ ನಿನಗೆ ತಿಳಿದಿರಲಾರದು. ಈಗ ಏನಾಗ ಬೇಕಾದರೂ ಚಕ್ರವರ್ತಿಗಳ ಸುತ್ತಮುತ್ತಣವರಿಂದಲೇ ಆಗಬೇಕು. ಈಗ ನಾವು ಡೊಲ್ಗೊರೂಕೋವ್ ಬಳಿ ಹೋಗೋಣ. ಹೇಗೂ ನಾನಲ್ಲಿಗೆ ಹೋಗಬೇಕಾಗಿದೆ. ನಿನ್ನ ವಿಷಯ ಸಹ ಈಗಾಗಲೇ ಅವರ ಬಳಿ ಪ್ರಸ್ತಾಪಿಸಿದ್ದೇನೆ. ನಿನ್ನನ್ನವರು ತಮ್ಮ ಬಳಿಯೇ ಇಟ್ಟುಕೊಳ್ಳಬಹುದು. ಅಥವಾ ಸೂರ್ಯನ ಹತ್ತಿರದಲ್ಲಿ ಎಲ್ಲಾದರೂ ನಿನ ಗೊಂದು ಜಾಗವನ್ನು ಪತ್ತೆಮಾಡಬಹುದು.'

ಯುವಕರಿಗೆ ಮಾರ್ಗದರ್ಶನ ಮಾಡಿ, ಲೌಕಿಕ ಯಶಸ್ಸಿನ ಸಂಪಾದನೆಗೆ ಸಹಾಯ ನೀಡುವುದರಲ್ಲಿ ರಾಜಕುಮಾರ ಆಂಡ್ರೂವಿಗೆ ಯಾವಾಗಲೂ ಅತೀವ ಶ್ರದ್ಧೆ. ಮತ್ತೊಬ್ಬ ರಿಗೆ ಈ ಬಗೆಯ ಸಹಾಯವನ್ನು ದೊರಕಿಸಿಕೊಡುವ ಸಲುವಾಗಿ, ಅವನು ಅಂಥ ಅನು ಕೂಲಗಳನ್ನು ಕಲ್ಪಿಸಕೊಡಬಲ್ಲ ಪ್ರಭಾವಶಾಲಿ ವ್ಯಕ್ತಿಗಳ ವೃತ್ತದೊಡನೆ ಸದಾ ಸಂಪರ್ಕ ವಿಟ್ಟುಕೊಂಡಿರುತ್ತಿದ್ದನು. ಆದರೆ ಅಂಥ ಸಂಪರ್ಕವನ್ನು ಸ್ವಂತಕ್ಕಾಗಿ ಬಳಸಿಕೊಳ್ಳಕೂಡ ದೆಂಬ ಹೆಮ್ಮೆಯೂ ಅವನಲ್ಲಿ ಮನೆ ಮಾಡಿಕೊಂಡಿತ್ತು. ಅವನು ಬೋರಿಸ್‌ನ ನಿಮಿತ್ತ ವಾಗಿ, ಅವನನ್ನು ಕರೆದುಕೊಂಡು, ಡೊಲ್ಗೊರೂಕೊವ್‌ನ ಕಡೆಗೆ ಹೊರಟನು.

ಆಲ್‌ಮೂತ್ಸ್‌ನಲ್ಲಿ ಚಕ್ರವರ್ತಿಗಳ ಮತ್ತು ಅವರ ಪರಿವಾರಗಳ ಬಿಡಾರವಾಗಿದ್ದ ಅರಮನೆಯನ್ನವರು ಪ್ರವೇಶಿಸಿದಾಗ ಸಂಜೆ ತುಂಬ ಹೊತ್ತಾಗಿತ್ತು.

ಅದೇ ದಿನ ಸೇರಿದ್ದ ಯುದ್ಧಮಂಡಲಿಯ ಸಭೆಯಲ್ಲಿ ಹಾಫ್‌ಕ್ರೀಗ್ಸ್‌ರಾತ್ ಸದಸ್ಯರೂ ಇಬ್ಬರು ಚಕ್ರವರ್ತಿಗಳೂ ಹಾಜರಿದ್ದರು. ಹಿರಿಯ ದಂಡನಾಯಕನಾದ ಕುತುಜೋವ್ ಮತ್ತು ರಾಜಕುಮಾರ ಷ್ವಾರ್ತೆನ್‌ಬರ್ಗ್‌ರ ಅಭಿಪ್ರಾಯಗಳಿಗೆ ವಿರುದ್ಧ ವಾಗಿ, ಕೂಡಲೇ ಸೈನ್ಯ ಮುಂದುವರಿದು, ಬೋನಪಾರ್ಟೆಯ ಮೇಲೆ ಧಾಳಿ ನಡೆಸ ಬೇಕೆಂದು ಆ ಸಭೆಯಲ್ಲಿ ತೀರ್ಮಾನವಾಗಿತ್ತು. ಡೊಲ್ಗೊರೂಕೊವ್‌ನನ್ನು ಭೇಟಿ ಮಾಡುವ ಸಲುವಾಗಿ ರಾಜಕುಮಾರ ಆಂಡ್ರೂ ಬೋರಿಸ್‌ನನ್ನೊಡಗೊಂಡು ಅರಮನೆ ಯನ್ನು ತಲಪುವ ಹೊತ್ತಿಗೆ ಯುದ್ಧಮಂಡಲಿಯ ಸಭೆ ಮುಕ್ತಾಯಗೊಂಡಿತ್ತು. ಆ ಸಭೆಯಲ್ಲಿ ಯುವಕರ ಮತಕ್ಕೆ ಮನ್ನಣೆ ದೊರಕಿದ್ದುದರಿಂದ ಕೇಂದ್ರ ಕಾರ್ಯಾಲಯದ ಪ್ರತಿಯೊಬ್ಬನೂ ಮಂತ್ರಮುಗ್ಧನಾಗಿದ್ದನು. ವಿಳಂಬ ಮತ್ತು ಪ್ರತೀಕ್ಷೆಗಳ ಪರವಾದ

ಧ್ವನಿಗಳು ಸಂಪೂರ್ಣವಾಗಿ ಸ್ತಬ್ಧಗೊಂಡಿದ್ದುವು. ಶೀಘ್ರ ಧಾಳಿಯ ಪ್ರತಿಫಲ ಸಂಬಂಧಿಯಾದ ನಿರ್ಣಾಯಕ ಪ್ರಮಾಣ ಅವರ ವಾದಗಳನ್ನು ಪರಾಭವಗೊಳಿಸಿತ್ತು. ಸಂಭವಿಸದಿದ್ದ ಕದನ ಮತ್ತು ಯಶಸ್ಸುಗಳ ಬಗ್ಗೆ ನಡೆದ ಚರ್ಚೆ ಭವಿಷ್ಯತ್ತಿನ ಸಂಗತಿಯಾಗದೆ, ಭೂತಕಾಲದ ವಿಷಯವಾಗಿತ್ತು. ಅನುಕೂಲಗಳೆಲ್ಲ ನಮ್ಮ ಪರವಾಗಿದ್ದುವು. ನೆಪೋಲಿಯನ್ನನ ಸೇನೆಗಿಂತ ನಿಸ್ಸಂದೇಹವಾಗಿ ಅತ್ಯುತ್ತಮವಾಗಿದ್ದ ನಮ್ಮ ಬೃಹತ್ ಪ್ರಮಾಣದ ಸೈನ್ಯ ಒಂದು ಜಾಗದಲ್ಲಿ ಕೇಂದ್ರೀಕೃತವಾಗಿತ್ತು. ಚಕ್ರವರ್ತಿಯ ಸಾನ್ನಿಧ್ಯದಿಂದ ಸ್ಫೂರ್ತಿಗೊಂಡಿದ್ದ ದಳಗಳು ಕಾರ್ಯಾಚರಣೆಗೆ ಕಾತರವಾಗಿದ್ದುವು. ಚಟುವಟಿಕೆಗಳು ನಡೆಯಬೇಕಾಗಿದ್ದ ಆಯಕಟ್ಟಿನ ಜಾಗದ ವಿವರಗಳು ಆಸ್ಟ್ರಿಯಾದ ಸೇನಾಧಿಪತಿ ವೇರಾದರನಿಗೆ ಸುಪರಿಚಿತವಾಗಿದ್ದುವು. ಫ್ರೆಂಚ್ ಸೈನ್ಯದೊಡನೆ ಕಾದಬೇಕಾಗಿದ್ದ ಆ ರಣಾಂಗಣದಲ್ಲಿಯೇ ಆಸ್ಟ್ರಿಯಾ ಸೈನ್ಯ ನಾನಾ ಯುದ್ಧೋಪಾಯಗಳನ್ನು ಕಾರ್ಯಗತಗೊಳಿಸುವ ಅದೃಷ್ಟ ಘಟನೆ ಹಿಂದಿನ ವರ್ಷವೇ ಸಂಭವಿಸಿತ್ತು. ಅಕ್ಕಪಕ್ಕದ ಸ್ಥಳಗಳೂ ಚೆನ್ನಾಗಿ ಗೊತ್ತಿದ್ದುವಲ್ಲದೆ, ನಕ್ಷೆಗಳಲ್ಲಿಯೂ ಅವುಗಳ ವಿವರ ಲಭಿಸುತ್ತಿತ್ತು. ಬಲಹೀನನಾಗಿದ್ದ ಬೋನಪಾರ್ಟೆ ಮಹತ್ವವಾದುದನ್ನು ಸಾಧಿಸುವಂತಿರಲಿಲ್ಲ.

ಧಾಳಿಯ ಪರವಾಗಿ ತೀಕ್ಷ್ಣವಾಗಿ ವಾದಿಸಿದ್ದ ದೊಲ್ಗೊರೂಕೊವ್ ಆದೇತಾನೆ ಬಳಲಿಕೆಯ ನಿತ್ರಾಣದಿಂದ ಹಿಂದಿರುಗಿದ್ದನು. ತನ್ನ ವಾದಕ್ಕೆ ದೊರೆತ ವಿಜಯದಿಂದಾಗಿ ಅವನು ಉತ್ಸಾಹಗೊಂಡು ಹೆಮ್ಮೆ ತಳೆದಿದ್ದನು. ರಾಜಕುಮಾರ ಆಂಡ್ರೂ ತನ್ನ ಆಶ್ರಿತನನ್ನವನಿಗೆ ಪರಿಚಯ ಮಾಡಿಕೊಟ್ಟನು. ಅವನು ವಿನಯ ಮೆಚ್ಚುಗೆಗಳಿಂದ ಬೋರಿಸ್‌ನ ಕೈಯನ್ನು ಕುಲುಕಿದನೆ ಹೊರತು, ತುಟಿಪಿಟಕ್ಕೆನ್ನಲಿಲ್ಲ. ತನ್ನ ಮನಸ್ಸನ್ನೆಲ್ಲ ತುಂಬಿಕೊಂಡಿದ್ದ ಭಾವಾಲೋಚನೆಗಳನ್ನು ಆ ಸಮಯದಲ್ಲಿ ಸಂಯಮಿಸಿಕೊಳ್ಳಲಾರದೆ ಅವನು ರಾಜಕುಮಾರ ಆಂಡ್ರೂವನ್ನುದ್ದೇಶಿಸಿ, ಫ್ರೆಂಚ್ ಭಾಷೆಯಲ್ಲಿ ಮಾತಾಡತೊಡಗಿದನು :

'ಪ್ರಿಯಮಿತ್ರ, ಎಂಥ ಕದನ ನಮಗಾಗಿ ಕಾದಿದೆ, ಗೊತ್ತೆ ? ಅದರಿಂದ ದೊರಕುವ ವಿಜಯ ಭಗವತ್ಕೃಪೆಯಿಂದ ಅಪೂರ್ವವಾದುದಾಗಿರುತ್ತದೆ! ಆಸ್ಟ್ರಿಯಾದವರನ್ನು ಅದರಲ್ಲಿಯೂ ವೇರಾದರ್‌ನನ್ನು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲವೆಂದು ಒಪ್ಪಿಕೊಳ್ಳಬೇಕಾಗಿದೆ. ಅದೇನು ನಿಷ್ಕೃಷ್ಟತೆ, ಅದೆಷ್ಟು ಖಚಿತತೆ! ನೆಲೆಗಳ ಬಗೆಗಿನ ಸವಿವರ ಜ್ಞಾನವೇನು! ಪ್ರತಿಯೊಂದು ಭವಿಷ್ಯದ್ಘಟನೆಯ ಬಗೆಗಿನ ಮುಂಗಾಣ್ಕೆಯೇನು ? ಪ್ರತಿಯೊಂದು ಸಾಧ್ಯತೆಯ ಬಗೆಗಿನ ದೂರದೃಷ್ಟಿಯೇನು! ಪ್ರತಿಯೊಂದು ಸೂಕ್ಷ್ಮ ವಿವರಣೆಯ ಬಗೆಗಿನ ಪರಿಜ್ಞಾನವೇನು! ಇಂದಿನ ವಿದ್ಯಮಾನದಲ್ಲಿ ಈಗೇನು ಯೋಚಿಸಿದ್ದೇವೆಯೋ ಅದಕ್ಕಿಂತ ಉತ್ತಮವಾದ ಉಪಾಯ ಸಾಧ್ಯವೇ ಇಲ್ಲ. ರಷ್ಯಾದವರ ಪರಾಕ್ರಮದ ಜತೆಗೆ ಆಸ್ಟ್ರಿಯಾದವರ ನಿಷ್ಕೃಷ್ಟ ಜ್ಞಾನ ಸಂಗಮಗೊಂಡಿರುವಾಗ ಮತ್ತೇನು ಬೇಕು ?'

'ಹಾಗಾದರೆ ಧಾಳಿ ನಿರ್ಧಾರವಾದಂತೆಯೇ ತಾನೆ ?' ಎಂದು ಬಲ್ಕೋನ್‌ಸ್ಕಿ ಪ್ರಶ್ನಿಸಿದನು.

'ನಿಮಗೆ ತಿಳಿದಿದೆಯೆ, ಮಿತ್ರರೆ, ಬೋನಪಾರ್ಟೆ ಕಂಗೆಟ್ಟಿರುವ ವಿಚಾರ ? ಅವನ ಕಡೆಯಿಂದ ಚಕ್ರವರ್ತಿಗಳಿಗೊಂದು ಪತ್ರ ಇಂದು ತಾನೆ ಬಂದಿದೆಯಂತೆ?' ದೊಲ್ಗೊರೂಕೊವ್ ಅರ್ಥಪೂರ್ಣವಾಗಿ ನಕ್ಕನು.

'ಹೌದೆ? ಅವನೇನು ಹೇಳುತ್ತಾನೆ?' ಎಂದು ಬಲ್ಕೋನ್‌ಸ್ಕಿ ಕೇಳಿದನು.

'ಅವನು ಹೇಳುವುದೇನು? ಕಾಲತಳ್ಳುವುದಕ್ಕಾಗಿ ಅದು, ಇದು, ಎಂದು ಹೇಳುತ್ತಾನೆ. ಅವನೀಗ ನಮ್ಮ ಕೈಯಲ್ಲಿದ್ದಾನೆಂಬುದಂತು ನಿಜ! ತಮಾಷೆಯೇನೆಂದರೆ' ಎಂದವನು ಗಹಗಹಿಸಿ ನಕ್ಕು 'ಪ್ರತ್ಯುತ್ತರದಲ್ಲಿ ಅವನನ್ನು ಹೇಗೆ ಸಂಬೋಧಿಸಬೇಕೋ ತಿಳಿಯದಾಗಿದೆ! ಕಾನ್ಸಲ್ ಎಂದು ಕರೆಯಬಹುದೆ? ಸಂದೇಹ. ಚಕ್ರವರ್ತಿಯೆಂದಂತು ಖಂಡಿತ ಕರೆಯಲಾಗದು. "ಸೇನಾಧಿಪತಿ ಬೋನಪಾರ್ಟೆ" ಎಂದು ಸಂಬೋಧಿಸಬಹುದೆಂದು ತೋರುತ್ತದೆ' ಎಂದು ನುಡಿದನು.

'ಆದರೆ ಅವನನ್ನು ಚಕ್ರವರ್ತಿಯೆಂದು ಮಾನ್ಯ ಮಾಡದಿರುವುದಕ್ಕೂ, ಸೇನಾಧಿಪತಿ ಬೋನಪಾರ್ಟೆ ಎಂದು ಕರೆಯುವುದಕ್ಕೂ ವ್ಯತ್ಯಾಸವಿದೆ' ಎಂದು ಬಲ್ಕೋನ್‌ಸ್ಕಿ ವಿಶದಪಡಿಸಿದನು.

ಡೊಲ್ಗೊರೂಕೊವ್ ಕೂಡಲೇ ನಕ್ಕು ಮಧ್ಯೆ ಬಾಯಿ ಹಾಕಿದನು. 'ಅದು ನಿಜ. ಬಿಲಿಬಿನ್ ನಿಮಗೆ ಗೊತ್ತಿರಬೇಕಲ್ಲವೆ? ಅವನು ತುಂಬ ಜಾಣ. ಅವನು ಸೂಚಿಸಿದ್ದೇನು ಗೊತ್ತೆ? ಅವನನ್ನು "ದುರಾಕ್ರಮಣಕಾರ ಮತ್ತು ಮನುಕುಲದ ಹಗೆ" ಎಂದು ಸಂಬೋಧಿಸಬಹುದೆಂದು ಅವನು ಉಲ್ಲಾಸದಿಂದ ನಕ್ಕನು.

'ಅಷ್ಟೇಯೆ?' ಎಂದು ಬಲ್ಕೋನ್‌ಸ್ಕಿ ಕೇಳಿದನು.

'ಅದೇನೇ ಇರಲಿ, ಸಂಬೋಧನೆಗೆ ಉಚಿತವಾದ ಹೆಸರನ್ನು ಸೂಚಿಸಿದವನು ಬಿಲಿಬಿನ್. ಅವನು ವಿವೇಕಿ, ಚತುರ.'

'ಅದೇನು?'

'ಫ್ರೆಂಚ್ ಸರ್ಕಾರದ ಮುಖಂಡರಿಗೆ ಇದು ಉಚಿತವಾಗಿದೆಯಲ್ಲವೆ?' ಎಂದು ಡೊಲ್ಗೊರೂಕೊವ್ ತೃಪ್ತಿಪಡಿಸಿದನು.

'ಹೌದು. ಆದರೆ ಅದವನಿಗೆ ಸೇರುವುದಿಲ್ಲವಲ್ಲವೆ?' ಎಂದು ಬಲ್ಕೋನ್‌ಸ್ಕಿ ಉದ್ಗಾರ ತೆಗೆದನು.

'ಹೌದ್ಹೌದು. ಸ್ವಲ್ಪವೂ ಹಿಡಿಸುವುದಿಲ್ಲ. ನನ್ನ ಸೋದರ ಅವನನ್ನು ಚೆನ್ನಾಗಿ ಬಲ್ಲ. ಈಗಿನ ಚಕ್ರವರ್ತಿ ಇದ್ದಾರಲ್ಲ, ಅವರೊಡನೆ ಅವನು ಪ್ಯಾರಿಸ್ಸಿನಲ್ಲಿ ಹಲವು ಸಲ ಊಟ ಮಾಡಿದ್ದಾನೆ. ಅವನಂಥ ಕುಯುಕ್ತಿಯ, ಸೂಕ್ಷ್ಮಗ್ರಾಹಿ ರಾಜತಂತ್ರ ನಿಪುಣನನ್ನು ತಾನು ಕಂಡದ್ದೇ ಇಲ್ಲವೆಂದು ನನ್ನ ಸೋದರ ಹೇಳುತ್ತಿರುತ್ತಾನೆ. ಫ್ರೆಂಚನ ಚಮತ್ಕಾರ ಮತ್ತು ಇಟಲಿಯವನ ನಟನೆ ಎರಡೂ ಅವನಲ್ಲಿ ಮಿಳಿತಗೊಂಡಿವೆ! ಅವರಿಗೂ ಶ್ರೀಮಂತ ಮರ್ಕೋವ್‌ನಿಗೂ ಸಂಬಂಧಿಸಿದ ಕಥೆಯೊಂದಿದೆ. ಅದನ್ನು ಕೇಳಿದ್ದೀಯೇನು? ಅವನನ್ನು ಆಡಿಸುವ ಗುಟ್ಟು ಶ್ರೀಮಂತ ಮರ್ಕೋವ್‌ನಿಗೆ ಮಾತ್ರ ತಿಳಿದಿತ್ತು. ಕೈಚೌಕದ ಕತೆ ಕೇಳಿದ್ದೀಯಾ? ಅದು ನಿಜಕ್ಕೂ ವಿನೋದಾತ್ಮಕವಾಗಿದೆ!'

ಮಾತಾಳಿ ಡೊಲ್ಗೊರೂಕೊವ್ ಒಮ್ಮೆ ಬೋರಿಸ್‌ನ ಕಡೆಗೆ ಒಮ್ಮೆ ರಾಜಕುಮಾರ ಆಂಡ್ರೂವಿನ ಕಡೆಗೆ ಕಣ್ಣು ಹಾಯಿಸುತ್ತ, ಆ ಕಥೆಯನ್ನು ನಿರೂಪಿಸಿದನು. ನಮ್ಮ ರಾಯಭಾರಿ ಮರ್ಕೋವ್‌ನನ್ನು ಪರೀಕ್ಷಿಸುವ ಸಲುವಾಗಿ ಬೋನಪಾರ್ಟೆ

ಯೊಮ್ಮೆ ಉದ್ದೇಶಪೂರ್ವಕವಾಗಿ ಕೈಚೌಕವೊಂದನ್ನು ಅವನ ಮುಂದೆ ಕೆಳಗೆ ಬೀಳಿಸಿ, ಅವನ ಮುಖವನ್ನೇ ಈಕ್ಷಿಸುತ್ತಿದ್ದನು. ಮರ್‌ಕೋವ್ ಅದನ್ನೆತ್ತಿ ತನ್ನ ಕೈಗೆ ಕೊಡಲೆಂಬುದು ಪ್ರಾಯಶಃ ಬೋನಪಾರ್ಟೆಯ ಉದ್ದೇಶವಾಗಿದ್ದಿರಬಹುದು. ಮರ್ಕೋವ್ ತತ್‌ಕ್ಷಣವೆ ತನ್ನ ಕೈಚೌಕವನ್ನು ಅದರ ಪಕ್ಕದಲ್ಲಿಯೇ ಬೀಳಿಸಿ, ಬೋನಪಾರ್ಟೆಯದನ್ನು ಮುಟ್ಟದೆಯೇ ತನ್ನದನ್ನೆತ್ತಿಕೊಂಡನು.

'ಭೇಷ್, ಭೇಷ್!' ಎಂದು ಬಲ್ಕೋನ್‌ಸ್ಕಿ ಹರ್ಷ ವ್ಯಕ್ತಪಡಿಸಿದನು. 'ಆದರೆ ರಾಜಕುಮಾರರೆ, ನಾನೀಗ ಈ ಯುವಕನ ಪರ ಅರ್ಜಿದಾರನಾಗಿ ನಿಮ್ಮ ಬಳಿ ಬಂದಿದ್ದೇನೆ ನೋಡಿ....' ಎಂದು ಆಂಡ್ರೂ ತನ್ನ ಮಾತು ಮುಗಿಸುವ ಮುಂಚೆಯೇ ಅಂಗರಕ್ಷಕನೊಬ್ಬ ದೊಲ್ಗೊರೂಕೊವ್‌ನನ್ನು ಚಕ್ರವರ್ತಿಯ ಬಳಿಗೆ ಕರೆದೊಯ್ಯಲು ಬಂದನು.

'ಓಹ್, ಇದೆಂಥ ಅನಿಷ್ಟ!' ಎಂದುಕೊಳ್ಳುತ್ತ ದೊಲ್ಗೊರೂಕೊವ್ ತಕ್ಷಣ ಮೇಲೆದ್ದು, ಆಂಡ್ರೂ ಮತ್ತು ಬೋರಿಸ್‌ರ ಕೈಕುಲುಕಿದನು. 'ನಿಮಗೆ ಮತ್ತು ಈ ಯುವಕ ಮಿತ್ರನಿಗೆ ಶಕ್ತಿಮೀರಿ ಸಹಾಯ ಮಾಡಲು ಸಿದ್ಧನಾಗಿದ್ದೇನೆ' ಎಂದವನು ಮತ್ತೆ ಬೋರಿಸ್‌ನ ಕೈಕುಲುಕಿದನು. ಆ ಕೈಕುಲುಕಿನಲ್ಲಿ ಸತ್‌ಸ್ವಭಾವದ, ಪ್ರಾಮಾಣಿಕತೆಯ, ಚೈತನ್ಯದಾಯಿ ಲಾಘವತೆಯ ಮನೋಧರ್ಮ ಅಭಿವ್ಯಕ್ತಗೊಂಡಿತ್ತು. 'ನೀನು ನನ್ನನ್ನು ನೋಡು....ಮತ್ತೊಮ್ಮೆ.'

ಆ ಸಮಯದಲ್ಲಿ ಅತ್ಯುನ್ನತ ಅಧಿಕಾರಿಗಳಿಗೆ ತಾನು ಅತಿ ನಿಕಟವಾಗಿದ್ದಂತೆ ಮೂಡಿದ ಆಲೋಚನೆಯಿಂದ ಬೋರಿಸ್ ಭಾವೋದ್ವಿಗ್ನನಾದನು. ಯಾವ ಸೈನ್ಯದಲ್ಲಿ ತಾನೊಂದು ಅಲ್ಪ ವಿಧೇಯ ಕ್ಷುಲ್ಲಕ ಅಣುವಾಗಿದ್ದನೋ ಅದೇ ಸೈನ್ಯದ ಬೃಹತ್ಪ್ರಮಾಣದ ಚಲನೆಗಳನ್ನು ಪ್ರೇರಿಸುವ ಚಿಲುಮೆಗಳ ಸಂಪರ್ಕವನ್ನು ತಾನು ಪಡೆದಿದ್ದುದಾಗಿ ಅವನು ತಿಳಿದುಕೊಂಡಿದ್ದನು. ಅವರು ರಾಜಕುಮಾರ ದೊಲ್ಗೊರೂಕೊವ್‌ನನ್ನು ಮೊಗಸಾಲೆಯ ತನಕ ಹಿಂಬಾಲಿಸಿದರು. ದೊಲ್ಗೊರೂಕೊವ್ ಪ್ರವೇಶಿಸಬೇಕಾಗಿದ್ದ ಚಕ್ರವರ್ತಿಯ ಕೋಣೆಯ ಬಾಗಿಲಿನ ಮೂಲಕ ಹೊರಗೆ ಬಂದ ಅಸೈನಿಕ ಉಡುಪಿನ ಕುಬ್ಜ ವ್ಯಕ್ತಿಯೊಬ್ಬ ಎದುರಾದನು. ಅವನ ಮುಖದಲ್ಲಿ ಚತುರತೆ ಎದ್ದು ಕಾಣುತ್ತಿತ್ತು. ಮುಖವನ್ನು ವಿಕಾರಗೊಳಿಸದೆ ತುಸು ಉಬ್ಬಿದ ದವಡೆ ಅವನ ಮನಸ್ಸಿನ ವಿಶಿಷ್ಟ ಉಲ್ಲಾಸವನ್ನು ಠಕ್ಕಿನ ಭಾವಚಪಲತೆಯನ್ನು ಪ್ರತಿಬಿಂಬಿಸುತ್ತಿತ್ತು. ಈ ಗುಜ್ಜಾರಿ ಆತ್ಮೀಯ ಮಿತ್ರನೆಂಬಂತೆ ದೊಲ್ಗೊರೂಕೊವ್ ಕಡೆಗೆ ತಲೆದೂಗಿದನು. ಕಡು ಉದಾಸೀನತೆಯಿಂದ ಅವನು ಆಂಡ್ರೂ ಕಡೆಗೆ ದುರದುರನೆ ನೋಡಿ, ನೇರವಾಗಿ ಅವನ ಕಡೆಗೆ ನಡೆದನು. ತನಗೆ ಆಂಡ್ರೂ ನಮಸ್ಕಾರ ಮಾಡಲಿ, ಇಲ್ಲವೆ ದಾರಿ ಬಿಡಲಿ ಎಂಬ ನಿರೀಕ್ಷೆ ಅವನದಾಗಿತ್ತು. ರಾಜಕುಮಾರ ಆಂಡ್ರೂ ಅವನಿಗೆ ಮಣಿಯಲೂ ಇಲ್ಲ, ದಾರಿ ಬಿಡಲೂ ಇಲ್ಲ. ಬದ್ಧವೈರ ಮನೋಭಾವ ಅವನ ಮುಖದ ಮೇಲೆ ಗೋಚರಿಸಿತು. ಕುಳ್ಳ ದಾರಿ ಬದಲಿಸಿ, ಮೊಗಸಾಲೆಯ ಮತ್ತೊಂದು ಪಕ್ಕಕ್ಕೆ ಸರಿದನು.

'ಯಾರವರು?' ಎಂದು ಬೋರಿಸ್ ಕೇಳಿದನು.

'ಅವರೊಬ್ಬರು ಅಸಾಧಾರಣವ್ಯಕ್ತಿ, ಆದರೆ ನನಗೆ ಮಾತ್ರ ಅತ್ಯಂತ ಅಹಿತವಾದ

ವ್ಯಕ್ತಿ. ವಿದೇಶಾಂಗ ಸಚಿವರಾಗಿರುವ ಅವರ ಹೆಸರು ರಾಜಕುಮಾರ ಆಡಂ ತ್ಸಾರ್ತ್ರೊರಿಸ್ಕಿ ....ಇವರಂಥ ವ್ಯಕ್ತಿಗಳೇ ರಾಷ್ಟ್ರಗಳ ಹಣೆಬರಹವನ್ನು ನಿರ್ಧರಿಸುವವರು' ಎಂದು ಬಲ್ಕೊಸ್ಕೀನ್‌ಸ್ಕಿ ಅರಮನೆಯ ಹೊರಗೆ ಹೋಗುವಾಗ ನಿಡುಸುಯ್ದು ನುಡಿದನು.

ಮಾರನೆಯ ದಿನವೆ ಸೈನ್ಯ ಕಾರ್ಯಾಚರಣೆಗೆ ಸಿದ್ಧವಾಯಿತು. ಆಸ್ಟರ್‌ಲಿಜ್ ಕದನದ ತನಕ ಬೋರಿಸ್ ರಾಜಕುಮಾರ ಆಂಡ್ರೂವನ್ನಾಗಲಿ, ದೊಲ್ಗೊರೂಕೊವ್‌ನನ್ನಾಗಲಿ ಮತ್ತೆ ನೋಡಲಾಗಲಿಲ್ಲ. ಕೆಲಕಾಲ ಇಸ್ಮಾಯ್‌ಲೋವ್ ದಳದಲ್ಲಿಯೇ ಉಳಿದನು.

ಅಧ್ಯಾಯ ೧೦

ನವೆಂಬರ್ ೧೬ರ ಮುಂಜಾನೆ, ರಾಜಕುಮಾರ ಬಗ್ರೇಷನ್‌ನ ಸೈನ್ಯ ವಿಭಾಗಕ್ಕೆ ಸೇರಿದ್ದು, ನಿಕೊಲಾಸ್ ರೊಸ್ತೋವ್ ಸೇವೆ ಸಲ್ಲಿಸುತ್ತಿದ್ದ ಡೆನಿಸೋವ್‌ನ ಪಟಾಲಮ್ಮು ಮೊದಲೇ ಉದ್ದೇಶಿಸಿದ್ದಂತೆ ರಾತ್ರಿಯ ಬಿಡಾರದಿಂದ ಕಾರ್ಯಾಚರಣೆಗಾಗಿ ಮುಂದೆಸಾಗಿತು. ದಂಡವ್ಯೂಹಗಳ ಹಿಂದೆ ಅದು ಒಂದೆರಡು ಮೈಲಿ ಮುಂದುವರಿದನಂತರ ಬಾಟಾಮಾರ್ಗದಲ್ಲಿ ನಿಲ್ಲಬೇಕಾಯಿತು. ತುರ್ಕಿಸೈನಿಕರು ಒಂದು ಮತ್ತು ಎರಡನೆಯ ಕುದುರೆಪಟಾಲಮ್ಮುಗಳ ಮತ್ತು ಫಿರಂಗಿದಳಗಳ ಮುಂದೆ ಧಾವಿಸುತ್ತಿದ್ದುದನ್ನು ರೊಸ್ತೋವ್ ಕಂಡನು. ಅನಂತರ ಬಗ್ರೇಷನ್ ಮತ್ತು ದೊಲ್ಗೊರೂಕೊವ್ ಸೇನಾಪತಿಗಳು ಸಹ ತಮ್ಮ ಸಹಾಯಾಧಿಕಾರಿಗಳೊಡನೆ ತ್ವರೆಯಿಂದ ಮುಂದೆ ನುಗ್ಗಿದರು. ಕಾರ್ಯಾಚರಣೆಗೆ ಮುನ್ನ ಅವನನುಭವಿಸಿದ್ದ ಹೆದರಿಕೆ, ಆ ಹೆದರಿಕೆಯನ್ನು ಗೆಲ್ಲಲು ನಡೆದ ಒಳತೋಟ, ಕದನದಲ್ಲಿ ಶೂರರಾವುತನೆಂದು ಹೆಸರು ಪಡೆಯಬೇಕೆಂಬ ಅವನ ಕನಸುಗಳು—ಎಲ್ಲ ವ್ಯರ್ಥವಾಗಿದ್ದುವು. ಅವರ ಪಟಾಲಮ್ಮಿಗೆ ವಿಾಸಲು ಸ್ಥಾನವೊದಗಿತ್ತು. ಇಡೀ ದಿನ ರೊಸ್ತೋವ್‌ಗೆ ಮಂಕುಹಿಡಿದಂತಿತ್ತು. ಬೆಳಗಿನ ಒಂಬತ್ತು ಗಂಟೆಯ ಹೊತ್ತಿಗೆ ಮುಂಭಾಗದಲ್ಲಿ ಅವನಿಗೆ ಬಂದೂಕದ ಸದ್ದೂ ಉಘೇನಾದವೂ ಕೇಳಿಸಿದುವು. ಹಿಂದಕ್ಕೆ ಹೊತ್ತುತರುತ್ತಿದ್ದ ಗಾಯಾಳುಗಳನ್ನು ಕಂಡನು. ಅವರ ಸಂಖ್ಯೆ ಹೆಚ್ಚಿತಲಿಲ್ಲ. ಕಡೆಗೆ ತುರ್ಕಿ ಪಡೆಯ ಬೆಂಗಾವಲಿನಲ್ಲಿ ಬರುತ್ತಿದ್ದ ಫ್ರೆಂಚ್ ಅಶ್ವದಳದ ಮೇಲೆ ಕಣ್ಣಾಡಿಸಿದನು. ನಿಜವಾಗಿ, ಪ್ರಮಾಣದಲ್ಲಿ ದೊಡ್ಡದಲ್ಲದ ವ್ಯವಹಾರ ಜಯಪ್ರದವಾಗಿ ಮುಕ್ತಾಯಗೊಂಡಿತ್ತು. ಮರಳುತ್ತಿದ್ದ ಸೈನಿಕರು ಮತ್ತು ಅಧಿಕಾರಿಗಳು ತಮ್ಮ ವಿಜಯ ಸಾಧನೆಯ ಬಗೆಗೆ, ವಿಸ್‌ಚೌನಗರವನ್ನು ವಶಪಡಿಸಿಕೊಂಡ ಬಗ್ಗೆ ಮತ್ತು ಇಡೀ ಫ್ರೆಂಚ್ ಪಟಾಲಮ್ಮನ್ನು ಸೆರೆಹಿಡಿದ ಬಗ್ಗೆ ಮಾತಾಡಿಕೊಳ್ಳುತ್ತಿದ್ದರು. ಹಿಂದಿನ ರಾತ್ರಿಯ ಕೊರೆಯುವ ಹಿಮಪಾತದಿಂದಾಗಿ ಆದಿನದ ಹಗಲು ಪ್ರಕಾಶಮಾನವಾಗಿತ್ತು, ಬೆಚ್ಚಗಿತ್ತು. ಯುದ್ಧದಲ್ಲಿ ಪಾಲ್ಗೊಂಡಿದ್ದವರ ಕತೆಗಳ ಮೂಲಕ ಮಾತ್ರವಲ್ಲ, ಯೋಧರ, ಅಧಿಕಾರಿಗಳ, ಸೇನಾಪತಿಗಳ ಮತ್ತು ಸಹಾಯಾಧಿಕಾರಿಗಳ ಮುಖಗಳ ಮೇಲೆ ತಾಂಡವವಾಡುತ್ತಿದ್ದ ಹರ್ಷೋತ್ಕರ್ಷದ ಮೂಲಕ ಪ್ರಚಾರವಾಗುತ್ತಿದ್ದ ವಿಜಯವಾರ್ತೆ ಶರತ್ಕಾಲದ ಉಲ್ಲಾಸ ಪೂರ್ಣ ಪ್ರಕಾಶಕ್ಕೆ ತಕ್ಕಂತಿತ್ತು. ನಿಕೊಲಾಸ್ ಯುದ್ಧಪೂರ್ವ ಭೀಕರತೆಯ ಪರಿಣಾಮವನ್ನು ನಿಷ್ಪ್ರಯೋಜಕವಾಗಿ ಅನುಭವಿಸಿದನಂತರ, ಆ ಸುಂದರ ದಿನ ನಿಷ್ಕ್ರಿಯೆಯಿಂದ ಕಳೆದು ಹೋಗಲಾಗಿ ತುಂಬ ನಿರುತ್ಸಾಹದಿಂದಿದ್ದನು.

'ಬಾ ಇಲ್ಲಿ, ರೊಸ್ತೋವ್. ನಮ್ಮ ಸಂಕಟ ಮುಳುಗಿ ಹೋಗುವಂತೆ ಕುಡಿಯೋಣ' ಎಂದು ಒಂದು ಸೀಸಾಯಿಯನ್ನೂ ಉಣಿಸನ್ನೂ ಹಿಡಿದುಕೊಂಡು, ದಾರಿಯ ಪಕ್ಕದಲ್ಲಿ ಕುಳಿತಿದ್ದ ಡೆನಿಸೋವ್ ಗಟ್ಟಿಯಾಗಿ ಕೂಗಿದನು.

ಅಧಿಕಾರಿಗಳು ಡೆನಿಸೋವ್ ಸುತ್ತನೆರೆದು ಉಣಿಸು ಮಾತುಗಳಲ್ಲಿ ಮಗ್ನರಾಗಿದ್ದರು.

'ಅಗೋ, ಅಲ್ಲಿ ನೋಡಿ! ಮತ್ತೊಬ್ಬನನ್ನು ಕರೆತರುತ್ತಿದ್ದಾರೆ' ಎಂಬುದಾಗಿ ಇಬ್ಬರು ತುರ್ಕಿ ಸೈನಿಕರು ಸೆರೆಹಿಡಿದು ನಡೆಸಿಕೊಂಡು ಬರುತ್ತಿದ್ದ ಫ್ರೆಂಚ್ ರಾವುತನ ಕಡೆಗೆ ಕೈತೋರಿಸುತ್ತಾ ಅಧಿಕಾರಿಗಳಲ್ಲೊಬ್ಬ ಕೂಗಿಕೊಂಡನು.

ಅವರಲ್ಲೊಬ್ಬ ಫ್ರೆಂಚ್ ಬಂಡಿಯ ಉತ್ಕೃಷ್ಟವಾದ ಕುದುರೆಯ ಲಗಾಮು ಹಿಡಿದು ಕರೆತರುತ್ತಿದ್ದನು.

'ಆ ಕುದುರೆಯನ್ನು ನಮಗೆ ಮಾರಿಬಿಡಿ' ಎಂದು ಡೆನಿಸೋವ್ ತುರ್ಕಿ ಸೈನಿಕರನ್ನು ಕೂಗಿ ಹೇಳಿದನು.

'ನಿಮಗಾಸೆಯಾದರೆ ಆಗಲಿ, ಮಹಾಸ್ವಾಮಿ!'

ಅಧಿಕಾರಿಗಳು ಮೇಲೆದ್ದು ತುರ್ಕಿ ಸೈನಿಕರ ಮತ್ತು ಬಂದಿಯ ಸುತ್ತ ನಿಂತರು.' ಫ್ರೆಂಚ್ ರಾವುತ ಅಲ್ಸೇಷಿಯಾದ ಯುವಕ ಅವನಾಡುತ್ತಿದ್ದ ಫ್ರೆಂಚ್ ಭಾಷೆಯಲ್ಲಿ ಜರ್ಮನ್ ಭಾಷೆಯ ಒತ್ತು ಕಾಣುತ್ತಿತ್ತು. ಗಾಬರಿಯಿಂದಾಗಿ ಅವನ ನಿಶ್ವಾಸೋಚ್ಛ್ವಾಸಗಳೆ ನಿಂತು ಹೋಗುತ್ತಿದ್ದುವು. ಅವನ ಮುಖ ಕೆಂಪೇರಿತ್ತು. ಫ್ರೆಂಚ್ ಮಾತುಗಳು ತನ್ನ ಕಿವಿಯ ಮೇಲೆ ಬಿದ್ದ ಕೂಡಲೇ ಅವನು ಒಬ್ಬೊಬ್ಬರನ್ನು ಸಂಬೋಧಿಸಿ ಅಧಿಕಾರಿಗಳೊಡನೆ ಮಾತಾಡಲಾರಂಭಿಸಿದನು. 'ನಾನು ಸೆರೆ ಸಿಕ್ಕಿದ್ದು ನನ್ನ ತಪ್ಪಿಗಾಗಿ ಅಲ್ಲ. ಅಶ್ವಾಲಂಕಾರಗಳನ್ನು ಕಸಿದುಕೊಳ್ಳುವಂತೆ ಕಿರಿಯ ಅಧಿಕಾರಿ ನನ್ನನ್ನು ಕಳಿಸಿದ. ರಷ್ಯಾದ ಸೈನಿಕರಿದ್ದಾರೆಂದು ಹೇಳಿದರೂ ಅವನು ನನ್ನ ಮಾತು ಕೇಳಲಿಲ್ಲ. ಆದರೆ ನನ್ನ ಪ್ರೀತಿಯ ಕುದುರೆಯನ್ನು ನೋಯಿಸಬೇಡಿ' ಎಂದವನು ಕುದುರೆಯನ್ನು ನೇವರಿಸಿದನು. ತಾನೆಲ್ಲಿದ್ದೆನೆಂಬುದು ಅವನಿಗೆ ಗೊತ್ತಾಗಲಿಲ್ಲ. ತನ್ನ ಕೈಸೆರೆಗೆ ಕಾರಣವಿಲ್ಲವೆಂದು ನುಡಿದನು. ತನ್ನ ಅಧಿಕಾರಿಗಳ ಮುಂದೆ ತಾನು ನಿಂತಿದ್ದುದಾಗಿ ಊಹಿಸಿಕೊಂಡು, ಸೈನಿಕ ಸೇವೆಯ ಶಿಸ್ತನ್ನೂ ಉತ್ಸಾಹವನ್ನೂ ಪ್ರಕಟಿಸಿದನು. ಫ್ರೆಂಚ್ ಸೈನ್ಯದ ವಾತಾವರಣದಲ್ಲಿದ್ದ ಹುರುಪು ಕಳೆಗಳನ್ನವನು ನಮ್ಮ ಕಾವಲು ಪಡೆಗೆ ತುಂಬಿದನು. ಅವು ನಮಗೆ ವಿದೇಶೀಯವಾಗಿದ್ದುವು.

ತುರ್ಕಿಸೈನಿಕರು ಕುದುರೆಯನ್ನು ಎರಡು ಚಿನ್ನದ ನಾಣ್ಯಗಳಿಗೆ ಮಾರಿದರು. ಕೆಲವು ದಿನಗಳ ಹಿಂದೆ ತಾನೆ ಹಣ ಪಡೆದಿದ್ದ ರೊಸ್ತೋವ್ ಅಧಿಕಾರಿಗಳಲ್ಲೆಲ್ಲ ಶ್ರೀಮಂತನಾಗಿದ್ದುದರಿಂದ ಕುದುರೆಯನ್ನು ವಶಪಡಿಸಿಕೊಂಡನು.

'ನನ್ನ ಪ್ರೀತಿಯ ಕುದುರೆಯನ್ನು ದಯೆಯಿಟ್ಟು ನೋಯಿಸಬೇಡಿ' ಎಂದು ಫ್ರೆಂಚ್ ಬಂದಿ ಅತ್ಯಂತ ಕಳಕ[illegible]ನ ಕುದುರೆಯನ್ನು ಪಡೆದ ರೊಸ್ತೋವ್‌ನನ್ನು ಬೇಡಿಕೊಂಡನು.

ರೊಸ್ತೋವ್ ನಗುನಗುತ್ತ ರಾವುತನಿಗೆ ಭರವಸೆ ನೀಡಿ, ಹಣ ಸಲ್ಲಿಸಿದನು.

'ಈಗ ಆಯ್ತಲ್ಲ, ನಡಿ' ಎಂದು ತುರ್ಕಿಸೈನಿಕ ಬಂದಿಯ ಭುಜವನ್ನಲುಗಿಸಿದನು.

'ಚಕ್ರವರ್ತಿ! ಚಕ್ರವರ್ತಿ!' ಎಂಬ ಘೋಷಣೆ ಹಠಾತ್ತನೆ ರಾವುತರ ಗುಂಪನ್ನು ಭೇದಿಸಿತು.

ಎಲ್ಲರೂ ಅತ್ತಿಂದಿತ್ತ ಓಡಾಡುವಾಗ ಕೋಲಾಹಲವಾಯಿತು. ಬಿಳಿಯ ಪುಕ್ಕಗಳುಳ್ಳ ಟೋಪಿಗಳನ್ನು ಧರಿಸಿದ ಹಲವುಮಂದಿ ಸವಾರರು ತನ್ನ ಹಿಂದೆ ರಸ್ತೆಯಲ್ಲಿ ಬರುತ್ತಿದ್ದುದನ್ನು ರೊಸ್ತೋವ್ ಕಂಡನು. ಒಂದೇ ಒಂದು ಕ್ಷಣದಲ್ಲಿ ಪ್ರತಿಯೊಬ್ಬರೂ ತಂತಮ್ಮ ಸ್ಥಾನಗಳಲ್ಲಿ ನಿಂತು, ಕಾಯುತ್ತಿದ್ದರು.

ತಾನೆಂತು ಸ್ವಸ್ಥಾನಕ್ಕೆ ಮರಳಿ, ಕುದುರೆಯೇರಿದ್ದೆನೆಂಬುದರ ಅರಿವಾಗಲಿ ನೆನಪಾಗಲಿ ರೊಸ್ತೋವ್‌ಗೆ ಇರಲಿಲ್ಲ. ತಾನು ಕಾರ್ಯಾಚರಣೆಯಲ್ಲಿ ಭಾಗವಹಿಸಲಿಲ್ಲವೆಂಬ ಸಂಕಟವಾಗಲಿ, ನಿಷ್ಕ್ರಿಯೆಯ ಆಯಾಸದಿಂದೊಗೆದ ಉತ್ಸಾಹ ಹೀನತೆಯಾಗಲಿ ಇದ್ದಕ್ಕಿದ್ದಂತೆ ಮಾಯವಾಗಿದ್ದುವು; ತನ್ನ ಬಗೆಗಿನ ಪ್ರತಿಯೊಂದು ಯೋಚನೆಯೂ ಉಡುಗಿಹೋಗಿತ್ತು. ಚಕ್ರವರ್ತಿ ಸಾನ್ನಿಧ್ಯದ ಸುಖವನ್ನನುಭವಿಸುವ ಆನಂದ ಅವನ ಮೈಮನವನ್ನೆಲ್ಲ ತುಂಬಿಕೊಂಡಿದ್ದುವು. ಅವನ ನಿಕಟ ಸಾನ್ನಿಧ್ಯದಿಂದ ಕಳೆದ ದಿನ ಮತ್ತೆ ಉದಯವಾಯಿತೆಂದು ಭಾವಿಸಿದನು. ಬಹುದಿನದ ಬಯಕೆಯ ಭೇಟಿಯ ಸುಸಂಧಿ ಲಭಿಸಿದ ಪ್ರೇಮಿಯಂತೆ ಅವನು ಸುಖಲೋಲನಾದನು. ಸುತ್ತಮುತ್ತ ಕಣ್ಣು ಹೊರಳಿಸದೆ ಏಕಾಗ್ರ ಚಿತ್ತನಾಗಿ ಚಕ್ರವರ್ತಿಯ ದರ್ಶನೋತ್ಸುಕತೆಯಿಂದ ಅವನು ಆನಂದಪರವಶನಾಗಿದ್ದನು. ಅವನ ಆನಂದಕ್ಕೆ ಕಾರಣವಾಗಿದ್ದುದು ಹತ್ತಿರಕ್ಕೆ ಬರುತ್ತಿದ್ದ ಕುದುರೆ ಗುಂಪಿನ ಗೊರಸುಗಳ ಸದ್ದು ಮಾತ್ರವಲ್ಲ, ಚಕ್ರವರ್ತಿ ಸಮೀಪವಾಗುತ್ತಿದ್ದಂತೆ ಸುತ್ತಮುತ್ತಣ ಪ್ರತಿಯೊಂದು ವಸ್ತುವೂ ಪ್ರಕಾಶಮಾನವಾಗಿ, ಹರ್ಷದಾಯಕವಾಗಿ, ಮಹತ್ವ ಪೂರ್ಣವಾಗಿ ಹಾಗೂ ಉತ್ಸವ ಶೀಲವಾಗಿ ರಾರಾಜಿಸುತ್ತಿದ್ದುವು. ಹಿತಕರವೂ ಸ್ವರ್ಗೀಯವೂ ಆದ ಬೆಳಕಿನ ಕಿರಣಗಳನ್ನು ಚೆಲ್ಲುತ್ತ ಆ ಸೂರ್ಯ ರೊಸ್ತೋವ್‌ನ ಹತ್ತಿರ ಬಂದಂತೆಲ್ಲ ತಾನೂ ಆ ಕಿರಣಗಳ ಹೊದಿಕೆಯೊಳಗೆ ಬೆಚ್ಚಗಿದ್ದಂತೆ ಭಾವಿಸಿದನು. ದಯಾಪೂರ್ಣವೂ, ಪ್ರಶಾಂತವೂ, ಗಂಭೀರವೂ, ಆದರೆ ಅತ್ಯಂತ ಸರಳವೂ ಆದ ಅವನ ಮಧುರ ಧ್ವನಿ ಕಿವಿಯ ಮೇಲೆ ಬೀಳುತ್ತಿದ್ದಂತೆ ಅವನು ಸ್ವರ್ಗಸುಖ ಸಾಗರದಲ್ಲಿ ತೇಲುತ್ತಿದ್ದನು. ರೊಸ್ತೋವ್‌ನ ಮನೋಭಾವಕ್ಕನುವಾಗಿಯೆಂಬಂತೆ ಎಲ್ಲೆಲ್ಲೂ ಸ್ಮಶಾನ ಮೌನ ತಾಂಡವವಾಡುತ್ತಿತ್ತು. ಆ ಮೌನವನ್ನು ಸೀಳಿಕೊಂಡು ಬರುತ್ತಿದ್ದ ಚಕ್ರವರ್ತಿಯ ಧ್ವನಿ ಚೇತೋಹಾರಿಯಾಗಿತ್ತು.

'ಪಾವ್‌ಲೊಗ್ರಾಡ್ ಅಶ್ವದಳವೆಲ್ಲಿ?' ಎಂದು ಚಕ್ರವರ್ತಿ ವಿಚಾರಿಸಿದನು.

'ಮೀಸಲುಪಡೆ, ಪ್ರಭು!' ಎಂಬ ಉತ್ತರರೂಪದ ಧ್ವನಿ ಚಕ್ರವರ್ತಿಯ ಧ್ವನಿಯ ಮುಂದೆ ಅತ್ಯಂತ ಸಾಮಾನ್ಯ ಮಾನವೀಯ ಧ್ವನಿಯಾಗಿ ತೋರಿತು.

ಚಕ್ರವರ್ತಿ ರೊಸ್ತೋವ್ ಸಮಕ್ಕೆ ಬಂದು ನಿಂತನು. ಮೂರು ದಿನಗಳ ಹಿಂದೆ ಪರಿಶೀಲನ ಸಮಯದಲ್ಲಿ ಇದ್ದುದಕ್ಕಿಂತ ಹೆಚ್ಚು ಸುಂದರವಾಗಿ ಅಲೆಕ್ಸಾಂಡರನ ಮುಖ ಕಂಡಿತು. ಉಲ್ಲಾಸದಿಂದ, ಮುಗ್ಧತೆಯಿಂದ, ಯೌವನದ ಲಾವಣ್ಯದಿಂದ ಕಂಗೊಳಿಸುತ್ತಿದ್ದ ಆ ಮುಖದಲ್ಲಿ ಹದಿನಾಲ್ಕು ವರ್ಷದ ಬಾಲಕನ ವರ್ಚಸ್ಸು ನಲಿದಾಡುತ್ತಿದ್ದರೂ ಅದರಲ್ಲಿ ಚಕ್ರವರ್ತಿಯ ತೇಜಸ್ಸಮೃದ್ಧ ಗಾಂಭೀರ್ಯ ಮೆರೆಯುತ್ತಿತ್ತು. ಅನುದ್ದಿಷ್ಟವಾ

ಪಟಾಲಮ್ಮನ್ನು ಸಮೀಕ್ಷಿಸುತ್ತಿದ್ದಾಗ ಚಕ್ರವರ್ತಿಯ ಕಣ್ಣು ರೊಸ್ತೋವ್‌ನ ಕಣ್ಣುಗಳನ್ನು ಸಂಧಿಸಿ, ಎರಡುಕ್ಷಣ ಅಲ್ಲಿಯೇ ವಿರಮಿಸಿದುವು. ರೊಸ್ತೋವ್‌ನ ಹೃದಯದಲ್ಲಿ ನಡೆಯುತ್ತಿದ್ದ ಭಾವಕ್ರಿಯೆ ಚಕ್ರವರ್ತಿಗೆ ಅರಿವಾಯಿತೋ ಇಲ್ಲವೋ (ಎಲ್ಲವೂ ಅವನಿಗೆ ಅರಿವಾಗಿರುವಂತೆ ರೊಸ್ತೋವ್‌ಗೆ ತೋರಿತು) ಅವನ ನೀಲಿನೇತ್ರಗಳಂತು ಎರಡು ಕ್ಷಣ ರೊಸ್ತೋವ್‌ನ ಮುಖವನ್ನು ನಿಟ್ಟಿಸುತ್ತಿದ್ದುವು. ಅವುಗಳಿಂದ ಹಿತಕರವೂ ಸೌಮ್ಯಯುತವೂ ಆದ ಶಾಂತಿಧಾರೆ ಪ್ರವಹಿಸಿತು. ಅನಂತರ ಹಠಾತ್ತನೆ ಅವನು ತನ್ನ ಕಣ್ಣು ಹೊರಳಿಸಿ, ತಟಕ್ಕನೆ ಎಡಗಾಲಿನಿಂದ ಕುದುರೆಯನ್ನೊತ್ತಿ, ನಾಗಾಲೋಟದಲ್ಲಿ ದೌಡಾಯಿಸಿದನು.

ಕದನಮುಖದಲ್ಲಿ ಹಾಜರಿರಬೇಕೆಂಬ ತನ್ನ ಬಯಕೆಯನ್ನು ಯುವ ಚಕ್ರವರ್ತಿ ಅದುಮಿಡಲಾರದೆ, ಆಸ್ಥಾನಿಕರ ಬುದ್ಧಿವಾದವನ್ನು ಲಕ್ಷಿಸದೆ, ಹನ್ನೆರಡು ಗಂಟೆ ಸಮಯದಲ್ಲಿ ತಾನಿದ್ದ ತೃತೀಯ ಸೇನಾವ್ಯೂಹವನ್ನು ಬಿಟ್ಟು ಮುಂಗಾಪುದಳದ ಕಡೆಗೆ ಅಶ್ವದಳದೊಡನೆ ದೌಡಾಯಿಸಿದನು. ಮಾರ್ಗಮಧ್ಯೆ ಸಂಧಿಸಿದ ಹಲವು ಸಹಾಯಾಧಿಕಾರಿಗಳು ಕಾರ್ಯಾಚರಣೆಯ ವಿಜಯವಾರ್ತೆಯನ್ನು ಅವನಿಗರುಹಿದರು.

ಫ್ರೆಂಚ್ ಪಟಾಲಮ್ಮಿನ ಬಂಧನದಲ್ಲಿ ಮುಕ್ತಾಯಗೊಂಡ ಈ ಕದನ ಫ್ರೆಂಚರ ವಿರುದ್ಧವಾಗಿ ಸಾಧಿಸಿದ ಅದ್ಭುತ ವಿಜಯವಾಗಿತ್ತು. ರಣರಂಗವನ್ನೆಲ್ಲ ಧೂಮ ವ್ಯಾಪಿಸಿಕೊಂಡಿರುವಾಗಲೇ, ಫ್ರೆಂಚರು ಸೋತು ತಮ್ಮಿಚ್ಛೆಗೆ ವಿರುದ್ಧವಾಗಿ ಹಿಮ್ಮೆಟ್ಟುತ್ತಿದ್ದರೆಂಬುದಾಗಿ ಸೈನ್ಯವೂ ಚಕ್ರವರ್ತಿಯೂ ನಂಬಿಕೊಂಡರು. ಚಕ್ರವರ್ತಿ ಮುನ್ನಡೆದ ಕೆಲವು ನಿಮಿಷಗಳ ನಂತರ, ಪಾವ್ಲೊಗ್ರಾಡ್ ವಿಭಾಗ ಮುಂದೆ ಸಾಗತಕ್ಕದ್ದೆಂದು ಆಜ್ಞಾಪಿಸಲಾಯಿತು. ವಿಸ್‌ಚೌ ಎಂಬ ಸಣ್ಣ ಜರ್ಮನ್ ಪಟ್ಟಣದಲ್ಲಿ ರೊಸ್ತೋವ್ ಮತ್ತೆ ಚಕ್ರವರ್ತಿಯನ್ನು ಕಂಡನು. ಚಕ್ರವರ್ತಿಯ ಆಗಮನಕ್ಕೆ ಮುಂಚಿತವಾಗಿ, ಗುಂಡಿನ ಕಾಳಗ ತೀವ್ರವಾಗಿ ನಡೆದಿದ್ದ ಮಾರ್ಕೆಟ್ ಜಾಗದಲ್ಲಿ ಅನೇಕ ಮೃತ ಸೈನಿಕರೂ ಗಾಯಾಳುಗಳೂ ನೆಲದಮೇಲೊರಗಿದ್ದರು. ಅವರನ್ನು ಬೇರೆಡೆಗೆ ಸಾಗಿಸಲು ಸಮಯವಿರಲಿಲ್ಲ. ಅಧಿಕಾರಿಗಳ ಹಾಗೂ ಆಸ್ಥಾನಿಕರ ಪರಿವಾರದ ನಡುವೆ ಕೆಂಗಂದು ಬಣ್ಣದ ಮೋಟುಬಾಲದ ಕುದುರೆಯ ಮೇಲೆ ಚಕ್ರವರ್ತಿ ಸವಾರಿಸುತ್ತಿದ್ದನು. ಅದು ಪರಿಶೀಲನ ಸಮಯದಲ್ಲಿ ಸವಾರಿಸಿದ್ದ ಕುದುರೆಯಾಗಿರಲಿಲ್ಲ. ಅವನು ಒಂದು ಪಾರ್ಶ್ವಕ್ಕೆ ಬಾಗಿ, ಚಿನ್ನದ ಕಟ್ಟುಳ್ಳ ದುರ್ಬೀನನ್ನು ನಾಜೋಕಾಗಿ ತನ್ನ ಕಣ್ಣಿಗೆ ಹಿಡಿದುಕೊಂಡನು. ಮುಖವಡಿಯಾಗಿ ಬಿದ್ದಿದ್ದ, ವೇಷ್ಟನರಹಿತ ರಕ್ತಸಿಕ್ತ ಶಿರಸ್ಸಿನ ಸೈನಿಕನನ್ನು ದಿಟ್ಟಿಸಿದನು. ದೂಳುಕೊಳೆಗಳಡಿದು, ಒಡ್ಡೊಡ್ಡಾಗಿ, ವಾಕರಿಕೆ ಬರುವ ಸ್ಥಿತಿಯಲ್ಲಿದ್ದ ಗಾಯಾಳುವಿನ ಸನಿಹದಲ್ಲಿದ್ದ ಚಕ್ರವರ್ತಿಯನ್ನು ನೋಡಿ ರೊಸ್ತೋವ್ ಗಾಬರಿಗೊಂಡನು. ಕೊರೆವ ಚಳಿಯ ಸಂಚಾರದಿಂದಾಗಿ ಚಕ್ರವರ್ತಿಯ ದುಂಡುದೋಳು ಹೇಗೆ ನಡುಗುತ್ತಿತ್ತೆಂಬುದನ್ನು, ಅವನ ಎಡಗಾಲು ಹಿಮ್ಮಡಿಯ ಮುಳ್ಳಿನಿಂದ ಹೇಗೆ ಸೆಳೆವು ಬಂದಂತೆ ಕುದುರೆಯ ಬದಿಯನ್ನು ಬಡಿಯುತ್ತಿತ್ತೆಂಬುದನ್ನು, ಚೆನ್ನಾಗಿ ತರಬೇತಿ ಹೊಂದಿದ ಕುದುರೆ ಕದಲದೆ ಹೇಗೆ ನಿರಾತಂಕವಾಗಿ ಸುತ್ತಲೂ ನೋಡುತ್ತಿತ್ತೆಂಬುದನ್ನು ರೊಸ್ತೋವ್ ಗಮನಿಸಿದನು. ಸಹಾಯಾಧಿಕಾರಿಯೊಬ್ಬ ಕುದುರೆಯಿಂದಿಳಿದು,

ಕೈಮಂಚದ ಮೇಲೆ ಮಲಗಿಸಲು, ಸೈನಿಕನನ್ನು ತನ್ನ ತೋಳುಗಳಿಂದ ಮೇಲೆತ್ತಿದನು. ಸೈನಿಕ ಸಂಕಟದಿಂದ ನರಳಿದನು.

'ಮೆಲ್ಲಗೆ, ಮೆಲ್ಲಗೆ! ಇನ್ನೂ ಮೆಲ್ಲಗೆ ಎತ್ತಲಾರೆಯಾ?' ಎಂದು ಮರಣೋನ್ಮುಖ ನಾಗಿದ್ದ ಸೈನಿಕನಿಗಿಂತ ಮಿಗಿಲಾಗಿ ತನಗೇ ನೋವಾಗಿದ್ದಂತೆ ಚಕ್ರವರ್ತಿ ನೊಂದು ನುಡಿದು, ಮುಂದೆ ಹೊರಟನು.

ರೊಸ್ತೋವ್ ಚಕ್ರವರ್ತಿಯ ಅಶ್ರುಪೂರ್ಣವಾದ ಕಣ್ಣುಗಳನ್ನು ನೋಡಿದನು. ಚಕ್ರವರ್ತಿ ತಾನು ಮುಂದೆ ಸಾಗುವಾಗ ತ್ಸಾರ್ತೊರಿಸ್ಕಿಯನ್ನು ಕರೆದು, 'ಯುದ್ಧ ಎಂಥ ಭಯಂಕರ ಘಟನೆ! ಎಂಥ ಭಯಂಕರ ಘಟನೆ' ಎಂದು ಸುಯ್ದನು.

ವಿಸ್‌ಚೌ ಮುಂಭಾಗದಲ್ಲಿ, ಶತ್ರುಸೈನ್ಯ ಕಾಣುವಂತೆ, ಮುಂಗಾಪಿನ ದಳಗಳನ್ನು ನಿಲ್ಲಿಸಲಾಗಿತ್ತು. ಸಣ್ಣ ಗುಂಡುಗಾಳಗಕ್ಕೇನೇ ಎದೆಗೊಡದೆ ದಿನವಿಡೀ ಶತ್ರುಸೈನ್ಯ ಹಿಂದುಹಿಂದಕ್ಕೆ ಸರಿಯುತ್ತಿತ್ತು. ಮುಂಗಾಪಿನ ದಳಗಳಿಗೆ ಚಕ್ರವರ್ತಿ ತನ್ನ ಕೃತಜ್ಞತೆ ಯನ್ನು ಸೂಚಿಸಿದನು; ಪ್ರಶಸ್ತಿಗಳನ್ನು ನೀಡುವುದಾಗಿ ಸಾರಿದನು. ಸೈನಿಕರಿಗೆ ಎರಡ ರಷ್ಟು ಪ್ರಮಾಣದ ವೋದ್ಕ ದೊರಕಿತು. ಶಿಬಿರಾಗ್ನಿ ಚಟಚಟಗುಟ್ಟಿತು; ಹಿಂದಿನ ರಾತ್ರಿಗಿಂತ ಮಿಗಿಲಾಗಿ ಸೈನಿಕರ ಹರ್ಷಸಂಗೀತ ಅನುರಣಿಸಿತು. ಮೇಜರ್ ಹುದ್ದೆಗೆ ಬಡ್ತಿಪಡೆದ ಡೆನಿಸೋವ್ ಹಬ್ಬವನ್ನಾಚರಿಸಿದನು. ಮೊದಲೇ ಕುಡಿದು ಮತ್ತೇರಿದ್ದ ರೊಸ್ತೋವ್ ಭೋಜನಾನಂತರ ಚಕ್ರವರ್ತಿಗಳ ಆರೋಗ್ಯಕ್ಕಾಗಿ ಪ್ರಾರ್ಥನೆ ಸಲ್ಲಿಸಿದನು. 'ಸಾಮಾನ್ಯವಾಗಿ ಅಧಿಕೃತ ಭೋಜನಕೂಟಗಳಲ್ಲಿ "ನಮ್ಮ ಸಾರ್ವಭೌಮರಿಗಾಗಿ, ಚಕ್ರವರ್ತಿಗಳಿಗಾಗಿ" ಎಂದು ಸ್ವಸ್ತಿವಾಚನಮಾಡುವುದು ಸರಿಯಷ್ಟೆ. ಅದು ಕೂಡದು. ನಮ್ಮ ಸಾರ್ವಭೌಮರ ಆರೋಗ್ಯಕ್ಕಾಗಿ, ಆ ಕಲ್ಯಾಣ ಪುರುಷನೂ, ಸಮ್ಮೋಹಕ ವ್ಯಕ್ತಿಯೂ, ಮಹಾಪುರುಷನೂ ಆದ ಸಾರ್ವಭೌಮರ ಆರೋಗ್ಯಕ್ಕಾಗಿ ಎಂದು ಘೋಷಿಸಬೇಕು! ನಾವೀಗ ಅವರ ಆರೋಗ್ಯಕ್ಕಾಗಿ ಮತ್ತು ಫ್ರೆಂಚರ ಅಪಜಯಕ್ಕಾಗಿ ಕುಡಿಯೋಣ!'

'ಫ್ರೆಂಚರು ಮುಂದೆ ಹೆಜ್ಜೆಯಿಡದಂತೆ, ಷಾನ್‌ಗ್ರಾಬರ್ನ್‌ನಲ್ಲಿ ಈ ಮುನ್ನ ಕಾದಿ ದಂತೆ ಕಾದಿದ್ದಾದರೆ, ನಾವು ಎಂಥ ವಿಜಯವನ್ನಾದರೂ ಸಾಧಿಸಬಹುದಾಗಿದೆ. ಅದರಲ್ಲಿಯೂ ಚಕ್ರವರ್ತಿಗಳೇ ಮುಂಚೂಣಿಯಲ್ಲಿರುವಾಗ ಯಾವುದೂ ಅಸಾಧ್ಯವಾಗ ಲಾರದು! ಅವರಿಗಾಗಿ ನಾವೆಲ್ಲರೂ ಸಂತೋಷದಿಂದ ಪ್ರಾಣತ್ಯಾಗ ಮಾಡಲು ಸಿದ್ಧ ರಾಗೋಣ! ಮಿತ್ರರೆ, ನಾನು ಹೇಳುವುದು ಸರಿತಾನೆ? ಪ್ರಾಯಶಃ ನಾನು ಹೇಳ ಬೇಕಾದ್ದನ್ನೆಲ್ಲ ಹೇಳುತ್ತಿಲ್ಲ; ಕಂಠಪೂರ್ತಿ ಕುಡಿದುಬಿಟ್ಟಿದ್ದೇನೆ. ಆದರೆ ಅದು ನನ್ನ ಭಾವನೆ–ನಿಮ್ಮದೂ ಅದೇ ಇರಬೇಕಲ್ಲವೆ? ಮೊದಲನೆಯ ಅಲೆಕ್ಸಾಂಡರ್ ಆರೋಗ್ಯ ಕ್ಕಾಗಿ! ಉಘೇ, ಉಘೇ!' ಎಂದವನು ಉದ್ಘೋಷಿಸಿದನು.

'ಉಘೇ, ಉಘೇ!' ಎಂದು ಅಧಿಕಾರಿಗಳ ಉತ್ಸಾಹಧ್ವನಿ ಮೊಳಗಿತು.

ಇಪ್ಪತ್ತು ವರ್ಷದ ರೊಸ್ತೋವ್‌ಗೆ ಕಡಮೆಯಿಲ್ಲವೆಂಬಂತೆ ಹಿರಿಯ ರಾವು ಕಪ್ತಾನ್ ಕಿರ್‌ಸ್ತಿನ್ ಅತ್ಯಂತ ಉತ್ಸಾಹ ಶ್ರದ್ಧೆಗಳಿಂದ ಜಯಕಾರ ಮಾಡಿದನು.

ಅಧಿಕಾರಿಗಳು ಬರಿದುಮಾಡಿ, ಗಳಾಸುಗಳನ್ನು ಪುಡಿಪುಡಿ ಮಾಡಿದ ನಂತರ ಕಿರ್‌ಸ್ತಿನ್ ಬೇರೆ ಗಳಾಸುಗಳನ್ನು ಭರ್ತಿಮಾಡಿ, ತಾನೂ ಕೈಯಲ್ಲೊಂದು ಹಿಡಿ

ಕೊಂಡು ಶಿಬಿರಾಗ್ನಿಯ ಕಡೆಗೆ ನಡೆದನು. ಉದ್ದನೆಯ ಬೂದುಬಣ್ಣದ ಮೀಸೆಯು, ತೆರೆದ ಷರ್ಟಿನೊಳಗಿಂದ ಪ್ರದರ್ಶನಗೊಂಡಿದ್ದ ಬಿಳಿಯೆದೆಯು ಅವನು ಎತ್ತಿದ ತೋಳನ್ನು ಬೀಸುತ್ತ, ಗಂಭೀರ ಭಂಗಿಯಲ್ಲಿ ಶಿಬಿರಾಗ್ನಿಯ ಬೆಳಕಿನಲ್ಲಿ ನಿಂತಿದ್ದನು.

'ಹೈಕಳೆ! ಇಲ್ಲಿ ನಮ್ಮ ಸಾರ್ವಭೌಮರಿದ್ದಾರೆ. ಶತ್ರುಗಳ ಮೇಲೆ ವಿಜಯ ಲಭಿಸಿದೆ! ಉಘೇ!' ಎಂದವನು ಅಪ್ಪಳಿಸುವ ರಾವುತನ ಮಂದ್ರಧ್ವನಿಯಲ್ಲಿ ಘೋಷಿಸಿದನು.

ರಾವುತರು ಅವನ ಸುತ್ತ ಕವಿದು, ಹೃತ್ಪೂರ್ವಕವಾಗಿ, ಪ್ರತಿಕ್ರಿಯೆ ವ್ಯಕ್ತಪಡಿಸಿದರು.

ರಾತ್ರಿ ಹೊತ್ತಾದನಂತರ ಅವರೆಲ್ಲರೂ ಪ್ರತ್ಯೇಕವಾದಾಗ, ಡೆನಿಸೋವ್ ತನ್ನ ಚೋಟುಕೈಗಳಿಂದ ಅಚ್ಚುಮೆಚ್ಚಿನ ರೊಸ್ತೋವ್‌ನ ಭುಜವನ್ನು ಚಪ್ಪರಿಸಿದನು. 'ದಂಡಯಾತ್ರೆಯಲ್ಲಿ ಪ್ರೀತಿಸಲು ಬೇರೆ ಯಾರೂ ಇಲ್ಲದ್ದರಿಂದ ಇವನು ಚಕ್ರವರ್ತಿಯನ್ನೆ ಅತಿಯಾಗಿ ಪ್ರೀತಿಸುತ್ತಿದ್ದಾನೆ' ಎಂದು ನುಡಿದನು.

'ಡೆನಿಸೋವ್, ತಮಾಷೆಮಾಡಬೇಡ! ಅದೆಂಥ ಸುಂದರವೂ ಉನ್ನತವೂ ಆದ ಭಾವನೆ ಗೊತ್ತೆ?....'

'ನಿಜ, ಗೆಳೆಯ. ನಿನ್ನ ಮಾತಿನಲ್ಲಿ ನಂಬಿಕೆಯಿದೆ. ನಿನ್ನ ಭಾವನೆಯನ್ನು ನಾನೂ ಅನುಮೋದಿಸುತ್ತೇನೆ. ನನ್ನದೂ ಅದೇ ಭಾವನೆ.'

'ಇಲ್ಲ, ಇಲ್ಲ. ನೀನು ನನ್ನನ್ನರ್ಥಮಾಡಿಕೊಳ್ಳಲಾರೆ!'

ರೊಸ್ತೋವ್ ಮೇಲೆದ್ದು, ಶಿಬಿರಾಗ್ನಿಗಳ ನಡುವೆ ಅಡ್ಡಾಡುತ್ತ, ಚಕ್ರವರ್ತಿಗಳ ಪ್ರಾಣರಕ್ಷಣೆಗಾಗಿ (ಆ ಬಗ್ಗೆ ಕನಸು ಕಾಣುವ ಧೈರ್ಯವೂ ಅವನಲ್ಲಿರಲಿಲ್ಲ.)ಯಲ್ಲ, ಅವನ ಕಣ್ಣುಗಳೆದುರಿಗೆ ಸುಮ್ಮನೆ ಸಾಯುವುದರಲ್ಲಿ ಎಂಥ ಸುಖವಿರಬಹುದೆಂಬುದನ್ನು ಕುರಿತು ಕನಸು ಕಾಣುತ್ತಿದ್ದನು. ಅವನು ನಿಜಕ್ಕೂ ತ್ಸಾರ್‌ನಲ್ಲಿ ಅನುರಕ್ತನಾಗಿದ್ದನು. ರಷ್ಯನ್ ಸೈನ್ಯದ ಪರಾಕ್ರಮದ ವೈಭವದಲ್ಲಿ, ನಾಳಿನ ವಿಜಯದ ಭರವಸೆಯಲ್ಲಿ ಅವನ ಮನಸ್ಸು ಮಗ್ನವಾಗಿತ್ತು. ಆಸ್ಟರ್‌ಲಿಜ್ ಕದನಕ್ಕೆ ಮುನ್ನಿನ ಆ ಸ್ಮರಣೀಯ ದಿನಗಳಲ್ಲಿ ಅಂಥ ಪ್ರೇಮದಲ್ಲಿ ಮುಳುಗಿದ್ದವನು ಅವನೊಬ್ಬನೇ ಅಲ್ಲ, ರಷ್ಯನ್ ಸೈನ್ಯದ ಹತ್ತರಲ್ಲೊಂಬತ್ತು ಪಾಲು ಯೋಧರು ತಮ್ಮ ತ್ಸಾರ್ ಬಗ್ಗೆ ಹಾಗೂ ರಷ್ಯನ್ ಸೈನ್ಯದ ವೈಭವದ ಬಗ್ಗೆ, ಅಷ್ಟೊಂದು ಉದ್ರೇಕವಿಲ್ಲದಿದ್ದರೂ, ಹೆಚ್ಚುಕಡಮೆ ಅಷ್ಟೇ ಪ್ರೇಮವುಳ್ಳವರಾಗಿದ್ದರು.

ಅಧ್ಯಾಯ ೧೧

ಮಾರನೆಯ ದಿನ ಚಕ್ರವರ್ತಿ ವಿಸ್‌ಚಾ ಮತ್ತು ವಿಲಿಯರ್ ಪಟ್ಟಣಗಳಲ್ಲಿ ತಂಗಿದ್ದು, ಮೇಲಿಂದ ಮೇಲೆ ವೈದ್ಯನಿಗಾಗಿ ಹೇಳಿ ಕಳಿಸುತ್ತಿದ್ದನು. ಚಕ್ರವರ್ತಿಗಳಿಗೆ ಆರೋಗ್ಯವಿಲ್ಲವೆಂಬ ಸುದ್ದಿ ಕೇಂದ್ರ ಕಾರ್ಯಸ್ಥಾನದಲ್ಲಿ ಮತ್ತು ಹತ್ತಿರದ ದಳಗಳಲ್ಲಿ ಹಬ್ಬಿತು. ಅವನು ಊಟಮಾಡುತ್ತಿರಲಿಲ್ಲವೆಂದು, ಅವನಿಗೆ ರಾತ್ರಿ ಸರಿಯಾಗಿ ನಿದ್ದೆ ಹತ್ತಲಿಲ್ಲವೆಂದು ಸುತ್ತಣವರು ಹೇಳಿಕೊಳ್ಳುತ್ತಿದ್ದರು. ಸತ್ತವರ ಮತ್ತು ಗಾಯಾಳುಗಳ

ದೃಶ್ಯ ಅವನ ಸೂಕ್ಷ್ಮ ಮನಸ್ಸಿನ ಮೇಲೆ ಬಲವಾಗಿ ಅಚ್ಚೊತ್ತಿದ್ದುದೇ ಅವನ ಅನಾರೋಗ್ಯಕ್ಕೆ ಕಾರಣವಾಗಿತ್ತು.

೧೭ ರಂದು ಮುಂಜಾನೆ, ಸಂಧಿಸೂಚಕ ಬಾವುಟವನ್ನು ಹಿಡಿದು, ಚಕ್ರವರ್ತಿಯ ಸಂದರ್ಶನಾರ್ಥವಾಗಿ ಬಂದಿದ್ದ ಫ್ರೆಂಚ್ ಅಧಿಕಾರಿಯನ್ನು ಉಕ್ಕಡದಿಂದ ವಿಸ್‌ಚೌಗೆ ಕರೆತರಲಾಯಿತು. ಅವನ ಹೆಸರು ಸವರಿ. ಚಕ್ರವರ್ತಿ ಅದೇ ತಾನೆ ಗಾಢನಿದ್ರೆಯಲ್ಲಿದ್ದುದರಿಂದ, ಸವರಿ ಕಾಯಬೇಕಾಯಿತು. ಅವನು ಚಕ್ರವರ್ತಿಯನ್ನು ಮಧ್ಯಾಹ್ನದ ಹೊತ್ತಿಗೆ ಭೇಟಿಮಾಡಿದನು. ಒಂದು ಗಂಟೆಯ ನಂತರ ಅವನು ರಾಜಕುಮಾರ ದೊಲ್ಗೊರೂಕೊವ್‌ನ ಸಂಗಡ ಫ್ರೆಂಚ್ ಸೈನ್ಯದ ಮುಂಚೂಣಿಗೆ ಸವಾರಿಸಿದನು.

ನೆಪೋಲಿಯನ್ನನೊಡನೆ ಅಲೆಕ್ಸಾಂಡರನನ್ನು ಭೇಟಿಮಾಡಿಸುವ ಸಲಹೆಯನ್ನು ಸವರಿ ತಂದಿದ್ದನೆಂಬ ವದಂತಿ ಪಾಳೆಯದಲ್ಲಿ ಹರಡಿತ್ತು. ವೈಯಕ್ತಿಕ ಸಂದರ್ಶನದ ನಿರಾಕರಣೆಯ ಸುದ್ದಿಯನ್ನು ಇಡೀ ಸೈನ್ಯ ನಲಿವು ಹೆಮ್ಮೆಗಳಿಂದ ಸ್ವಾಗತಿಸಿತ್ತು. ಚಕ್ರವರ್ತಿಯ ಬದಲು ವಿಸ್‌ಚೌ ಸಂಗ್ರಾಮ ವಿಜೇತ ರಾಜಕುಮಾರ ದೊಲ್ಗೊರೂಕೊವ್ ನೆಪೋಲಿಯನ್ನನೊಡನೆ ಸಂಧಾನ ನಡಸುವುದೆಂದು ಸವರಿಯೊಡನೆ ಅವನನ್ನು ಕಳಿಸಲಾಗಿತ್ತು. ಈ ಸಂಧಾನದ ಹಿನ್ನೆಲೆಯಲ್ಲಿ ನಿಜವಾದ ಶಾಂತಿಯ ಬಯಕೆಯಿದೆಯೋ ಇಲ್ಲವೋ ಎಂಬ ಸಂಗತಿಯನ್ನು ಸ್ಪಷ್ಟಪಡಿಸಿಕೊಳ್ಳುವುದು ಚಕ್ರವರ್ತಿಯ ಉದ್ದೇಶವಾಗಿತ್ತು.

ಸಂಜೆಯ ಹೊತ್ತಿಗೆ ಹಿಂದಿರುಗಿದ ದೊಲ್ಗೊರೂಕೊವ್ ನೇರವಾಗಿ ತ್ಸಾರನ ಬಳಿಗೈದಿ, ಬಹುಹೊತ್ತು ಅವನೊಡನೆ ಏಕಾಂತದಲ್ಲಿದ್ದನು.

ನವೆಂಬರ್ ೧೮ ಮತ್ತು ೧೯ ನೆಯ ದಿನಗಳಂದು ಸೈನ್ಯ ಮುಂದೆ ಮುಂದೆ ಹೆಜ್ಜೆಯಿಟ್ಟಿತು. ತಾತ್ಕಾಲಿಕ ಸಿಡಿಗುಂಡುಗಳ ವಿನಿಮಯದ ನಂತರ ಶತ್ರುಗಳು ಹಿಮ್ಮೆಟ್ಟಿದರು. ಅತ್ಯುನ್ನತ ಸೈನಿಕ ವೃತ್ತಗಳಲ್ಲಿ ೧೯ರ ಮಧ್ಯಾಹ್ನ ಪ್ರಾರಂಭವಾದ ಕಾತರತೆಯ, ಕೋಲಾಹಲದ ಚಟುವಟಿಕೆಗಳು ೨೦ ನೆಯ ಪ್ರಾತಃಕಾಲದವರೆಗೆ ಮುಂದುವರಿದಿದ್ದುವು. ಪ್ರಖ್ಯಾತ ಆಸ್ಟರ್‌ಲಿಜ್ ಕದನ ನಡೆದದ್ದೇ ಆಗ.

೧೯ರ ಮಧ್ಯಾಹ್ನದ ತನಕ ಕಾತರತೆಯ ಮಾತುಕತೆ, ಅತ್ತಿತ್ತಣ ಓಡಾಟ ಮತ್ತು ಸಹಾಯಾಧಿಕಾರಿಗಳ ರವಾನೆ ಮೊದಲಾದ ಚಟುವಟಿಕೆಗಳು, ಚಕ್ರವರ್ತಿಗಳ ಕಾರ್ಯಕೇಂದ್ರಕ್ಕೆ ಸೀಮಿತಗೊಂಡಿದ್ದುವು. ಆ ದಿನ ಅಪರಾಹ್ನದ ವೇಳೆಗೆ ಎಲ್ಲ ಚಟುವಟಿಕೆಗಳು ಕುತುಜೋವ್‌ನ ಕಾರ್ಯಾಗಾರ ಮತ್ತು ಸೇನಾಪತಿಗಳ ಕಚೇರಿಗಳಿಗೆ ವರ್ಗಾವಣೆಗೊಂಡುವು. ಸಂಜೆಯ ಹೊತ್ತಿಗೆ ಸಹಾಯಾಧಿಕಾರಿಗಳು ಅವನ್ನು ಸೈನ್ಯದ ಕೆಲವು ಭಾಗಗಳಿಗೆ ಮತ್ತು ಕೊನೆಯ ಸೆರಗಿಗೆ ಮುಟ್ಟಿಸಿದ್ದರು. ೧೯ರ ರಾತ್ರಿಯಿಂದ ೨೦ರ ತನಕ ಇಡೀ ಎಂಬತ್ತು ಸಾವಿರ ಸಂಖ್ಯೆಯ ಮಿತ್ರಸೈನ್ಯ ಬಯಲು ಬಿಡಾರದಿಂದ ಧ್ವನಿಗಳ ಕಡಲಿಗೆ ಹೊರಳಿತು. ಅದು ಮೈಕೊಡವಿಕೊಂಡು, ಆರು ಮೈಲಿ ಉದ್ದದ ರಾಶಿಯೆಂಬಂತೆ ಕೆರಳಿತು.

ಬೆಳಗ್ಗೆ ಚಕ್ರವರ್ತಿಯ ಕಾರ್ಯಕೇಂದ್ರದಲ್ಲಿ ಪ್ರಾರಂಭವಾಗಿದ್ದ ಸಾಂದ್ರೀಕೃತ ಚಟುವಟಿಕೆ ಅನಂತರದ ಇಡೀ ಚಲನೆಯನ್ನು ಪ್ರೇರಿಸಿತ್ತು. ಅದು ಬೃಹದ್ ಗೋಪು

ಗಡಿಯಾರದ ಪ್ರಮುಖ ಚಕ್ರದ ಚಲನೆಯನ್ನು ಹೋಲುತ್ತಿತ್ತು. ಒಂದು ಚಕ್ರ ನಿದಾನವಾಗಿ ಚಲಿಸುತ್ತಿತ್ತು. ಮತ್ತೊಂದರ ಚಲನೆ ಶುರುವಾಗಿತ್ತು. ಮೂರನೆಯದೂ ಅಷ್ಟೇ. ಚಕ್ರಗಳು ಬೇಗ ಬೇಗ ಸುತ್ತತೊಡಗಿದುವು. ಸನ್ನೆ ಮತ್ತು ದಂತಚಕ್ರಗಳು ಕೆಲಸಮಾಡತೊಡಗಿದುವು. ಗಂಟೆ ಬಾಜಿಸತೊಡಗಿತು. ಅಂಕಿಗಳು ಚಲಿಸುತ್ತಿದ್ದುವು. ಈ ಎಲ್ಲ ಚಟುವಟಿಕೆಗಳ ಪರಿಣಾಮವಾಗಿ ಕೈಗಳು ಸಕ್ರಮವಾಗಿ ಚಲಿಸುತ್ತಿದ್ದುವು.

ಗಡಿಯಾರದ ಯಂತ್ರರಚನೆಯಲ್ಲಿಂತೊ ಸೈನಿಕಯಂತ್ರದಲ್ಲಿಯೂ ಅಂತೆಯೇ ಒಮ್ಮೆ ಕೊಟ್ಟ ಚಾಲನೆ ಕೊನೆಯ ಫಲಿತಾಂಶದ ತನಕ ತಂದುಬಿಡುತ್ತದೆ. ಚಾಲನೆ ಯನ್ನು ವಹನಿಸುವ ತನಕ ಅವು ಜಡವಾಗಿರುವಂತೆಯೇ, ಪ್ರೇರಣೆ ದೊರೆಯುವ ತನಕ ಸೈನಿಕ ಯಂತ್ರದ ಭಾಗಗಳು ನಿಶ್ಚೇಷ್ಟವಾಗಿರುತ್ತವೆ. ಹಲ್ಲುಗಳು ಒಂದರೊಡನೊಂದು ಕೂಡಿದಾಗ, ಚಲನೆಯ ವೇಗದೊಡನೆ ಸುತ್ತುತ್ತಿರುವ ರಾಟೆಗಳು ಗಿರ್ರೆನ್ನುವಾಗ ಇರಚಿಯ ಮೇಲಣ ಚಕ್ರಗಳು ಕಿರುಗುಟ್ಟುತ್ತವೆ. ಆದರೆ ಪಕ್ಕದ ಚಕ್ರ ನೂರಾರು ವರ್ಷಗಳಿಂದ ನಿಶ್ಶಬ್ದವಾಗಿ ಚಲನರಹಿತವಾಗಿದ್ದಂತೆ ತೋರುತ್ತದೆ. ಆದರೆ ಸನ್ನೆ ಅದನ್ನು ಹಿಡಿದುಕೊಂಡ ತಕ್ಷಣವೆ, ಪ್ರೇರಣೆಗೆ ವಿಧೇಯವಾಗಿ ಆ ಚಕ್ರ ಕಿರುಗುಟ್ಟುತ್ತದೆ. ಇಡೀ ಚಲನ ವ್ಯವಸ್ಥೆಯಲ್ಲಿ ಒಂದಾಗುತ್ತದೆ. ಗುರಿ ಮತ್ತು ಫಲಿತಾಂಶಗಳು ಅದರ ಅರಿವಿಗೆ ನಿಲುಕುವುದಿಲ್ಲ.

ಹೇಗೆ ಗಡಿಯಾರದಲ್ಲಿ ಅನೇಕ ಚಕ್ರ ಮತ್ತು ರಾಟೆಗಳ ಜಟಿಲ ಚಲನೆ ವೇಳೆ ಯನ್ನು ಸೂಚಿಸುವ ಕೈಗಳ ಕ್ರಮಬದ್ಧವೂ ನಿದಾನವೂ ಆದ ಚಲನೆಯನ್ನು ಪ್ರೇರಿಸು ತ್ತದೆಯೋ ಹಾಗೆಯೇ ೧೬೦,೦೦೦ ರಷ್ಯಾ ಮತ್ತು ಫ್ರೆಂಚ್ ಮಂದಿಯ ಸಕಲ ಸಂಕೀರ್ಣ ಜಟಿಲ ಮಾನವೀಯ ಚಟುವಟಿಕೆಗಳು ಅವರ ಸಕಲ ಭಾವೋದ್ರೇಕಗಳ, ಆಶೆಗಳ, ಪರಿತಾಪಗಳ, ಅಪಮಾನಗಳ, ಪೇಚಾಟನರಳಾಟಗಳ, ಹಮ್ಮುಬಿಮ್ಮು ಭೀತಿ ಉತ್ಸಾಹಗಳ ಸ್ಫೋಟನೆಯ ಫಲಿತಾಂಶವೆಂದರೆ ಚಕ್ರವರ್ತಿತ್ರಯರ ಕದನವೆಂದು ಕರೆಯಲಾದ ಆಸ್ಟರ್‌ಲಿಜ್ ಕದನದಲ್ಲಿ ಸಂಭವಿಸಿದ ನಷ್ಟಮಾತ್ರ; ಅಂದರೆ ಮಾನವ ಇತಿಹಾಸದ ಮುಖಫಲಕದ ಮೇಲೆ ನಡೆಯುತ್ತಿರುವ ಕೈಯ ಮುಂದಗತಿಯ ಚಲನೆ.

ಆ ದಿನ ರಾಜಕುಮಾರ ಆಂಡ್ರ್ಯೂ ಕರ್ತವ್ಯನಿರತನಾಗಿ, ಮಹಾದಂಡನಾಯಕನ ಸಂಗಡವಿದ್ದನು.

ಸಂಜೆ ಆರುಗಂಟೆಗೆ ಕುತುಜೋವ್ ಚಕ್ರವರ್ತಿಯ ಕಾರ್ಯಕೇಂದ್ರಕ್ಕೆ ಹೋಗಿ, ತುಸುಹೊತ್ತು ಅವನೊಡನಿದ್ದು, ಅನಂತರ ಸೈನಿಕ ನ್ಯಾಯಾಲಯದ ಅತ್ಯುನ್ನತಾಧಿ ಕಾರಿ ಶ್ರೀಮಂತ ತೋಲ್‌ಸ್ತಾಯ್‌ನನ್ನು ನೋಡಲು ಹೋದನು.

ಅದೇ ಸಮಯಕ್ಕಾಗಿ ಕಾದಿದ್ದ ಬಲ್ಕೋನ್‌ಸ್ಕಿ ಮುಂದಿನ ಕಾರ್ಯಾಚರಣೆಯ ವಿವರಗಳನ್ನು ತಿಳಿಯುವ ಸಲುವಾಗಿ ದೊಲ್ಗೊರೂಕೊವ್ ಕಡೆಗೆ ಹೋದನು. ಯಾವುದೋ ವಿಷಯವಾಗಿ ಕುತುಜೋವ್ ಅತೃಪ್ತಿಯಿಂದ ರೇಗಿಕೊಂಡಿರಬೇಕೆಂದು, ಕಾರ್ಯಕೇಂದ್ರದ ಜನ ಅವನ ಬಗ್ಗೆ ಬೇಸರಗೊಂಡಿರಬೇಕೆಂದು, ಇತರರಿಗೆ ತಿಳಿಯದುದು ತನಗೆ ತಿಳಿದಿದೆಯೆಂಬ ನಿಲವನ್ನು ಚಕ್ರವರ್ತಿಯ ಕಾರ್ಯಕೇಂದ್ರದ ಪ್ರತಿಯೊಬ್ಬ

ವ್ಯಕ್ತಿಯೂ ತಾಳಿರಬೇಕೆಂದು ಅವನು ಭಾವಿಸಿದನು. ಆದ್ದರಿಂದಲೇ ಅವನು ದೊಲ್ಗೊರೂಕೊವ್ ಜತೆ ಮಾತಾಡಲು ಇಚ್ಛಿಸಿದ್ದು.

'ಬನ್ನಿ ಬನ್ನಿ, ಹೇಗಿದ್ದೀರಿ ಮಿತ್ರರೆ?' ಎಂದು ಬಿಲಿಬಿನ್‌ನೊಡನೆ ಟೀ ಕುಡಿಯುತ್ತಿದ್ದ ದೊಲ್ಗೊರೂಕೊವ್ ಅವನನ್ನು ಆದರಿಸಿದನು. 'ನಾಳೆ ಔತಣ. ನಿಮ್ಮ ಮುದಿ ಗೆಣೆಯ ಹೇಗಿದ್ದಾರೆ? ಸ್ವಸ್ಥವಾಗಿಲ್ಲವೇನು?'

'ಅವರು ಅಸ್ವಸ್ಥರಾಗಿದ್ದಾರೆಂದು ಹೇಳಲಾರೆ. ತಮ್ಮ ಮಾತಿಗೆ ಬೆಲೆ ಸಿಗಬೇಕೆಂದು ಅವರು ಭಾವಿಸಿಕೊಂಡಂತಿದೆ. ಇದು ನನ್ನ ಊಹೆ.'

'ಯುದ್ಧಮಂಡಲಿಯಲ್ಲಿ ಅವರು ಹೇಳಿದ್ದನ್ನೆಲ್ಲ ಆಲಿಸಲಾಯಿತು. ಅವರು ವಿವೇಕಯುತವಾಗಿ ಮಾತಾಡಿದಾಗ ಎಲ್ಲರೂ ಕೇಳಿಯೇ ಕೇಳುತ್ತಾರೆ. ಬೋನಪಾರ್ಟ್ ಸರ್ವವ್ಯಾಪಕವಾದ ಕಾಳಗಕ್ಕೆ ಮಾತ್ರ ಯಾವುದೋ ನಿರೀಕ್ಷೆಯಿಂದ ಹೆದರುವಾಗ ಕಾಲ ತಳ್ಳುವುದು ಸಾಧ್ಯವಿಲ್ಲ.'

'ನೀವು ಬೋನಪಾರ್ಟೆಯನ್ನು ನೋಡಿದ್ದೀರಲ್ಲವೆ? ಅವನು ಹೇಗಿದ್ದಾನೆ? ಅವನು ನಿಮ್ಮ ಮನಸ್ಸಿನ ಮೇಲೆ ಬೀರಿದ ಪರಿಣಾಮವೇನು?' ಎಂದು ರಾಜಕುಮಾರ ಆಂಡ್ರ್ಯೂ ಪ್ರಶ್ನಿಸಿದನು.

'ಹೌದು, ಅವನನ್ನು ನೋಡಿದೆ. ಸರ್ವವ್ಯಾಪಕವಾದ ಕಾಳಗವೆಂದರೆ ಅವನಿಗೆ ಹೆದರಿಕೆ ಎಂಬ ವಿಚಾರದಲ್ಲಿ ನನಗೆ ಅನುಮಾನವಿಲ್ಲ' ಎಂದು ದೊಲ್ಗೊರೂಕೊವ್ ಪುನರುಚ್ಚರಿಸಿದನು. ನೆಪೋಲಿಯನ್ನನ ಭೇಟಿಯ ಫಲವಾಗಿ ತಾನು ರೂಪಿಸಿಕೊಂಡಿದ್ದ ನಿರ್ಣಯದ ಬಗ್ಗೆ ಅವನಿಗೆ ಅಭಿಮಾನ. 'ಅವನಿಗೆ ಕಾಳಗದ ಭಯವಿಲ್ಲದಿದ್ದರೆ ಸಂದರ್ಶನಕ್ಕಾಗಿ ಹಾತೊರೆತದದ್ದಾದರೂ ಏಕೆ? ಸಂಧಾನವೇಕೆ? ಹಿಮ್ಮೆಟ್ಟಿಕೆಯೇಕೆ? ಅವನ ಯುದ್ಧ ನಿರ್ವಹಣೆಯ ವಿಧಾನಕ್ಕೆ ಹಿಮ್ಮೆಟ್ಟಿಕೆ ಅಸಂಗತವಲ್ಲವೆ? ನನ್ನ ಮಾತನ್ನು ನಂಬಿ, ಅವನಿಗೆ ಸರ್ವವ್ಯಾಪಕ ಕಾಳಗವೆಂದರೆ ಹೆದರಿಕೆ. ಅವನ ಕಾಲ ಸನ್ನಿಹಿತವಾಗಿದೆ! ನನ್ನ ಮಾತು ನೆನಪಿನಲ್ಲಿಡಿ!'

'ಅವನು ಹೇಗಿದ್ದಾನೆ?' ಎಂದು ಆಂಡ್ರ್ಯೂ ಮತ್ತೆ ಪ್ರಶ್ನಿಸಿದನು.

'ಅವನು ಬೂದು ಬಣ್ಣದ ಮೇಲಂಗಿ ಧರಿಸುತ್ತಾನೆ. "ಮಹಾಪ್ರಭು" ಎಂದು ನಾನವನನ್ನು ಸಂಬೋಧಿಸಬೇಕೆಂಬುದು ಅವನ ಹೇರಾಸೆ. ಹಾಗೆ ನಾನವನನ್ನು ಕರೆಯದಿದ್ದಾಗ ಅವನಿಗೆ ಆಶಾಭಂಗವಾಗಿರಬೇಕು! ಇದು ಅವನ ಸ್ವರೂಪ. ಇದಕ್ಕಿಂತ ಹೆಚ್ಚೇನೂ ಇಲ್ಲ' ಎಂದು ದೊಲ್ಗೊರೂಕೊವ್ ಬಿಲಿಬಿನ್ ಕಡೆಗೆ ತಿರುಗಿಕೊಂಡು ಮುಗುಳುನಗೆ ಸೂಸಿದನು. 'ವೃದ್ಧ ಕುತುಜೋವ್‌ನ ಬಗ್ಗೆ ನನಗೆ ತುಂಬ ಗೌರವವಿದೆ. ನಾವು ನಿದಾನಿಸಿ, ಅವನು ನಮ್ಮ ಕೈಯಲ್ಲಿರುವಾಗ ಅವನು ತಪ್ಪಿಸಿಕೊಂಡು ಹೋಗಲು ಅಥವಾ ನಮ್ಮನ್ನು ವಂಚಿಸಲು ಅವಕಾಶ ಮಾಡಿಕೊಟ್ಟರೆ ನಾವು ಒಳ್ಳೆಯವರಾಗುತ್ತೇವೆ. ಅದು ಸಾಧ್ಯವಿಲ್ಲ. ಸುವೊರೋವ್‌ನನ್ನೂ ಅವನ ನಿಯಮವನ್ನೂ ನಾವು ಮರೆಯಲಾಗದು. ನೀನು ಆಕ್ರಮಿಸಿಕೊಳ್ಳುವ ಸ್ಥಿತಿಯಲ್ಲಿರಬೇಕೇ ಹೊರತು, ಆಕ್ರಮಣಕ್ಕೊಳಗಾಗುವ ಪರಿಸ್ಥಿತಿಗೊಳಗಾಗಬಾರದೆಂಬುದೇ ಅವನ ನಿಯಮ. ಮುದಿವಿಲಂಬಗುಳಿಗಳ ಸುದೀರ್ಘಾನುಭವಕ್ಕಿಂತ ಮಿಗಿಲಾಗಿ ಯುವಕರ ಸಾಮರ್ಥ್ಯ ವಿಶೇಷವಾಗಿ ಮಾರ್ಗದರ್ಶಿಯಾಗಿರುತ್ತದೆಂಬುದೇ ನನ್ನ ದೃಢವಿಶ್ವಾಸ.'

'ಹಾಗಾದರೆ ಯಾವ ನೆಲೆಯಿಂದ ಅವನ ಮೇಲೆ ನಾವು ಧಾಳಿ ನಡಸಬೇಕು ? ಈ ದಿನ ನಾನು ಗಡಿನೆಲೆಗೆ ಹೋಗಿದ್ದೆ. ಅವನ ಪ್ರಮುಖ ಸೈನ್ಯಗಳು ಎಲ್ಲಿ ಜಮಾವಣೆಗೊಂಡಿವೆಯೆಂದು ಹೇಳಲಾರೆ' ಎಂದು ರಾಜಕುಮಾರ ಆಂಡ್ರೂ ನುಡಿದನು. ತಾನೇ ತಯಾರಿಸಿದ್ದ ಆಕ್ರಮಣ ಯೋಜನೆಯುನ್ನವನು ದೊಲ್ಗೊರೂಕೊವ್‌ಗೆ ವಿವರಿಸಲು ಪ್ರಯತ್ನಿಸಿದನು.

'ಓ, ಅದೆಲ್ಲ ಒಂದೆ' ಎಂದು ಡೊಲ್ಗೊರೂಕೊವ್ ತಳುವದೆ ನುಡಿದು, ಮೇಲೆದ್ದು, ನಕ್ಷೆಯೊಂದನ್ನು ಮೇಜಿನ ಮೇಲೆ ಬಿಚ್ಚಿದನು. 'ಸಂಭವನೀಯ ಘಟನೆಗಳನ್ನೆಲ್ಲ ಗಮನದಲ್ಲಿರಿಸಿಕೊಳ್ಳಲಾಗಿದೆ. ಅವನು ಬ್ರೂನ್ ಈಚೆ ನಿಂತಿದ್ದರೆ....'ಎಂದು ರಾಜಕುಮಾರ ದೊಲ್ಗೊರೂಕೊವ್ ಬೇಗ ಬೇಗ, ಆದರೆ ಅಸ್ಪಷ್ಟವಾಗಿ, ವೇರಾದರ್‌ನ ಪಾರ್ಶ್ವಾಕ್ರಮಣ ಚಲನೆಯ ನಕ್ಷೆಯನ್ನು ವಿವರಿಸಿದನು.

ವೇರಾದರನ ನಕ್ಷೆಯಷ್ಟೇ ಉತ್ತಮವಾದ ತನ್ನ ನಕ್ಷೆಯ ರೂಪರೇಷೆಗಳನ್ನು ವಿವರಿಸಲು ರಾಜಕುಮಾರ ಆಂಡ್ರೂ ಪ್ರಯತ್ನಿಸಿದನು. ಆದರೆ ವೇರಾದರನ ನಕ್ಷೆ ಮೊದಲೇ ಅಂಗೀಕಾರ ಪಡೆದಿದ್ದುದರಿಂದ ಅವನ ಪರಿಸ್ಥಿತಿ ಅನುಕೂಲವಾಗಿರಲಿಲ್ಲ. ವೇರಾದರ್‌ನ ಯೋಜನೆಯ ನ್ಯೂನತೆಗಳನ್ನು ಪ್ರದರ್ಶಿಸಿ, ತನ್ನ ಯೋಜನೆಯ ಯೋಗ್ಯತೆಯನ್ನು ವಿಶದಪಡಿಸಲು ಆಂಡ್ರೂ ಪ್ರಯತ್ನಿಸುತ್ತಿರುವಾಗಲೇ ದೊಲ್ಗೊರೂಕೊವ್ ಅವನ ಮಾತನ್ನು ಕೇಳಿಸಿಕೊಳ್ಳದೆ, ನಕ್ಷೆಯ ಕಡೆಗೂ ದಿಟ್ಟಿ ಹಾಯಿಸದೆ, ಅನ್ಯಮನಸ್ಕನಾಗಿ ಆಂಡ್ರೂ ಮುಖವನ್ನು ದುರದುರನೆ ನೋಡುತ್ತಿದ್ದನು. 'ರಾತ್ರಿ ಕುತುಜೋವ್‌ನ ಕಚೇರಿಯಲ್ಲಿ ಯುದ್ಧಮಂಡಲಿ ಸೇರುತ್ತದೆ. ಇದನ್ನೆಲ್ಲ ನೀವಲ್ಲಿ ವಿವರಿಸಬಹುದು' ಎಂದವನು ಸೂಚಿಸಿದನು.

'ಹಾಗೆಯೇ ಆಗಲಿ' ಎಂದು ಆಂಡ್ರೂ ನಕ್ಷೆಯಿಂದ ದೂರ ಸರಿದನು.

ಆತನಕ ವಿನೋದಾತ್ಮಕ ಮಂದಹಾಸದಿಂದ ಅವರ ಸಂಭಾಷಣೆಯನ್ನು ಕೇಳಿಸಿಕೊಳ್ಳುತ್ತಿದ್ದು, ಕುಚೋದ್ಯ ಮಾಡಲು ಸಿದ್ಧನಾದ ಬಿಲಿಬಿನ್ ಮೆಲ್ಲನೆ ಮಾತು ತೆಗೆದನು: 'ಯಾವುದರ ಬಗ್ಗೆ ನೀವಿಷ್ಟು ಪೇಚಾಡುತ್ತಿದ್ದೀರಿ ? ಮಿತ್ರರೆ, ನಾಳೆ ಗೆಲುವೇ ಬರಲಿ, ಸೋಲೇ ಬರಲಿ, ನಮ್ಮ ರಷ್ಯನ್ ಸೈನ್ಯದ ಕೀರ್ತಿಯಂತು ಸುಭದ್ರವಾಗಿದೆ. ನಿಮ್ಮ ಕುತುಜೋವ್ ಒಬ್ಬರನ್ನು ಬಿಟ್ಟರೆ ದಂಡನಾಯಕ ಪದವಿಯಲ್ಲಿ ಒಬ್ಬನಾದರೂ ರಷ್ಯದವನು ಕಾಣುವುದಿಲ್ಲ. ಈಗಿರುವ ಸೇನಾಪತಿಗಳಿವರು: ಹರ್ ಜನರಲ್ ವಿಂಫೆನ್, ಲ ಕಾಮ್ಟೆ ದ ಲ್ಯಾಂಗರಾನ್, ಲ ಪ್ರಿನ್ಸ್ ದ ಲಿಚೆನ್‌ಸ್ಟೀನ್, ಲ ಪ್ರಿನ್ಸ್ ದ ಹೊಹೆನ್ ಲೋಹ್, ಮತ್ತು ಪ್ರಿಷ್ ಪ್ರಿಷ್ (ಪೋಲಿಷ್ ಸೇನಾಪತಿ ಪ್ರಿಜ್‌ಬಜ್‌ವಸ್ಕಿ) ಮುಂತಾದವರು. ಕೆಲವರ ಹೆಸರಂತು ಪೋಲಿಷ್ ಹೆಸರಿನಂತಿವೆ.

'ನೀನೊಬ್ಬ ಚಾಡಿಕೋರ. ಬಾಯಿಮುಚ್ಚಿಕೊಂಡಿರು. ನಿನ್ನೆಣಿಕೆ ಸುಳ್ಳು. ಈಗ ಮಿಲೊರಾದವಿಚ್ ಮತ್ತು ದೊಖ್ತುರೊವ್ ಎಂಬಿಬ್ಬರು ರಷ್ಯನ್ ಸೇನಾಪತಿಗಳಿದ್ದಾರೆ; ನರದೌರ್ಬಲ್ಯದಿಂದ ಪಾರಾಗಿದ್ದರೆ ಶ್ರೀಮಂತ ಆರಕ್‌ಚೀವ್ ಎಂಬ ಮತ್ತೊಬ್ಬನೂ ಆ ಪಟ್ಟಿಯಲ್ಲಿರುತ್ತಿದ್ದ' ಎಂದು ದೊಲ್ಗೊರೂಕೊವ್ ನುಡಿದನು.

'ಅದೇನೇ ಇರಲಿ, ದಂಡನಾಯಕ ಕುತುಜೋವ್ ಹೊರಗೆ ಬಂದಂತಿದೆ. ಮಿತ್ರರೆ,

ನಿಮಗೆ ಶುಭವಾಗಲಿ, ವಿಜಯ ವೈತರಲಿ!' ಎನ್ನುತ್ತ, ಅವರಿಬ್ಬರ ಕೈಕುಲುಕಿ ರಾಜಕುಮಾರ ಆಂಡ್ರೂ ಹೊರಗೆ ನುಸುಳಿದನು.

ತನ್ನ ಮುಗ್ಗುಲಲ್ಲಿ ಮೌನವಾಗಿ ಕುಳಿತಿದ್ದ ಕುತುಜೋವ್‌ನನ್ನು ಕುರಿತು, ಮಾರನೆಯ ದಿನದ ಯುದ್ಧ ಏನಾಗಬಹುದೆಂದು ಮನೆಯ ದಾರಿಯಲ್ಲಿ, ಆಂಡ್ರೂ ಪ್ರಶ್ನಿಸಿದನು.

ಕುತುಜೋವ್ ತನ್ನ ಸಹಾಯಾಧಿಕಾರಿಯ ಕಡೆಗೆ ಗಡುಸಾಗಿ ನೋಡಿದನು. ಕೆಲವು ಕ್ಷಣಗಳನಂತರ 'ಪ್ರಾಯಶಃ ನಮಗೆ ಸೋಲಾಗುತ್ತದೆ. ಚಕ್ರವರ್ತಿಗೆ ಈ ವಿಷಯ ತಿಳಿಸುವಂತೆ ಶ್ರೀಮಂತ ತೋಲ್‌ಸ್ತಾಯ್‌ಗೆ ಹೇಳಿದ್ದೇನೆ. ನನ್ನ ಮಾತಿಗೆ ಪ್ರತಿಯಾಗಿ ಅವರೇನು ಹೇಳಿದರು ಗೊತ್ತೆ? "ದಂಡನಾಯಕರೆ, ನಾನೀಗ ಅನ್ನಮಾಂಸಗಳ ಭಕ್ಷ್ಯಗಳಲ್ಲಿ ತಾದಾತ್ಮ್ಯ ಹೊಂದಿದ್ದೇನೆ. ಸೈನಿಕ ವ್ಯವಹಾರಗಳನ್ನೆಲ್ಲ ನೀವೇ ನೋಡಿಕೊಳ್ಳಿ" ಎಂದು. ಹೌದು....ನನಗೆ ಸಿಕ್ಕಿದ ಉತ್ತರವದು!'

ಅಧ್ಯಾಯ ೧೨

ಆ ರಾತ್ರಿ ಒಂಬತ್ತು ಗಂಟೆ ಕಳೆದನಂತರ, ಯುದ್ಧಮಂಡಲಿ ಸೇರಲಿದ್ದ ಕುತುಜೋವ್‌ನ ಬಿಡಾರಕ್ಕೆ ವೇರಾದರ್ ತನ್ನ ನಕ್ಷೆಗಳೊಡನೆ ಹೋದನು. ಮಹಾದಂಡನಾಯಕನ ಬಿಡಾರದಲ್ಲಿ ಸೇರುವಂತೆ ಎಲ್ಲ ಸೇನಾಧಿಪತಿಗಳಿಗೂ ಆಹ್ವಾನ ಹೋಗಿತ್ತು. ಆಹ್ವಾನವನ್ನಂಗೀಕರಿಸದ ರಾಜಕುಮಾರ ಬಗ್ರೇಷನ್ ಹೊರತಾಗಿ, ಉಳಿದವರೆಲ್ಲ ಸಮಯಕ್ಕೆ ಸರಿಯಾಗಿ ಹಾಜರಿದ್ದರು. ತನ್ನ ತೀವ್ರಾಸಕ್ತಿ ಭರಾಟೆಗಳಿಂದ ನಿಯೋಜಿತ ಯುದ್ಧದ ಪೂರ್ಣ ಹೊಣೆಗಾರಿಕೆಯನ್ನು ಹೊತ್ತಿದ್ದ ವೇರಾದರನ ಮತ್ತು ಯುದ್ಧಮಂಡಲಿಯ ಅಧ್ಯಕ್ಷಸ್ಥಾನದ ಕರ್ತವ್ಯವನ್ನು ಅತ್ಯಂತ ನಿರುತ್ಸಾಹದಿಂದ ನಿರ್ವಹಿಸುತ್ತಿದ್ದ, ಅತೃಪ್ತನೂ ನಿದ್ರಾಸಕ್ತನೂ ಆದ ಕುತುಜೋವ್‌ನ ನಡುವೆ ಅಪಾರ ವೈದೃಶ್ಯವಿತ್ತು. ತಾನು ಅನಿಯಂತ್ರಿತ ಸೈನಿಕ ಚಲನೆಯ ನೇತಾರನೆಂದು ವೇರಾದರ್ ಸ್ಪಷ್ಟವಾಗಿ ಅರಿತುಕೊಂಡಿದ್ದ. ಅವನು, ಬೆಟ್ಟದಿಂದ ಕೆಳಮುಖವಾಗಿ ಜಾರುತ್ತಿದ್ದ, ದೊಡ್ಡಬಂಡಿಗೆ ಕಟ್ಟಿದ್ದ ಕುದುರೆಯಂತಿದ್ದ. ಅವನದನ್ನು ಎಳೆಯುತ್ತಿದ್ದನೋ ಅಥವಾ ಅದೇ ಅವನನ್ನು ನೂಕುತ್ತಿತ್ತೋ ಅವನಿಗೇ ಗೊತ್ತಿರಲಿಲ್ಲ. ಆ ಸೇನಾಚಲನೆಯ ಆಗುಹೋಗುಗಳನ್ನು ಲೆಕ್ಕಿಸಲು ಸಮಯವಿಲ್ಲದೆ ಅವನು ಅತ್ಯಂತ ಅವಸರವಾಗಿ ನುಗ್ಗುತ್ತಿದ್ದನು. ತಾನೇ ಖುದ್ದಾಗಿ ಶತ್ರುವಿನ ಗಡಿಕಾವಲಿನ ಸುಳುಹು ತಿಳಿಯುವ ಸಲುವಾಗಿ ವೇರಾದರ್ ಆ ಸಂಜೆ ಎರಡು ಸಾರಿ ಆ ನೆಲೆಗೆ ಹೋಗಿಬಂದು, ಇಬ್ಬರು ಚಕ್ರವರ್ತಿಗಳಿಗೂ ವರದಿ ಒಪ್ಪಿಸಿದ್ದನು. ತನ್ನ ಕಚೇರಿಗೆ ಹಿಂದಿರುಗಿ, ಜರ್ಮನ್ ಭಾಷೆಯಲ್ಲಿ ವ್ಯೂಹರಚನೆಯ ವಿವರಗಳನ್ನು ಉಕ್ತಲೇಖಿಸಿದ್ದನು. ಇಷ್ಟೆಲ್ಲ ಕಾರ್ಯಭಾರದಿಂದಾಗಿ ಅವನು ಕುತುಜೋವ್‌ನ ಬಿಡಾರಕ್ಕೆ ಬರುವ ಹೊತ್ತಿಗೆ ಸುಸ್ತಾಗಿದ್ದನು.

ವ್ಯೂಹರಚನೆಯಲ್ಲಿ ಅವಿರತವಾಗಿ ಮಗ್ನನಾಗಿದ್ದ ಪ್ರಯುಕ್ತ ಮಹಾದಂಡನಾಯಕನಿಗೆ ತೋರಿಸಬೇಕಾದ ಮರ್ಯಾದೆಯನ್ನು ಸಹ ಅವನು ಮರೆತಿದ್ದನು. ಅವನು ಮಾತಿನ ನಡುವೆ ಬಾಯಿಹಾಕಿ, ವೇಗವಾಗಿಯೂ ಅಸ್ಪಷ್ಟವಾಗಿಯೂ ತಾನು ಸಂಬೋಧಿಸುತ್ತಿದ್ದ

ವ್ಯಕ್ತಿಯ ಕಡೆಗೆ ನೋಡದೆಯೇ ತನಗೆ ಹಾಕಿದ ಪ್ರಶ್ನೆಗಳನ್ನು ಉತ್ತರಿಸದೆಯೆ ಮಾತಾಡುತ್ತಿದ್ದನು. ಅವನು ಅನೇಕ ದೂರುಗಳಿಗೆ ಗುರಿಯಾಗಿದ್ದರೂ, ಆಯಾಸದಿಂದ ಕರುಣಾಜನಕ ಸ್ಥಿತಿಯಲ್ಲಿದ್ದರೂ, ಆತ್ಮವಿಶ್ವಾಸ ಮತ್ತು ಅಹಂಕಾರಗಳು ಆತನಲ್ಲಿ ತುಂಬಿ ತುಳುಕುತ್ತಿದ್ದುವು.

ಕುತುಜೋವ್ ಆಸ್ಟ್ರಲಿಜ್ ಬಳಿಯ ಮಿತವಿಸ್ತೀರ್ಣದ ಕೋಟೆಮನೆಯೊಂದರಲ್ಲಿ ಬಿಡಾರ ಹೂಡಿದ್ದನು. ಮಹಾದಂಡನಾಯಕನ ಕಚೇರಿಯಾಗಿದ್ದ ದೊಡ್ಡ ದಿವಾನಖಾನೆಯಲ್ಲಿ ಕುತುಜೋವ್, ವೇರಾದರ್ ಮತ್ತು ಯುದ್ಧಮಂಡಲಿಯ ಸದಸ್ಯರು ಜಮಾಯಿಸಿದ್ದರು. ಅವರು ಟೀ ಕುಡಿಯುತ್ತ, ರಾಜಕುಮಾರ ಬಗ್ರೇಷನ್‌ನ ಆಗಮನಕ್ಕಾಗಿ ಕಾಯುತ್ತಿದ್ದರು. ಕೊನೆಗೆ ಬಗ್ರೇಷನ್ ಬರುವುದಿಲ್ಲವೆಂಬ ಸುದ್ದಿ ಅವನ ಸೇವಕನ ಮೂಲಕ ರಾಜಕುಮಾರ ಆಂಡ್ರ್ಯೂಗೆ ತಿಳಿಯಿತು. ಆ ಸುದ್ದಿಯನ್ನು ಸಭೆಗೆ ಮುಟ್ಟಿಸುವ ಸಲುವಾಗಿ ಒಳಗೆ ಬಂದ ಆಂಡ್ರ್ಯೂ ಕುತುಜೋವ್‌ನ ಅನುಮತಿಯನ್ನು ಮೊದಲೇ ಪಡೆದಿದ್ದುದರಿಂದ, ಸಭಾಂಗಣದಲ್ಲಿಯೇ ಉಳಿದನು.

'ರಾಜಕುಮಾರ ಬಗ್ರೇಷನ್ ಬರುವುದಿಲ್ಲವಾದ್ದರಿಂದ ನಾವು ಸಭೆ ಶುರುಮಾಡಬಹುದು' ಎಂದು ವೇರಾದರ್ ನುಡಿದು, ತಟಕ್ಕನೆ ಆಸನದಿಂದೆದ್ದು, ಬ್ರೂನ್ ಸುತ್ತಮುತ್ತಣ ಸನ್ನಿವೇಶಗಳನ್ನೊಳಗೊಂಡ ದೊಡ್ಡ ನಕ್ಷೆ ಹರಡಿದ್ದ ಮೇಜಿನ ಕಡೆಗೆ ನಡೆದನು.

ಗಾಢನಿದ್ರೆಯಲ್ಲದ್ದಿದಂತಿದ್ದ ಕುತುಜೋವ್ ತಗ್ಗುಕುರ್ಚಿಯಲ್ಲಿ ಒರಗಿದ್ದನು. ಅವನ ಮುದಿಗಿಡ್ಡ ಕೈಗಳು ಅದರ ತೋಳುಗಳ ಮೇಲೆ ಸಮಸೂತ್ರವಾಗಿ ವಿಶ್ರಮಿಸಿಕೊಳ್ಳುತ್ತಿದ್ದುವು. ಗುಂಡಿಬಿಚ್ಚಿದ ಸಮವಸ್ತ್ರದೊಳಗಿಂದ ತಪ್ಪಿಸಿಕೊಳ್ಳಲೆಂಬಂತೆ ಅವನ ಕೊಬ್ಬಿದ ಕೊರಳು ಕತ್ತಿನ ಪಟ್ಟಿಯ ಮೇಲೆ ಚಾಚಿಕೊಂಡಿತ್ತು. ವೇರಾದರ್ ದನಿ ತುಸು ಎತ್ತರಿಸಿದಾಗ ಅವನು ಪ್ರಯಾಸಪೂರ್ವಕವಾಗಿ ಒಂದು ಕಣ್ಣನ್ನು ತೆರೆಯುತ್ತಿದ್ದನು.

'ಹೌದ್ಹೌದು, ನೀವು ಹೇಳಿದಂತಾಗಲಿ! ಆಗಲೇ ಹೊತ್ತಾಗಿದೆ' ಎಂದವನು ತಲೆಯಲ್ಲಾಡಿಸುತ್ತಿದ್ದಂತೆ ಅದು ಜೋಲು ಬೀಳಲಾಗಿ, ಕಣ್ಣು ಮುಚ್ಚಿದನು.

ಮೊದಮೊದಲು ಕುತುಜೋವ್ ಗಾಢ ನಿದ್ದೆಯಲ್ಲಿದ್ದಂತೆ ಸದಸ್ಯರಿಗೆ ತೋರಿದ್ದುಂಟು. ತರುವಾಯದ ವಾಚನಸಮಯದಲ್ಲಿ ಅವನ ಮೂಗಿನಿಂದ ಹೊರನುಗ್ಗುತ್ತಿದ್ದ ಧ್ವನಿಗಳನ್ನು ಗ್ರಹಿಸಿದ ಅವರು, ವ್ಯೂಹರಚನೆಗಳ ಬಗೆಗಿನ ಅಸಡ್ಡೆಯನ್ನವನು ವ್ಯಕ್ತಪಡಿಸುವುದಕ್ಕೆ ಬದಲಾಗಿ ಆ ಸಮಯದಲ್ಲಿ ಅತ್ಯಂತ ಗಂಭೀರವಾದ ವಿಷಯದಲ್ಲಿ ಮಗ್ನನಾಗಿರಬೇಕೆಂದು ಭಾವಿಸಿಕೊಂಡರು. ನಿದ್ರಾರೂಪದ ಮನುಷ್ಯನ ತಡೆಯಲಾಗದ ಆವಶ್ಯಕತೆಯ ಪೂರೈಕೆಯಲ್ಲಿ ಅವನು ಮಗ್ನನಾಗಿದ್ದನು. ಅವನು ನಿಜಕ್ಕೂ ಗಾಢ ನಿದ್ರೆಯಲ್ಲಿದ್ದನು. ಒಂದು ಕ್ಷಣವೂ ಬಿಡುವಿಲ್ಲದಷ್ಟು ಚಟುವಟಿಕೆಯಲ್ಲಿ ಮಗ್ನನಾಗಿರುವವನಂತೆ ಭಾವವನ್ನು ಪ್ರದರ್ಶಿಸುತ್ತ ವೇರಾದರ್ ಕುತುಜೋವ್‌ನ ಕಡೆಗೆ ದಿಟ್ಟಿಹಾಯಿಸಿ, ಅವನು ಗಾಢನಿದ್ರೆಯಲ್ಲಿದ್ದನೆಂಬುದನ್ನು ದೃಢಪಡಿಸಿಕೊಂಡು, ಕಾಗದವೊಂದನ್ನು ಕೈಗೆತ್ತಿಕೊಂಡು, ಗಟ್ಟಿಯಾದ ಏಕತಾನತೆಯ ಧ್ವನಿಯಲ್ಲಿ ಸಂಭವಿಸಲಿದ್ದ ಕಾಳಗದ ವ್ಯೂಹರಚನೆಗಳನ್ನು ವಾಚಿಸಿದನು. '೧೮೦೫ನೆಯ ಸಂವತ್ಸರದ ನವೆಂಬರ್ ಇಪ್ಪತ್ತೆರಡು

ಕೊಬೆಲ್‌ನಿಜ್ ಮತ್ತು ಸೊಕೊಲ್‌ನಿಜ್‌ಗಳ ಹಿಂಗಡೆಯ ಶತ್ರುನೆಲೆಗಳ ಮೇಲಣಧಾಳಿಗೆ ಸಂಬಂಧಿಸಿದ ವ್ಯೂಹರಚನೆಗಳು' ಎಂಬ ಶಿರೋನಾಮೆಯನ್ನು ಸಹ ಆತನು ಮೊದಲೇ ಓದಿದನು.

ವ್ಯೂಹರಚನೆಗಳು ತುಂಬ ತೊಡಕಾಗಿದ್ದುವಲ್ಲದೆ, ದುಷ್ಕರವಾಗಿದ್ದುವು. ಅವುಗಳ ವಿವರಣೆಯಿದು: ಶತ್ರುವಿನ ವಾಮಪಾರ್ಶ್ವ ಕಾನನಾವೃತಪರ್ವತಗಳ ಮೇಲೆ ನೆಲೆಯೂರಿದೆ; ದಕ್ಷಿಣ ಪಾರ್ಶ್ವ ಕೊಬೆಲ್‌ನಿಜ್ ಮತ್ತು ಸೊಕೊಲ್‌ನಿಜ್‌ಗಳ ಉದ್ದಕ್ಕೂ, ಅಲ್ಲಿರುವ ಕೊಳಗಳ ಹಿಂದುಗಡೆ ಬೀಡುಬಿಟ್ಟಿದೆ. ಆದ್ದರಿಂದ ನಮ್ಮ ವಾಮಪಾರ್ಶ್ವದ ಸೈನ್ಯ ಅವನ ದಕ್ಷಿಣ ಪಾರ್ಶ್ವವನ್ನು ಸುತ್ತುವರಿಯಬೇಕು. ನಾವು ಸೊಕೊಲ್‌ನಿಜ್ ಮತ್ತು ಕೊಬೆಲ್‌ನಿಜ್ ಹಳ್ಳಿಗಳನ್ನು ಹಿಡಿದದ್ದಾದರೆ ಶತ್ರುವಿನ ಮತ್ತೊಂದು ಪಾರ್ಶ್ವವನ್ನಾಕ್ರಮಿಸಿಕೊಳ್ಳುವುದು ಸುಲಭವಾಗುತ್ತದೆ. ಆಗ ನಾವು ಅವನ ಸೈನ್ಯದ ಪಾರ್ಶ್ವವನ್ನು ಆಕ್ರಮಿಸಿಕೊಂಡು, ಷ್ಲಪ್ಪಾನಿಜ್ ಮತ್ತು ಬೆಲ್ಲೊವಿಜ್ ಕಾನನಗಳ ನಡುವಣ ಬಯಲಿನಲ್ಲಿ ಅವನನ್ನು ಅಟ್ಟಾಡಬಹುದು. ಜತೆಗೆ ಷ್ಲಪ್ಪಾನಿಜ್ ಮತ್ತು ಬೆಲ್ಲೊವಿಜ್‌ಗಳಲ್ಲಿರುವ ಶತ್ರುಸೈನ್ಯದ ಮುಂಚೂಣಿಯ ವ್ಯೂಹಗಳಿಂದ ದೂರವಿರಲು ಸಾಧ್ಯವಾಗುತ್ತದೆ. ಈ ಉದ್ದೇಶ ಸಾಧನೆಗಾಗಿ....ಪ್ರಥಮ ದಂಡವ್ಯೂಹ ಮುನ್ನಡೆಯಬೇಕು....ಅನಂತರ ಎರಡನೆಯದು....ತರುವಾಯ ಮೂರನೆಯದು....ಇದು ಕ್ರಮ' ಎಂದು ವೇರಾದರ್ ಓದಿ ಮುಗಿಸಿದನು.

ಸೇನಾಪತಿಗಳು ಆ ತೊಡಕಾದ ವ್ಯೂಹರಚನೆಗಳನ್ನು ಮನಸ್ಸಿಲ್ಲದ ಮನಸ್ಸಿನಿಂದ ಕೇಳಿಸಿಕೊಂಡಂತಿತ್ತು. ಗೋಡೆಗೆ ಒರಗಿಕೊಂಡು, ಮೋಂಬತ್ತಿಯಲ್ಲಿಯೇ ಕಣ್ಣುನೆಟ್ಟು ನಿಂತಿದ್ದ ಸುಂದರ ಕೇಶದ ಉದ್ದನೆಯ ಸೇನಾಪತಿ ಬಕ್ಸ್‌ಡನ್ ವಾಚನವನ್ನು ಕೇಳಿಸಿಕೊಂಡಂತಿರಲಿಲ್ಲ. ತಾನು ಕೇಳಿಸಿಕೊಳ್ಳದಿದ್ದುದು ಇತರರಿಗೂ ತಿಳಿಯಲೆಂಬಂತಿತ್ತು ಅವನ ಭಾವಭಂಗಿ. ವೇರಾದರನಿಗೆದುರಾಗಿ ಉಲ್ಲಾಸದ ಮಿಲೊರಾದೊವಿಚ್ ಸೈನಿಕ ಭಂಗಿಯಲ್ಲಿ ಕುಳಿತಿದ್ದನು. ಹೊಳೆಯುತ್ತಿದ್ದ ಅವನ ಅರಳಿದ ಕಣ್ಣುಗಳು ವೇರಾದರನ ಮೇಲೆ ನಾಟಿದ್ದುವು. ಹುರಿಮಾಡಿದ ಅವನ ಮೀಸೆ ಊರ್ಧ್ವ ಮುಖವಾಗಿತ್ತು. ಅವನ ಭುಜ ಮೇಲೆದ್ದಂತಿದ್ದರೆ, ಮೊಣಕೈ ಹೊರಕ್ಕೆ ತಿರುಗಿ, ಕೈಗಳು ಮಂಡಿಯ ಮೇಲೆ ಒರಗಿದ್ದುವು ವೇರಾದರನ ಮುಖವನ್ನೆ ದುರದುರನೆ ನೋಡುತ್ತ, ಬದ್ಧಮೌನಿಯಾಗಿ ಕುಳಿತಿದ್ದನು. ಆಸ್ಟ್ರಿಯನ್ ಸೇನಾಧಿಪತಿ ವಾಚನವನ್ನು ಮುಗಿಸಿದಾಗಲೆ ಅವನು ಬೇರೆ ಕಡೆಗೆ ದಿಟ್ಟಿ ಹೊರಳಿಸಿದ್ದ. ಅವನು ಅರ್ಥಪೂರ್ಣವಾಗಿ ಇತರ ಸೇನಾಪತಿಗಳ ಕಡೆಗೆ ದೃಷ್ಟಿ ಹರಿಸಿದನು. ಆ ಏರ್ಪಾಡುಗಳು ಅವನಿಗೆ ಒಪ್ಪಿಗೆಯಾದುವೆ ಇಲ್ಲವೆ, ತೃಪ್ತಿಯಾದುವೆ ಇಲ್ಲವೆ ಎಂಬ ಅಂಶ ಅವನ ಅರ್ಥಪೂರ್ಣ ದೃಷ್ಟಿಯಿಂದ ಯಾರಿಗೂ ಸ್ಪಷ್ಟವಾಗುವಂತಿರಲಿಲ್ಲ. ವೇರಾದರ್‌ನ ಪಕ್ಕದಲ್ಲಿ ಕುಳಿತಿದ್ದವನು ಶ್ರೀಮಂತ ಲ್ಯಾಂಗರಾನ್. ಇಡೀ ವಾಚನಾವಧಿಯಲ್ಲಿ ಅವನ ನವುರು ನಗೆ ದಕ್ಷಿಣ ಫ್ರಾನ್ಸಿನ ಮಾದರಿಯ ಮುಖದಿಂದ ಒಮ್ಮೆಯೂ ಮರೆಯಾಗಲಿಲ್ಲ. ಭಾವ ಚಿತ್ರವಿದ್ದ ಚಿನ್ನದ ನಶ್ಯದ ಭರಣಿಯನ್ನು ಅದರ ಮೂಲೆಗಳ ಮೂಲಕ ರಾಟೆಯಾಡಿಸುತ್ತಿದ್ದ ತನ್ನ ಕೋಮಲವಾದ ಬೆರಳುಗಳಲ್ಲಿಯೇ ಅವನ ದೃಷ್ಟಿ ನಾಟಿತ್ತು. ಅತಿದೀರ್ಘವಾದ ವಾಕ್ಯವೊಂದರ ಮಧ್ಯದಲ್ಲಿ ಭರಣಿಯ ವೃತ್ತ ಚಲನೆಯನ್ನು

ನಿಲ್ಲಿಸಿ, ತಲೆಯೆತ್ತಿ, ತನ್ನ ತೆಳುದುಟಿಯ ಮೂಲೆಗಳಲ್ಲಿ ಹೊಂಚುಕಾಯುತ್ತಿದ್ದ ಅನನು ಕರಣೀಯವಾದ ವಿನಯದಿಂದ, ಏನನ್ನೋ ಹೇಳಬೇಕೆಂದಿದ್ದ ವೇರಾದರನ ಮಾತಿನ ನಡುವೆ ಬಾಯಿ ಹಾಕಿದನು. ಆವರೆ ಆಸ್ಟ್ರಿಯಾದ ಸೇನಾಧಿಪತಿ ಕೋಪದಿಂದ ಹುಬ್ಬು ಗಂಟಿಕ್ಕಿ, ಓದು ಮುಂದುವರಿಸಿದನು; 'ನಿಮ್ಮ ಅಭಿಪ್ರಾಯಗಳನ್ನು ಕೊನೆಗೆ ಸೂಚಿಸ ಬಹುದು, ಈಗ ದಯೆಯಿಟ್ಟು ನಕ್ಷೆಯಕಡೆಗೆ ನೋಡಿ, ನನ್ನ ಮಾತಿನಕಡೆಗೆ ನಿಗಾಕೊಡಿ' ಎಂಬರ್ಥ ಬರುವಂತೆ ತನ್ನ ಮೊಣಕೈಯನ್ನು ಜಗ್ಗಿದನು. ಲ್ಯಾಂಗರಾನ್ ಗಾಬರಿ ಯಿಂದ ಕೂಡಿದ ಕಣ್ಣುಗಳನ್ನು ಮೇಲೆತ್ತಿ, ವಿವರಣೆಯನ್ನು ಯಾಚಿಸುವವನಂತೆ ಮಿಲೊರಾಡೊವಿಚ್‌ನ ಕಡೆಗೆ ಹೊರಳಿಸಿದನು. ಆದರೆ ಮಿಲೊರಾಡೊವಿಚ್‌ನ ಭಾವ ಸೂಚಕವಾದ, ಆದರೆ ಅರ್ಥಶೂನ್ಯವಾದ ದೃಷ್ಟಿಯನ್ನು ನೋಡಿದ ಅವನು ವ್ಯಥೆಯಿಂದ ಅಧೋದೃಷ್ಟಿಯಾಗಿ ಮತ್ತೆ ಭರಣಿಯ ರಾಟೆಯಾಟದಲ್ಲಿ ತೊಡಗಿದನು. 'ಇದು ಭೂಗೋಳದ ಪಾಠ' ಎಂದು ತನ್ನೊಳಗೆ ತಾನು ಗೊಣಗಿಕೊಂಡರೂ, ಅದು ಪಕ್ಕದ ವರಿಗೆ ಕೇಳಿಸುವಷ್ಟು ಗಟ್ಟಿಯಾಗಿತ್ತು.

ಏಕಾಗ್ರತೆಯಿಂದ ಮಗ್ನನಾದ ವ್ಯಕ್ತಿಯ ಭಂಗಿಯಲ್ಲಿ ಕುಳಿತಿದ್ದ ಪ್ರಿಜ್‌ಬಿಜ್‌ವೆಸ್ಕಿ ಗೌರವ ಪೂರ್ಣವಾದ, ಆದರೆ ಗಂಭೀರದಿಂದೊಡಗೂಡಿದ ವಿನಯದಿಂದ ವೇರಾದರನ ಕಡೆಗೆ ಕೈಗೊಟ್ಟು ಕಿವಿ ಓರೆಮಾಡಿಕೊಂಡಿದ್ದನು. ಸಂಕೋಚದಿಂದೊಡಗೂಡಿದ ಶ್ರದ್ಧಾ ಭಂಗಿಯಲ್ಲಿ ವೇರಾದರನಿಗೆದುರಾಗಿ ಕುಳಿತಿದ್ದ ಅಲ್ಪಾಕೃತಿಯ ದೊಖ್ತುರೊವ್ ಹರಡಿದ ಭೂಪಟದ ಮೇಲೆ ಬಾಗಿಕೊಂಡು ಅತ್ಯಂತಾಸಕ್ತಿಯಿಂದ ವ್ಯೂಹರಚನೆಗಳನ್ನು ಅಪರಿಚಿತ ಜಾಗಗಳನ್ನು ಅಧ್ಯಯನಮಾಡಿದನು. ತನಗರ್ಥವಾಗದಿದ್ದ ಪದಗಳನ್ನು, ಕಠಿನವಾದ ಹಳ್ಳಿಗಳ ಹೆಸರುಗಳನ್ನು ಪುನರುಚ್ಚರಿಸುವಂತೆ ಅವನು ವೇರಾದರ್‌ನನ್ನು ಮೇಲಿಂದ ಮೇಲೆ ಕೇಳುತ್ತಿದ್ದನು. ವೇರಾದರ್ ಅವನ ಇಷ್ಟಾರ್ಥವನ್ನು ನೆರವೇರಿಸುತ್ತಿದ್ದನು. ದೊಖ್ತುರೊವ್ ಟಿಪ್ಪಣಿ ಮಾಡಿಕೊಳ್ಳುತ್ತಿದ್ದನು.

ಒಂದು ಗಂಟೆಗಿಂತ ಹೆಚ್ಚಾಗಿ ನಡೆದ ವಾಚನ ಮುಕ್ತಾಯಗೊಂಡಾಗ, ಲ್ಯಾಂಗರಾನ್ ಪುನಃ ಭರಣಿಗೆ ವಿರಾಮ ಕೊಟ್ಟು, ವೇರಾದರನ ಕಡೆಗಾಗಲಿ ಇತರರ ಕಡೆಗಾಗಲಿ ನೋಡದೆಯೆ, ಅಂಥ ಯೋಜನೆಯನ್ನು ಕಾರ್ಯಗತಗೊಳಿಸುವುದು ಕಷ್ಟವಾಗುತ್ತದೆಂದು ರಾಗ ತೆಗೆದನು. ಹಗೆಯ ನೆಲೆಯನ್ನು ಊಹೆಯ ಆಧಾರದಮೇಲೆ ಯೋಜನೆಯಲ್ಲಿ ಗುರುತಿಸಲಾಗಿತ್ತಷ್ಟೆ. ಶತ್ರು ಚಲನೆಯಲ್ಲಿರುವುದರಿಂದ ತಪ್ಪಾಗುವ ಅವಕಾಶವೂ ಉಂಟೆಂಬುದು ಅವನ ವಾದ. ಲ್ಯಾಂಗರಾನನ ಆಕ್ಷೇಪಗಳು ಸಮಂಜಸ ವಾಗಿದ್ದುವು. ಸೈನಿಕ ವ್ಯವಹಾರ ಕೌಶಲಗಳನ್ನವನಿಗೆ ಕಲಿಸಬಲ್ಲ ಜನರೊಡನೆ ಸೇನಾ ಪತಿ ವೇರಾದರ್ ತನ್ನ ವ್ಯವಹಾರಗಳನ್ನು ಕುದುರಿಸಬೇಕಾಗಿತ್ತೇ ಹೊರತು, ದಡ್ಡರ ಜತೆಯಲ್ಲಲ್ಲವೆಂಬುದನ್ನವನಿಗೆ ತಿಳಿಸುವುದೇ ಆ ಆಕ್ಷೇಪಗಳ ಉದ್ದೇಶವಾಗಿತ್ತು. ವೇರಾದರ ನಾದರೊ ತನ್ನ ಮುಂದೆ ಕುಳಿತವರು ಶಾಲೆಯ ಮಕ್ಕಳೆನ್ನುವ ಆತ್ಮವಿಶ್ವಾಸದಿಂದ ವ್ಯೂಹರಚನೆಗಳನ್ನೋದಿ ಮುಗಿಸಿದ್ದನು.

ಯಂತ್ರ ಚಕ್ರದ ನಿದ್ರಾಜನಕ ಝೇಂಕಾರ ತಡೆಗೊಳ್ಳಲಾಗಿ ಮಾಲೀಕ ಎಚ್ಚರ ಗೊಳ್ಳುವಂತೆ ವೇರಾದರನ ಕಂಠದ ಏಕತಾನತೆ ಸ್ತಬ್ಧಗೊಂಡಾಗ ಕುಟುಜೋವ್ ಕಣ್ಣು

ಬಿಟ್ಟನು. ಲ್ಯಾಂಗರನ ಮಾತನ್ನು ಕೇಳಿಸಿಕೊಂಡ ಅವನ ಪಾಲಿಗೆ 'ನೀನಿನ್ನೂ ಅದೇ ಕ್ಷುಲ್ಲಕ ವ್ಯವಹಾರದಲ್ಲಿ ಮುಳುಗಿದ್ದೀಯೇನು?' ಎಂದು ಹೇಳಿದಂತಾಗಿ, ತಕ್ಷಣವೇ ಕಣ್ಣು ಮುಚ್ಚಿದನು. ಅವನ ತಲೆ ಮತ್ತೂ ಕೆಳಗೆ ಜೋಲಾಡಿತು.

ಸೈನಿಕ ವ್ಯೂಹದ ಜನಕ ವೇರಾದರನ ಅಹಂಕಾರವನ್ನು ಆದಷ್ಟು ಉಗ್ರವಾಗಿ ಕುಟುಕಲು ಪ್ರಯತ್ನಿಸಿ, ಬೋನಪಾರ್ಟ್ ಧಾಳಿಗೆ ಗುರಿಯಾಗುವುದಕ್ಕಿಂತ ತಾನೇ ಸುಲಭವಾಗಿ ಧಾಳಿಮಾಡಿ, ಆ ಯೋಜನೆಯನ್ನು ಸಂಪೂರ್ಣವಾಗಿ ನಿರರ್ಥಕ ಗೊಳಿಸಬಹುದೆಂದು ಲ್ಯಾಂಗರಾನ್ ವಾದ ಹೂಡಿದನು. ಎಂಥ ಆಕ್ಷೇಪಗಳು ತಲೆ ಯೆತ್ತಿದರೂ ಅವುಗಳಿಗೆ ತಕ್ಕ ಪ್ರತ್ಯುತ್ತರ ನೀಡುವ ಸಲುವಾಗಿ ಮೊದಲೇ ಸಿದ್ಧವಾಗಿದ್ದ ವೇರಾದರ್ ಆ ಆಕ್ಷೇಪಗಳಿಗೆ ಅಲ್ಲಾಡದೆ, ವ್ಯಂಗ್ಯದ ಹಾಸದಿಂದಲೇ ಅವುಗಳನ್ನು ನಿವಾರಿಸಿದನು. 'ಅವನು ಧಾಳಿ ಮಾಡುವುದಿದ್ದರೆ ಇಂದೇ ಮಾಡಬೇಕಿತ್ತು' ಎಂದು ನುಡಿದನು.

'ಹಾಗಾದರೆ ಅವನು ಶಕ್ತಿಹೀನನಾಗಿದ್ದಾನೆಂಬುದು ನಿಮ್ಮ ಅಭಿಪ್ರಾಯವೆ?' ಎಂದು ಲ್ಯಾಂಗರಾನ್ ಪ್ರಶ್ನಿಸಿದನು.

ವೈದ್ಯೋಪಚಾರದ ಬಗ್ಗೆ ವಿವರಣೆ ನೀಡಲು ಬಯಸುವ ಹಳೆಯ ಕಾಲದ ಹೆಂಡತಿ ಯನ್ನು ಮಂದಹಾಸದಿಂದಲೇ ಸುಮ್ಮಗೊಳಿಸುವ ವೈದ್ಯನಂತೆ 'ಅವನ ಬಳಿ ಹೆಚ್ಚೆಂದರೆ ನಲವತ್ತು ಸಾವಿರ ಸೈನಿಕರಿದ್ದಾರೆ ಅಷ್ಟೆ' ಎಂದು ವೇರಾದರ್ ಉತ್ತರವಿತ್ತನು.

'ಹಾಗಾದರೆ ಅವನು ನಮ್ಮ ಧಾಳಿಗೆ ಕಾದುಕೊಂಡಿದ್ದು, ತನ್ನ ವಿನಾಶವನ್ನು ಸ್ವಾಗತಿಸುವುದರಲ್ಲಿದ್ದಾನೆ' ಎಂದು ಲ್ಯಾಂಗರಾನ್ ಬೆಂಬಲಕ್ಕಾಗಿ ತನ್ನ ಬಳಿಯಿದ್ದ ಮಿಲೊರಾದೊವಿಚ್‌ನ ಕಡೆಗೆ ಮತ್ತೆ ಕಣ್ಣು ಹೊರಳಿಸಿ, ಮುಗುಳುನಗೆ ಬೀರಿದನು. ಆ ನಗೆಯಲ್ಲಿ ಅತ್ಯಂತ ಸೂಕ್ಷ್ಮವಾದ ವ್ಯಂಗ್ಯವಿತ್ತು.

ಆದರೆ ಆ ಸಮಯದಲ್ಲಿ ಮಿಲೊರಾದೊವಿಚ್ ಸೇನಾಪತಿಗಳ ಚರ್ಚೆಯೊಂದನ್ನು ಬಿಟ್ಟು, ಬೇರೇನನ್ನೋ ಕುರಿತು ಯೋಚಿಸುತ್ತಿದ್ದನು. 'ನನ್ನನ್ನು ನಂಬು! ನಾಳೆ ಅದೆಲ್ಲವನ್ನೂ ರಣರಂಗದಲ್ಲಿ ಈಕ್ಷಿಸೋಣ.'

ರಷ್ಯನ್ ಸೇನಾಪತಿಗಳ ಆಕ್ಷೇಪಗಳಿಗಾಗಿ ವೇರಾದರನಿಗೆ ನಗು ಬಂತು. ವ್ಯೂಹ ರಚನೆಗಳ ಬಗ್ಗೆ ತನಗೆ ಆತ್ಮವಿಶ್ವಾಸವಿದ್ದುದಲ್ಲದೆ, ಚಕ್ರವರ್ತಿಗಳಿಗೂ ಮನದಟ್ಟು ಮಾಡಿಕೊಟ್ಟಿದ್ದನು. ಹೀಗಿರುವಾಗ ಅವುಗಳ ಸಾಮರ್ಥ್ಯವನ್ನು ಸೇನಾಪತಿಗಳಿಗೆ ರುಜು ವಾತು ಮಾಡಿಕೊಡುವುದು ಹಾಸ್ಯಾಸ್ಪದವಾದುದೆಂದು ಅವನು ಬಗೆದಿದ್ದನು. 'ಹ ಬೆಂಕಿಯನ್ನು ಆರಿಸಿದ್ದಾನೆ, ಅವನ ಬಿಡಾರದ ಕಡೆಯಿಂದ ಸತತವಾಗಿ ಶಬ್ದ ಕೇಳಿಸ ತ್ತಿದೆ. ಅದರರ್ಥವೇನು? ಅವನು ಹಿಮ್ಮೆಟ್ಟುತ್ತಿರಬೇಕು, ಇಲ್ಲವೆ ತನ್ನ ಸ್ಥಾನವನ್ನು ಬದಲಿಸುತ್ತಿರಬೇಕು. ಅವನು ಹಿಮ್ಮೆಟ್ಟುತ್ತಿದ್ದರೆ ಮಾತ್ರ ನಾವು ಹೆದರಬೇಕಾಗಿದೆ (ಅವನು ವ್ಯಂಗ್ಯವಾಗಿ ನಕ್ಕನು) ಅವನು ತ್ಯುರೆಸಾದಲ್ಲಿ ಸೈನ್ಯ ನಿಲ್ಲಿಸಿದರೂ ನಮ ಭಯವಿಲ್ಲ. ನಮ್ಮ ಸಮಸ್ಯೆ ಬಹುಮಟ್ಟಿಗೆ ಹಗುರವಾಯಿತೆಂದೇ ಹೇಳಬಹುದು. ನಮ ವ್ಯವಸ್ಥೆಯ ಸೂಕ್ಷ್ಮಾತಿ ಸೂಕ್ಷ್ಮವಿವರಗಳಲ್ಲಿ ಬದಲಾವಣೆ ಅನವಶ್ಯಕ' ಎಂದವನು ಸೇನ ಪತಿಗಳು ತೆಪ್ಪಗಾಗುವ ರೀತಿಯಲ್ಲಿ ನುಡಿದನು.

ತನ್ನ ಸಂದೇಹಗಳನ್ನು ವ್ಯಕ್ತಪಡಿಸಲು ಅವಕಾಶಕ್ಕಾಗಿ ಕಾದುಕೊಂಡಿದ್ದ ರಾಜಕುಮಾರ ಆಂಡ್ರೂ 'ಅದು ಹೇಗೆ?' ಎಂದು ಪ್ರಶ್ನಿಸಿದನು. ಅಷ್ಟರಲ್ಲಿ ಕುತುಜೋವ್ ಎಚ್ಚರಗೊಂಡು ಗಡುಸಾಗಿ ಕೆಮ್ಮಿ, ಸುತ್ತಲೂ ಸೇನಾಪತಿಗಳ ಕಡೆಗೆ ಕಣ್ಣು ಹಾಯಿಸಿದನು. 'ಮಿತ್ರರೆ, ನಾಳೆಗೆ ಸಂಬಂಧಿಸಿದ–ಈ ಹೊತ್ತಿಗಾದರೂ ಆಗಬಹುದಾದ ವ್ಯೂಹರಚನೆಗಳನ್ನು ಈಗ ಬದಲಿಸಲಾಗದು. ಏಕೆಂದರೆ ಈಗಾಗಲೇ ಮಧ್ಯರಾತ್ರಿ ಕಳೆದುಹೋಗಿದೆ. ಅವುಗಳ ವಿವರಗಳನ್ನು ಕೇಳಿದ್ದೀರಿ. ನಾವೆಲ್ಲರೂ ನಂನಮ್ಮ ಕರ್ತವ್ಯಗಳನ್ನು ನಿರ್ವಹಿಸೋಣ. ಕದನಕ್ಕಿಂತ ಮುಂಚಿತವಾಗಿ ಮತ್ತೇನೂ ಮುಖ್ಯವಾದದ್ದಿಲ್ಲ ....ಸುಖನಿದ್ರೆಗಿಂತ ಮುಖ್ಯವಾದದ್ದಿಲ್ಲ' ಎಂದವನು ನುಡಿದನು.

ಅವನು ಮೇಲೇಳುವಂತೆ ಚಲಿಸಿದನು. ಸೇನಾಪತಿಗಳು ತಲೆ ಮಣಿದು, ತೆರಳಿದರು. ನಟ್ಟಿರುಳು ಕಳೆದಿತ್ತು. ರಾಜಕುಮಾರ ಆಂಡ್ರೂ ಹೊರಗೆ ಹೊರಟನು.

ತಾನು ನಿರೀಕ್ಷಿಸಿಕೊಂಡಿದ್ದಂತೆ ತನ್ನ ಅಭಿಪ್ರಾಯವನ್ನು ತಿಳಿಸಲು ಸಾಧ್ಯವಿಲ್ಲವಾಗಿ ಯುದ್ಧಮಂಡಲಿ ಆಂಡ್ರೂವಿನ ಮನಸ್ಸಿನ ಮೇಲೆ ಅಸ್ಪಷ್ಟವೂ ಅಹಿತಕರವೂ ಆದ ಪರಿಣಾಮವನ್ನುಂಟುಮಾಡಿತು. ದೊಲ್ಗೊರೊಕೊವ್ ಮತ್ತು ವೇರಾದರ ನಿಲವು ಸರಿಯೋ, ಅಥವಾ ಕುತುಜೋವ್ ಲ್ಯಾಂಗರಾನರ ನಿಲವು ಸರಿಯೋ, ಇಲ್ಲವೆ ಧಾಳಿಯ ಯೋಜನೆಯನ್ನು ಅನುಮೋದಿಸದ ಸೇನಾಪತಿಗಳ ನಿಲವು ಸರಿಯೋ, ಅವನಿಗೆ ಅರ್ಥವಾಗಲಿಲ್ಲ. 'ತಮ್ಮ ಅಭಿಪ್ರಾಯಗಳನ್ನು ನೇರವಾಗಿ ಚಕ್ರವರ್ತಿಗೆ ತಿಳಿಸಲು ಕುತುಜೋವ್‌ರಿಗೆ ನಿಜಕ್ಕೂ ಸಾಧ್ಯವಾಗಲಿಲ್ಲವೆ? ಸೈನಿಕ ನ್ಯಾಯಾಸ್ಥಾನದಿಂದಾಗಿ ಮತ್ತು ವೈಯಕ್ತಿಕ ಕಾರಣಗಳಿಗಾಗಿ, ಸಹಸ್ರ ಸಹಸ್ರಪ್ರಾಣಗಳನ್ನು, ನನ್ನ—ನನ್ನ ಪ್ರಾಣವನ್ನು ಸಹ ಅಪಾಯಕ್ಕೀಡು ಮಾಡುವುದು ಸರಿಯೆ?' ಎಂದವನು ಗೊಣಗಿಕೊಂಡನು.

'ಹೌದು, ನಾಳೆ ನಾನು ಕೊಲೆಯಾಗುವ ಸಂಭವವುಂಟು' ಎಂಬ ಹೆದರಿಕೆ ಅವನ ಮನಸ್ಸನ್ನು ಪ್ರವೇಶಿಸಿತು. ಸಾವಿನ ನೆನಪಿನ ಹಿಂದೆಯೇ ದೂರದ ಮತ್ತು ಹತ್ತಿರದ ನೆನಪುಗಳ ಸರಮಾಲೆ ಒಡನೆಯೆ ಅವನ ಕಲ್ಪನೆಯಲ್ಲಿ ಮೂಡತೊಡಗಿತು. ತನ್ನ ತಂದೆ ಮತ್ತು ಮಡದಿಯರಿಂದ ಕೊನೆಯಸಲ ಬೀಳ್ಕೊಂಡ ಸಂದರ್ಭವನ್ನು ನೆನೆದನು; ತನ್ನ ಮಡದಿಯನ್ನು ಪ್ರಪ್ರಥಮವಾಗಿ ಪ್ರೀತಿಸಿದ ದಿನಗಳನ್ನು ನೆನೆದನು. ಅವಳ ಬಸಿರನ್ನು ನೆನೆದು, ಅವಳಿಗಾಗಿಯೂ ತನಗಾಗಿಯೂ ವ್ಯಾಕುಲಗೊಂಡನು. ಅವನ ಮನಸ್ಸು ಭಾವೋದ್ರೇಕದಿಂದ ಪ್ರಕ್ಷುಬ್ಧಗೊಂಡಿತು. ತನ್ನೊಡನುಳಿದಿದ್ದ ನೆಸ್‌ವಿತ್‌ಸ್ಕಿಯನ್ನು ಗಮನಿಸದೆ ಅವನು ಬಿಡಾರದಿಂದ ಹೊರಬಿದ್ದು, ಅದರ ಮುಂಭಾಗದಲ್ಲಿ ನಡೆದಾಡತೊಡಗಿದನು.

ಇಡೀ ರಾತ್ರಿ ಕಾವಳ ಮುಸುಕಿಕೊಂಡಿತ್ತು. ಕಾವಳದ ಮೂಲಕ ಮಿನುಗುತ್ತಿದ್ದ ಚಂದ್ರಕಾಂತಿ ರಹಸ್ಯಗರ್ಭಿತವಾಗಿತ್ತು. 'ಹೌದು, ನಾಳೆ, ನಾಳೆ ನನ್ನ ಪಾಲಿಗೆ ಎಲ್ಲವೂ ಮುಗಿದುಹೋಗಬಹುದು' ಎಂದವನು ಆಲೋಚಿಸತೊಡಗಿದನು. 'ಈ ನೆನಪುಗಳೆಲ್ಲ ಮಾಯವಾಗುತ್ತವೆ. ನನ್ನ ಪಾಲಿಗೆ ಅವೆಲ್ಲವೂ ಅರ್ಥಶೂನ್ಯವಾಗುತ್ತವೆ. ನಾಳೆ ಪ್ರಾಯಶಃ, ಖಂಡಿತವಾಗಿಯೂ, ಪ್ರಪ್ರಥಮವಾಗಿ ನಾನೇನು ಮಾಡಬಲ್ಲೆನೆಂಬುದನ್ನು ತೋರಿಸಬೇಕಾಗುತ್ತದೆನ್ನುವ ಮುನ್ನಳುಕಿದೆ. ಯುದ್ಧ, ನಷ್ಟ, ಕೇಂದ್ರೀಕೃತ ಹೋರಾಟ,

ಮತ್ತು ಸೇನಾಪತಿಗಳ ಸಂದೇಹಗಳೆಲ್ಲವನ್ನು ಅವನ ಭ್ರಾಮಕ ಕಲ್ಪನೆ ಚಿತ್ರಿಸಿಕೊಳ್ಳು ತ್ತದೆ. ಅನಂತರ ಅದೇ ಸುಖದ ಕ್ಷಣದಲ್ಲಿ ತಾನು ದೀರ್ಘಕಾಲದಿಂದ ನಿರೀಕ್ಷಿಸಿಕೊಂಡಿದ್ದ ಟೂಲಾನ್ ಕೊನೆಗೆ ಅವನ ಮುಂದೆ ಪ್ರತ್ಯಕ್ಷವಾಗುತ್ತದೆ. ಅವನು ಕುತುಜೋವ್‌ಗೆ, ವೇರಾದರನಿಗೆ ಮತ್ತು ಚಕ್ರವರ್ತಿಗಳಿಗೆ ತನ್ನ ಅಭಿಪ್ರಾಯವನ್ನು ಸ್ಪಷ್ಟವಾಗಿ ಹಾಗೂ ದೃಢವಾಗಿ ವಿವರಿಸುತ್ತಾನೆ. ಅವನ ಅಭಿಪ್ರಾಯಗಳ ಯೋಗ್ಯತೆಗೆ ಅವರು ಮಾರು ಹೋಗುತ್ತಾರೆ. ಆದರೆ ಯಾರೂ ಅವನ್ನು ಕಾರ್ಯಗತಗೊಳಿಸಲು ಸಿದ್ಧರಾಗಿಲ್ಲ. ಆದ್ದರಿಂದ ತಾನೇ ಒಂದು ದಳವನ್ನು ತನ್ನ ವಶಕ್ಕೆ ತೆಗೆದುಕೊಂಡು, ತನ್ನ ಏರ್ಪಾಡುಗಳ ಬಗ್ಗೆ ಯಾರೂ ತಲೆಹಾಕಕೂಡದೆಂದು ಷರತ್ತು ಹಾಕಿ, ನಿರ್ಧಾರಕ ಕದನವನ್ನು ಗುರಿಮುಟ್ಟಿಸಿ, ತಾನೊಬ್ಬನೆ ಜಯಗಳಿಸುವುದೆಂದು ತೀರ್ಮಾನಿಸಿಕೊಳ್ಳುತ್ತಾನೆ. 'ಆದರೆ ಸಾವುನೋವುಗಳೊ?', ಎಂದು ಬೇರೊಂದು ಧ್ವನಿ ತಲೆಯೆತ್ತುತ್ತದೆ. ಆಂಡ್ರೂ ಆ ಧ್ವನಿಯನ್ನು ಗಮನಿಸದೆ, ತನ್ನ ವಿಜಯ ಪರಂಪರೆಯ ಬಗ್ಗೆ ಕನಸು ಕಾಣುತ್ತಾನೆ. ಮುಂದಿನ ಕಾಳಗಕ್ಕೆ ತಾನೊಬ್ಬನೇ ವ್ಯೂಹ ರಚನೆಗಳನ್ನು ಯೋಜಿಸಿಕೊಳ್ಳುತ್ತಾನೆ. ವಾಸ್ತವವಾಗಿ ಅವನು ಕುತುಜೋವ್‌ನ ಸಿಬ್ಬಂದಿಯಲ್ಲೊಬ್ಬ ಸಹಾಯಾಧಿಕಾರಿ ಮಾತ್ರ. ಆದರೆ ಪ್ರತಿಯೊಂದು ಕೆಲಸವನ್ನು ತಾನೊಬ್ಬನೇ ನಿರ್ವಹಿಸುತ್ತಾನೆ. ಮುಂದಿನ ಕದನದ ಜಯ ಅವನೊಬ್ಬನಿಂದಲೇ ದಕ್ಕುತ್ತದೆ. ಕುತುಜೋವ್‌ನನ್ನು ಕೆಲಸದಿಂದ ತೆಗೆದು, ಅವನೇ ನೇಮಕಗೊಳ್ಳುತ್ತಾನೆ...'ಅದು ಸರಿ. ಅನಂತರ?' ಎಂದು ಮತ್ತೊಂದು ದನಿ ಪ್ರಶ್ನಿಸುತ್ತದೆ. 'ವಿಜಯ ಲಾಭಕ್ಕೆ ಮುಂಚೆ ನೀನು ಹತ್ತುಸಾರಿ ಯಾದರೂ ಗಾಯಗೊಳ್ಳದಿದ್ದರೆ, ಮರಣಕ್ಕೊಳಗಾಗದಿದ್ದರೆ, ಅಥವಾ ವಿಶ್ವಾಸ ಘಾತಕ ತನ ಸಂಭವಿಸದಿದ್ದರೆ, ಸರಿ....ಅನಂತರ ಏನಾಗುತ್ತದೆ?....' 'ಸರಿ, ಹಾಗಾದರೆ' ಎಂದು ಆಂಡ್ರೂ ತನಗೆ ತಾನೇ ಉತ್ತರಕೊಟ್ಟುಕೊಳ್ಳುತ್ತಾನೆ. 'ಏನಾಗುತ್ತದೋ ಗೊತ್ತಿಲ್ಲ. ಅದನ್ನು ತಿಳಿಯಲು ನನಗಿಷ್ಟವಿಲ್ಲ. ಆದರೆ ನಾನು ಇದನ್ನು—ಅಂದರೆ ಕೀರ್ತಿಯನ್ನು ಅಪೇಕ್ಷಿಸುವುದಾದರೆ, ನಾನು ಜನರಿಗೆ ಗೊತ್ತಾಗಬೇಕಾದರೆ, ಅವರ ಪ್ರೇಮವನ್ನು ಗಳಿಸ ಬೇಕಾದರೆ–ಹಾಗೆ ಅಪೇಕ್ಷಿಸುವುದು ತಪ್ಪಲ್ಲ; ಅದು ವಿನಾ ನನಗೆ ಬೇರಾವ ಅಪೇಕ್ಷೆಯೂ ಇಲ್ಲ–ಅದಕ್ಕಾಗಿ ಮಾತ್ರವೇ ನಾನು ಬದುಕುತ್ತೇನೆ. ಹೌದು ಅದಕ್ಕಾಗಿ ಮಾತ್ರ! ಯಾರಿಗೂ ಇದನ್ನು ಹೇಳುವುದಿಲ್ಲ. ಆದರೆ ದೇವರೆ! ಕೀರ್ತಿ ಮತ್ತು ಜನಪ್ರಿಯತೆ ಗಳನ್ನು ಮಾತ್ರ ನಾನು ಅಪೇಕ್ಷಿಸುವುದಾದರೆ, ನಾನೇನು ಮಾಡಬೇಕಾಗಿದೆ? ಸಾವು, ಗಾಯ, ಕುಟುಂಬದ ನಷ್ಟ–ಯಾವುದಕ್ಕೂ ನಾನು ಹೆದರುವುದಿಲ್ಲ. ನನಗೆ ಅತ್ಯಂತ ಪ್ರೀತಿಯ ಬೆಲೆಯುಳ್ಳ ಜನರಿದ್ದಾರೆ. ತಂದೆ ತಂಗಿ ಮತ್ತು ಮಡದಿಯರು ನನ್ನ ಹೃದಯಕ್ಕೆ ಅತ್ಯಂತ ನಿಕಟವಾದವರು. ನನ್ನ ಯೋಚನೆ ಭಯಂಕರವಾಗಿ ಮತ್ತು ಅಸಹಜವಾಗಿ ತೋರುವುದಾದರೂ ಒಂದು ಕ್ಷಣದ ಕೀರ್ತಿಗಾಗಿ, ಮನುಕುಲದ ಮೇಲಣ ವಿಜಯ ಸಾಧನೆಗಾಗಿ, ನನಗೆ ತಿಳಿಯದ, ಎಂದೂ ತಿಳಿಯಲಾಗದ ಜನರ ಪ್ರೇಮಸಂಪಾದನೆಗಾಗಿ, ಇಲ್ಲಿಯ ಜನರ ಮೇಲಣ ಪ್ರೀತಿಗಾಗಿ ಈ ಕೂಡಲೇ ನನ್ನದಾದೆಲ್ಲವನ್ನು ಸಮರ್ಪಿಸಲು ಸಿದ್ಧನಾಗಿದ್ದೇನೆ' ಎಂದವನು ಯೋಚಿಸುತ್ತಿದ್ದಂತೆ ಕುತುಜೋವ್‌ನ ಅಂಗಳದ ಕಡೆ ಯಿಂದ ತೂರಿಬಂದ ಧ್ವನಿಗಳು ಅವನ ಕಿವಿಯ ಮೇಲೆ ಬಿದ್ದುವು. ಅವು ಗಂಟು

ಮೂಟೆ ಕಟ್ಟುತ್ತಿದ್ದ ಸೇವಕರ ಧ್ವನಿಗಳಾಗಿದ್ದುವು. ಅವುಗಳಲ್ಲೊಂದು ಧ್ವನಿ ಪ್ರಾಯಶಃ ಸಾರಥಿಯದು. ಅಂಡ್ರೂವಿಗೆ ಗೊತ್ತಿದ್ದ, ಟಿಟ್ ಎಂಬ ಹೆಸರಿನ ಕುತುಜೋವ್‌ನ ಅಡುಗೆಯವನನ್ನವನು ಕೀಟಲೆ ಮಾಡುತ್ತಿದ್ದನು. 'ಟಿಟ್, ಹೌದು ಟಿಟ್ ?' ಎಂದವನು ಹೇಳುತ್ತಿದ್ದನು.

'ಸರಿ ?' ಎಂದು ಮುದುಕ ಹಿಂದಿರುಗಿಸಿದನು.

'ನಡಿ, ಟಿಟ್, ಸ್ವಲ್ಪ ಚುಚ್ಚು !' ಎಂದು ಕುಚೋದ್ಯಗಾರ ನುಡಿದನು.

'ನೀವಿಲ್ಲಿಂದ ತೊಲಗಿರಿ !' ಎಂಬೊಂದು ಧ್ವನಿ ಸಿಡಿದು, ಅಂಗರಕ್ಷಕರ ಮತ್ತು ಸೇವಕರ ನಗೆಯಲ್ಲಿ ಮುಳುಗಿಹೋಯಿತು.

'ಅದೇನೇ ಇರಲಿ, ಎಲ್ಲಕ್ಕಿಂತ ಮಿಗಿಲಾಗಿ ವಿಜಯೋತ್ಸವವೊಂದೇ ನನಗೆ ಇಷ್ಟವಾದದ್ದು. ಅದಕ್ಕೆ ನಾನು ಅಪಾರ ಬೆಲೆ ಕೊಡುತ್ತೇನೆ. ಈ ಮಂಜು ಬಸಿರಿನಲ್ಲಿ, ನನ್ನ ಮೇಲೆ ತೇಲಾಡುತ್ತಿರುವ ರಹಸ್ಯಾತ್ಮಕಶಕ್ತಿಗೂ ವೈಭವಕ್ಕೂ ಅಸಾಧಾರಣವಾದ ಬೆಲೆ ನೀಡುತ್ತೇನೆ.'

ಅಧ್ಯಾಯ ೧೩

ಅದೇ ದಿನ ರಾತ್ರಿ ರೊಸ್ತೋವ್ ಡಿಂಬಕಾಳಗದಲ್ಲಿ ನಿರತವಾಗಿದ್ದ ತುಕಡಿಯೊಂದಿಗಿದ್ದನು. ಬಗ್ರೇಷನ ಸೈನ್ಯ ವಿಭಾಗದ ಮುಂಭಾಗದಲ್ಲಿ ಆ ಕಸರತ್ತು ನಡೆದಿತ್ತು. ಅವನ ಸವಾರರನ್ನು ಜೋಡಿ ಜೋಡಿಯಾಗಿ ಸಾಲಾಗಿ ನಿಲ್ಲಿಸಲಾಗಿತ್ತು. ಒತ್ತಿ ಬರುತ್ತಿದ್ದ ನಿದ್ದೆಯನ್ನು ತಡೆಯುವ ಸಲುವಾಗಿ ರೊಸ್ತೋವ್ ಸಾಲಿನುದ್ದಕ್ಕೂ ಸವಾರಿಸುತ್ತಿದ್ದನು. ಮಂಜಿನ ಮೂಲಕ ತೂರಿ ಬರುತ್ತಿದ್ದ ಸೈನ್ಯದ ಶಿಬಿರಾಗ್ನಿಯ ಮಸಕು ಬೆಳಕಿನಲ್ಲಿ ಹಿಂದುಗಡೆಗಿದ್ದ ದೊಡ್ಡ ಬಯಲು ಕಾಣುತ್ತಿತ್ತು. ಅವನ ಮುಂದುಗಡೆ ಮಂಜುಗತ್ತಲೆ ಕವಿದಿತ್ತು. ಇಣುಕಿಣುಕಿ ನೋಡಿದರೂ ಅವನ ಕಣ್ಣಿಗೆ ಏನೂ ಕಾಣಿಸುತ್ತಿರಲಿಲ್ಲ : ಒಮ್ಮೆ ಬೂದು ಬಣ್ಣದ ವಸ್ತು ಮಿಣುಕಿದಂತಾಯಿತು. ಮತ್ತೊಮ್ಮೆ ಕರಿಯ ವಸ್ತುವನ್ನು ಕಂಡಂತಾಯಿತು. ಮಗುದೊಮ್ಮೆ ಸಣ್ಣ ದೀಪಗಳು ಮಿಣುಗುಟ್ಟಿದಂತೆ ತೋರಿದಾಗ, ಅದು ಶತ್ರು ಪಾಳೆಯವಿರಬೇಕೆಂದು ಯೋಚಿಸಿದನು. ಅದೆಲ್ಲ ತನ್ನ ಕಣ್ಣಿನ ಭ್ರಮೆಯಿರಬೇಕೆಂದು ಮರುಕ್ಷಣದಲ್ಲಿ ಅಂದುಕೊಂಡನು. ಅವನ ಕಣ್ಣು ಮಾತ್ರ ಎಳೆಯುತ್ತಲೇ ಇದ್ದುವು. ಅವನ ಭ್ರಾಮಕ ಕಲ್ಪನೆಯಲ್ಲಿ ಚಕ್ರವರ್ತಿ, ಡೆನಿಸೋವ್ ಮತ್ತು ಮಾಸ್ಕೊ ನಗರದ ನೆನಪುಗಳು ಮಿಂಚಿದುವು. ಅವನು ತಟಕ್ಕನೆ ಕಣ್ಣು ಬಿಟ್ಟು ನೋಡುವಾಗ, ತಾನು ಸವಾರಿ ಮಾಡುತ್ತಿದ್ದ ಕುದುರೆಯ ತಲೆ ಮತ್ತು ಕಿವಿಗಳು ತೀರ ಸಮೀಪದಲ್ಲಿ ಕಾಣಿಸಿದುವು. ರಾವುತರ ಕಡೆಗೆ ಅವನು ಆರೇಳು ಹೆಜ್ಜೆ ಇಟ್ಟಾಗ, ಅವರ ಕಪ್ಪನೆಯ ಚಿತ್ರಗಳು ಮೊಗದೋರುತ್ತಿದ್ದುವು. ಆದರೆ ದೂರದಲ್ಲಿ ಮಾತ್ರ ಅದೇ ಮಂಜುಗತ್ತಲೆ ಇನ್ನು ಕವಿದಿತ್ತು. 'ಏಕಾಗಬಾರದು ? .. ಅದು ಸರಾಗವಾಗಿ ಸಂಭವಿಸಬಹುದು' ಎಂದು ರೊಸ್ತೋವ್ ಆಲೋಚಿಸಿದನು. 'ಚಕ್ರವರ್ತಿ ನನ್ನನ್ನು ಸಂಧಿಸಿ, ಇತರ ಅಧಿಕಾರಿಗಳಿಗೆಂತೊ ಅಂತೆಯೇ ನನಗೂ ಅನುಜ್ಞೆಯನ್ನು ನೀಡಬಹುದು. "ಅಲ್ಲೇನು ನಡೆಯುತ್ತಿದೆ ? ತಿಳಿದು ಬಾ" ಎಂದವರು ಹೇಳಿಯಾರು. ಕೇವಲ ಆಕಸ್ಮಿಕ

ವಾಗಿಯೇ ಅಧಿಕಾರಿಯ ಗುಣವನ್ನರಿಯುವ ಮತ್ತು ತಮ್ಮ ಪರಿವಾರಕ್ಕೆ ಸೇರಿಸಿ ಕೊಂಡಿರುವ ಕತೆಗಳು ಅನೇಕವಿವೆ! ತಮ್ಮ ಬಳಿಯಲ್ಲಿಯೇ ಅವರು ನನಗೊಂದು ಸ್ಥಾನ ದಯಪಾಲಿಸುವುದಾದರೆ ಏನಾದೀತು? ಹೇಗೆ ತಾನೆ ನಾನವರನ್ನು ರಕ್ಷಿಸಿಯೇನು? ಹೇಗೆ ತಾನೆ ಅವರಿಗೆ ನಿಜವನ್ನು ತಿಳಿಸಿಯೇನು? ಹೇಗೆ ತಾನೆ ಅವರ ವಂಚಕರನ್ನು ಬಯಲುಮಾಡಿಯೇನು?' ಚಕ್ರವರ್ತಿಯ ಬಗೆಗಿನ ತನ್ನ ಪ್ರೇಮವನ್ನೂ ಸಮರ್ಪಣ ಮನೋಭಾವವನ್ನೂ ಸಾಕ್ಷಾತ್ಕರಿಸಿಕೊಳ್ಳುವ ಸಲುವಾಗಿ, ರೊಸ್ತೋವ್ ಸಂತೋಷ ದಿಂದ ಒಬ್ಬ ಹಗೆಯನ್ನೋ ಅಥವಾ ಜರ್ಮನ್ ವಂಚಕನನ್ನೊ ಕೊಲ್ಲುವುದು ಮಾತ್ರ ವಲ್ಲ, ಚಕ್ರವರ್ತಿಯ ಸಮ್ಮುಖದಲ್ಲಿಯೇ ತಾನು ಅವನ ಕೆನ್ನೆಯ ಮೇಲೆ ಬಾರಿಸುವ ದೃಶ್ಯವನ್ನು ಚಿತ್ರಿಸಿಕೊಂಡನು. ಇದಕ್ಕಿದ್ದಂತೆ ದೂರದ ಆರ್ಭಟ ಅವನನ್ನೆಚ್ಚರಿಸಿತು. ಅವನು ಕೂಡಲೇ ಕಣ್ಣು ತೆರೆದನು.

'ನಾನೆಲ್ಲಿದ್ದೇನೆ? ಓ ಹೌದು, ನಾನೀಗ ಕಿರುಕಾಳಗದ ಸಾಲಿನಲ್ಲಿದ್ದೇನೆ... ಸಂಕೇತ ಪದಗಳು–ಭರ್ಜಿ, ಆಲ್‌ಮೂತ್ಸ್. ನಾಳೆ ನಮ್ಮ ಪಟಾಲಮ್ಮು ಮೀಸಲು ಸೇವೆಯಲ್ಲಿರಬೇಕಂತೆ. ಇದೆಂಥ ಅನಿಷ್ಟ!' ಎಂದವನು ಗೊಣಗಿಕೊಂಡನು. 'ಮುಂಚೂ ಣಿಗೆ ಹೋಗಲು ನಾನೇ ಅನುಮತಿ ಕೇಳುತ್ತೇನೆ. ಚಕ್ರವರ್ತಿಯನ್ನು ನೋಡಲು ನನಗಿರುವ ಅವಕಾಶ ಇದೊಂದು ಮಾತ್ರ. ಇಷ್ಟರಲ್ಲೇ ನನ್ನ ಈ ಹೊತ್ತಿನ ಕೆಲಸ ಮುಗಿಯುತ್ತದೆ. ಸೇನಾಪತಿಯ ಬಳಿ ಹೋಗಿ, ಮತ್ತೊಂದು ಸರದಿ ಬೇಕೆಂದು ಕೇಳು ತ್ತೇನೆ.' ಅವನು ಕಾಟರದಮೇಲೆ ಸರಿಯಾಗಿ ಕುಳಿತುಕೊಂಡು, ಕುದುರೆಯನ್ನು ಮುಟ್ಟಿ, ಮತ್ತೊಮ್ಮೆ ರಾವುತರನ್ನು ಬಳಸಿಕೊಂಡು ಬಂದನು. ಬೆಳಕು ಹೆಚ್ಚುತ್ತಿರು ವಂತೆ ಅವನಿಗೆ ಕಂಡಿತು. ಎಡಗಡೆ ಬೆಳಕೇರಿದಂತಿದ್ದ ಇಳಿಜಾರಿನ ಇಳುಕಲನ್ನು ಕಂಡನು. ಅದಕ್ಕಭಿಮುಖವಾಗಿ ಗೋಡೆಯಂತೆ ಕಡಿದಾಗಿದ್ದ ಕರಿಯ ಮೊರಡಿಯೊಂದಿತ್ತು. ಆ ಮೊರಡಿಯ ಮೇಲಿದ್ದ ಬಿಳಿಯ ತೇಪೆ ಏನೆಂದು ರೊಸ್ತೋವ್‌ನಿಗೆ ಗ್ರಹಿಕೆಯಾಗಲಿಲ್ಲ. ಅದು ಕಾಡಿನ ನಡುವೆ ಚಂದ್ರನ ಬೆಳಕು ಹರಿದ ದರೆಯಿರಬಹುದೆ? ಅಥವಾ ಕರಗದ ಮಂಜಿರಬಹುದೆ? ಅಥವಾ ಬಿಳಿಯ ಮನೆಗಳ ಗುಂಪಿರಬಹುದೆ? ಆ ಬೆಳ್ದಾಣದ ಮೇಲೆ ಯಾವುದಾದರೂ ವಸ್ತು ಚಲಿಸುತ್ತಿರಬಹುದೆ ಎಂದವನು ಎಣಿಸಿದನು. 'ಅದು ಮಂಜಾಗಿರಬಹುದೆಂಬುದು ನನ್ನ ನಿರೀಕ್ಷೆ....ಆ ತಾಣ. ಅಗೋ, ಅಲ್ಲಿ....ಅದು ಬೆಳ್ದಾಣವಲ್ಲ....ನತಾಷ....ತಂಗಿ, ಕಪ್ಪು ಕಣ್ಣುಗಳು....ನ....ತಾಷ....(ನಾನು ಚಕ್ರ ವರ್ತಿಯನ್ನು ನೋಡಿದ್ದೇನೆಂದರೆ ಅವಳಿಗೆ ಸೋಜಿಗವಾಗಬಹುದಲ್ಲವೆ?) ನತಾಷ.... ನನ್ನ ಕುಡುಗತ್ತಿ ತೆಗೆದುಕೊ? ಗಾಢ ನಿದ್ರೆಯಲ್ಲಿಯೇ ಸವಾರಿ ಮಾಡುತ್ತಿದ್ದ ರೊಸ್ತೋವ್‌ನನ್ನು ಕುರಿತು 'ಬಲಕ್ಕೆ ಬನ್ನಿ ಅಯ್ಯ, ಅಲ್ಲಿ ಹಿಂಡಿಲುಗಳಿವೆ?' ಎಂದೊಬ್ಬ ರಾವುತ ಎಚ್ಚರಿಸಿದನು. ಕುದುರೆಯ ಕೇಸರದೊಳಗೆ ಮುಳುಗಿದಂತಿದ್ದ ತನ್ನ ತಲೆ ಯನ್ನು ರೊಸ್ತೋವ್ ಮೇಲೆತ್ತಿ ರಾವುತನ ಕಡೆಗೆ ಸರಿದನು. ಅವನು ಯೌವನ ಸಹಜವೂ ಅದಮ್ಯವೂ ಆದ ತಂದ್ರಸ್ಥಿತಿಗೆ ಶರಣಾಗಿದ್ದನು. 'ಅದೆಲ್ಲ ಇರಲಿ, ನಾನೇನು ಯೋಚಿಸುತ್ತಿದ್ದೆ? ನಾನು ಮರೆಯಕೂಡದು. ನಾನು ಚಕ್ರವರ್ತಿಯೊಡನೆ ಹೇಗೆ ಮಾತಾಡಲಿ? ಅದಲ್ಲ, ಅದಂತು ಅಲ್ಲ. ಅದು ನಾಳಿನ ವಿಷಯ. ಈಗ ನೆನಪಾ

ಯಿತು. ನತಾಷ....ಕುಡುಗತ್ತಿ....ಕುಡುಗತ್ತಿಯಿಂದ ಅವರನ್ನು ಹೊಡೆ....ಯಾರನ್ನು? ರಾವುತರು....ಅಹ, ಮಿಾಸೆಯ ರಾವುತರು ತ್ವೆರ್‌ಸ್ಕಾಯ ಬೀದಿಯುದ್ದಕ್ಕೂ ಮಿಾಸೆಯ ಆ ರಾವುತರು ಸವಾರಿಸಿದರು....ಗೂರ್‍ಯೇವ್ ಮನೆಯ ಮುಂದೆ ಅವನನ್ನು ನೆನಪು ಮಾಡಿಕೊಂಡೆ....ಮುದಿ ಗೂರ್‍ಯೇವ್....ಓಹೊ, ಡೆನಿಸೋವ್ ಒಳ್ಳೆಯ ಪ್ರಾಣಿ. ಆದರೆ ಅದೆಲ್ಲ ಅಬದ್ಧ. ಚಕ್ರವರ್ತಿ ಇಲ್ಲಿಯೇ ಇದ್ದಾರೆಂಬುದು ಮುಖ್ಯ ಸಂಗತಿ. ಅವರು ಹೇಗೆ ನನ್ನ ಕಡೆಗೆ ನೋಡಿದರು? ನನಗೇನೋ ಹೇಳಬೇಕೆಂದಿದ್ದರು?....ಆದರೆ ಧೈರ್ಯ ಬರಲಿಲ್ಲ....ಹಾಗಲ್ಲ, ಧೈರ್ಯಬರದಿದ್ದುದು ನನಗೆ. ಆದರೆ ಅದೆಲ್ಲ ಅಸಂಬದ್ಧ. ಮುಖ್ಯ ವಾದ ವಿಷಯದ ಬಗ್ಗೆ ನಾನು ಯೋಚಿಸುತ್ತಿದ್ದೆನೆಂಬುದನ್ನು ಮರೆಯಬಾರದು. ಹೌದು, ನತಾಷ, ಕುಡುಗತ್ತಿ ತೆಗೆದುಕೊ. ಓಹೋ, ಹೌದ್ಹೌದು! ಅದೇ ಸರಿ!' ಅವನ ತಲೆ ಮತ್ತೊಮ್ಮೆ ಕುದುರೆಯ ಜೂಲು ಕೂದಲಿನೊಳಗೆ ಕುಸಿಯಿತು. ಒಡನೆಯೆ ಸಿಡಿಗುಂಡಿನ ಮಳೆ ತನ್ನ ಮೇಲೆ ಕರೆಯುತ್ತಿದ್ದಂತೆ ಭಾಸವಾಯಿತು. 'ಏನು? ಏನು? ಏನು? ಏನು? ಅವರನ್ನು ಕತ್ತರಿಸಿ! ಏನು?....' ಎನ್ನುತ್ತ ರೊಸ್ತೋವ್ ಎಚ್ಚರ ಗೊಂಡನು. ಅವನು ಕಣ್ಣು ತೆರೆಯುತ್ತಿದ್ದಂತೆ ತನ್ನೆದುರಿಗೆ, ಹಗೆಯ ನೆಲೆಯಲ್ಲಿ ಸಾವಿರಾರು ಕಂಠಗಳ ಸುದೀರ್ಘ ನಿರ್ಘೋಷ ಕೇಳಿಸಿತು. ಆ ಅಬ್ಬರದಿಂದಾಗಿ ಅವನ ಮತ್ತು ಬಳಿಯ ರಾವುತನ ಕುದುರೆಗಳು ಒಂದೊಂದರ ಕಿವಿಗಳನ್ನು ಕಚ್ಚಾಡಿದುವು. ಶಬ್ದ ಬಂದ ಕಡೆ ಬೆಂಕಿ ಪ್ರಜ್ವಲಗೊಂಡಿತು; ಮತ್ತೆ ಆರಿಹೋಯಿತು. ಮತ್ತೆ ಬೆಂಕಿ. ಬೆಟ್ಟದ ಮೇಲೆ ಫ್ರೆಂಚ್ ಸೈನಿಕ ಪಂಕ್ತಿಯುದ್ದಕ್ಕೂ ಬೆಂಕಿ ಭಗ್ಗನೆ ಹೊತ್ತಿಕೊಂಡಿತು. ಅಬ್ಬರ ನಿಮಿಷ ನಿಮಿಷಕ್ಕೂ ತೀವ್ರಗೊಳ್ಳುತ್ತಿತ್ತು. ಫ್ರೆಂಚ್ ಪದಗಳು ರೊಸ್ತೋವ್‌ನಿಗೆ ಕೇಳಿಸಿದರೂ, ಅವು ಸುಸ್ಪಷ್ಟವಾಗಿರಲಿಲ್ಲ. ನಾನಾ ಧ್ವನಿಗಳ ಗದ್ದಲ ಅಸಹ್ಯವಾಗಿತ್ತು. 'ಅ ಹ ಹ ಅಹಹ—ರ್‌ರ್‌ರ್!' ಇವಿಷ್ಟೇ ಅವನು ಕೇಳಬಹುದಾಗಿದ್ದ ಧ್ವನಿಗಳು.

'ಏನದು? ಅದು ನಿನಗರ್ಥವಾಗುತ್ತದೆಯೇ?' ಎಂದು ರೊಸ್ತೋವ್ ಪಕ್ಕದ ರಾವುತನನ್ನು ಪ್ರಶ್ನಿಸಿದನು. 'ಅದು ಶತ್ರುಗಳ ಠಾಣ್ಯವಾಗಿರಬೇಕು.' ರಾವುತ ಮಾತಾಡಲಿಲ್ಲ.

'ಏಕೆ? ನಿನಗದು ಕೇಳಿಸುವುದಿಲ್ಲವೆ?' ಎಂದು ರೊಸ್ತೋವ್, ರಾವುತನಿಂದ ಉತ್ತರ ಬರದಿರಲು ಪ್ರಶ್ನಿಸಿದನು.

'ಹೇಗೆ ಹೇಳುವುದು, ಅಯ್ಯ?' ಎಂದು ರಾವುತ ಅಸಡ್ಡೆಯಿಂದಲೆಂಬಂತೆ ಉತ್ತರಿಸಿದನು.

'ಗದ್ದಲದ ದಿಕ್ಕನ್ನು ನೋಡಿದರೆ, ಹಗೆಯದೇ ಇರಬೇಕು.'

'ಅದು ಹಗೆಯದಿದ್ದಿರಬಹುದು ಅಥವಾ ಏನೂ ಇಲ್ಲದಿರಬಹುದು' ಎಂದು ರಾವುತ ಗೊಣಗಿದನು. 'ಕತ್ತಲೆಯಿದೆ. ಭದ್ರ, ದುಡುಕಬೇಡ?' ಎಂದವನು ಚಡಪಡಿಸುತ್ತಿದ್ದ ತನ್ನ ಕುದುರೆಯನ್ನು ಗದರಿಸಿದನು.

ರೊಸ್ತೋವ್‌ನ ಕುದುರೆಯೂ ತಕರಾರು ಮಾಡುತ್ತಿತ್ತು: ಅದು ಹೆಪ್ಪುಗಟ್ಟಿದ ನೆಲವನ್ನು ಗೊರಸಿನಿಂದ ಕೆರೆಯುತ್ತಿತ್ತು; ಗದ್ದಲ ಬಂದ ಕಡೆಗೆ ಕಿವಿ ನಿಮಿರಿಸಿಕೊಂಡು, ಬೆಳಕಿನ ಕಡೆಗೆ ನೋಡುತ್ತಿತ್ತು. ಬರಬರುತ್ತ ಶಬ್ದ ಗಗನಕ್ಕೇರಿತು. ಅದು ಸಹಸ್ರ

ಸಹಸ್ರ ಜನರುಳ್ಳ ಸೈನ್ಯದ ಸಾಮೂಹಿಕ ಮಹಾ ಘೋಷದಂತಿತ್ತು. ಇಡೀ ಪಾಳೆಯ ದಲ್ಲೆಲ್ಲ ದೀಪಗಳು ರಾರಾಜಿಸುತ್ತಿದ್ದುವು. ರೊಸ್ತೋವ್ ನಿದ್ದೆಮಾಡಬಾರದೆಂದು ನಿರ್ಧರಿಸಿಕೊಂಡನು. ಶತ್ರುಸೈನ್ಯದ ವಿಜಯೋತ್ಸವದ ಘೋಷ ಅವನ ಮನಸ್ಸಿನ ಮೇಲೆ ಪ್ರಚೋದಕ ಪರಿಣಾಮ ಬೀರಿತು. 'ಚಕ್ರವರ್ತಿಗಳು ಚಿರಾಯುವಾಗಲಿ! ಚಕ್ರವರ್ತಿಗಳು ಚಿರಾಯುವಾಗಲಿ!' ಎಂಬ ಘೋಷಣೆ ಅವನಿಗೆ ಸ್ಪಷ್ಟವಾಗಿ ಕೇಳಿಸಿತು. 'ಅವರು ದೂರ' ಇದ್ದಿರಲಾರರು. ಪ್ರಾಯಶಃ ಹೊಳೆಯ ಆ ಕಡೆ ಬದಿಯಲ್ಲಿದ್ದಾರೆ' ಎಂದವನು ಬದಿಯ ರಾವುತನಿಗೆ ತಿಳಿಸಿದನು.

ರಾವುತ ಉತ್ತರಿಸದೆ ನಿಡುಸುಯ್ದನು; ಕೋಪದಿಂದ ಕೆಮ್ಮಿದನು. ಅಶ್ವದಳದ ಪಂಕ್ತಿಯುದ್ದಕ್ಕೂ ಕುಲುಕೋಟದಲ್ಲಿ ಬರುತ್ತಿದ್ದ ಖುರಪುಟಧ್ವನಿ ಕೇಳಿಸಿತು. ಆನೆ ಯಂತೆ ಬೃಹದಾಕಾರವಾಗಿ ಕಾಣುತ್ತಿದ್ದ ಅಶ್ವದಳದ ಸಾರ್ಜೆಂಟನ ಚಿತ್ರ ಹಠಾತ್ತನೆ ಮಂಜುಗತ್ತಲಿಂದ ಮೂಡಿತು. 'ಸೇನಾಪತಿಗಳು, ಸ್ವಾಮಿ!' ಎಂದವನು ರೊಸ್ತೋವ್ ಬದಿಗೆ ಸರಿದನು.

ಬೆಂಕಿ ಗದ್ದಲಗಳ ಕಡೆಗೆ ಕಣ್ಣು ಕಿವಿ ಕೀಲಿಸಿದ್ದ ರೊಸ್ತೋವ್ ಅಶ್ವದಳದ ಪಕ್ಕದಲ್ಲಿಯೇ ಸವಾರಿ ಮಾಡಿಕೊಂಡು ಬರುತ್ತಿದ್ದ ಅಧಿಕಾರಿಗಳ ಸ್ವಾಗತಕ್ಕಾಗಿ ಸಾರ್ಜೆಂಟನೊಡನೆ ತೆರಳಿದನು. ಶತ್ರುಪಾಳೆಯದ ಬೆಂಕಿಸದ್ದುಗಳ ವಿಚಿತ್ರ ಸಂಗತಿ ಯನ್ನು ವೀಕ್ಷಿಸುವ ಸಲುವಾಗಿ ರಾಜಕುಮಾರ ಬಗ್ರೇಷನ್ ಮತ್ತು ರಾಜಕುಮಾರ ದೊಲ್ಗೊರೂಕೊವ್ ತಮ್ಮ ಸಹಾಯಾಧಿಕಾರಿಗಳೊಡನೆ ಅಲ್ಲಿಗೆ ಬಂದಿದ್ದರು. ರೊಸ್ತೋವ್ ಬಗ್ರೇಷನ್ ಬಳಿಗೆ ಸರಿದು, ತನಗೆ ಕಂಡದ್ದನ್ನು ವರದಿಸಿ, ಸಹಾಯಾಧಿ ಕಾರಿಗಳ ಗುಂಪು ಸೇರಿಕೊಂಡು, ಸೇನಾಪತಿಗಳ ಮಾತುಕತೆಗಳಿಗೆ ಕಿವಿಗೊಟ್ಟನು.

'ಇದೊಂದು ಮೋಸವಿದ್ದಂತೆ ತೋರುತ್ತದೆ. ಅವನು ಹಿಂಜರಿದು, ನಮ್ಮನ್ನು ವಂಚಿಸುವ ಸಲುವಾಗಿ, ಬೆಂಕಿ ಹಚ್ಚಿ ಗದ್ದಲಮಾಡುವಂತೆ ಬೆಂಗಾವಲಿನ ಪಡೆಗೆ ಆಜ್ಞೆ ಮಾಡಿದ್ದಾನೆಂಬುದೇ ನನ್ನ ಎಣಿಕೆ' ಎಂದು ದೊಲ್ಗೊರೂಕೊವ್ ಬಗ್ರೇಷನ್‌ನಿಗೆ ತಿಳಿಸಿದನು.

'ಆದಿರಲಾರದು. ಸಂಜೆ ಆ ಮೊರಡಿಯ ಮೇಲೆ ಅವರನ್ನು ಕಂಡೆ. ಅವರು ಹಿಮ್ಮೆಟ್ಟಿದ್ದೇ ನಿಜವಾದರೆ, ಅಲ್ಲಿಂದಲೂ ನಿರ್ಗಮಿಸುತ್ತಿದ್ದರು....ಏನಯ್ಯ ನಾಯಕ? ಶತ್ರುಸೈನ್ಯದ ಸಣ್ಣ ತಂಡಗಳು ಇನ್ನೂ ಅಲ್ಲಿವೆಯೇನು?' ಎಂದು ಬಗ್ರೇಷನ್ ರೊಸ್ತೋವ್‌ನನ್ನು ಕರೆದು ಕೇಳಿದನು.

'ಸಂಜೆ ಅವರಲ್ಲಿದ್ದರು. ಈಗ ಅವರಿದ್ದಾರೆಯೋ ಏನೋ ಗೊತ್ತಿಲ್ಲ, ಪ್ರಭು! ಕೆಲವು ರಾವುತರ ಜತೆಯಲ್ಲಿ ಹೋಗಿ ನೋಡಿಕೊಂಡು ಬರಲೆ?' ಎಂದು ರೊಸ್ತೋವ್ ವಿನಂತಿಸಿಕೊಂಡನು.

ಉತ್ತರ ಕೊಡುವ ಮುನ್ನ ಬಗ್ರೇಷನ್ ಮಂಜಿನಲ್ಲಿ ರೊಸ್ತೋವ್‌ನ ಮುಖ ನೋಡಲು ಪ್ರಯತ್ನಿಸಿದನು. ತುಸು ತಡೆದು, 'ಒಳ್ಳೇದು; ಹೋಗಿ, ನೋಡಿಕೊಂಡು ಬಾ' ಎಂದನು.

'ಅಪ್ಪಣೆ, ಸ್ವಾಮಿ.'

ರೊಸ್ತೋವ್ ತನ್ನ ಕುದುರೆಯನ್ನು ಚೋದಿಸಿ, ತನ್ನನ್ನು ಹಿಂಬಾಲಿಸುವಂತೆ ಸಾರ್ಜೆಂಟ್ ಫೆದ್‌ಚೆಂಕೋ ಮತ್ತು ಬೇರಿಬ್ಬರು ರಾವುತರಿಗೆ ಬೆಸಸಿ, ಬೆಟ್ಟದ ಇಳುಕಲ ಕಡೆಗೆ, ಗದ್ದಲ ಬರುತ್ತಿದ್ದ ದಿಕ್ಕಿನಲ್ಲಿ ಸವಾರಿಸಿದನು. ತನಗೆ ಮುಂಚೆ ಬೇರಾರೂ ಕಾಲಿಡದಿದ್ದ, ರಹಸ್ಯಗರ್ಭಿತವೂ ಅಪಾಯಕಾರಿಯೂ ಆದ ಮಂಜಿಡಿದ ಗೆಂಟಿಗೆ ಮೂವರು ರಾವುತರೊಡನೆ ತಾನೊಬ್ಬನೇ ಸವಾರಿಸುವಾಗ ಭಯ ಸಂತೋಷಗಳೆರಡೂ ಅವನ ಮನವನ್ನಾಕ್ರಮಿಸಿಕೊಂಡುವು. ಹೊಳೆಯಿಂದ ಮುಂದೆ ಹೋಗಕೂಡದೆಂದು ಬಗ್ರೇಷನ್ ಬೆಟ್ಟದ ಮೇಲಿಂದ ಅವನಿಗೆ ಕೂಗಿ ಹೇಳಿದನು. ರೊಸ್ತೋವ್ ಕೇಳಿಸ ದವನಂತೆ ನಟಿಸುತ್ತ, ಪೊದೆಗಳನ್ನು ಮರಗಳೆಂದು, ಕೊರಕಲುಗಳನ್ನು ಮನುಷ್ಯರೆಂದು ತಪ್ಪಾಗಿ ಭಾವಿಸುತ್ತ, ಆಗಾಗಲೆ ತಪ್ಪುಗಳನ್ನು ತಿದ್ದಿಕೊಳ್ಳುತ್ತ, ಎಲ್ಲಿಯೂ ನಿಲ್ಲದೆ, ಮುಂದೆ ಮುಂದೆ ಸವಾರಿಸಿದನು. ಬೆಟ್ಟದಿಂದ ಕೆಳಗಿಳಿದ ನಂತರ, ಅವನಿಗೆ ತನ್ನ ಅಥವಾ ಶತ್ರುಸೈನ್ಯದ ಬೆಂಕಿಗಳು ಕಾಣಿಸಲಿಲ್ಲ. ಆದರೆ ಫ್ರೆಂಚ್ ಸೈನ್ಯದ ಗದ್ದಲ ಹೆಚ್ಚು ಹೆಚ್ಚು ಜೋರಾಗಿ ಮತ್ತು ಸ್ಪಷ್ಟವಾಗಿ ಕೇಳಿಸುತ್ತಿತ್ತು. ಕಣಿವೆಯಲ್ಲಿ ಅವನೊಂದು ನದಿಯನ್ನು ಕಂಡಂತಾಯಿತು. ಆದರೆ ಅದರ ಹತ್ತಿರ ಅವನು ಹೋದಾಗ, ಅದು ರಸ್ತೆಯಾಗಿತ್ತು. ರಸ್ತೆಯನ್ನು ತಲುಪಿದ ನಂತರ, ಅದೇ ರಸ್ತೆಯಲ್ಲಿ ಮುಂದುವರಿಯು ವುದೋ, ಅಥವಾ ಅದನ್ನು ದಾಟಿ, ಬೆಟ್ಟದೋರೆಯ ಕಪ್ಪು ಮಣ್ಣಿನ ಹೊಲದ ಕಡೆಗೆ ಹೋಗುವುದೋ ಎಂದು ಅನುಮಾನಿಸುತ್ತ, ಅವನು ತನ್ನ ಕುದುರೆಯ ಲಗಾಮು ಹಿಡಿದೆಳೆದನು. ಮಂಜಿನಲ್ಲಿ ಬೆಳ್ಳಗೆ ಹೊಳೆಯುತ್ತಿದ್ದ ರಸ್ತೆಯಲ್ಲಿ ಹೋಗುವುದೇ ಕ್ಷೇಮ ವೆಂದು ಅವನು ಬಗೆದನು. ಏಕೆಂದರೆ ರಸ್ತೆಯಲ್ಲಿ ಬರುತ್ತಿದ್ದ ಜನರನ್ನು ಸುಲಭವಾಗಿ ಕಾಣಬಹುದಿತ್ತು. 'ನನ್ನನ್ನು ಹಿಂಬಾಲಿಸಿ!' ಎಂದವನು ನುಡಿದು, ರಸ್ತೆಯನ್ನು ದಾಟಿ ಸಂಜೆ ಫ್ರೆಂಚ್ ಸೈನ್ಯದ ಕಾವಲುಪಡೆ ನಿಂತಿದ್ದ ದಿಕ್ಕಿನ ಕಡೆಗೆ ನಾಗಾಲೋಟದಲ್ಲಿ, ಬೆಟ್ಟದ ಮೇಲಕ್ಕೆ ಸವಾರಿಸಿದನು.

'ಅವನಲ್ಲಿದ್ದಾನೆ ಮಹಾಶಯರೆ!' ಎಂದು ಹಿಂದಿದ್ದ ರಾವುತರು ಕೂಗಿಕೊಂಡರು. ದಿಢೀರನೆ ಮಂಜಿನಲ್ಲಿ ಕಾಣಿಸಿಕೊಂಡ ಕಪ್ಪು ವಸ್ತು ಏನೆಂದು ಸ್ಪಷ್ಟಪಡಿಸಿಕೊಳ್ಳುವ ಮುನ್ನವೇ ಪ್ರಕಾಶವನ್ನು ಹಿಂಬಾಲಿಸಿದ ಆಸ್ಫೋಟ ಕೇಳಿಸಿತು. ಗುಂಡೊಂದು ಆಕ್ರಂದನ ಧ್ವನಿಯೊಡನೆ ರೊಯ್ಯೆಂದು ಮಂಜು ಬಾನಿನ ಕಡೆಗೆ ಸಿಡಿದು, ಶ್ರವಣ ದೂರವಾಗಿ ಮರೆಯಾಯಿತು. ಮತ್ತೊಂದು ಬಂದೂಕ ಚಾಪಿನ ಕುಳಿಯಲ್ಲಿ ಕಿಡಿಯನ್ನು ಸೂಸಿತೇ ಹೊರತು ಸಿಡಿಯಲಿಲ್ಲ. ರೊಸ್ತೋವ್ ತನ್ನ ಕುದುರೆಯನ್ನು ತಿರುಗಿಸಿ, ಹಿಂದಕ್ಕೆ ನಾಗಾಲೋಟದಿಂದ ದೌಡಾಯಿಸಿದನು. ಏತನ್ಮಧ್ಯೆ ನಾಲ್ಕು ಆಸ್ಫೋಟಗಳಾದುವು, ವಿವಿಧ ನಾದಗಳೊಡನೆ ಗುಂಡುಗಳು ಮಂಜಿನಲ್ಲಿ ಮರೆಯಾದುವು. ಗುಂಡು ಸಿಡಿದಾಗ, ತನ್ನಂತೆಯೇ ಉತ್ಸಾಹದ ಕಾವೇರುವೆಯಿಂದ ಕೂಡಿದ ತನ್ನ ಕುದುರೆಯ ಲಗಾಮನ್ನು ತುಸು ಬಿಗಿಹಿಡಿದು, ರೊಸ್ತೋವ್ ಹೆಜ್ಜೆಯ ಮೇಲೆ ಹೆಜ್ಜೆ ಹಾಕುತ್ತ ಹಿಂದಿರುಗಿದನು. 'ಇನ್ನಷ್ಟು! ಇನ್ನಷ್ಟು!' ಎಂಬ ಧ್ವನಿ ಅವನ ಹೃದಯದಲ್ಲಿ ಪ್ರತಿಧ್ವನಿಸಿತು. ಆದರೆ ಮತ್ತೆ ಆಸ್ಫೋಟಗಳು ಕೇಳಿಸಲಿಲ್ಲ.

ಬಗ್ರೇಷನ ನೆಲೆ ಸನ್ನಿಹಿತವಾಗುತ್ತಿದ್ದಂತೆ ರೊಸ್ತೋವ್ ಕುದರೆಯನ್ನು ನಾಗಾ

ಲೋಟದಲ್ಲಿ ಓಡಿಸಿದನು. ವಂದನಾಕರ ವಿನ್ಯಾಸದಿಂದ ಅವನು ಸೇನಾಪತಿಯ ಬಳಿಗೈದಿದನು.

ಫ್ರೆಂಚ್ ಸೈನ್ಯ ಹಿಮ್ಮೆಟ್ಟಿತೆಂದೂ, ತಮ್ಮನ್ನು ವಂಚಿಸುವ ಸಲುವಾಗಿ ಬೆಂಕಿಯನ್ನು ಹಚ್ಚಲಾಗಿತ್ತೆಂದೂ ದೊಲ್ಗೊರೂಕೊವ್ ತನ್ನ ಹಠ ಬಿಟ್ಟಿರಲಿಲ್ಲ.

ರೊಸ್ತೋವ್ ಬಳಿಗೆ ಬರುತ್ತಿದ್ದಂತೆ 'ಅಲ್ಲಿಯ ಪರಿಸ್ಥಿತಿಯಿಂದ ಏನು ಫಲಿತಾಂಶ ಸಿದ್ಧವಾಗುತ್ತದೆ? ಅವರು ಹಿಮ್ಮೆಟ್ಟಿ, ಪಹರೆಯನ್ನು ಮಾತ್ರ ಹಿಂದೆ ಬಿಟ್ಟಿರಬೇಕು' ಎಂದವನು ನುಡಿದನು.

'ಎಲ್ಲರೂ ನಿರ್ಗಮಿಸಿಲ್ಲವೆಂಬುದಂತು ಸ್ಪಷ್ಟ, ರಾಜಕುಮಾರರೆ. ನಾಳೆ ಪ್ರಾತಃಕಾಲದವರೆಗೆ ಕಾದರೆ, ನಿಜ ಹೊರಪಡುತ್ತದೆ' ಎಂದು ಬಗ್ರೇಷನ್ ನುಡಿದನು.

'ಸಂಜೆ ಎಲ್ಲಿತ್ತೋ ಅಲ್ಲಿಯೇ, ಬೆಟ್ಟದ ಮೇಲೆ ಪಹರೆಯಿನ್ನೂ ಇದೆ, ಪ್ರಭು' ಎಂದು ರೊಸ್ತೋವ್ ವರದಿಸಲು ತುಸು ಮುಂದೆ ಬಾಗಿದಾಗ, ಅವನ ಕೈ ಹಿಂದಿನಂತೆಯೇ ನಮಸ್ಕಾರಭಂಗಿಯಲ್ಲಿತ್ತು. ತನ್ನ ಸವಾರಿಯಿಂದ, ಅಂತೆಯೇ ಗುಂಡುಗಳ ಶಬ್ದದಿಂದ ಪ್ರಚೋದನೆಗೊಂಡಿದ್ದ ಅವನ ಸಂತೋಷ ಹಾಗೂ ಮಂದಹಾಸಗಳು ಅದಮ್ಯವಾಗಿದ್ದುವು.

'ಭೇಷ್, ಭೇಷ್. ನಿಮಗೆ ಧನ್ಯವಾದ, ನಾಯಕರೆ' ಎಂದು ಬಗ್ರೇಷನ್ ಅವನನ್ನು ಹುರಿದುಂಬಿಸಿದನು.

'ಪ್ರಭು, ನೀವು ನನಗೊಂದು ಉಪಕಾರ ಮಾಡುವಿರಾ?' ಎಂದು ರೊಸ್ತೋವ್ ಬೇಡಿಕೊಂಡನು.

'ಏನದು?'

'ನಾಳೆ ನಮ್ಮ ಪಟಾಲಮ್ಮು ಕೈಗಾವಲಿನಲ್ಲುಳಿಯಬೇಕಾಗಿದೆ. ನನ್ನನ್ನು ಮೊದಲನೆಯ ಪಟಾಲಮ್ಮಿನ ಜತೆಗೆ ಸೇರಿಸುವಂತೆ ಪ್ರಾರ್ಥಿಸಿಕೊಳ್ಳಬಹುದೆ?'

'ನಿಮ್ಮ ಹೆಸರೇನು?'

'ಶ್ರೀಮಂತ ರೊಸ್ತೋವ್.'

'ಓ, ಹಾಗೊ! ಆಗಲಿ. ನೀವು ನನ್ನ ಜತೆಯಲ್ಲಿರಬಹುದು.'

'ನೀವು ಶ್ರೀಮಂತ ಇಲ್ಯಾ ರೊಸ್ತೋವ್‌ರ ಮಗನಿರಬಹುದೆ?' ಎಂದು ದೊಲ್ಗೊರೂಕೊವ್ ಪ್ರಶ್ನಿಸಿದನು.

ರೊಸ್ತೋವ್ ಉತ್ತರಿಸಲಿಲ್ಲ.

'ಹಾಗಾದರೆ ಆ ಬಗ್ಗೆ ಭರವಸೆಯಿಂದಿರಬಹುದೆ? ಪ್ರಭು'

'ಆಜ್ಞಾಪತ್ರ ಕಳಿಸುತ್ತೇನೆ.'

'ನಾಳೆ ಬಹುಶಃ ಸಂದೇಶವನ್ನು ಹೊತ್ತು ಚಕ್ರವರ್ತಿಯ ಬಳಿಗೆ ಹೋಗಬೇಕಾಗಬಹುದು. ದೈವಕೃಪೆ ಎಷ್ಟು ಹೊಗಳಿದರೂ ತೀರದು' ಎಂದು ರೊಸ್ತೋವ್ ಮನಸ್ಸಿನಲ್ಲಿಯೇ ಮುಂದಿಗೆ ಚಪ್ಪರಿಸತೊಡಗಿದನು.

ನೆಪೋಲಿಯನ್ನನ ಘೋಷಣೆಯನ್ನು ಸೈನ್ಯಕ್ಕೆ ಓದಿ ಹೇಳುವಾಗ, ಚಕ್ರವರ್ತಿಯೇ ಪಡೆಗಳ ವೀಕ್ಷಣೆಗಾಗಿ ಸವಾರಿಸುತ್ತಿದ್ದುದರಿಂದ, ಶತ್ರುಸೈನ್ಯದಲ್ಲಿ ಪಂಜುಗಳ ಉರಿ ಮತ್ತು ಗದ್ದಲಗಳು ಅತ್ಯವಶ್ಯವಾಗಿದ್ದುವು. ಸೈನಿಕರು ಹುಲ್ಲುಕಡ್ಡಿಗಳ ಕಂತೆಗೆ ಉರಿಹಚ್ಚಿ,

'ಚಕ್ರವರ್ತಿ ಚಿರಾಯುವಾಗಲಿ!' ಎಂದು ಕೂಗುತ್ತ, ಅವನ ಹಿಂದೆ ಓಡಾಡುತ್ತಿದ್ದರು. ನೆಪೋಲಿಯನ್ನನ ಘೋಷಣೆಯಿದು:

'ಸೈನಿಕರೆ, ಉಲ್ಮ್‌ವಿಭಾಗದ ಆಸ್ಟ್ರಿಯಾ ಸೈನ್ಯದ ಮೇಲೆ ಸೇಡು ತೀರಿಸಿಕೊಳ್ಳುವ ಸಲುವಾಗಿ, ರಷ್ಯಾ ಸೈನ್ಯ ನಿಮ್ಮ ಮೇಲೆ ನುಗ್ಗಲು ಪ್ರಯತ್ನಿಸುತ್ತಿದೆ. ನೀವು ಹೊಲ್ಲಾಬ್ರುನ್‌ನಲ್ಲಿ ಭಗ್ನಗೊಳಿಸಿ, ಈತನಕ ಅಟ್ಟಿಸಿಕೊಂಡು ಬಂದ ತುಕಡಿಗಳೇ ಅವು. ನಾವು ಆಕ್ರಮಿಸಿಕೊಂಡಿರುವ ಈ ನೆಲೆ ಸುಭದ್ರವಾಗಿದೆ. ಅವರು ಬಲಗಡೆಯಿಂದ ನನ್ನನ್ನು ಸುತ್ತುಗಟ್ಟಲು ಮುಂದುವರಿಯುವಾಗ, ಅವರ ಸೈನ್ಯದ ಮತ್ತೊಂದು ಭಾಗ ನನ್ನ ಧಾಳಿಗೆ ಗುರಿಯಾಗುತ್ತದೆ. ಸೈನಿಕರೆ! ನಾನು ಖುದ್ದಾಗಿ ನಿಮ್ಮ ದಳಗಳನ್ನು ನಿರ್ದೇಶಿಸುತ್ತೇನೆ. ನೀವು ನಿಮ್ಮ ಸಹಜ ಸಿದ್ಧವಾದ ಪರಾಕ್ರಮದಿಂದ ಶತ್ರುಪಕ್ಷದಲ್ಲಿ ಗೊಂದಲ ಅವ್ಯವಸ್ಥೆಗಳನ್ನು ಪ್ರಚೋದಿಸುವುದಾದರೆ, ನಾನು ಗುಂಡುಕಾಳಗದಿಂದ ದೂರವಿರುತ್ತೇನೆ. ಒಂದು ಕ್ಷಣವಾದರೂ ಜಯದ ಬಗ್ಗೆ ಸಂದೇಹ ಮೂಡುವುದಾದರೆ, ನಿಮ್ಮ ಚಕ್ರವರ್ತಿ ಶತ್ರುವಿನ ಪ್ರಥಮ ಪ್ರಹಾರಕ್ಕೆ ಮೈಯೊಡ್ಡುವುದು ನಿಜ. ಫ್ರೆಂಚ್ ಪದಾತಿ ದಳದ ಗೌರವವನ್ನೇ ಪಣವೊಡ್ಡಿರುವಾಗ, ರಾಷ್ಟ್ರದ ಗೌರವ ಸಂರಕ್ಷಣೆಗೆ ಅದು ಅತ್ಯಾವಶ್ಯವಿರುವಾಗ, ಜಯದ ಬಗ್ಗೆ ನನಗೆ ಅನುಮಾನವೇ ಇಲ್ಲ.

'ಗಾಯಾಳುಗಳನ್ನು ಸ್ಥಳಾಂತರಿಸುವ ನೆಪದಿಂದ ನಿಮ್ಮ ವ್ಯೂಹವನ್ನು ಭಗ್ನಗೊಳಿಸಬೇಡಿ. ನಮ್ಮ ರಾಷ್ಟ್ರದ ಮೇಲಣ ದ್ವೇಷದಿಂದ ಪ್ರಚೋದಿತರಾಗಿರುವ ಇಂಗ್ಲೆಂಡಿನ ಈ ಕೂಲಿಯಾಳುಗಳನ್ನು ನಾವು ಸೋಲಿಸಬೇಕೆಂಬ ಒಂದೇ ಒಂದು ಸಂಕಲ್ಪ ನಮ್ಮ ಮೈಮನಗಳನ್ನೆಲ್ಲ ತುಂಬಿಕೊಂಡಿರಬೇಕು. ಈ ವಿಜಯದಿಂದ ನಮ್ಮ ದಂಡಯಾತ್ರೆ ಸದ್ಯಕ್ಕೆ ಮುಕ್ತಾಯಗೊಂಡು, ನಾವೆಲ್ಲರೂ ಶಿಶಿರ ಶಿಬಿರಗಳಿಗೆ ಹಿಂದಿರುಗಬಹುದು. ಅಷ್ಟು ಹೊತ್ತಿಗೆ ಫ್ರಾನ್ಸಿನಲ್ಲಿ ತರಬೇತಿ ಪಡೆಯುತ್ತಿರುವ ನೂತನ ದಳಗಳು ನಮ್ಮನ್ನು ಕೂಡಿಕೊಳ್ಳುತ್ತವೆ. ಸಂಗ್ರಾಮ ವಿಜಯದ ಪರಿಣಾಮವಾಗಿ ನಾನು ರೂಪಿಸಬಹುದಾದ ಶಾಂತಿ ನನ್ನ ಜನರ, ನಿಮ್ಮ ಮತ್ತು ನನ್ನ ಗೌರವಕ್ಕನುಗುಣವಾಗಿರುತ್ತದೆ.

ನೆಪೋಲಿಯನ್'

ಅಧ್ಯಾಯ ೧೪

ಬೆಳಗಿನ ಐದು ಗಂಟೆಯ ಸಮಯದಲ್ಲಿ ಇನ್ನೂ ಕತ್ತಲೆ ದಟ್ಟವಾಗಿತ್ತು. ಕೇಂದ್ರದ, ಮಾಸಲಿನ ಮತ್ತು ಬಗ್ರೇಷನ್ನನ ಬಲ ಪಾರ್ಶ್ವದ ಪಡೆಗಳು ಚಲನೆಗೆ ಸಿದ್ಧವಾಗಿರಲಿಲ್ಲ. ಆದರೆ ಯೋಜನೆಯ ಪ್ರಕಾರ ಎಡ ಪಾರ್ಶ್ವದ ಪದಾತಿ, ಅಶ್ವ ಮತ್ತು ಫಿರಂಗಿ ದಳಗಳು ಮೊಟ್ಟಮೊದಲು ಬೆಟ್ಟದಿಂದಿಳಿದು, ಫ್ರೆಂಚ್ ಸೈನ್ಯದ ದಕ್ಷಿಣ ಪಾರ್ಶ್ವದ ಮೇಲೆ ಧಾಳಿ ನಡೆಸಿ, ಅದನ್ನು ಬೊಹಿಮಿಯನ್ ಪರ್ವತಗಳ ಕಡೆಗೆ ಅಟ್ಟಬೇಕಾಗಿದ್ದುದರಿಂದ, ಅವು ಹಾಸುಗೆಯಿಂದೆದ್ದು, ಸಿದ್ಧತೆಯ ಗಡಿಬಿಡಿಯಲ್ಲಿದ್ದುವು. ಅತಿಯಾದದ್ದನ್ನೆಲ್ಲ ಸೈನಿಕರು ಶಿಬಿರಾಗ್ನಿಗೆ ಎಸೆಯುತ್ತಿದ್ದುದರಿಂದ, ಅದರಿಂದ ಒಗೆದ ಹೊಗೆ ಕಣ್ಣುಗಳಿಗೆ ವೇದನೆಯುಂಟುಮಾಡುತ್ತಿತ್ತು. ಚಳಿ ಕೊರೆಯುತ್ತಿತ್ತು. ಕತ್ತಲಾಗಿತ್ತು. ಅಧಿಕಾರಿಗಳು ಅವಸರವಸರವಾಗಿ ಟೀ ಕುಡಿದು, ಬೆಳಗಿನ ಉಪಾಹಾರವನ್ನು ಮುಗಿಸಿದರೆ,

ಸೈನಿಕರು ಬಿಸ್ಕತ್ತು ಕುರುಕುತ್ತ, ವೈಯನ್ನು ಬಿಸಿಮಾಡಿಕೊಳ್ಳುವುದಕ್ಕಾಗಿ ಕಾಲಿನಿಂದ ಭೇರಿ ಬಾರಿಸುತ್ತಿದ್ದರು. ಶಿಬಿರಾಗ್ನಿಯ ಸುತ್ತ ನೆರೆದಿದ್ದ ಅವರು ಗೂಡಾರಗಳ, ಕುರ್ಚಿಗಳ, ಮೇಜುಗಳ, ಟಬ್ಬುಗಳ, ಚಕ್ರಗಳ ಮುರಿದ ಭಾಗಗಳನ್ನು, ಉಪಯೋಗಕ್ಕೆ ಬಾರದ ಅಥವಾ ಹೊತ್ತುಕೊಂಡು ಹೋಗಲಾಗದ ವಸ್ತುಗಳನ್ನು ಬೆಂಕಿಗೆಸೆಯುತ್ತಿದ್ದರು. ಆಸ್ಟ್ರಿಯಾದ ವ್ಯೂಹಮಾರ್ಗದರ್ಶಕರು ರಷ್ಯಾ ಸೈನ್ಯದೊಳಗೆ ಹೊರಗೆ ಓಡಾಡುತ್ತ, ಮುಂಚೂಣಿಯ ವಾರ್ತಾವಾಹಕರ ಕರ್ತವ್ಯವನ್ನು ನೆರವೇರಿಸುತ್ತಿದ್ದರು. ಆಸ್ಟ್ರಿಯಾದ ಅಧಿಕಾರಿ ದಳಪತಿಯ ವಸತಿಯ ಬಳಿ ಬಂದ ಕೂಡಲೇ ದಳ ಚಲಿಸ ಲಣಿಯಾಗುತ್ತಿತ್ತು. ಸೈನಿಕರು ಶಿಬಿರಾಗ್ನಿಯನ್ನು ತೊರೆದು, ಚುಂಗಾಣಿಗಳನ್ನು ತಮ್ಮ ಬೂಟುಗಳೊಳಗೆ ತುರುಕಿ. ಚೀಲಗಳನ್ನು ಬಂಡಿಗಳಲ್ಲಿ ಹಾಕಿ, ಬಂದೂಕಗಳನ್ನು ಅಣಿಮಾಡಿಕೊಂಡು, ಸಾಲುಸಾಲಾಗಿ ನಿಲ್ಲುತ್ತಿದ್ದರು. ಅಧಿಕಾರಿಗಳು ಕೋಟುಗಳಿಗೆ ಗುಂಡಿ ಹಾಕಿಕೊಂಡು, ಚಿಲುಕು ಕಟ್ಟಿನಿಂದ ಕತ್ತಿ ಮತ್ತು ತೊಗಲು ಚೀಲಗಳನ್ನು ಬಿಗಿದುಕೊಂಡು, ಸಾಲುಗಳ ಜತೆಯಲ್ಲಿ ಘೋಷಣೆ ಕೂಗುತ್ತ ಮುಂದುವರಿದರು. ಸಾಲುಗಾಡಿಗಳ ಚಾಲಕರು ಮತ್ತು ಸೇವಕರು ಬಂಡಿಗಳನ್ನು ಸಜ್ಜುಗೊಳಿಸಿ, ಸಾಮಾನುಗಳನ್ನು ಹೇರಿ, ಹೇರುಗಳನ್ನು ಬಿಗಿಯಾಗಿ ಬಂಧಿಸಿದರು. ಸಹಾಯಾಧಿಕಾರಿಗಳು ಮತ್ತು ಪಡೆವಳರು ಅಶ್ವಗಳನ್ನೇರಿ, ಅತ್ತಿಂದಿತ್ತ ಅಡ್ಡಾಡುತ್ತ, ಹಿಂದೆ ಬರಲಿದ್ದ ಸಾಮಾನು ರಕ್ಷರಿಗೆ ಸಲಹೆ, ನಿರೂಪ ಆದೇಶ ಗಳನ್ನು ನೀಡಿದರು. ಸಹಸ್ರ ಸಹಸ್ರ ಪಾದಗಳ ಏಕತಾನತೆಯ ಆಘಾತ ಅನುರಣನ ಗೊಂಡಿತು. ಸುತ್ತಣ ಸೈನ್ಯ ಸಾಗರದಿಂದಾಗಿ ಧೂಮರಾಶಿಯಿಂದಾಗಿ ಹಾಗೂ ಸಾಂದ್ರ ವಾಗುತ್ತಿದ್ದ ಮಂಜಿನಿಂದಾಗಿ, ತಾವು ಹೊರಟಿದ್ದ ಅಥವಾ ಹೋಗಲಿದ್ದ ಸ್ಥಳಗಳ ಅರಿವಿಲ್ಲದೆ, ಎತ್ತ ಎಂಬುದನ್ನರಿಯದೆ ಸೇನಾವ್ಯೂಹಗಳು ಮುನ್ನಡೆದುವು.

ನಾವಿಕನೆಂತು ತನ್ನ ಹಡಗಿನಲ್ಲಿ ಬಂದಿಯಾಗಿರುತ್ತಾನೆಯೋ ಸೈನಿಕ ಸಹ ಅಂತೆಯೇ ದಂಡಯಾತ್ರೆಯ ಸಮಯದಲ್ಲಿ ದಳದ ನಡುವೆ ಬಂದಿಯಾಗಿರುತ್ತಾನೆ. ಅವನೆಷ್ಟು ದೂರ ಪಯಣಿಸಿರಲಿ, ಎಂಥ ಅಪರಿಚಿತ ಅಜ್ಞಾತ ಅಪಾಯಕಾರೀ ಸ್ಥಳಗಳಲ್ಲಿ ಸಂಚರಿಸಿರಲಿ, ನಾವಿಕನೆಂತು ಯಾವಾಗಲೂ ಅದೇ ಅಟ್ಟ, ಅದೇ ಕೂವೆಗಳು, ಅದೇ ಹಗ್ಗಗಳು, ಅದೇ ಸಲಕರಣೆಗಳಿಂದ ಸುತ್ತುಗೊಂಡಿರುತ್ತಾನೆಯೋ ಅಂತೆಯೇ ಸೈನಿಕನ ಸುತ್ತಮುತ್ತ ಸದಾ ಅದೇ ಸಂಗಾತಿಗಳು, ಅದೇ ಸಾಲುಗಳು, ಅದೇ ಸಾರ್ಜಂಟ್ ಮೇಜರ್ ಐವಾನ್ ಮಾತ್ರಿಚ್, ಅದೇ ನಾಯಿ ಜ್ಯಾಕ್ ಮತ್ತು ಅದೇ ದಳಪತಿಗಳು ಇರುತ್ತಾರೆ. ಹಡಗು ಪಯಣದ ಅಕ್ಷಾಂಶವನ್ನು ತಿಳಿದುಕೊಳ್ಳುವ ಬಗ್ಗೆ ನಾವಿಕ ಸಾಮಾನ್ಯವಾಗಿ ನಿರ್ಲಕ್ಷ್ಯ ದಿಂದಿರುತ್ತಾನೆ. ಆದರೆ ಕದನದ ದಿನ ಸೈನ್ಯದ ನೈತಿಕ ವಾತಾವರಣದಲ್ಲಿ ನಿರ್ಣಾಯಕವೂ ಗಂಭೀರವೂ ಆದೊಂದು ಸಂಗತಿಯ ಆಗಮನವನ್ನು ಘೋಷಿಸುವ ಮತ್ತು ಸೈನಿಕರಲ್ಲಿ ಅಪೂರ್ವವಾದ ಕುತೂಹಲವನ್ನು ಜಾಗ್ರತಗೊಳಿಸುವ ಕಠೋರನಾದವೊಂದು ಹೊಳಲು ಗೊಡುವುದರ ಅರಿವು—ಅದು ಹೇಗೆ, ಎಲ್ಲಿಂದ ಬರುತ್ತದೆಂಬುದನ್ನು ದೇವರೇ ಬಲ್ಲ— ಎಲ್ಲರಿಗೂ ಇರುತ್ತದೆ. ಭಾವೋದ್ರಿಕ್ತರಾದ ಸೈನಿಕರು ತಮ್ಮ ದಳದ ಹಿತಾಸಕ್ತಿಯ ಗಡಿಯನ್ನು ಮೀರಿ, ತಮ್ಮ ಸುತ್ತಮುತ್ತ ಜರುಗುತ್ತಿರುವ ಘಟನೆಗಳ ಬಗ್ಗೆ ಅತಿ ಶ್ರದ್ಧೆಯಿಂದ ಆಲಿಸುತ್ತಾರೆ, ಆಲೋಚಿಸುತ್ತಾರೆ ಮತ್ತು ಕಾತರತೆಯಿಂದ ವಿಚಾರಿಸಿ ಕೊಳ್ಳುತ್ತಾರೆ.

(ಮುಂದುವರಿಯುವುದು)

ಈ ಸಂಚಿಕೆಯ ಲೇಖಕರು—

ಸರ್ವಶ್ರೀಗಳಾದ—

1. ಡಾ॥ ಬಿ. ದಾಮೋದರರಾವ್, ರೀಡರ್
   ಇಂಗ್ಲಿಷ್ ವಿಭಾಗ, ಮಾನಸಗಂಗೋತ್ರಿ, ಮೈಸೂರು–೫೭೦ ೦೦೬

2. ಡಾ॥ ಕೃಷ್ಣಮೂರ್ತಿ ಚಂದರ್, ಅಧ್ಯಾಪಕ
   ಇಂಗ್ಲಿಷ್ ವಿಭಾಗ, ಮಾನಸಗಂಗೋತ್ರಿ, ಮೈಸೂರು–೫೭೦ ೦೦೬

3. ಡಾ॥ ಕೆ. ಸಿ. ಬೆಳ್ಳಿಯಪ್ಪ, ರೀಡರ್
   ಇಂಗ್ಲಿಷ್ ವಿಭಾಗ, ಮಾನಸಗಂಗೋತ್ರಿ, ಮೈಸೂರು–೫೭೦ ೦೦೬

4. ಪ್ರೊ॥ ಪೋಲಂಕಿ ರಾಮಮೂರ್ತಿ
   ಪ್ರಾಧ್ಯಾಪಕರು ಮತ್ತು ವಿಭಾಗದ ಮುಖ್ಯಸ್ಥರು
   ಇಂಗ್ಲಿಷ್ ವಿಭಾಗ, ಮಾನಸಗಂಗೋತ್ರಿ, ಮೈಸೂರು–೫೭೦ ೦೦೬

5. ಸಿ. ಪಿ. ರವಿಚಂದ್ರ, ಅಧ್ಯಾಪಕ
   ಇಂಗ್ಲಿಷ್ ವಿಭಾಗ, ಮಾನಸಗಂಗೋತ್ರಿ, ಮೈಸೂರು–೫೭೦ ೦೦೬

6. ಶ್ರೀನಿವಾಸ್ ಸುತ್ರಾವೆ, ರೀಡರ್
   ಇಂಗ್ಲಿಷ್ ವಿಭಾಗ, ಸರ್ಕಾರಿ ಆರ್ಟ್ಸ್ ಕಾಲೇಜ್
   ಹಾಸನ–೫೭೩ ೨೦೧

7. ಕೆ. ವಿ. ತಿರುಮಲೇಶ್, ರೀಡರ್
   ಸಿ. ಐ. ಇ. ಎಫ್. ಎಲ್.
   ಹೈದರಾಬಾದ್–೫೦೦ ೦೦೧

8. ಜಿ. ಟಿ. ನಾರಾಯಣರಾವ್
   "ಅತ್ರಿ", ನಂ. 8, ಕಾಮಾಕ್ಷಿ ಆಸ್ಪತ್ರೆ ರಸ್ತೆ, ಸರಸ್ವತಿಪುರಂ
   ಮೈಸೂರು–೫೭೦ ೦೦೯

ಸರ್ವಶ್ರೀಗಳಾದ—

9. ಪ್ರೊ॥ ಎ. ಎನ್. ಮೂರ್ತಿರಾವ್
185, ಎಚ್. ಎ. ಎಲ್. ಲೇ ಔಟ್, 2ನೇ ಹಂತ, ಸಂಜಯನಗರ
ಬೆಂಗಳೂರು–೫೬೦ ೦೨೪

10. ಪ್ರೊ॥ ದೇ. ಜವರೇಗೌಡ, ವಿಶ್ರಾಂತ ಉಪಕುಲಪತಿಗಳು
ಜಯಲಕ್ಷ್ಮೀಪುರಂ, ಮೈಸೂರು–೫೭೦ ೦೧೨



ಕೆ. ವಿ. ತಿರುಮಲೇಶ